ಬೆಂಗಳೂರು
ಭಾನುವಾರ, 5 ಏಪ್ರಿಲ್ 2026
ಸಂಪುಟ 33, ಸಂಚಿಕೆ 154, ಪುಟಗಳು 14+4
ಬೆಂಗಳೂರು ▪ ಮಂಗಳೂರು ▪ ಶಿವಮೊಗ್ಗ ▪ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬಾಬ್ ಜಲಸಂಧಿ ಬಂದ್?

• ಪುಟ 2

ಬಿಜೆಪಿ ವೈಯಕ್ತಿಕ ಟೀಕೆ: ಲಾಡ್

• **ದಾವಣಗೆರೆ:** ಸಿಎಂ ಸಿದ್ದರಾಮಯ್ಯ ಅವರನ್ನು ವೈಯಕ್ತಿಕವಾಗಿ ಟಾರ್ಗೆಟ್ ಮಾಡಿ ಮಾತನಾಡುವುದನ್ನು ಬಿಟ್ಟರೆ ಬಿಜೆಪಿಯವರಿಗೆ ಯಾವುದೇ ಗಂಭೀರವಾದ ವಿಷಯಗಳಿಲ್ಲ ಎಂದು ಸಚಿವ ಸಂತೋಷ್ ಲಾಡ್ ಕಿಡಿಕಾರಿದರು.




ನಗರದಲ್ಲಿ ಶನಿವಾರ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರಕ್ಕೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಟೀಕಿಸುವ ಬಿಜೆಪಿಯವರು ಸ್ವಲ್ಪ ಯೋಚನೆ ಮಾಡಬೇಕು. 17 ಬಾರಿ ಬಜೆಟ್ ಮಂಡಿಸಿರುವ ಇಂತಹ ಅನುಭವವಿರುವ ನಾಯಕರು ದೇಶದಲ್ಲೇ ಬೇರೆ ಯಾರೂ ಇಲ್ಲ, ನಾವು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಎಂದೂ ವೈಯಕ್ತಿಕವಾಗಿ ಟೀಕೆ ಮಾಡುವುದಿಲ್ಲ, ಅಂಕಿ-ಅಂಶಗಳನ್ನು ಇಟ್ಟುಕೊಂಡು ಮೋದಿಯವರ ಸಾಧನೆ, ಕಾರ್ಯಕ್ಷಮತೆಯ ಬಗ್ಗೆ ಮಾತನಾಡುತ್ತೇವೆ. ಆದರೆ ಬಿಜೆಪಿಯವರು ಕೇವಲ ಪ್ರಚಾರಕ್ಕಾಗಿ ಸಿದ್ದರಾಮಯ್ಯ ವಿರುದ್ಧ ಮಾತನಾಡುತ್ತಿದ್ದಾರೆ ಎಂದರು.

ನನ್ನ ಕಚೇರಿಯಲ್ಲಿ ಒಂದು ಗಂಟೆ ಇರಲಿ: ಸೋಮಣ್ಣ

• **ದಾವಣಗೆರೆ:** ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ತಾಂತ್ರಿಕ ವ್ಯವಸ್ಥೆಯ ಬಗ್ಗೆ ಅರಿವಿಲ್ಲ. ಇನ್ನೂ ಹಳೆಯ ಕಾಲದಲ್ಲೇ ಉಳಿದುಬಿಟ್ಟಿದ್ದಾರೆ. ಯಾರಿಗೆ ಕೆಲಸವಿದೆ, ಯಾರಿಗೆ ಕೆಲಸವಿಲ್ಲ ಎಂಬುದರ ಬಗ್ಗೆ ಚರ್ಚಿಸಲು ನಾನು ಸಿದ್ಧನಿದ್ದೇನೆ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆ ಮುಗಿದ ಮೇಲೆ ಸಿದ್ದರಾಮಯ್ಯ ನನ್ನ ಕಚೇರಿಯಲ್ಲಿ ಒಂದು ಗಂಟೆ ಇರಲಿ. ನಾನು ಅವರ ಕಚೇರಿಯಲ್ಲಿ ಒಂದು ತಿಂಗಳು ಇರುತ್ತೇನೆ. ಆಗ ಯಾರು ಬುದ್ಧಿವಂತರು ಎಂಬುದನ್ನು ಜನರೇ ತೀರ್ಮಾನಿಸಲಿ ಎಂದು ಅವರು ಇದೇ ವೇಳೆ ಸವಾಲು ಹಾಕಿದರು.

ರಾಮ ಬಾಣ



ಅಭಿವೃದ್ಧಿ ಶೂನ್ಯ ಸರ್ಕಾರ: ಅಶೋಕ

ಪುಟ ೧➡ ಹೈಕಮಾಂಡ್‌ಗೆ ನಿಯತ್ತರಾಗಿರಲು ಪ್ರತಿ ತಿಂಗಳು ಹಣ ಕಳುಹಿಸಿ ರಾಜ್ಯದ ಸಾಲದ ಹೊರೆ ಏರಿಸಿದ್ದಾರೆ. ರಾಜ್ಯವನ್ನು ಅಧೋಗತಿಗೆ ತಳ್ಳಿದ್ದಾರೆ ಎಂದರು. ಸಿದ್ದರಾಮಯ್ಯ ಅವರ ನಿಜ ಬಣ್ಣ ಮೈಸೂರಿನಲ್ಲಿ ಗೊತ್ತಾಗಿ ಅಲ್ಲಿನ ಮತದಾರರು ಸೋಲಿಸಿದರು. ಆಗ ಬಾದಾಮಿಗೆ ಓಡಿ ಬಂದರು. ಬಾದಾಮಿ ಕೈಹಿಡಿಯಿತು. ಆದರೆ, ಇಲ್ಲಿಗೂ ಕೈಕೊಟ್ಟು ಓಡಿಹೋದರು. ಈಗ ಮತ್ತೆ ಬಾಗಲಕೋಟೆಗೆ ಬಂದಿದ್ದಾರೆ. ಇಲ್ಲಿಗೂ ಕೈ ಕೊಡುತ್ತಾರೆ ಎಂದು ವ್ಯಂಗ್ಯವಾಡಿದರು.



ಸಿದ್ದರಾಮಯ್ಯ ಆಗ ಚುನಾವಣೆಗೆ ಬಾದಾಮಿಗೆ ಬಂದಿದ್ದರು. ಈಗ ಮತ್ತೆ ಬಂದಿದ್ದಾರೆ. ಬಾದಾಮಿ ಹಾಲು ಕುಡಿದು, ಬಿರಿಯಾನಿ ತಿಂದು ಟಾಟಾ ಬಾಯ್ ಬಾಯ್ ಹೇಳಿದರು. ಇನ್ನು ಎರಡು ವರ್ಷದಲ್ಲಿ ಅಭಿವೃದ್ಧಿಯ ಮಳೆ ಸುರಿಸುತ್ತೇನೆ ಎಂದು ಅವರು ಹೇಳುತ್ತಾರೆ. ಮೂರು ವರ್ಷ ನಿಮ್ಮ ಪಕ್ಷದ ಶಾಸಕರಿದ್ದರೂ ಬಾಗಲಕೋಟೆ ಅಭಿವೃದ್ಧಿ ಏಕೆ ಆಗಲಿಲ್ಲ, ನಿಮ್ಮ ಶಿಷ್ಯ ಏನು ಅಭಿವೃದ್ಧಿ ಮಾಡಿದ್ದಾರೆ ಎಂದರು. ಕ್ಷೇತ್ರದಲ್ಲಿ ಈ ಹಿಂದೆ ಚರಂತಿಮಠ ಅವರ ಅಭಿವೃದ್ಧಿ ಕಾರ್ಯ ಜನರ ಮನಸ್ಸಿನಲ್ಲಿ ಉಳಿದಿದೆ. ಆದ್ದರಿಂದ ಈ ಬಾರಿ ಜನರು ಅವರನ್ನು ಗೆಲ್ಲಿಸಲಿದ್ದಾರೆ ಎಂದರು.

ಅಧಿಕಾರಕ್ಕೆ ಬಂದಾಗಿನಿಂದ ಸಿಎಂ ಪಟ್ಟಕ್ಕಾಗಿ ಗುದ್ದಾಟ ನಡೆದಿದೆ. ಮೂರು ವರ್ಷದಲ್ಲಿ 30 ಹಗರಣಗಳನ್ನು ಮಾಡಿದರು. ವಾಲ್ಮೀಕಿ ಹಗರಣದಿಂದ ಹಿಡಿದು ಗುತ್ತಿಗೆದಾರರ ಶೇ.60ರಷ್ಟು ಕಮಿಷನ್ ಹಗರಣ ನಡೆದಿದೆ. ಲಿಕ್ಕರ್ ಲಾಬಿ ಮಾಡಿ ಸಚಿವರೊಬ್ಬರು ಕೋಟಿ ಕೋಟಿ ಹಣ ಹೊಡೆದು ದೆಹಲಿಗೆ ಕಳಿಸಿದರು. ಮೂರು ವರ್ಷದಲ್ಲಿ ಯಾವುದೇ ಸಾಧನೆ ಮಾಡಲಿಲ್ಲ, ನೀರಾವರಿಗೆ ಹಣ ಇಡಲಿಲ್ಲ, ಆದರೆ, ಕಾಂಗ್ರೆಸ್‌ನವರು ಮಾತ್ರ ಹಣ ಮಾಡಿಕೊಳ್ಳುತ್ತಿದ್ದಾರೆ. ಒಂದು ಡ್ಯಾಮ್ ಕಟ್ಟಲಿಲ್ಲ, ಮೆಡಿಕಲ್ ಕಾಲೇಜು ತರಲಿಲ್ಲ ಎಂದರು. ಕಾಂಗ್ರೆಸ್ ಬಂದ ಮೇಲೆ ಒಂದೇ ಒಂದು ಪಿಎಚ್‌ಸಿಗಳಲ್ಲಿ ವೈದ್ಯರಿಲ್ಲ, ಔಷಧ ಖರೀದಿಗೆ ಹಣವಿಲ್ಲ, ಹಣವಿಲ್ಲದೆ ಮೂರು ವರ್ಷದಲ್ಲಿ ಟೆಂಡರ್ ಕರೆದಿಲ್ಲ, ಅಭಿವೃದ್ಧಿಗೆ ಮಾಡಿದ ಸಾಲವೇ ಜಾಸ್ತಿ. ಸಣ್ಣ ಸಣ್ಣ ಸಮುದಾಯಗಳ ಬಳಿ ಹೋಗಿ ಈಗ ಮತ ಕೇಳುತ್ತಿದ್ದಾರೆ. 20ನೇ ತಾರೀಕಿನ ನಂತರ ಇವರ ಕಥೆ ಏನು ಆಗುತ್ತದೋ ಗೊತ್ತಿಲ್ಲ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಸಿಎಂ ಸ್ಥಾನವನ್ನು ಕಿತ್ತುಕೊಳ್ಳುತ್ತಾರೆ ಎಂದು ವಿವರಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಕಾಂಗ್ರೆಸ್ಸನ್ನು ನಿರ್ನಾಮ ಮಾಡಲು ಯಾರಿಂದಲೂ ಸಾಧ್ಯವಿಲ್ಲ

– ಮಲ್ಲಿಕಾರ್ಜುನ ಖರ್ಗೆ

– ಸಾಧ್ಯವಿದೆ ಸಾಧ್ಯವಿದೆ, ಮತದಾರರಿಂದ ಮಾತ್ರ ಸಾಧ್ಯವಿದೆ!

ದಿನ ಭವಿಷ್ಯ

ಮೇಷ ನಿಮ್ಮ ಪಾಲಿಗೆ ಅಚ್ಚರಿಯ ಬೆಳವಣಿಗೆ ಸಂಭವ. ಅದರಿಂದ ಹಿತವೇ ಆಗಲಿದೆ. ಅನ್ಯರ ಜತೆಗಿನ ವೈರವನ್ನು ದೀರ್ಘ ಎಳೆಯಬೇಡಿ.

ವೃಷಭ ಆದಾಯ ಗಳಿಕೆಯ ಹೊಸ ದಾರಿ ತೋರಲಿದೆ. ನಿಮ್ಮ ವ್ಯಕ್ತಿತ್ವ ಇತರರ ಮೆಚ್ಚುಗೆ ಗಳಿಸುವುದು. ವಿವಾಹಿತರ ಪಾಲಿಗೆ ಶುಭ ಬೆಳವಣಿಗೆ.

ಮಿಥುನ ನಿಮ್ಮ ಮೇಲೆ ದೊಡ್ಡ ಜವಾಬ್ದಾರಿ ಬೀಳಲಿದೆ. ಮಾನಸಿಕ ಒತ್ತಡದಿಂದ ನೆಮ್ಮದಿ ಹಾಳು. ಪ್ರೀತಿಯ ಬಿಕ್ಕಟ್ಟು ಶಮನವಾಗದೆ ಅಸಹನೆ. ಧನವ್ಯಯ.

ಕಟಕ ವೃತ್ತಿ ಕ್ಷೇತ್ರದಲ್ಲಿ ನಯವಂಚಕರ ಬಗ್ಗೆ ಎಚ್ಚರವಿರಲಿ. ಕುಟುಂಬದಲ್ಲಿ ಸಮಸ್ಯೆ ಉಂಟಾದೀತು. ಪ್ರೀತಿಯ ವ್ಯವಹಾರದಲ್ಲಿ ಬಿಕ್ಕಟ್ಟು.

ಸಿಂಹ ಭಾವುಕತೆ ನಿಮ್ಮ ವಿವೇಕ ಮರೆಸಬಹುದು. ಸಹೋದರರಿಂದ ಸಮಸ್ಯೆ ಸೃಷ್ಟಿ. ಆಪ್ತ ಸಂಬಂಧ ಕೆಡಲಿದೆ. ನೆರೆಕರೆ ಜತೆ ವೈಷಮ್ಯ ಸಂಭವ.

ಕನ್ಯಾ ಒತ್ತಡದ ಬದುಕಿಂದ ವಿರಾಮ ಪಡೆಯಿರಿ. ಆ ಮೂಲಕ ಮಾನಸಿಕ ನೆಮ್ಮದಿ ಪಡೆಕೊಳ್ಳಿ. ಯುವಕರು ಪ್ರೇಮದ ತುಡಿತಕ್ಕೆ ಒಳಗಾಗುವಿರಿ.

ತುಲಾ ನಿಮ್ಮ ಗುಣಾತ್ಮಕ ನಡವಳಿಕೆಯಿಂದ ಯಶ. ಜತೆಗೇ ವೇದಾಂತದ ಭಾವ ಆವರಿಸಬಹುದು. ಎಲ್ಲದರಿಂದ ದೂರವಾಗಿ ಬದುಕುವ ತುಡಿತ.

ವೃಶ್ಚಿಕ ಕುಟುಂಬದ ಹಿತಕ್ಕೆ ಹೆಚ್ಚು ಕಾಳಜಿ ವಹಿಸುವಿರಿ. ಉದ್ಯಮಿಗಳು ಇಂದು ಒಂದು ಹೆಜ್ಜೆ ಹಿಂದಿಡಿ. ದಿನದಂತ್ಯಕ್ಕೆ ವೈರಾಗ್ಯ ಭಾವ ಉಂಟಾದೀತು.

ಧನು ವ್ಯಕ್ತಿಯೊಬ್ಬರ ಜತೆ ವಿಶ್ವಾಸಭರಿತ ಬಾಂಧವ್ಯ ಬೆಳೆಯಬಹುದು. ಆದಾಯದಲ್ಲಿ ಹೆಚ್ಚಳ. ಮನೆಯ ಸಮಸ್ಯೆ ಪರಿಹಾರ, ನೆಮ್ಮದಿ.

ಮಕರ ಎಲ್ಲರ ಜತೆ ಮುಕ್ತವಾಗಿ ಬೆರೆಯಿರಿ. ಎಲ್ಲರನ್ನು ಸಂಶಯದಿಂದ ನೋಡಬೇಡಿ. ವಿಶ್ವಾಸ ಮುಖ್ಯ. ಆತ್ಮೀಯರ ಮನ ನೋಯಿಸಬೇಡಿ.

ಕುಂಭ ನಿಮ್ಮ ಶ್ರಮದಿಂದ ಉದ್ಯೋಗದಲ್ಲಿ ಯಶ. ಆರ್ಥಿಕ ಉನ್ನತಿ. ಪ್ರೀತಿಯ ವಿಷಯದಲ್ಲಿ ಎಚ್ಚರದ ಹೆಜ್ಜೆ ಇಡಿ. ಅಪಸ್ವರ ಏಳದಂತೆ ನೋಡಿಕೊಳ್ಳಿ.

ಮೀನ ವೃತ್ತಿ ಒತ್ತಡದಿಂದ ಇಂದು ಮುಕ್ತಿ. ಆಪ್ತರ ಜತೆ ಬೆರೆಯುವ ಅವಕಾಶ. ಸ್ಥಾನೀಯ ನಿರ್ವಹಣೆ ತೋರುವಿರಿ. ಖಾಸಗಿ ಚಿಂತೆ ಪರಿಹಾರ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 0,5,7,1

ಹಾರ್ಮುಜ್-ಬಾಬ್ ನಡುವಿನ ಸಂಪರ್ಕ

ಪುಟ ೧➡ ಎರಡೂ ಜಲಸಂಧಿಗಳು ಪರಸ್ಪರ ಸಂಪರ್ಕ ಹೊಂದಿವೆ ಎಂಬುದು ಪ್ರಮುಖವಾದ ಅಂಶವಾಗಿದೆ. ಏಕೆಂದರೆ ಹಾರ್ಮುಜ್ ದಾಟಿಹೋಗುವ ಹೆಚ್ಚಿನ ಸರಕು ಹಡಗುಗಳು ಬಾಬ್ ಮೂಲಕವೂ ಹಾದುಹೋಗುತ್ತವೆ.



ಇದರಿಂದ ಈಗಾಗಲೇ ಹಾರ್ಮುಜ್ ಮುಚ್ಚಲಾಗಿದ್ದು, ಬಾಬ್ ಜಲಸಂಧಿ ಮುಚ್ಚುವುದರಿಂದ ಇರಾನ್ ರಾಜತಾಂತ್ರಿಕ ಹಿಡಿತವನ್ನು ಸಾಧಿಸಲಿದೆ.

ನಾಳೆ ಟ್ರಂಪ್ ಗಡುವು

ಪುಟ ೧➡ ಏ.6ರೊಳಗೆ ನಮ್ಮೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಿ ಅಥವಾ ಹಾರ್ಮುಜ್ ತೆರೆಯಿರಿ. ಇಲ್ಲದಿದ್ದರೆ ನೇರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಹೊಸ ಗಡುವಿನೊಂದಿಗೆ ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. ಸಮಯ ಮೀರಿ ಹೋಗುತ್ತಿದೆ, ಇರಾನ್ ಬಳಿ ಕೇವಲ 48 ಗಂಟೆ ಉಳಿದಿದೆ. 48 ಗಂಟೆಗಳೊಳಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿ ಅಥವಾ ಹಾರ್ಮುಜ್ ತೆರೆಯಲಿ. ದೇವರಿಗೆ ಜಯವಾಗಲಿ ಎಂದು ಟ್ರಂಪ್ ಟ್ರುಥ್ ಸೋಷಿಯಲ್‌ನಲ್ಲಿ ಬರೆದಿದ್ದಾರೆ.



ಡಿಆರ್‌ಡಿಒ ಮಹಾನಿರ್ದೇಶಕ ಡಾ. ಬಿನಯ್‌ಕುಮಾರ್ ದಾಸ್ ಇಂಗಿತ

ದೊಡ್ಡ ಆರ್ಥಿಕ ಶಕ್ತಿ ಭಾರತ

• **ಬೆಂಗಳೂರು:** ಕಳೆದ 50 ವರ್ಷಗಳ ಹಿಂದೆ ರಕ್ಷಣಾ ಕ್ಷೇತ್ರದಲ್ಲಿ ಆಮದು ನಿರಾಕರಣೆಯ ಮೂಲಕ ಸ್ವಾವಲಂಬನೆ ಸಾಧಿಸುವತ್ತ ಮುನ್ನುಗ್ಗುತ್ತಿರುವ ಭಾರತ, ಇದೀಗ ಜಗತ್ತಿನ ಮೂರನೇ ಅತೀ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದ್ದೇವೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮಹಾನಿರ್ದೇಶಕ ಡಾ. ಬಿನಯ್ ಕುಮಾರ್ ದಾಸ್ ತಿಳಿಸಿದರು.

ಶನಿವಾರ ಸೆಂಟ್ರಲ್ ಕಾಲೇಜು ಆವರಣದ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ನಾನು ಸಣ್ಣ ಊರಿನಿಂದ ಬಂದವನು. ಚಿನ್ನದ ಪದಕದೊಂದಿಗೆ ಐಐಟಿ ಶಿಕ್ಷಣ ಪೂರ್ಣಗೊಳಿಸಿದ್ದೆ. ನನ್ನನ್ನು ಕೊಂಡು ಕೊಳ್ಳಲು ಹಲವು ಸಂಸ್ಥೆಗಳು ಮುಂದೆ ಬಂದಿದ್ದವು. ನಾನು ಎಲ್ಲವನ್ನೂ ತಿರಸ್ಕರಿಸಿದೆ ಎಂದರು.

ತಂತ್ರಜ್ಞಾನ ಶ್ರೀಮಂತ ಭಾರತ ನಿರ್ಮಿಸುವುದಕ್ಕಾಗಿ ಸಂಕಲ್ಪ ಮಾಡಿದ್ದೆ. ಇಂದು ನನ್ನೊಂದಿಗೆ ಓದಿದವರ ಬಳಿ ಸಾಕಷ್ಟು ಸಂಪತ್ತಿದೆ. ಆದರೆ ನಾನು ಈ ಭಾರತದ ಸ್ವಾಯತ್ತತೆಯನ್ನು ಕಾಪಾಡಲು ಸಹಾಯ ಮಾಡುತ್ತಿದೆ ಎಂಬುದರಲ್ಲಿ ಅತ್ಯಂತ ಶ್ರೀಮಂತನಾಗಿದ್ದೇನೆ ಎಂದು ತಿಳಿಸಿದರು.

ದೇಶದ ಅಭಿವೃದ್ಧಿಗೆ ಅರ್ಪಿಸುವುದೇ ಶಿಕ್ಷಣದ ಮೌಲ್ಯ: ವಿದೇಶಕ್ಕೆ ತೆರಳಿ ಹುದ್ದೆ ಪಡೆದು, ಹಣ ಗಳಿಸುವುದು ಶಿಕ್ಷಣದ ಮೌಲ್ಯವಲ್ಲ, ನಿಮ್ಮ ಜ್ಞಾನ, ಬುದ್ಧಿ, ನಿಷ್ಠೆಯನ್ನು ನಿಮ್ಮ ದೇಶದ ಅಭಿವೃದ್ಧಿಗೆ ಅರ್ಪಿಸುವುದೇ ಶಿಕ್ಷಣದ ನಿಜವಾದ ಮೌಲ್ಯ. ವಿದ್ಯಾರ್ಥಿಗಳು ನಿಮ್ಮ ಬುದ್ಧಿಯನ್ನು ಬಳಸಿ, ಸವಾಲುಗಳನ್ನು ಸುಂದರ ಅವಕಾಶಗಳಾಗಿ ಪರಿವರ್ತಿಸಬೇಕು. ಅದೇ ಶಿಕ್ಷಣದ ಮೌಲ್ಯ ಹಾಗೂ ಜೀವನದ ಶಕ್ತಿ ಎಂದು ತಿಳಿಸಿದರು.

ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಮಾತನಾಡಿ, ತ್ವರಿತ ಬದಲಾವಣೆಯ ಈ ಕಾಲಘಟ್ಟವು ತಂತ್ರಜ್ಞಾನ, ನಾವಿನ್ಯತೆ ಮತ್ತು ಜಾಗತಿಕ ಸ್ಪರ್ಧೆಯ ಯುಗವಾಗಿದೆ. ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್ ಸೇರಿದಂತೆ ಹೊಸ ಅವಕಾಶಗಳು ನಿರಂತರವಾಗಿ ಹೊರಹೊಮ್ಮುತ್ತಿವೆ. ನಿಮ್ಮ ಜ್ಞಾನ ಮತ್ತು ಕೌಶಲಗಳನ್ನು ನವೀಕರಿಸಿಕೊಂಡು, ಕಾಲದ ಅಗತ್ಯಗಳಿಗೆ ಅನುಗುಣವಾಗಿ ನಿಮ್ಮನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಅತ್ಯವಶ್ಯಕ ಎಂದು ತಿಳಿಸಿದರು.

ಕುಲಪತಿ ಪ್ರೊ. ರಮೇಶ್ ಬಿ. ಮಾತನಾಡಿ, ಅವಕಾಶಗಳಿಗಾಗಿ ಕಾಯದೆ, ಸ್ವಯಂ ಪರಿಶ್ರಮದ ಮೂಲಕ ಭವಿಷ್ಯವನ್ನು ರೂಪಿಸಿಕೊಳ್ಳಲು ಮುಂದಾಗುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.



ಸುಧಾರಿತ ತಂತ್ರಜ್ಞಾನಗಳು ನಮ್ಮ ರಫ್ತನ್ನು ಹೆಚ್ಚಿಸುತ್ತದೆ

ಭಾರತೀಯ ಧರ್ಮಗ್ರಂಥಗಳಲ್ಲಿ ಪುಷ್ಪಕ ವಿಮಾನವಿದ್ದರೆ ಇಂದು ನಮ್ಮದೇ ಆದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯಬಲ್ಲ ತೇಜಸ್ ಅನ್ನು ನಾವು ಹೊಂದಿದ್ದೇವೆ. ಅದು ಒಂದು ದಿನ ಯುದ್ಧಮಟ್ಟದಲ್ಲಿ ಬಳಸಲ್ಪಡುವುದೆಂದು ನಾನು ಊಹಿಸಿರಲಿಲ್ಲ, ಇದು ಈ ದೇಶದ ಶಕ್ತಿ. ಬುಲೆಟ್ ಪ್ರೂಫ್ ಜಾಕೆಟ್‌ನಿಂದ ಕ್ಷಿಪಣಿಗಳವರೆಗೆ, ಧನುಷ್‌ನಿಂದ ಪ್ರಚಂಡ್‌ವರೆಗೆ, ಇಂದು ಇಡೀ ಜಗತ್ತಿಗೆ ಸವಾಲು ಹಾಕಿದೆ. ಸುಧಾರಿತ ತಂತ್ರಜ್ಞಾನಗಳು ನಮ್ಮ ರಫ್ತನ್ನು ಹೆಚ್ಚಿಸುತ್ತದೆ ಎಂದು ಡಾ. ಬಿನಯ್ ಕುಮಾರ್ ದಾಸ್ ತಿಳಿಸಿದರು.

37,393 ಜನರಿಗೆ ಪದವಿ

64 ಚಿನ್ನದ ಪದಕ ಒಳಗೊಂಡಂತೆ 71 ವಿದ್ಯಾರ್ಥಿಗಳು ರ‍್ಯಾಂಕ್, 23 ಪಿಎಚ್.ಡಿ ವಿದ್ಯಾರ್ಥಿಗಳು, 7,484 ಸ್ನಾತಕೋತ್ತರ ಪದವಿ, 29,880 ಪದವಿ ವಿದ್ಯಾರ್ಥಿಗಳು ಸೇರಿ 37,393 ಜನರಿಗೆ ಪದವಿ ಪ್ರದಾನ ಮಾಡಲಾಯಿತು.

6 ಜನರಿಗೆ ಗೌರವ ಡಾಕ್ಟರೇಟ್

ಕ್ರೀಡಾಪಟು ಬಿ.ಕೆ. ವೆಂಕಟೇಶ್ ಪ್ರಸಾದ್, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಶಿಕ್ಷಣ ತಜ್ಞ ಟಿ.ಕೆ. ನಾರಾಯಣಪ್ಪ, ಕ್ರೀಡಾ ಆಡಳಿತಗಾರ ಡಾ. ಕೆ. ಗೋವಿಂದರಾಜ್, ಶಿಕ್ಷಣ ತಜ್ಞ ಡಾ. ಮೋಹನ್ ಆಳ್ವಾ ಮತ್ತು ಉದ್ಯಮಿ ಬಿ.ಎಂ. ಫಾರೂಕ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಯಿತು.

ಶ್ರೀನಿವಾಸ ದಾಸಕರಿಯಪ್ಪ ಪರ ಎಚ್ಡಿಕೆ ಮತಯಾಚನೆ

• **ದಾವಣಗೆರೆ:** ಭ್ರಷ್ಟಾಚಾರದ ಕುರಿತು ಮಾತನಾಡುವ ನೈತಿಕತೆ ಕಾಂಗ್ರೆಸ್ ಪಕ್ಷ ಮತ್ತು ಮುಖ್ಯಮಂತ್ರಿಗಳಿಗೆ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಎನ್.ಡಿ.ಎ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಪರವಾಗಿ ಶನಿವಾರ ಮತಯಾಚನೆ ವೇಳೆ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಕಾಂಗ್ರೆಸ್ಸಿಗರು ಲೂಟಿ ಮಾಡಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮತದಾರರಿಗೆ ದುಡ್ಡು ಹಂಚುತ್ತಿದ್ದಾರೆ.

ಶಾಮನೂರು ನೋಟು, ಬಿಜೆಪಿಗೆ ಓಟು ಅಂತಾ ನಮ್ಮ ಕಾರ್ಯಕರ್ತರು ಹೇಳುತ್ತಿದ್ದಾರೆ. ಜನರು ಎರಡೂ ಕ್ಷೇತ್ರಗಳಲ್ಲಿ ಕಮಲದ ಹೂವನ್ನು ಅರಳಿಸಬೇಕೆಂಬ ಸಂಕಲ್ಪ ಮಾಡಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಭ್ರಷ್ಟಾಚಾರದ ಹಣದಿಂದ ಈ ಕ್ಷೇತ್ರದ ಜನರ ಮತವನ್ನು ಗೆಲ್ಲಲು ಸಾಧ್ಯವಿಲ್ಲ, ಹಿಂದುಳಿದ ವರ್ಗಗಳನ್ನು ಮತ ಬ್ಯಾಂಕಾಗಿ ಕಾಂಗ್ರೆಸ್ ಬಳಸಿಕೊಳ್ಳುತ್ತಿದೆ. ಎಂದರು.

ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ: ಸಚಿವ

• **ದಾವಣಗೆರೆ:** ಗ್ಯಾರಂಟಿ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದರು. ಆದರೆ ಕಾಂಗ್ರೆಸ್ ಸರ್ಕಾರ ನುಡಿದಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಅಭಿವೃದ್ಧಿ ಕಾರ್ಯಗಳಿಗೂ ಹಣ ನೀಡುತ್ತಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆಂದೂ ಕಾಣದ ರೀತಿಯಲ್ಲಿ ಪ್ರತಿ ಕ್ಷೇತ್ರದ ಅಭಿವೃದ್ಧಿಗೆ ಶಾಸಕರ ವಿವೇಚನೆಯಡಿ 80 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ವಿಪಕ್ಷ, ಆಡಳಿತದ ಶಾಸಕರಿಗೂ ಅನುದಾನ ಹಂಚಿಕೆ ಮಾಡಲಾಗಿದೆ. ಈ ವರ್ಷ ಪ್ರತಿ ಶಾಸಕರಿಗೂ 25 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ ಎಂದು ಅವರು ಸಮರ್ಥಿಸಿಕೊಂಡರು.



ರಾಜ್ಯದಿಂದ 4.50 ಲಕ್ಷ ಕೋಟಿ ರೂ. ತೆರಿಗೆ ಹಣ ಪಡೆಯುತ್ತಿರುವ ಕೇಂದ್ರ ಸರ್ಕಾರ ರಾಜ್ಯಕ್ಕೆ ಹಂಚಿಕೆ ಮಾಡುತ್ತಿರುವುದು ಕೇವಲ 50 ಸಾವಿರ ಕೋಟಿ. ರಾಜ್ಯದಿಂದ ಐವರು ಕೇಂದ್ರ ಸಚಿವರಿದ್ದರೂ ಕರ್ನಾಟಕದ ಹಿತಾಸಕ್ತಿ ಬಗ್ಗೆ ಬಾಯಿಬಿಡುತ್ತಿಲ್ಲ. ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ಅನುಮತಿ ನೀಡಿದ್ದರೂ, ಕೇಂದ್ರ ಸರ್ಕಾರ ಒಪ್ಪಿಗೆ ಕೊಡುತ್ತಿಲ್ಲ ಎಂದು ಆರೋಪಿಸಿದರು.

ಕಾಂಗ್ರೆಸ್‌ಗೆ ಎರಡೂ ಕಡೆ ವಿಜಯ: ಸಿಎಂ

ಪುಟ ೧➡ ಎಲ್ಲೆಡೆ ಅಭೂತಪೂರ್ವ ಸ್ಪಂದನೆ ಸಿಗುತ್ತಿದ್ದು, ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ಸಿದ್ದರಾಮಯ್ಯ ಭರವಸೆ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರದ ಕಾರ್ಯಕ್ರಮಗಳು ಬಡವರಿಗಾಗಿ ರೂಪಿಸಲ್ಪಟ್ಟಿವೆ. ಎಲ್ಲಾ ಜಾತಿ, ಧರ್ಮ, ಭಾಷೆಗಳಿಗೆ ಸೇರಿದ ಜನರಿಗೆ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ. ಬಿಜೆಪಿ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದ್ದು, ಗ್ಯಾರಂಟಿ ಯೋಜನೆಗಳು ಸಾಮಾಜಿಕ ಬದ್ಧತೆಯನ್ನು ಒದಗಿಸುವ ಹೂಡಿಕೆಯಾಗಿದೆ. ಇದೂ ಕೂಡ ಅಭಿವೃದ್ಧಿಯೇ ಎಂದರು.

ಅಭಿವೃದ್ಧಿ ಕುಂಠಿತವಾಗಿಲ್ಲ: ಸಾಮಾಜಿಕ ಯೋಜನೆಗಳನ್ನು ಘೋಷಿಸಿದ ಮೇಲೆ ಬಿಜೆಪಿ ಅಂದಿನಿಂದ ಇಂದಿನವರೆಗೆ ವಿರೋಧಿಸುತ್ತಲೇ ಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸೇರಿದಂತೆ ಎಲ್ಲರೂ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಹೇಳಿಕೊಂಡು ಬಂದಿದ್ದಾರೆ. ಕಳೆದ ಮೂರು ವರ್ಷಗಳಿಂದ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿದ್ದು 24/3/2026 ವರೆಗೆ 1.31 ಲಕ್ಷ ಕೋಟಿ ರೂ.ಗಳನ್ನು ಗ್ಯಾರಂಟಿಗಳಿಗೆ ಕೊಟ್ಟಿದ್ದೇವೆ. ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು, ಪೊಲೀಸ್ ವ್ಯವಸ್ಥೆಗೆ ವೆಚ್ಚ, ಎಸ್‌ಸಿ ಎಸ್‌ಪಿ/ಟಿಎಸ್‌ಪಿ ಯೋಜನೆಗಳಿಗೆ ವೆಚ್ಚ ಮಾಡುವುದನ್ನು ಕಡಿಮೆ ಮಾಡಿಲ್ಲ, ಕಳೆದ ವರ್ಷದಲ್ಲಿ 42,000 ಕೋಟಿ ರೂ. ವೆಚ್ಚ ಮಾಡಿದ್ದರೆ, ಈ ವರ್ಷ 44,000 ಕೋಟಿಗೂ ಹೆಚ್ಚು ವೆಚ್ಚ ಮಾಡಲಾಗುತ್ತಿದೆ. ಅಭಿವೃದ್ಧಿ ಕೆಲಸಗಳ್ಯಾವುವೂ ಕುಂಠಿತವಾಗಿಲ್ಲ ಎಂದರು. ಸಾಲ ಮಾಡಿದ್ದೇನೆ ಎನ್ನುವುದು ಹಸಿ ಸುಳ್ಳು. ಆರ್ಥಿಕ ಹೊಣೆಗಾರಿಕೆ ಕಾಯ್ದೆಯ ಮಾನದಂಡಗಳನ್ನು ಮೀರಿಲ್ಲ, ಆರ್ಥಿಕ ಶಿಸ್ತು ಕಾಪಾಡಿಕೊಂಡಿದ್ದೇವೆ ಎಂದರು.

ನಾವು ಕೇಂದ್ರ ಸರ್ಕಾರಕ್ಕಿಂತ ಉತ್ತಮ ಸ್ಥಿತಿಯಲ್ಲಿದ್ದೇವೆ. ಕೇಂದ್ರ ಸರ್ಕಾರದ ಜಿಡಿಪಿ 7.14% ಬೆಳವಣಿಗೆ ಇದೆ. ಕರ್ನಾಟಕದ ಜಿಡಿಪಿ 8.1% ಇದೆ. ಇವೆರಡರಲ್ಲಿ ಯಾವುದು ಹೆಚ್ಚು ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು.

ಕೇಂದ್ರಕ್ಕಿಂತ ಉತ್ತಮ: ಕರ್ನಾಟಕದ ಜಿಡಿಪಿ ಬೆಳವಣಿಗೆ ಕೇಂದ್ರ ಸರ್ಕಾರಕ್ಕಿಂತ ಉತ್ತಮವಾಗಿದೆ. ಮನಮೋಹನ್ ಸಿಂಗ್ ಪ್ರಧಾನಿಗಳಾಗಿದ್ದಾಗ ಹಾಗೂ ಸ್ವಾತಂತ್ರ್ಯ ಬಂದಾಗಿನಿಂದ ಸೇರಿಸಲ್ಪಟ್ಟ ಒಟ್ಟು ಸಾಲ 53 ಲಕ್ಷದ 11000 ಕೋಟಿ ಸಾಲ ಇತ್ತು. 2026 ಮಾರ್ಚ್ ವರೆಗೆ 218 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು 12 ವರ್ಷಗಳಲ್ಲಿ 165 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ ಎಂದರು.

ಬಿಜೆಪಿಯಿಂದ ಉಚ್ಚಾಟಿತರಾಗಿರುವ ಶಾಸಕ ಯತ್ನಾಳ್ ಅವರನ್ನು ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವ ಬಿಜೆಪಿ ಹೀನಾಯ ಸ್ಥಿತಿಗೆ ತಲುಪಿದೆ. ಬಿಜೆಪಿಯವರು ಸೋಲಿನ ಭಯದಿಂದ ಇಂತಹ ಕೃತ್ಯಕ್ಕೆ ಕೈಹಾಕಿದ್ದಾರೆ. ಪ್ರತಿಪಕ್ಷಗಳ ಹೇಳಿಕೆಗಳಿಗೆ ನಾವು ಪ್ರತಿಕ್ರಿಯಿಸುವುದಿಲ್ಲ, ಸರ್ಕಾರದ ಕೆಲಸವನ್ನು ಜನರ ಮುಂದಿಡುತ್ತೇವೆ ಎಂದರು.

ಪಾಕ್‌ನಿಂದ ಯುಎಇ ದೊಡ್ಡ ಸಾಲ ವಸೂಲಿ!

ಪುಟ ೧➡ ಇದರಿಂದ ಪಾಕ್‌ಗೆ ನೀಡಿದ ದೊಡ್ಡ ಸಾಲವನ್ನು ತಕ್ಷಣ ಮರುಪಾವತಿ ಮಾಡುವಂತೆ ಒತ್ತಡ ಹೇರಿದ್ದು, ಪಾಕ್‌ಗೆ ಸಂಕಷ್ಟ ಎದುರಾಗಿದೆ. ಸಾಲದ ಮೊತ್ತವನ್ನು ತಕ್ಷಣ ಮರುಪಾವತಿಸಲು ಯುಎಇ ಒತ್ತಡ ಹಾಕಿರುವ ವರದಿಯನ್ನು ಪಾಕ್ ಸಂಪುಟದ ಹಿರಿಯ ಸಚಿವರೊಬ್ಬರು ದೃಢೀಕರಿಸಿದ್ದಾರೆ.

ಆಯ್ದ ಪತ್ರಕರ್ತರ ಗುಂಪನ್ನು ಕರೆದು ಪತ್ರಿಕಾಗೋಷ್ಠಿ ನಡೆಸಿದ ಪಾಕಿಸ್ತಾನ ಸರ್ಕಾರ, ಸಾಲದ ಮೊತ್ತವನ್ನು ಸಂಪೂರ್ಣ ಮರುಪಾವತಿ ಮಾಡುವುದಾಗಿ ಹೇಳಿಕೆ ನೀಡಿದೆ. ಸಾಲದ ಒಂದು ದೊಡ್ಡ ಭಾಗವನ್ನು ಹೂಡಿಕೆಯಾಗಿ ಪರಿವರ್ತಿಸಲು ಯುಎಇ ಜತೆ ತೆರೆಮರೆಯಲ್ಲಿ ಪಾಕ್ ಮಾತುಕತೆ ನಡೆಸುತ್ತಿದೆ ಎಂಬ ಮಾಹಿತಿಯನ್ನು ಮೂಲಗಳು ನೀಡಿವೆ.

ಐಎಂಎಫ್ ಯೋಜನೆ ಅನ್ವಯ ನೀಡಿದ್ದ ಸಾಲ: ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಯೋಜನೆಯ ಅನ್ವಯ ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನ್ (ಎಸ್‌ಬಿಪಿ)ನಲ್ಲಿ ಒಟ್ಟು 12.5 ಶತಕೋಟಿ ಡಾಲರ್ ಹಣ ಠೇವಣಿ ಮಾಡಲು ಯುಎಇ, ಸೌದಿ ಅರೇಬಿಯಾ ಮತ್ತು ಚೀನಾ ಒಪ್ಪಿಕೊಂಡಿದ್ದವು. ಈ ಯೋಜನೆ 2027ರ ಸೆಪ್ಟೆಂಬರ್‌ನಲ್ಲಿ ಮುಕ್ತಾಯ ಆಗುವುದಿದೆ. ಪಾಕಿಸ್ತಾನ ಇನ್ನೆರಡು ವರ್ಷ ಗಡುವು ವಿಸ್ತರಣೆಗೆ ಮನವಿ ಮಾಡಿದ್ದರೂ ಯುಎಇ ಒಪ್ಪಿರಲಿಲ್ಲ.

ಮೂರು ಕಂತುಗಳಲ್ಲಿ ಸಾಲ ಮರುಪಾವತಿ? ಮೂರು ಕಂತುಗಳಲ್ಲಿ ಅಂದರೆ, ಏ.11, ಏ.17 ಹಾಗೂ ಏ.23ರಂದು ಸಾಲ ಮರುಪಾವತಿಸಲು ದಿನ ನಿಗದಿಪಡಿಸಲಾಗಿದೆ. ಅಮೆರಿಕದ ಸೆಂಟ್ರಲ್ ಬ್ಯಾಂಕ್ ಖಾತೆಯಲ್ಲಿರುವ 16.4 ಶತಕೋಟಿ ಡಾಲರ್ ವಿದೇಶಿ ವಿನಿಮಯ ಮೀಸಲು ಹಣವನ್ನು ಹಿಂಪಡೆದು, ಸಾಲ ವಾಪಸಾತಿ ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

ಹಳೆಯ ಸಾಲ ವಾಪಸಾತಿಗೆ ಸಕಾಲ: ಒಟ್ಟು 3.5 ಶತಕೋಟಿ ಡಾಲರ್ ಸಾಲದ ಮೊತ್ತದಲ್ಲಿ 450 ದಶಲಕ್ಷ ಡಾಲರ್‌ನ್ನು ಪಾಕಿಸ್ತಾನ 1996–97ರಲ್ಲೇ ಯುಎಇಯಿಂದ 1 ವರ್ಷದ ಸಾಲವಾಗಿ ಪಡೆದಿತ್ತು. ಆದರೆ ಕಳೆದ ಮೂರು ದಶಕಗಳಿಂದ ಮರುಪಾವತಿ ಮಾಡಿರಲಿಲ್ಲ.

ಮಾದಕವಸ್ತು ಸೇವನೆ: 17 ಜನ ಬಂಧನ

• **ಕೊಳ್ಳೇಗಾಲ:** ತಾಲೂಕಿನ ಮಧುವನಹಳ್ಳಿ ಹೊರವಲಯದ ರೆಸಾರ್ಟ್‌ನಲ್ಲಿ ಮಾದಕವಸ್ತುಗಳ ಪಾರ್ಟಿ ನಡೆದಿದ್ದು, ರೌಡಿ ಶೀಟರ್ ಸೇರಿದಂತೆ 17 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದ ಘಟನೆ ಜರುಗಿದೆ. ಮಧುವನಹಳ್ಳಿ ಹೊರವಲಯದ ಹಾರವನಪುರ (ಲಕ್ಷ್ಮೀಪುರ) ವ್ಯಾಪ್ತಿಯಲ್ಲಿ ಗುತ್ತಿಗೆದಾರ ಫಯಾಜ್ ಖಾನ್ ಎಂಬುವರಿಗೆ ಸೇರಿದ ಫ್ಲೋರ ಫಾರ್ಮ್ ಹೌಸ್‌ನಲ್ಲಿ ರೌಡಿ ಶೀಟರ್ ಜಹೀರ್ ಖಾಲು ಎನ್ನುವವರ ಹುಟ್ಟುಹಬ್ಬದ ಹೆಸ್ರಲ್ಲಿ ಡ್ರಗ್ಸ್ ಸೇವನೆ ಮಾಡಿದ್ದ ಜಹೀರ್ ಸೇರಿದಂತೆ 17 ಮಂದಿಯನ್ನು ವಶಕ್ಕೆ ಪಡೆದರು. ಇವರಿಂದ 17 ಚರಸ್ ಉಂಡೆಗಳು, 43.24 ಗ್ರಾಂ.ನಷ್ಟು ಬ್ರೌನ್ ಕಲರ್ ಪೌಡರ್, 1.40 ಗ್ರಾಮ್ ಸಣ್ಣ ಸಣ್ಣ ಬೇರುಗಳು, 6.26 ವೈಟ್ ಪೌಡರ್, 22.54 ಗ್ರಾಮ್ ನಷ್ಟು ಲೈಟ್ ಬ್ರೌನ್ ಕಲರ್ ಕ್ರಿಸ್ಟಲ್ ಪೌಡರ್‌ನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿಗಳಾದ ಜಹೀರ್ ಖಾಲು, ಉಮೇರ್ ಖಾನ್, ಶೇಖ್ ಮೆಹಬೂಬ್, ನಿಸಾರ್ ಖಾನ್ ಎಂಬುರನ್ನು ಬಂಧಿಸಿದ್ದಾರೆ.

ಕೇರಳದಲ್ಲಿ ಎನ್‌ಡಿಎ ಪರ ಅಲೆ

ಪುಟ ೧➡ ಈ ಸಂವಾದದ ವೇಳೆ ಕೇರಳದ ಮತದಾರರು ಈ ಬಾರಿ ಆಳುವ ಎಡರಂಗವನ್ನು ಅಧಿಕಾರದಿಂದ ಇಳಿಸಲು ನಿರ್ಧರಿಸಿರುವುದು ಮತ್ತು ಬದಲಾವಣೆಯೊಂದರ ಪರವಾಗಿರುವುದು ಸ್ಪಷ್ಟಗೊಂಡಿತು. ವಿರೋಧಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ರಾಜ್ಯಕ್ಕೆ ಒಳಿತುಂಟುಮಾಡಲು ಸಾಧ್ಯವಿಲ್ಲ, ಯಾಕೆಂದರೆ ಎಡರಂಗ ಮತ್ತು ಯುಡಿಎಫ್‌ಗಳು ಅದಲುಬದಲಾಗಿ ದಶಕಗಳ ಕಾಲ ರಾಜ್ಯವನ್ನು ಆಳಿದರೂ ಕೇರಳಕ್ಕೆ ನ್ಯಾಯ ನೀಡಲು ವಿಫಲವಾಗಿವೆ. ತಮ್ಮ ಅಡ್ಜಸ್ಟ್‌ಮೆಂಟ್ ರಾಜಕೀಯದಿಂದ ಕೇರಳದ ಅಭಿವೃದ್ಧಿಗೆ ವಂಚನೆ ಎಸಗಿದ್ದು ಸ್ಪಷ್ಟವಾಗಿದೆ ಎಂದರು.

ಕೇಂದ್ರದಿಂದ ಕೇರಳಕ್ಕೆ ನೆರವು: ಕೇರಳದಲ್ಲಿ ಬಿಜೆಪಿ ಸರಕಾರ ಇಲ್ಲದೆ ಇದ್ದರೂ ಕೇಂದ್ರ ಸರಕಾರವು ಕೇರಳಕ್ಕೆ ತುಂಬು ನೆರವು ನೀಡಿದ್ದು, ಹಿಂದೆಂದೂ ಕಾಣದ ರೀತಿಯಲ್ಲಿ ರಸ್ತೆ, ರೈಲ್ವೆಯಂತಹ ಅನೇಕ ಮೂಲಸೌಕರ್ಯಗಳನ್ನು ಒದಗಿಸಿದೆ. ಕೇಂದ್ರದ ಬೆಂಬಲದಿಂದ ರಾಜ್ಯವು ಅನೇಕ ಲಾಭಗಳನ್ನು ಗಳಿಸಿದೆ. ಕೇರಳದಲ್ಲಿ ಹಿಂದೆಯೂ ಬಿಜೆಪಿ ಸರಕಾರ ಇರಲಿಲ್ಲ, ಆದರೆ ಬಿಜೆಪಿ ಮಾತ್ರ ಕೇರಳದ ಅಭಿವೃದ್ಧಿಗೆ ನಿರಂತರ ನೆಲೆಯಲ್ಲಿ ಬೆಂಬಲವಿತ್ತಿದೆ. ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ನೀಡಿದ್ದಕ್ಕಿಂತ 5 ಪಟ್ಟು ಹೆಚ್ಚಿನ ಅನುದಾನಗಳನ್ನು ತಮ್ಮ ಸರಕಾರ ಕೇರಳಕ್ಕೆ ನೀಡಿದೆ ಎಂದು ಬೊಟ್ಟು ಮಾಡಿದರು.

ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಕ್ರೈಸ್ತ ಜನಸಂಖ್ಯೆ ಇದ್ದು, ಅವರೆಲ್ಲರೂ ಅಭಿವೃದ್ಧಿಯ ಲಾಭ ಪಡೆದಿದ್ದಾರೆ. ಇದಕ್ಕೆ ಗೋವಾ ರಾಜ್ಯವೇ ಉದಾಹರಣೆ ಎಂದು ಮೋದಿಯವರು ಎತ್ತಿತೋರಿದರು. ಈ ಮೂಲಕ ಅವರು ಬಿಜೆಪಿ ಕ್ರೈಸ್ತ ವಿರೋಧಿ ಎಂದು ಬಿಂಬಿಸಲು ಯುಡಿಎಫ್ ನಡೆಸುತ್ತಿರುವ ಯತ್ನಕ್ಕೆ ತಿರುಗೇಟು ನೀಡಿದರು. ಕೇರಳದಲ್ಲಿ ಕ್ರೈಸ್ತರು ದೊಡ್ಡ ಪ್ರಮಾಣದಲ್ಲಿ ಬಿಜೆಪಿಯನ್ನು ಬೆಂಬಲಿಸಲು ಮುಂದಾಗಿರುವುದರಿಂದ ಆತಂಕಿತ ಕಾಂಗ್ರೆಸ್ ಬಿಜೆಪಿ ಕ್ರೈಸ್ತ ವಿರೋಧಿ ಎಂದು ಪ್ರಚಾರ ನಡೆಸುತ್ತಿರುವುದಿಲ್ಲಿ ಉಲ್ಲೇಖನೀಯ.

ಕೇರಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದೇ ಆದರೆ ಮೀನುಗಾರರ ಸಮಸ್ಯೆ ಸೇರಿದಂತೆ ಜನರ ಅನೇಕ ಸಮಸ್ಯೆಗಳಿಗೆ ಪರಿಹಾರ ಲಭಿಸಲಿದೆ. ಕೇರಳದಲ್ಲಿ ರಾಷ್ಟ್ರೀಯ ಹೆದ್ದಾರಿಗಳು, ರೈಲ್ವೆ ಅಭಿವೃದ್ಧಿ ಮತ್ತು ಕೊಟ್ಟಾಯಂಗೆ ವಂದೇ ಭಾರತ್ ಸೇವೆಗಳನ್ನು ಒದಗಿಸಿರುವುದು ಸೇರಿದಂತೆ ಅನೇಕ ಮಹತ್ವದ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಒದಗಿಸಿರುವುದನ್ನು ಅವರು ಪ್ರಸ್ತಾಪಿಸಿದರು.

ಶಬರಿಮಲೆಗೆ ಪ್ರಸ್ತಾಪಿಸಲಾಗಿರುವ ಶಬರಿ ರೈಲ್ವೆ ಯೋಜನೆಯಿಂದ ಶಬರಿಮಲೆಗೆ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ಮತ್ತು ಇಲ್ಲಿನ ಆರ್ಥಿಕ ಅಭಿವೃದ್ಧಿಗೂ ನೆರವಾಗಲಿದೆ. ಈ ಯೋಜನೆಯಿಂದ ಪ್ರಯಾಣಿಕರ ಸಂಚಾರ, ಮಾರುಕಟ್ಟೆ ಒದಗಿಸುವಿಕೆ, ಯುವಜನರಿಗೆ ಉದ್ಯೋಗಗಳನ್ನು ಸೃಷ್ಟಿಸಲು ನೆರವಾಗಲಿದೆ. ಆದರೆ ಪ್ರಸಕ್ತ ರಾಜ್ಯ ಸರಕಾರ ಇಂತಹ ಯೋಜನೆಗಳ ಜಾರಿಗೆ ಸೂಕ್ತ ಸಹಕಾರ ನೀಡದಿರುವುದು ವಿಷಾದನೀಯ. ಕೇರಳದಲ್ಲಿ ಬಿಜೆಪಿ ಸರಕಾರ ಬಂದಾಗ ಮಾತ್ರ ಅಭಿವೃದ್ಧಿ ಯೋಜನೆಗಳಿಗೆ ಬಲ ಬರುವುದು ಎಂದರು.

ತಿರುವನಂತಪುರಂನಲ್ಲಿ ನಮೋ ರೋಡ್‌ಶೋ

ಪುಟ ೧➡ 1.5 ಕಿ.ಮೀ. ಉದ್ದಕ್ಕೂ ಭಾರೀ ಸಂಖ್ಯೆಯಲ್ಲಿ ಸೇರಿದ್ದ ಜನಸಾಗರದತ್ತ ಪ್ರಧಾನಿಯವರು ಕೈಬೀಸಿ, ಕೈಮುಗಿದು ಕೃತಜ್ಞತೆ ಸಲ್ಲಿಸಿದರು.

ಶಬರಿಮಲೆ ಚಿನ್ನ ಲೂಟಿ: ಶಬರಿಮಲೆ ದೇವಳದಲ್ಲಿ ನಡೆದ ಚಿನ್ನ ಲೂಟಿ ಹಗರಣವು ಆಘಾತಕಾರಿಯಾಗಿದ್ದು, ಎಲ್‌ಡಿಎಫ್ ಮತ್ತು ಯುಡಿಎಫ್‌ಗಳು ಈ ಹಿಂದೆ ಶಬರಿಮಲೆ ಯಾತ್ರೆಗೆ ಕಳಂಕ ತರಲು ಮುಂದಾಗಿದ್ದರೆ, ಈಗ ನೇರ ದೇವಾಲಯವನ್ನೇ ಗುರಿಯಾಗಿಸಿವೆ. ಎನ್‌ಡಿಎ ಅಧಿಕಾರಕ್ಕೆ ಬಂದದ್ದೇ ಆದರೆ ಇದಕ್ಕೆ ಹೊಣೆಗಾರರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿದೆ ಎಂದು ಭರವಸೆಯಿತ್ತರು. ಈ ಬಾರಿಯ ಚುನಾವಣೆ ಪ್ರಚಾರದಲ್ಲಿ ಮೋದಿಯವರ 2ನೇ ರಾಜ್ಯ ಭೇಟಿ ಇದಾಗಿದ್ದು, ಈ ಹಿಂದೆ ಮಾ.29ರಂದು ಪಾಲಕ್ಕಾಡಿನಲ್ಲಿ ಸಾರ್ವಜನಿಕ ರ‍್ಯಾಲಿ, ತ್ರಿಶೂರ್‌ನಲ್ಲಿ ರೋಡ್‌ಶೋ ನಡೆಸಿದಾಗ ಸಾವಿರಾರು ಜನರು ಪಾಲ್ಗೊಂಡು ಮೋದಿಯವರಿಗೆ ಬೆಂಬಲ ಘೋಷಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಕನ್ನಡ ಭಾಷಿಕ ಶಿಕ್ಷಕರಿಗೆ ಮಹಾ ಅನ್ಯಾಯ

ಪುಟ ೧➡ ಭಾಷೆಯ ಈ ತಾಂತ್ರಿಕ ಅಡಚಣೆಯಿಂದಾಗಿ ಅರ್ಹ ಅಭ್ಯರ್ಥಿಗಳು ಅನುತ್ತೀರ್ಣರಾಗುತ್ತಿದ್ದು, ರಾಜ್ಯದಲ್ಲಿ ಕನ್ನಡ ಶಿಕ್ಷಕರ ಕೊರತೆ ಉಂಟಾಗುತ್ತಿದೆ.

ಭರವಸೆಗಳ ಉಲ್ಲಂಘನೆ: 2023ರಲ್ಲಿ ಜತ್ ತಾಲೂಕಿನ ಅಂದಿನ ಶಾಸಕ ವಿಕ್ರಮಸಿಂಹ ಸಾವಂತ್ ಅವರ ನೇತೃತ್ವದಲ್ಲಿ ಶಿಕ್ಷಣ ಕಾರ್ಯದರ್ಶಿಗಳು ಕನ್ನಡದಲ್ಲಿ ಪ್ರಶ್ನೆಪತ್ರಿಕೆ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ, 2026ರ ಪರೀಕ್ಷಾ ವೇಳಾಪಟ್ಟಿಯಲ್ಲಿ ಮತ್ತೆ ಮರಾಠಿ ಮಾಧ್ಯಮವನ್ನೇ ಕಡ್ಡಾಯಗೊಳಿಸಲಾಗಿದೆ. ಈ ಕುರಿತು ರಾಜ್ಯ ಸರ್ಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೂಡ ಮಹಾರಾಷ್ಟ್ರದ ಶಿಕ್ಷಣ ಸಚಿವರು ಮತ್ತು ಕಾರ್ಯದರ್ಶಿಗಳಿಗೆ ಪತ್ರ ಬರೆದು ಅಲ್ಪಸಂಖ್ಯಾತರ ಹಿತರಕ್ಷಣೆ ಮಾಡುವಂತೆ ವಿನಂತಿಸಿದೆ. ಆದರ್ಶ ಕನ್ನಡ ಬಳಗವು ಕಳೆದ ಎರಡು ತಿಂಗಳ ಹಿಂದೆ ನೀಡಿದ ಪತ್ರಕ್ಕೂ ಈವರೆಗೆ ಯಾವುದೇ ಸ್ಪಂದನೆ ಸಿಕ್ಕಿಲ್ಲ.

ಅಲ್ಪಸಂಖ್ಯಾತರ ಭಾಷಾ ಹಿತಾಸಕ್ತಿ ಕಾಪಾಡುವುದು ಸರ್ಕಾರದ ಸಂವಿಧಾನಿಕ ಕರ್ತವ್ಯವಾಗಿದೆ. ಕರ್ನಾಟಕದಲ್ಲಿ ಮರಾಠಿ ಭಾಷಿಕರಿಗೆ ಸಿಗುವ ಸೌಲಭ್ಯ ಮಹಾರಾಷ್ಟ್ರದ ಕನ್ನಡಿಗರಿಗೆ ಏಕೆ ಸಿಗುತ್ತಿಲ್ಲ? ಪರೀಕ್ಷಾ ಪರಿಷತ್ತು 2026ರ ಪರೀಕ್ಷೆಯಲ್ಲಿ ತಕ್ಷಣ ಸುಧಾರಣೆ ತರಬೇಕು. ಇಲ್ಲದಿದ್ದರೆ, ಈ ಅನ್ಯಾಯ ಸಹಿಸುವುದಿಲ್ಲ ಎಂದು ಆದರ್ಶ ಕನ್ನಡ ಬಳಗದ ಅಧ್ಯಕ್ಷ ಮಲಿಕಜಾನ್ ಶೇಖ್ ತಿಳಿಸಿದ್ದಾರೆ.

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬೆಂಗಳೂರು

ಭಾನುವಾರ, 5 ಏಪ್ರಿಲ್ 2026

ಸಂಪುಟ 33, ಸಂಚಿಕೆ 154, ಪುಟಗಳು 14+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94

REG No.KA/BG GPO/2532/2021-23

hosadigantha.com

epaper.hosadigantha.com

Hosadigantha Digital



ಲಡಾಖ್: ಗಗನಯಾತ್ರಿಗಳ ಮಾನಸಿಕ, ದೈಹಿಕ ಪರೀಕ್ಷೆ

೧೦



ಸಂಕಷ್ಟ ನಡುವೆಯೂ ಭಾರತ ದೃಢ: ಜೈಶಂಕರ್

೧೦

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ವಿಶಾಖೆ

ದಿನದ ಮಾತು

ಶ್ರದ್ಧೆ ಮತ್ತು ಭಕ್ತಿಯಿಲ್ಲದ ಕೆಲಸವು ಸುವಾಸನೆಯಿಲ್ಲದ ಕೃತಕ ಹೂವಿನಂತೆ.

▲ಸ್ವಾಮಿ ಚಿನ್ಮಯಾನಂದ

ಪರಿಚಯದ ಪರಿಪರಿಯ ಕಿರಿಕಿರಿಗಳು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

10 ಕೋಟಿ ಮನೆ ತಲುಪಿದ ಆರೆಸ್ಸೆಸ್

• **ಹೊಸದಿಲ್ಲಿ:** ಸಮಾಜದಲ್ಲಿ ಗುರುತು ಆಧಾರಿತ ಭೇದಗಳನ್ನು ಉಂಟುಮಾಡುವ ಯತ್ನಗಳ ನಡುವೆಯೂ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ದೇಶದಲ್ಲಿ ರಾಷ್ಟ್ರೀಯ ಚೇತನವನ್ನು ಜಾಗೃತಿಗೊಳಿಸುವಲ್ಲಿ ಹಾಗೂ ವಿಸ್ತರಿಸುವಲ್ಲಿ ಮಹತ್ತರ ಸಾಧನೆ ಮಾಡಿದೆ ಎಂದು ಸಂಘದೊಂದಿಗೆ ಸಂಬಂಧಿತ ವಾರಪತ್ರಿಕೆ ಆರ್ಗನೈಸರ್ ತನ್ನ ಸಂಪಾದಕೀಯದಲ್ಲಿ ಪ್ರಶಂಸಿಸಿದೆ.

• ಪುಟ ೦೦

ಜಾಗತಿಕ ಯುದ್ಧ ಮಧ್ಯೆ ಭಾರತದ ಸುಗಮ ಹಾದಿ

• ಪುಟ ೦೦

ರಕ್ಷಣಾ ರಫ್ತು ದಾಖಲೆ ಮಟ್ಟದ ಏರಿಕೆ

• ಪುಟ ೦೦

ಇರಾನ್‌ನೊಂದಿಗೆ ಪಾವತಿ ಸಮಸ್ಯೆ ಇಲ್ಲ: ಕೇಂದ್ರ

• ಪುಟ ೦೦

ಎಟಿಎಸ್‌ನಿಂದ ನಾಲ್ವರು ಉಗ್ರರ ಸೆರೆ

• ಪುಟ ೦೦

ಅಫ್ಘಾನಿಸ್ತಾನದಲ್ಲಿ 5.8 ತೀವ್ರತೆ ಭೂಕಂಪ: 8 ಸಾವು

• ಪುಟ ೦೦

ಸಾವಿರ ಕೆಜಿ ತೂಕದ ದೇಸಿ ವೈಮಾನಿಕ ಬಾಂಬ್ ಅಭಿವೃದ್ಧಿ

• ಪುಟ ೦೦

ಫಲಿತಾಂಶ ರಾಜ್ಯಕ್ಕೆ ದಿಕ್ಸೂಚಿ: ಸುನೀಲ್‌ಕುಮಾರ್

• ಪುಟ ೫

ಕಾಂಗ್ರೆಸ್‌ಗೆ ದೊಡ್ಡ ಅಂತರದ ಗೆಲುವು: ಡಿಕೆಶಿ

• ಪುಟ ೫

ಗ್ಯಾಸ್ಟ್ರಿಕ್ ನಿರ್ಲಕ್ಷ್ಯವೇ ಕ್ಯಾನ್ಸರ್ ಕಾಯಿಲೆಗೆ ಮುನ್ನುಡಿ

• ಪುಟ ೫

ಬಾಬ್ ಎಲ್-ಮಂಡೆಬ್ ಮುಚ್ಚುವುದಾಗಿ ಇರಾನ್ ಸ್ಪೀಕರ್ ಬೆದರಿಕೆ

ಜಾಗತಿಕ ತೈಲ ಪೂರೈಕೆ, ವ್ಯಾಪಾರಕ್ಕೆ ಹೊಡೆತ ನೀಡಲು ಇರಾನ್ ಸಿದ್ಧತೆ

ಬಾಬ್ ಜಲಸಂಧಿ ಬಂದ್?

• **ಟೆಹ್ರಾನ್:** ಇತರ ರಾಷ್ಟ್ರಗಳು ಯುದ್ಧ ನಿಲ್ಲಿಸಲು ಅಮೆರಿಕ ಮತ್ತು ಇಸ್ರೇಲ್ ಮೇಲೆ ಒತ್ತಡ ಹಾಕಬೇಕೆಂಬ ಉದ್ದೇಶದಿಂದ ಹಾರ್ಮುಜ್ ಜಲಸಂಧಿ ಮುಚ್ಚಿ ಜಾಗತಿಕ ತೈಲ ಪೂರೈಕೆ ವ್ಯತ್ಯಯ ಸೃಷ್ಟಿಸಿರುವ ಇರಾನ್ ಇನ್ನೊಂದು ಹೊಡೆತ ನೀಡಲು ಸಿದ್ಧವಾಗುತ್ತಿದೆ. ಜಾಗತಿಕ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುವ ಬಾಬ್ ಎಲ್-ಮಂಡೆಬ್ ಜಲಸಂಧಿಯನ್ನು ಮುಚ್ಚುವ ಕುರಿತು ಇರಾನ್ ಸಂಸತ್ತಿನ ಸ್ಪೀಕರ್ ಸುಳಿವು ನೀಡಿದ್ದಾರೆ.

ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಗೇರ್ ಗಾಲಿಬಫ್, ಇನ್ನೊಂದು ಜಲಸಂಧಿಯನ್ನು ಮುಚ್ಚಲು ಇರಾನ್ ಸಂಸತ್ತು ಕಾರ್ಯತಂತ್ರ ರೂಪಿಸಿದ ಸುಳಿವನ್ನು ನೀಡಿ ಪರೋಕ್ಷ ಬೆದರಿಕೆ ಹಾಕಿದ್ದಾರೆ.



ಬಾಬ್ ಎಲ್-ಮಂಡೆಬ್ ಜಲಸಂಧಿಯನ್ನು ಯಾವೆಲ್ಲಾ ರಾಷ್ಟ್ರಗಳು ಅವಲಂಬಿಸಿವೆ? ಜಾಗತಿಕ ತೈಲ, ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ), ಗೋಧಿ, ಅಕ್ಕಿ ಮತ್ತು ರಸಗೊಬ್ಬರದ ಎಷ್ಟು ಭಾಗ ಈ ಜಲಸಂಧಿಯ ಮೂಲಕ ದಾಟಿ ಹೋಗುತ್ತವೆ? ಯಾವ ರಾಷ್ಟ್ರಗಳೆಲ್ಲಾ ಈ ಜಲಸಂಧಿ ಮೂಲಕ ಅತ್ಯಧಿಕ ಸರಕು ಸಾಗಿಸುತ್ತವೆ? ಇವೇ ಮೊದಲಾದ ಪ್ರಶ್ನೆಗಳನ್ನು ಎಕ್ಸ್ ಪೋಸ್ಟ್‌ನಲ್ಲಿ ಬರೆದಿರುವ ಇರಾನ್ ಸ್ಪೀಕರ್ ಗಾಲಿಬಫ್, ಇರಾನ್ ಕಾರ್ಯತಂತ್ರ ಹೆಣೆದಿರುವ ಕುರಿತು ಸುಳಿವು ನೀಡಿ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಆಣಕಿಸಿದ್ದಾರೆ.

ಪೂರೈಕೆ ವ್ಯತ್ಯಯ ಸೃಷ್ಟಿಸಿದೆ ಇರಾನ್: ಹಾರ್ಮುಜ್ ಜಲಸಂಧಿ ಸಂಪೂರ್ಣ ತೆರೆಯದೆ ಇರಾನ್ ಜಾಗತಿಕ ತೈಲ ಪೂರೈಕೆಯಲ್ಲಿ ಕೃತಕ ವ್ಯತ್ಯಯ ಸೃಷ್ಟಿಸಿದೆ. ಸದ್ಯ ಜಾಗತಿಕ ವ್ಯಾಪಾರದಲ್ಲಿ ವ್ಯತ್ಯಯ ಸೃಷ್ಟಿಸಿದ ಇರಾನ್, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಕ್ಯಾರೇ ಎನ್ನದೆ ಯುದ್ಧ ನಡೆಸುತ್ತಿದೆ. ಫೆ.28ರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿ ಆರಂಭಿಸಿದಲ್ಲಿಂದ ಹಾರ್ಮುಜ್ ಮುಚ್ಚುವವರೆಗೆ ಯುದ್ಧದ ಮೇಲೆ ಅಮೆರಿಕ ಅಧ್ಯಕ್ಷರ ನಿಯಂತ್ರಣವಿತ್ತು. ಹಾರ್ಮುಜ್ ಮುಚ್ಚಿದ ನಂತರ ಇರಾನ್ ಪ್ರಾಬಲ್ಯ ಮೆರೆದಿದ್ದು, ಮಾನಸಿಕ ಸ್ಥೈರ್ಯ ಹೆಚ್ಚಿಸಿಕೊಂಡಿದೆ. ಇದರಿಂದ ಅಮೆರಿಕ ಬೆದರಿಕೆಗಳಿಗೆ ಇರಾನ್ ಪ್ರತ್ಯುತ್ತರ ನೀಡುತ್ತಿದೆ. ಇದೀಗ ಇನ್ನೊಂದು ಜಲಸಂಧಿಯನ್ನು ಮುಚ್ಚಿದರೆ ಹಲವು ಆರ್ಥಿಕ ಸಮಸ್ಯೆಗಳನ್ನು ಜಗತ್ತು ಎದುರಿಸಬೇಕಾಗುವ ಸಾಧ್ಯತೆಯಿದೆ.



ಹಾರ್ಮುಜ್-ಬಾಬ್ ನಡುವಿನ ಸಂಪರ್ಕ

ಹಾರ್ಮುಜ್ ಮತ್ತು ಬಾಬ್ ಎರಡೂ ಜಲಸಂಧಿಗಳು ಪರಸ್ಪರ ಸಂಪರ್ಕ ಹೊಂದಿವೆ.

➡ ಪುಟ 9

ಭಾರತದ ಮೇಲೆ ನೇರ ಪರಿಣಾಮ?

ಬಾಬ್ ಎಲ್-ಮಂಡೆಬ್ ಜಲಸಂಧಿಯ ಮೂಲಕ ಯುರೋಪ್ ಮತ್ತು ಪಶ್ಚಿಮ ಏಷ್ಯಾ ರಾಷ್ಟ್ರಗಳೊಂದಿಗೆ ಭಾರತ ತನ್ನ ವ್ಯಾಪಾರ ಮತ್ತು ಇಂಧನ ವಹಿವಾಟುಗಳನ್ನು ನಡೆಸುತ್ತದೆ. ಇದರಿಂದ ಇರಾನ್ ಬಾಬ್ ಜಲಸಂಧಿಯನ್ನು ಮುಚ್ಚಿದರೆ ಭಾರತದ ಮೇಲೆ ನೇರ ಪರಿಣಾಮ ಬೀರಲಿದೆ. ಆದರೆ ಹಾರ್ಮುಜ್‌ನಲ್ಲಿ ಭಾರತೀಯ ತೈಲ ಹಡಗುಗಳಿಗೆ ಇರಾನ್ ಅವಕಾಶ ನೀಡಿದ್ದು, ಭಾರತವನ್ನು ಆಪ್ತ ಸ್ನೇಹಿತ ರಾಷ್ಟ್ರವೆಂದು ಇರಾನ್ ಹೇಳಿಕೊಂಡಿದೆ.

ಬಾಬ್ ಜಲಸಂಧಿ ಎಲ್ಲಿದೆ? ಮಹತ್ವ?

50 ಕಿ.ಮೀ. (31 ಮೈಲಿ) ಉದ್ದ ಮತ್ತು 32 ಕಿ.ಮೀ. (20 ಮೈಲಿ) ಅಗಲದ ಈ ಜಲಸಂಧಿ ಕೆಂಪು ಸಮುದ್ರ ಮತ್ತು ಹಿಂದು ಮಹಾಸಾಗರವನ್ನು ಒಂದುಗೂಡಿಸುತ್ತದೆ. ಜಾಗತಿಕ ತೈಲ ಸಾಗಣೆಯ 10ನೇ ಒಂದು ಭಾಗ ಮತ್ತು ಕಾಲು ಭಾಗದ ಕಂಟೇನರ್ ಹಡಗುಗಳು ಇದರ ಮೂಲಕ ಸಾಗುತ್ತವೆ. ಸುಯೆಜ್ ಕಾಲುವೆ ಮೂಲಕ ಯುರೋಪ್-ಏಷ್ಯಾ ರಾಷ್ಟ್ರಗಳು ನಡೆಸುವ ವ್ಯಾಪಾರದಲ್ಲಿ ಬಾಬ್ ಎಲ್-ಮಂಡೆಬ್ ಜಲಸಂಧಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಒಟ್ಟು ಜಾಗತಿಕ ಸಾಗರೋತ್ತರ ವ್ಯಾಪಾರದ ಶೇ.10ರಿಂದ 12ರಷ್ಟು ಭಾಗ ಮಂಡೆಬ್ ಮೂಲಕ ದಾಟುತ್ತದೆ. ಸರಾಸರಿ ದಿನವೊಂದರಲ್ಲಿ 6 ದಶಲಕ್ಷ ಬ್ಯಾರೆಲ್ ತೈಲವನ್ನು ಈ ಜಲಸಂಧಿ ಮೂಲಕ ಸಾಗಿಸಲಾಗುತ್ತದೆ.

ನಾಳೆ ಟ್ರಂಪ್ ಗಡುವು



ಮತ್ತೊಮ್ಮೆ ಅಮೆರಿಕ ಅಧ್ಯಕ್ಷರು ವ್ಯಾಪಾರ ಒಪ್ಪಂದ ಬಲೆ ಬೀಸಿದ್ದಾರೆ. ಹಲವು ರಾಷ್ಟ್ರಗಳೊಂದಿಗೆ ವ್ಯಾಪಾರ ಒಪ್ಪಂದ ಗಡುವು ನೀಡಿ ಯಶಸ್ವಿಯಾದ ಟ್ರಂಪ್ ಇದೀಗ ಅದೇ ತಂತ್ರವನ್ನು ಇರಾನ್ ಮೇಲೆ ಪ್ರಯೋಗಿಸಿದ್ದಾರೆ.

➡ ಪುಟ 9

ಹಿಂದೂ ಧರ್ಮ ಆಚಾರ್ಯ ಸಭಾ ಸಭೆ 28 ರಾಜ್ಯಗಳ ನೂರಾರು ಶ್ರೀಗಳು ಭಾಗಿ

ಸಾಧು ಸಂತರ ಜತೆ ಭಾಗ್ವತ್,ಶಾ ಚರ್ಚೆ



• **ನೆಲಮಂಗಲ (ಬೆಂಗಳೂರು ಗ್ರಾಮಾಂತರ):** ನಗರದಿಂದ ಬಿಜಿಎಸ್ ಎಂಸಿಎಚ್ ಆಸ್ಪತ್ರೆ ಹಾಗೂ ಪಿಯು ಕಾಲೇಜು ಆವರಣದಲ್ಲಿ ಹಿಂದೂ ಧರ್ಮ ಆಚಾರ್ಯ ಸಭಾದಿಂದ ನಡೆದ ಎರಡು ದಿನಗಳ ಸಭೆಯಲ್ಲಿ ದೇಶದ ನೂರಾರು ಸ್ವಾಮೀಜಿಗಳು, ಆರ್‌ಎಸ್‌ಎಸ್ ಸರಸಂಘಚಾಲಕರಾದ ಡಾ.ಮೋಹನ್ ಭಾಗವತ್, ಕೇಂದ್ರ ಗೃಹ ಸಚಿವ ಅಮಿತ್‌ಶಾ ಶನಿವಾರ ಭೇಟಿ ನೀಡಿ ಚರ್ಚೆ ನಡೆಸಿದರು.



28 ರಾಜ್ಯದಿಂದ ಭಾಗಿ: ಎರಡು ದಿನದ ಸಭೆಗೆ ಕರ್ನಾಟಕ, ಗುಜರಾತ್, ತಮಿಳುನಾಡು, ಅಸ್ಸಾಂ, ಉತ್ತರಪ್ರದೇಶ, ಮಧ್ಯಪ್ರದೇಶ, ಬಿಹಾರ,ಕೇರಳ, ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ ಸೇರಿದಂತೆ 28 ರಾಜ್ಯದ ಪ್ರಮುಖ ನೂರಾರು ಸ್ವಾಮೀಜಿಗಳು ಭಾಗವಹಿಸಿದ್ದಾರೆ. ಕರ್ನಾಟಕದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಪೇಜಾವರ ಶ್ರೀ ಸೇರಿದಂತೆ ವಿವಿಧ ಮಠಗಳ ಸ್ವಾಮೀಜಿಗಳು ಭಾಗವಹಿಸಿದ್ದರು.

ಅಮಿತ್ ಶಾ ಭೇಟಿ, ಚರ್ಚೆ: ಶುಕ್ರವಾರ ರಾತ್ರಿಯೇ ಬೆಂಗಳೂರಿಗೆ ಆಗಮಿಸಿದ ಕೇಂದ್ರ ಗೃಹ ಹಾಗೂ ಸಹಕಾರಿ ಸಚಿವ ಅಮಿತ್ ಶಾ, ಶನಿವಾರ ಬೆಳಗ್ಗೆ ಸಮಾರಂಭಕ್ಕೆ ಆಗಮಿಸಿದರು. ಮಧ್ಯಾಹ್ನ 2ಗಂಟೆಯವರೆಗೂ ಹಿಂದೂಧರ್ಮ ಆಚಾರ್ಯ ಸಭಾದ ಸಭೆಯಲ್ಲಿ ಭಾಗವಹಿಸಿ ಸ್ವಾಮೀಜಿಗಳ ಸಲಹೆ ಹಾಗೂ ಸೂಚನೆಗಳನ್ನು ಪಡೆಯುವ ಜತೆ ವಿವಿಧ ವಿಚಾರಗಳ ಬಗ್ಗೆ ಚರ್ಚೆ ಮಾಡಿದರು.

ರಾಜ್ಯದಲ್ಲಿ ಇದೇ ಮೊದಲು

ಬಿಜಿಎಸ್ ಎಂಸಿಎಚ್ ಆಸ್ಪತ್ರೆ ಹಾಗೂ ಕಾಲೇಜು ಆವರಣದಲ್ಲಿ ಹಿಂದೂಧರ್ಮ ಆಚಾರ್ಯ ಸಭಾದಿಂದ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿತ್ತು. ವೃತ್ತಾಕಾರದಲ್ಲಿ ಸ್ವಾಮೀಜಿಗಳು ಕುಳಿತು ಮಾತನಾಡಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿತ್ತು. ರಾಜ್ಯದಲ್ಲಿ ಇದೇ ಮೊದಲ ಬಾರಿ ಇಂತಹ ಸಭೆ ನಡೆದಿದ್ದು, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳ ಸಹಕಾರದೊಂದಿಗೆ ಅದ್ದೂರಿಯಾಗಿ ನಡೆದಿದೆ.

ಎಲ್‌ಡಿಎಫ್, ಯುಡಿಎಫ್‌ನಿಂದ ಒಳಿತಾಗದು ಎಂದ ಪ್ರಧಾನಿ

ಕೇರಳದಲ್ಲಿ ಎನ್‌ಡಿಎ ಪರ ಅಲೆ

• **ಪಟ್ಟಣಂತಿಟ್ಟ:** ಕೇರಳದಲ್ಲಿ ಆಳುವ ಎಲ್‌ಡಿಎಫ್ ನಿರ್ಗಮನದ ಹಾದಿಯಲ್ಲಿದೆ. ಯುಡಿಎಫ್‌ನಿಂದ ಕೇರಳಕ್ಕೆ ಒಳಿತಾಗಲು ಸಾಧ್ಯವಿಲ್ಲ, ಕೇರಳದಲ್ಲೀಗ ಬಿಜೆಪಿ ನೇತೃತ್ವದ ಎನ್‌ಡಿಎ ಅಲೆ ನಿರ್ಮಾಣವಾಗುತ್ತಿದೆ. ಈ ಬಾರಿಯ ಚುನಾವಣೆ ಕೇರಳಕ್ಕೆ ಅತ್ಯಂತ ಪ್ರಯೋಜನಕಾರಿಯಾಗಲಿದೆ ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

ಕೇರಳದ ಜನತೆಗೆ 'ನಮಸ್ಕಾರ' ಎಂದು ಕೈಮುಗಿದ ಮೋದಿಯವರು, 'ತಿರುವಲ್ಲಯುಡೆ ಜನಂಗಳುಡೆ ವಿಶ್ವಾಸಮಾಣುಂಜನಂಗಳುಡೆ ಏಟ್ಟವುಮ್‌ವಲಿಯ ಶಕ್ತಿ' (ತಿರುವಲ್ಲದ ಜನತೆಯ ವಿಶ್ವಾಸ ನಮ್ಮ ಅತ್ಯಂತ ದೊಡ್ಡ ಶಕ್ತಿ) ಮಲಯಾಳಂನಲ್ಲಿ ಮಾತು ಆರಂಭಿಸಿದರು. ಅವರು ಇಲ್ಲಿ ಬಿಜೆಪಿಯ ಬೃಹತ್ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದರು. ಕೆಲವು ದಿನಗಳ ಹಿಂದೆ 'ಮೇರಾ ಬೂತ್ ಸಬ್ಸೇ ಮಜಬೂತ್ ಕ್ಯಾಂಪೇನ್'ನ ಭಾಗವಾಗಿ ಬಿಜೆಪಿ ಕಾರ್ಯಕರ್ತರ ಜತೆ ನಡೆಸಿದ ಸಂವಾದ ಉಲ್ಲೇಖಿಸಿದ ಪ್ರಧಾನಿ, ಕೇರಳದಂತಹ ಸಣ್ಣ ರಾಜ್ಯದಲ್ಲೂ 5000 ಶಕ್ತಿ ಕೇಂದ್ರಗಳಿಂದ 1.25 ಲಕ್ಷ ಕಾರ್ಯಕರ್ತರು ಈ ಅಭಿಯಾನದಲ್ಲಿ ಪಾಲ್ಗೊಂಡಿದ್ದಾರೆಂಬ ಅಂಶವನ್ನು ಅಭಿಮಾನದಿಂದ ಹೇಳಿದರು.

➡ ಪುಟ 9



ತಿರುವನಂತಪುರಂನಲ್ಲಿ ನಮೋ ರೋಡ್‌ಶೋ

ತಿರುವಲ್ಲಾದ ರ‍್ಯಾಲಿಯ ಬಳಿಕ ಪ್ರಧಾನಿ ಮೋದಿಯವರು ತಿರುವನಂತಪುರಂಗೆ ಆಗಮಿಸಿ ಸಂಜೆ ಬೃಹತ್ ರೋಡ್‌ಶೋದಲ್ಲಿ ಪಾಲ್ಗೊಂಡರು.

➡ ಪುಟ 9

ಕಾಂಗ್ರೆಸ್‌ಗೆ ಎರಡೂ ಕಡೆ ವಿಜಯ: ಸಿಎಂ



ದುರ್ಗಾದೇವಿ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ.

• **ಬಾಗಲಕೋಟೆ:** ಕಾಂಗ್ರೆಸ್ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಸೋಲಿನ ಭಯ ಕಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಬಾಗಲಕೋಟೆಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ ಉಪಚುನಾವಣಾ ಪ್ರಚಾರ ಕಾರ್ಯ ಉತ್ತಮವಾಗಿ ನಡೆಯುತ್ತಿದ್ದು, ನಿರೀಕ್ಷೆಗೂ ಮೀರಿ ಜನಸ್ಪಂದನೆ ದೊರೆತಿದೆ.

➡ ಪುಟ 9



ಅಭಿವೃದ್ಧಿ ಶೂನ್ಯ ರಾಜ್ಯ ಸರ್ಕಾರ: ಆರ್.ಅಶೋಕ



• **ಬಾಗಲಕೋಟೆ:** ರಾಜ್ಯದ ತೆರಿಗೆದಾರರ ಹಣವನ್ನು ಕಾಂಗ್ರೆಸ್‌ನವರು ವಯನಾಡಿಗೆ ಕೊಡುತ್ತಾರೆ. ಗ್ಯಾರಂಟಿಯಿಂದ ರೈತರು ಉದ್ಧಾರ ಆಗಿದ್ದರೆ ಅವರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಇದೊಂದು ದರೋಡೆ, ರೈತರ ವಿರೋಧಿ ಸರ್ಕಾರವಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಲಿತರ 53 ಸಾವಿರ ಕೋಟಿ ಹಣ ಲೂಟಿ ಮಾಡಿದ ಸರ್ಕಾರವಾಗಿದೆ.

➡ ಪುಟ 9

ಪಾಕ್‌ನಿಂದ ಯುಎಇ ದೊಡ್ಡ ಸಾಲ ವಸೂಲಿ!



• **ಹೊಸದಿಲ್ಲಿ:** ಪಾಕಿಸ್ತಾನಕ್ಕೆ ನೀಡಿದ್ದ 3.5 ಶತಕೋಟಿ ಡಾಲರ್ ಸಾಲವನ್ನು ತಕ್ಷಣ, ಅಂದರೆ ಏಪ್ರಿಲ್‌ನೊಳಗೆ ಮರುಪಾವತಿ ಮಾಡಬೇಕೆಂದು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಗಡುವು ನೀಡಿದೆ. ಸಾಲದ ಹೊರೆಯಲ್ಲಿರುವ ಪಾಕಿಸ್ತಾನಕ್ಕೆ ಇದೀಗ ಮತ್ತೊಂದು ಹೊರೆ ಎದುರಾದಂತಿದೆ. ಮಧ್ಯಪ್ರಾಚ್ಯ ಯುದ್ಧ ವಿಚಾರದಲ್ಲಿ ಪಾಕ್ ಮತ್ತು ಯುಎಇ ಸ್ನೇಹದಲ್ಲಿ ಬಿರುಕು ಮೂಡಿದೆ ಎನ್ನಲಾಗುತ್ತಿದೆ. ಇದೇವೇಳೆ ಇರಾನ್ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳಿಂದ ತನ್ನ ಹಲವು ಅತ್ಯಾಧುನಿಕ ಮೂಲ ಸೌಕರ್ಯಗಳು ಹಾನಿ ಆಗಿರುವುದರಿಂದ ಯುಎಇ ನಷ್ಟ ಅನುಭವಿಸುತ್ತಿದೆ.

3.5 ಶತಕೋಟಿ ಡಾಲರ್ ಸಾಲ, ಏಪ್ರಿಲ್‌ನೊಳಗೆ ಮರುಪಾವತಿ

➡ ಪುಟ 9

ಮರಾಠಿ ಅಥವಾ ಇಂಗ್ಲಿಷ್‌ನಲ್ಲಿ ಟಿಇಟಿ ಬರೆಯಲು ಒತ್ತಾಯ

ಕನ್ನಡ ಭಾಷಿಕ ಶಿಕ್ಷಕರಿಗೆ ಮಹಾ ಅನ್ಯಾಯ

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ಸುಪ್ರೀಂ ಕೋರ್ಟ್‌ನ ಆದೇಶದಂತೆ ಮಹಾರಾಷ್ಟ್ರದಲ್ಲಿ 2027ರ ಒಳಗೆ ಎಲ್ಲಾ ಶಿಕ್ಷಕರು ಟಿಇಟಿ (ಶಿಕ್ಷಕರ ಅರ್ಹತಾ ಪರೀಕ್ಷೆ) ಪಾಸಾಗುವುದು ಕಡ್ಡಾಯವಾಗಿದೆ. ಆದರೆ, ಮಹಾರಾಷ್ಟ್ರ ಸರ್ಕಾರ ಒಂದು ಕಡೆ ಪರೀಕ್ಷೆ ಕಡ್ಡಾಯಗೊಳಿಸುತ್ತಿದ್ದರೆ, ಇನ್ನೊಂದೆಡೆ ಅಲ್ಪಸಂಖ್ಯಾತ ಕನ್ನಡ ಭಾಷಿಕ ಶಿಕ್ಷಕರ ಮೇಲೆ ಭಾಷಾ ಅನ್ಯಾಯ ಮಾಡುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ಕರ್ನಾಟಕದಲ್ಲಿ ಮರಾಠಿ ಭಾಷಿಕರಿಗೆ ಮರಾಠಿ ಭಾಷೆಯಲ್ಲೇ ಪ್ರಶ್ನೆಪತ್ರಿಕೆ ನೀಡಲಾಗುತ್ತದೆ. ಆದರೆ, ಮಹಾರಾಷ್ಟ್ರದಲ್ಲಿ ಕನ್ನಡ ಭಾಷಿಕರಿಗೆ ಮರಾಠಿ ಅಥವಾ ಇಂಗ್ಲಿಷ್‌ನಲ್ಲಿ ಪರೀಕ್ಷೆ ಬರೆಯುವಂತೆ ಒತ್ತಾಯಿಸುತ್ತಿದೆ ಎಂದು ಆದರ್ಶ ಕನ್ನಡ ಬಳಗ ಆಕ್ರೋಶ ವ್ಯಕ್ತಪಡಿಸಿದೆ.

ಪರೀಕ್ಷಾ ಪರಿಷತ್ತು ಅರ್ಜಿ ಸಲ್ಲಿಸುವಾಗ ಕನ್ನಡ ಮಾಧ್ಯಮದ ಆಯ್ಕೆಯನ್ನು ನೀಡುತ್ತದೆ. ಪ್ರತ್ಯಕ್ಷ ಪರೀಕ್ಷೆಯ ಸಮಯದಲ್ಲಿ ಪ್ರಶ್ನೆಪತ್ರಿಕೆಯು ಕೇವಲ ಮರಾಠಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಇರುತ್ತದೆ. ಇದರಿಂದ ಕನ್ನಡ ಮಾಧ್ಯಮದಲ್ಲಿ ಡಿ.ಇಡಿ/ಬಿ.ಇಡಿ ಪೂರೈಸಿದ ಅಭ್ಯರ್ಥಿಗಳಿಗೆ ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತಿದೆ.

➡ ಪುಟ 9



ಕನ್ನಡ ಶಾಲೆ ಅಸ್ತಿತ್ವಕ್ಕೆ ಧಕ್ಕೆ

ಮಹಾರಾಷ್ಟ್ರ ಸರ್ಕಾರದ ಈ ಭಾಷಾ ನೀತಿಯಿಂದಾಗಿ, ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದ ಸಾವಿರಾರು ಯುವಕರ ಭವಿಷ್ಯ ಕತ್ತಲಲ್ಲಿದೆ. ಪದವಿ ಇದ್ದರೂ ಕೇವಲ ಭಾಷೆಯ ತಾಂತ್ರಿಕ ಕಾರಣದಿಂದ ಅವರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಈ ತಾಂತ್ರಿಕ ಸಮಸ್ಯೆಯಿಂದಾಗಿ ಸಾವಿರಾರು ಶಿಕ್ಷಕರ ವೃತ್ತಿಜೀವನಕ್ಕೆ ಸಂಚಕಾರ ಬಂದಿದ್ದು, ರಾಜ್ಯ ಸರ್ಕಾರ ಈ ಕೂಡಲೇ ಮಧ್ಯ ಪ್ರವೇಶಿಸಿ ಪರಿಹಾರ ನೀಡಬೇಕೆಂದು ಶಿಕ್ಷಕರಿಂದ ಒತ್ತಾಯ ಕೇಳಿಬರುತ್ತಿದೆ.

> ಅರ್ಹ ಶಿಕ್ಷಕರು ಲಭ್ಯವಾಗದಿದ್ದರೆ ಮುಂದಿನ ದಿನಗಳಲ್ಲಿ ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಳು ಮುಚ್ಚುವ ಭೀತಿ ಇದೆ. ಇದು ಗಡಿ ಭಾಗದ ಕನ್ನಡ ಸಂಸ್ಕೃತಿ ಮತ್ತು ಶಿಕ್ಷಣದ ಮೇಲೆ ದೊಡ್ಡ ಹೊಡೆತ ನೀಡಲಿದೆ. ಸರ್ಕಾರ ಕೂಡಲೇ ನಿರ್ಧಾರ ಕೈಗೊಳ್ಳದಿದ್ದರೆ, ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು.
>
> ■ **ಸೋಮಶೇಖರ್ ಜಮಶೆಟ್ಟಿ,** ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು (ಮಹಾರಾಷ್ಟ್ರ ಘಟಕ)

IN THE COURT OF THE PRL. CIVIL JUDGE AND JMFC. AT ANEKAL

C.Mis.No. 579 /2026

BETWEEN: SRI.SHIVANNA, S/o Late Muniyallappa, Aged about 83 years, R/at No. 170, Adigara Kallahalli Village, Sarjapura Hobli, Anekal Taluk, Bengaluru District. ... **PETITIONER**

AND: THE TAHASILDAR, Anekal Taluk. ... **RESPONDENT**

PUBLIC NOTICE

Whereas, the petitioners have filed the above petition for seeking death certificate of father of the petitioner namely MUNIYAPPA S/O LATE CHINNONI, who expired on 01/08/1993 at Adigara Kallahalli Village, Sarjapura Hobli, Anekal Taluk, Bengaluru District. Take notice that, any interested persons in respect of death certificate of MUNIYAPPA S/O LATE CHINNONI, are hereby called upon to appear before this Hon'ble Court either personally or through an advocate duly instructed on **05-05-2026** at 11:00 A.M, otherwise, the matter will be heard and decided ex-parte.

Given my hand and seal of the court on 04-04-2026.

By order of the court, Sheristedar, Civil Judge Jr Dvn and JMFC Court at Anekal.

SRI.DILIP.A, Advocate
No. 1, 2nd Floor, Dharma Shastha Complex, Attibele Road, Anekal Town, Bengaluru District.

IN THE COURT OF THE II ADDL CIVIL JUDGE & JMFC AT MAGADI

C. Mis. No. 65/2026

PETITIONER: 1. Revanjanappa, S/o late Narasimhaiah, aged about 60 years. **2. Ningamma**, W/o Gangappa, D/o late Narasimhaiah, aged about 72 years, **3. Mangalamma**, W/o Narasimhaiah, D/o late Narasimhaiah, aged about 54 years. All are residing at Cholanayakanahalli Village, Tavarekere Hobli, Bangalore South Taluk -V/s-

RESPONDENT: The Tahasildar, Bangalore South Taluk

NOTICE

1. The above named petitioners moved the petition for obtaining death certificate Narasimhaiah S/o late Narasaiah who died on 02/07/1991 at Cholanayakanahalli Village, Tavarekere hobli, Bangalore south Taluk.

2. And whereas the above petition is fixed for hearing on **06/05/2026 at 11:00 A.M** before the Hon'ble court of civil judge and JMFC at Magadi. You are hereby summoned who are interested in this regard to appear to answer the same. If you fail, the petition will be disposed on equity.

Given under my hand and seal of the court on this 10/03/2026

By order of the Court, Sheristedar, Civil Judge & J.M.F.C Court, Magadi

GURUPRASAD .H.M, Advocate
Rangappa Complex, B.K.Road, Magadi Town, Ph:9740706704

ಮಾನ್ಯ [illegible] ನ್ಯಾಯಾಲಯ [illegible]

[illegible]

ಪ್ರಕಟಣೆ

[illegible]

ದಿನಾಂಕ : 06.05.2026 [illegible] 01.04.2026 [illegible]

[illegible] ದಿನಾಂಕ : 01.04.2026.

IN THE COURT OF THE II ADDL CIVIL JUDGE & JMFC AT MAGADI

C. Mis. No. 64/2025

PETITIONER: 1. Lakshmamma, W/o late Narasimhamurthy, aged about 77 years, **2. Jayarama**, S/o late Narasimhamurthy, aged about 58 years, **3. Sanjeevaiah**, S/o late Narasimhamurthy, aged about 46 years, All are residing at Cholanayakanahalli Village, Tavarekere Hobli, Bangalore South Taluk -V/s-

RESPONDENT: The Tahasildar, Bangalore South Taluk, Magadi Town

NOTICE

1. The above named petitioners moved the petition for obtaining death certificate Lakkamma W/o late Sanjeevaiah who died on 07/03/2000 at Cholanayakanahalli Village, Tavarekere hobli, Bangalore south taluk.

2. And whereas the above petition is fixed for hearing on **06/05/2026 at 11:00 A.M** before the Hon'ble court of civil judge and JMFC at Magadi. You are hereby summoned who are interested in this regard to appear to answer the same. If you fail, the petition will be disposed on equity.

Given under my hand and seal of the court on this 25/03/2026

By order of the Court, Sheristedar, Civil Judge & J.M.F.C Court, Magadi

GURUPRASAD .H.M, Advocate
Rangappa Complex, B.K.Road, Magadi Town, Ph:9740706704

IN THE COURT OF THE II ADDL CIVIL JUDGE & JMFC AT MAGADI

C. Mis. No. 63/2025

PETITIONER: 1. Lakshmamma, W/o late Narasimhamurthy, aged about 77 years, **2. Jayarama**, S/o late Narasimhamurthy, aged about 58 years, **3. Sanjeevaiah**, S/o late Narasimhamurthy, aged about 46 years, All are residing at Cholanayakanahalli Village, Tavarekere Hobli, Bangalore South Taluk -V/s-

RESPONDENT: The Tahasildar, Bangalore South Taluk, Magadi Town

NOTICE

1. The above named petitioners moved the petition for obtaining death certificate Sanjeevaiah S/o late Narasaiah who died on 04/08/1972 at Cholanayakanahalli Village, Tavarekere hobli, Bangalore south taluk.

2. And whereas the above petition is fixed for hearing on **06/05/2026 at 11:00 A.M** before the Hon'ble court of civil judge and JMFC at Magadi. You are hereby summoned who are interested in this regard to appear to answer the same. If you fail, the petition will be disposed on equity.

Given under my hand and seal of the court on this 25/03/2026

By order of the Court, Sheristedar, Civil Judge & J.M.F.C Court, Magadi

GURUPRASAD .H.M, Advocate
Rangappa Complex, B.K.Road, Magadi Town, Ph:9740706704

LOST AND FOUND

General Public is hereby noticed that Ramachalla Sridhar S/o R.Chandrashekar, Aged about 50 years, R/at Flat No.301, Vijayashree Dhachapalli Enclave, Nagol Road, Kottapet, Saroor Nagar, Rangareddy District, Hyderabad, Telangana, (Phone No.9848266788) has lost my Original Page No.8 (Page No.11-11) of the Sale Deed dated 09.10.2013 vide document No.ABL-1-03851-2013-14, stored in Book-1, CD No.ABLD175, dated:09.10.2013 in respect property bearing Site No.41 as per Form No.9 and 11, Khatha No.471, measuring 2300 Sq.fts, situated at Soppahalli Village, Kasaba Hobli, Anekal Taluk, Bangalore District. If any person/persons find/found, kindly return the above said documents to above said address.

SRINIVAS, Advocate
Bangalore.

ಸಾರ್ವಜನಿಕ ಪ್ರಕಟಣೆ

[illegible]

CHANGE OF NAME

I, LAKSHMI BAI W/o Shivarudra Nayak, aged about 54 years, resident of No.344, Andrahalli Main Road, Doddanna Badavane, Vidyamana Nagar, Viswaneedam, Bengaluru North, Bengaluru - 560 091, have changed my name from **HUNAKIBAI** to **LAKSHMI BAI**, vide affidavit dated 2/4/2026 sworn to before H H Nagaraj Advocate and Notary Bangalore.

AFFIDAVIT

Gange Gowda Chandrashekhar S/o Gange Gowda Gopalapura Kare Gowda residing at Gopalapura, Kasaba Hobli Gubbi Taluk, Tumkur District-572216, solemnly affirm as follows., I State the passport was lost **on 31st December 2025** While Shifting the house and e lost report was registered on 26th March 2026 at Gubbi police Station. Further affirm that my name was Chandrashekar and Date of birth was **06-12-1973** in the lost passport. Now I'm changing my name as Gange Gowda Chandrashekhar and Date of birth as 01-05-1973. Further affirm that I will take utmost care of my passport if issued and the Government will be at liberty to take any legal action under the Passports Act, 1967, if the lapse is repeated. vide Affidavit **Dated : 04.04.2026** Sworn before **S. SHIVAPRASAD** B.A., LL.B. ADVOCATE & NOTARY, Govt. of India R.No.21840, Gubbi-572216.

ಪ್ರಮಾಣ ಪತ್ರ

[illegible] 10.12.2024 [illegible] 883157/[illegible]/2024/007964 [illegible] 26-03-2026 [illegible]

IN THE COURT OF THE PRINCIPAL CIVIL JUDGE AND JMFC AT ANEKAL

CMIS No. 605/2026

BETWEEN : 1. Sri. Narayanappa S/o Chikka Abbaiah, Aged about 72 years, **2. Smt. Radhamma** D/o Narayanappa, Aged about 52 years, **3. Smt. Manjula** D/o Narayanappa, Aged about 50 years, **4. Smt. Yashodha** D/o Narayanappa, Aged about 48 years, **5. Smt. Kalavathi** D/o Narayanappa, Aged about 43 years, Both are R/at S. Medahalli Village, Bidaraguppe, Sarjapura Hobli, Anekal Taluk, Bangalore District-562107. ...**Petitioners**

AND : The Thasildar, Anekal Taluk, Anekal, Bangalore District. ...**Respondent**

PUBLIC PUBLICATION

Where the petitioners have filled the above petition seeking death certificate wife of the Petitioner No. 1 and Mother of the Petitioners 2 to 5 namely **Smt. Pillamma, W/o Narayanappa, she was died on 07-03-2022**, at S. Medahalli Village, Sarjapura Hobli, Anekal Taluk, Bangalore Urban District-562107, before the Principal Civil Judge and JMFC at Anekal, wherefore the above petition is fixed for hearing date **04-05-2026**, anybody interest in this matter regard to appear in this court in personally or by a pleader to file objections the same of you failing which the petition will be disposed on enquiry and determine ex-parte.

Given under my hand and seal of the court on this day of 04.04.2026.

By Order of the Court, Sheristedar, Civil Judge (Jr.Dv) and JMFC Court, Anekal.

Advocate for petitioner : **Murthy .M** Advocate
Revanna Building, Cowdareddy Circle, Anekal Town, Anekal, Bangalore-562106.

IN THE COURT OF THE II ADDL CIVIL JUDGE & JMFC AT MAGADI

C. Mis. No. 67/2026

PETITIONER: 1. Revanjanappa, S/o late Narasimhaiah, aged about 60 years. **2. Ningamma**, W/o Gangappa, D/o late Narasimhaiah, aged about 72 years. **3. Mangalamma**, W/o Narasimhaiah, D/o late Narasimhaiah, aged about 54 years. **4. Lakshmamma**, W/o late Narasimhamurthy, aged about 77 years. **5. Jayarama**, S/o late Narasimhamurthy, aged about 58 years. **6. Sanjeevaiah**, S/o late Narasimhamurthy, aged about 46 years. **7. Kokila**, D/o late Javaraiah, W/o late Thimmegowda, aged about 72 years. **8. Nanjamma**, W/o late Rajanna, aged about 67 years. **9. Kalavathi**, D/o late Rajanna, aged about 49 years. **10. Meenamma**, D/o late Rajanna, aged 38 years. **11. Lakshmamma**, D/o late Rajanna, aged about 36 years. **12. Manjunatha**, S/o late Rajanna, aged about 34 years. **13. Krishnappa**, S/o late Javaraiah, aged about 74 years. **14. Naveena**, S/o Narasimhamurthy, aged about 34 years. **15. Chandan**, S/o late Narasimhamurthy, aged about 32 years. **16. Jayalakshmamma**, D/o late Lakshminarasimhaiah, aged about 65 years. **17. Susheelamma**, D/o late Lakshminarasimhaiah, aged about 62 years. **18. Renukamma**, D/o late Lakshminarasimhaiah, aged about 60 years. **19. Mayamma**, D/o late Lakshminarasimhaiah, aged 58 years. **20. Srinivasa**, S/o late Lakshminarasimhaiah, aged about 48 years, All are residing at Cholanayakanahalli village, Tavarekere hobli, Bangalore south taluk. -V/s-

RESPONDENT: The Tahasildar, Bangalore south taluk.

NOTICE

1. The above named petitioners moved the petition for obtaining death certificate Byramma W/o late Narasaiah died on 18/11/1989 at Cholanayakanahalli Village, Tavarekere hobli, Bangalore south taluk. 2. And whereas the above petition is fixed for hearing on **06-05-2026** at 11:00 A.M before the Hon'ble court of civil judge and JMFC at Magadi. You are hereby summoned who are interested in this regard to appear to answer the same. If you fail, the petition will be disposed on equity.

Given under my hand and seal of the court on 10-03-2026.

By order of the Court, Sheristedar, Civil Judge & JMFC Court, Magadi.

GURUPRASAD. H.M, Advocate
Rangappa Complex, B.K.Road, Magadi Town, Ph:9740706704

ಜಾಹೀರಾತಿಗಾಗಿ ಸಂಪರ್ಕಿಸಿ:
9845438807
9611755391

:: ಓದುಗರ ಗಮನಕ್ಕೆ ::

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು.
ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಸಂಖ್ಯೆ: ಶಿಮನಪಾಶಿ/ಕಾ.ವಿ/ಟೆಂಡರ್/57/2025-26 ದಿನಾಂಕ: 31.03.2026

ಟೆಂಡರ್ ಪ್ರಕಟಣೆ

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಕ್ಟ್ 1999 ರ ನಿಯಮದಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟಲ್ ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ **www.kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದು.

1) ಕೆಪಿಪಿ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:02.05.2026 (ಸಂಜೆ 4.00 ಗಂಟೆಗೆ). 2) ಕೆಪಿಪಿ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.05.2026 (ಸಂಜೆ 4.30 ಗಂಟೆಗೆ). 3) ಕೆಪಿಪಿ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ: 05.05.2026 (ಸಂಜೆ 4.30 ಗಂಟೆಗೆ)

ಕ್ರ ಸಂ	ಇಂಡೆಂಟ್ ಸಂಖ್ಯೆ	ಕಾಮಗಾರಿ/ಸೇವೆಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ ರೂ.
1.	56311	Restoration and continuation work of Poura Karmika Housing Block no.09 and 11 in Shivamogga City Corporation limits	314.00	3,98,000/-
2.	55923	Restoration and continuation work of Poura Karmika Housing Block no.04,06,16 in Shivamogga City Corporation limits	478.00	6,06,000/-
3.	56966	Restoration and continuation work of Poura Karmika Housing Block no.01 and 14 in Shivamogga City Corporation limits	294.00	3,73,000/-

ಸೂಚನೆ: 1. ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ವಾ.ಸಾ.ಸಂ.ಇ./ಶಿ/ಸಂ.21.04/ ಡ್ರೋಂಕಾರ್/2026-27

ಸಹಿ/- ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ಶಿವಮೊಗ್ಗ

IN THE COURT OF THE II ADDL CIVIL JUDGE & JMFC AT MAGADI

C. Mis. No. 66/2026

PETITIONER: 1. Revanjanappa, S/o late Narasimhaiah, aged about 60 years. **2. Ningamma**, W/o Gangappa, D/o late Narasimhaiah, aged about 72 years. **3. Mangalamma**, W/o Narasimhaiah, D/o late Narasimhaiah, aged about 54 years. **4. Lakshmamma**, W/o late Narasimhamurthy, aged about 77 years. **5. Jayarama**, S/o late Narasimhamurthy, aged about 58 years. **6. Sanjeevaiah**, S/o late Narasimhamurthy, aged about 46 years. **7. Kokila**, D/o late Javaraiah, W/o late Thimmegowda, aged about 72 years. **8. Nanjamma**, W/o late Rajanna, aged about 67 years. **9. Kalavathi**, D/o late Rajanna, aged about 49 years. **10. Meenamma**, D/o late Rajanna, aged 38 years. **11. Lakshmamma**, D/o late Rajanna, aged about 36 years. **12. Manjunatha**, S/o late Rajanna, aged about 34 years. **13. Krishnappa**, S/o late Javaraiah, aged about 74 years. **14. Naveena**, S/o Narasimhamurthy, aged about 34 years. **15. Chandan**, S/o late Narasimhamurthy, aged about 32 years. **16. Jayalakshmamma**, D/o late Lakshminarasimhaiah, aged about 65 years. **17. Susheelamma**, D/o late Lakshminarasimhaiah, aged about 62 years. **18. Renukamma**, D/o late Lakshminarasimhaiah, aged about 60 years. **19. Mayamma**, D/o late Lakshminarasimhaiah, aged 58 years. **20. Srinivasa**, S/o late Lakshminarasimhaiah, aged about 48 years, All are residing at Cholanayakanahalli village, Tavarekere hobli, Bangalore south taluk. -V/s-

RESPONDENT: The Tahasildar, Bangalore south taluk.

NOTICE

1. The above named petitioners moved the petition for obtaining death certificate Narasaiah s/o late Puttanarasaiah died on 02/06/1964 at Cholanayakanahalli Village, Tavarekere hobli, Bangalore south taluk. 2. And whereas the above petition is fixed for hearing on **06/05/2026** at 11:00 A.M before the Hon'ble court of civil judge and JMFC at Magadi. You are hereby summoned who are interested in this regard to appear to answer the same. If you fail, the petition will be disposed on equity.

Given under my hand and seal of the court on 10-03-2026.

By order of the Court, Sheristedar, Civil Judge & JMFC Court, Magadi.

GURUPRASAD. H.M, Advocate
Rangappa Complex, B.K.Road, Magadi Town, Ph:9740706704.

IN THE COURT OF THE II ADDL CIVIL JUDGE & JMFC AT MAGADI

C. Mis. No. 69/2026

PETITIONER: 1. Kokila, D/o late Javaraiah, W/o late Thimmegowda, aged about 72 years. **2. Nanjamma**, W/o late Rajanna, aged about 67 years. **3. Kalavathi**, D/o late Rajanna, aged about 49 years. **4. Meenamma**, D/o late Rajanna, aged 38 years. **5. Lakshmamma**, D/o late Rajanna, aged about 36 years. **6. Manjunatha**, S/o late Rajanna, aged about 34 years. **7. Krishnappa**, S/o late Javaraiah, aged about 74 years. **8. Naveena**, S/o Narasimhamurthy, aged about 34 years. **9. Chandan**, S/o late Narasimhamurthy, aged about 32 years. All are residing at Cholanayakanahalli village, Tavarekere hobli, Bangalore south taluk. -V/s-

RESPONDENT: The Tahasildar, Bangalore south taluk.

NOTICE

1. The above named petitioners moved the petition for obtaining death certificate Jayamma W/o late Jawaraiah who died on 24/05/2010 at Cholanayakanahalli Village, Tavarekere hobli, Bangalore south taluk. 2. And whereas the above petition is fixed for hearing on **06/05/2026** at 11:00 A.M before the Hon'ble court of civil judge and JMFC at Magadi. You are hereby summoned who are interested in this regard to appear to answer the same. If you fail, the petition will be disposed on equity.

Given under my hand and seal of the court on 25-03-2026.

By order of the Court, Sheristedar, Civil Judge & JMFC Court, Magadi.

GURUPRASAD. H.M, Advocate
Rangappa Complex, B.K.Road, Magadi Town, Ph:9740706704.

IN THE COURT OF HON'BLE DISTRICT SESSION JUDGE AT KOLAR

P&SC NO: 39/2026

PETITIONER : Smt. Nanjamma and others -V/s-

RESPONDENTS : Nil

PUBLIC NOTICE

Wherefore, the Petitioner has filed the petition in P & S C NO: 39/2026 for grant of the guardianship and such other reliefs in respect of the suit schedule properties, It has been summoned to third parties or general public who have interest over the schedule property to appear before this Hon'ble court. in personally or through advocate, duly instructed to answer all material question relating to the petitioner claim on the 27th Day of April 2026 at 11-00 am in forenoon to answer the claims.

The notice that, in default of you appearance on the day before mentioned the petition will be heard and determined exparte.

SCHEDULE PROPERTY

Land bearing Sy.No.46, Totally measuring 1 Acre 22 guntas, 3 guntas Karab, out of which 1 Acre guntas, situated at madamangala Village, Lakkur Hobli, Malur Taluk, Kolar District, bounded on:- East : By Rajakaluve, West By : S.Venkataramaiah and Hosa Thimmaiah Lands, North : By Shanbhog Inamathi Lands, South : By Venkataravanappa and Krishnappa's land.

ADDRESS OF THE ADVOCATE:
T.M.Shivanna, B.Com., L.L.B.,
Diya Nilaya, 1st Main, K.V.M Swamy Layout, Kolar-563101.

IN THE COURT OF THE PRL. CIVIL JUDGE AND JMFC. AT ANEKAL

C.Mis.No. 569 /2026

BETWEEN: SRI.SHIVANNA, S/o Late Muniyallappa, Aged about 83 years, R/at No. 170, Adigara Kallahalli Village, Sarjapura Hobli, Anekal Taluk, Bengaluru District. ... **PETITIONER**

AND: THE TAHASILDAR, Anekal Taluk. ... **RESPONDENT**

PUBLIC NOTICE

Whereas, the petitioners have filed the above petition for seeking death certificate of mother of the petitioner namely AKKAMMA W/O LATE MUNIYALLAPPA, who expired on 22/01/2010 at Adigara Kallahalli Village, Sarjapura Hobli, Anekal Taluk, Bengaluru District. Take notice that, any interested persons in respect of death certificate of AKKAMMA W/O LATE MUNIYALLAPPA, are hereby called upon to appear before this Hon'ble Court either personally or through an advocate duly instructed on **05-05-2026** at 11:00 A.M, otherwise, the matter will be heard and decided ex-parte.

Given my hand and seal of the court on 04-04-2026.

By order of the court, Sheristedar, Civil Judge Jr Dvn and JMFC Court at Anekal.

SRI.DILIP.A, Advocate
No. 1, 2nd Floor, Dharma Shastha Complex, Attibele Road, Anekal Town, Bengaluru District.

ಪ್ರಧಾನ [illegible] ನ್ಯಾಯಾಲಯ, [illegible]

ಓ.ಎಸ್.ನಂ. (ಎ). 16/2026

[illegible]

IN THE COURT OF THE DEPUTY DIRECTOR OF LAND RECORDS AT KOLAR

APPEL.NO.105/2025

Appellant : Smt.Shobha -V/S-

Respondent : The Assistant Director of Land Records, Kolar & others

NOTICE UNDER ORDER 5 RULE 20 OF CPC TO RESPONDENT No.5 lrS

Respondent No.5 LR: Narayanaswamy S s/o late Anantha Iyer, Aged about 64 years, R/at #2915, Near Ganesha Dr. Ganesha House, Hosa Badavane, Kolar city, Kolar.

Whereas, the appellant have filed this appeal against the orders passed by the respondent No. 1. This Hon'ble court be pleased to issued notice to the proposed **RESPONDENT No.5 LR** is intentionally evading and avoiding to receive the summons issued by this Hon'ble court. Hence you proposed **RESPONDENT No. 5 LR** is hereby notice to appear in this court in person or by an advocate on 06.05.2026 At 3.00 p.m. to file objections to the appeal, in default of your appearance on the same day the court take as exparte.

Given under my hand seal and signature on this 01.04.2026 at Kolar.

By order of the court.
The Deputy Director of Land Records Kolar

Advocate of appellant
T.V.Shivaraj Kumar, Advocate, Kolar
Kolar, Date: 1-4-2026

ಕರ್ನಾಟಕ ಸರಕಾರ

ಪುರಸಭೆ ಕಾರ್ಯಾಲಯ, ಬಂಕಾಪುರ ಜಿಲ್ಲೆ॥ ಹಾವೇರಿ

E-mail : ka.bankapura.tmc@gmail.com Phone No : 08378-25123

ಕ್ರ.ಸಂ: ಪುಸಬ/ಕಾಂ.ವಿ/ಎಸ್.ಎಫ್.ಸಿ ವಿಶೇಷ/ವಹಿ/2025-26 ದಿನಾಂಕ : 01-04-2026

ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಬಂಕಾಪುರ ಪುರಸಭೆ ವ್ಯಾಪ್ತಿಯ ಸನ 2022-23 & 2024-25 ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿದ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ತಿದ್ದುಪಡಿ ಅಧಿನಿಯಮ 2000 ರ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಬಿಡ್ಡ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು https://kppp.karnataka.gov.in ಗೆ ನೇರವಾಗಿ ಲಾಗ್-ಇನ್ ಆಗಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ.

(1) ಗುತ್ತಿಗೆದಾರರು ನೇರವಾಗಿ http://kppp.karnataka.gov.in ಗೆ ಲಾಗ್-ಇನ್ ಆಗಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **30-04-2026** ಸಮಯ ಸಾಯಂಕಾಲ 17-30 ಗಂಟೆವರೆಗೆ ಮಾತ್ರ. (2) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ : **02-05-2026** ರಂದು 11-00 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನದಂದು.

ಅ. ನಂ.	ಟೆಂಡರ್ (ಇಂಡೆಂಟ್) ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಗುತ್ತಿಗೆದಾರರ ದರ್ಜೆ	ಕಾಮಗಾರಿ ಅವಧಿ	ಮೀಸಲಾತಿ
ಸನ್ 2022-23 ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ							
1	DMA/2025-26/OW/WORK_INDENT55401	315.00	266.47	400000.00	2ನೇ ದರ್ಜೆ ಹಾಗೂ ಮೇಲ್ಪಟ್ಟು	11 ತಿಂಗಳು	Others
2	DMA/2025-26/OW/WORK_INDENT55413	385.00	308.39	463000.00	2ನೇ ದರ್ಜೆ ಹಾಗೂ ಮೇಲ್ಪಟ್ಟು	11 ತಿಂಗಳು	Others
ಸನ್ 2024-25 ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ							
3	DMA/2025-26/OW/WORK_INDENT56826	305.42	251.89	400000.00	2ನೇ ದರ್ಜೆ ಹಾಗೂ ಮೇಲ್ಪಟ್ಟು	11 ತಿಂಗಳು	Others

ಹೆಚ್ಚಿನ ಮಾಹಿತಿಯನ್ನು ಪುರಸಭೆ ಕಛೇರಿ ವೇಳೆಯಲ್ಲಿ ಹಾಗೂ http://www.bankapurtown.mrc.gov.in ನಿಂದ ಪಡೆಯಬಹುದಾಗಿದೆ.

ಸಹಿ/- ಅಧ್ಯಕ್ಷರು, ಪುರಸಭೆ, ಬಂಕಾಪುರ ಸಹಿ/- ಮುಖ್ಯಾಧಿಕಾರಿ, ಪುರಸಭೆ, ಬಂಕಾಪುರ

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/22/2026-27

PUBLIC NOTICE

Notice is hereby given that my client **Smt. Bharathi Jagannatha**, aged about 63 years, W/o Sri M. V. Jagannatha, residing at No. 18/A, 624/16, Sneha Nilaya, 3rd Main 10th A Cross, Near Rameshwara Temple, Ittamadu Layout, Banashankari 3rd Stage 3rd Phase, Bangalore 560085, has lost the original Betterment Charges bearing receipt No. 70436 dated 16/03/1998 and the Encumbrance Certificate bearing application no. 470/25-26 for the period from 1/1/1993 to 31/3/2004 pertaining to the property bearing No. 18/A, 624/16, Sneha Nilaya, 3rd Main 10th A Cross, Near Rameshwara Temple, Ittamadu Layout, Banashankari 3rd Stage 3rd Phase, Bangalore 5600085. On 01/04/2026 near Karakadasa Circle, Rajarajeshwarinagar, Bengaluru and a complaint in this regard have also been lodged before the **Bangalore City Police, vide Lost report 2134161/2026 dated 01/04/2026.**

Any person/s who may be in possession of the aforesaid documents is hereby requested to return the same to the undersigned. Any person/s having any claim, right, title, interest or objection in respect of the aforesaid property shall intimate the undersigned in writing within **7 days** from the date of publication of this notice, failing which such claims shall be deemed to have been waived.

RAM M K
Advocate
No. 113-F, 5-D, 5th Floor, Central Chambers, 2nd Main, Gandhinagar, Bengaluru – 560009
Ph: 9986696046

IN THE HON'BLE COURT OF THE PRINCIPAL SENIOR CIVIL JUDGE AND JMFC AT DODDABALLAPURA

O S No.251/2020

BETWEEN: Sri.Beerappa ...Plaintiff

AND: Smt.Lakshmamma and others ...Defendants

SUMMONS/NOTICE TO DEFENDANT No-21 to 23

21).Smt.Gangamma D/o Lakshmaiah Aged about 42 years R/at Attiganapalya Village Dasanapura Hobli Bangalore North Taluk Bangalore Urban District **22).Smt. Renuka** D/o Lakshmaiah Aged about 40 years **23).Smt.Lalithamma** D/o Lakshmaiah W/o Sadaiah Aged about 38 years Defendant no-22 & 23 R/at K.Gollahalli Village Kegeri Hobli, Bangalore South Taluk, Bangalore Urban District-560001

Whereas, the plaintiff has filed the above suit for partition and separate possession and such other reliefs against you in respect of 1).the agricultural property bearing Sy.No 81/3A measuring to an extent of 0.37 guntas of land, bounded on: East by: property of Sy no-81/5, West by: property of Chandra, North by: property of Narayanappa, South by: property of Gangappa, 2) the agricultural property bearing Sy No-81/5 measuring to an extent of 0.20 1/2 guntas of land, bounded on: East by: property of Vishwanath, West by: property of Sy no-81/6, North by: property of Sy no-47/1, South by: property of Aravinda, 3) The agricultural property bearing Sy No-81/6 measuring to an extent of 0.20 1/2 guntas of land, bounded on:East by: property of Vishwanath, West by: property of Sy no-81/5, North by: property of Sy no-47/1, South by: property of Aravinda, item no-1 to 3 properties situated at Neralaghatta Village, Kasaba Hobli, Doddaballapura Taluk, Bangalore Rural District, 4) The agricultural property bearing Sy No- 47/1 measuring to an extent of 1 acre 15 guntas including 1 guntas of karab land, bounded on: East by: Road, West by: property of Narayanaswamy, North by: property of Prema, South by: property of Vishwanath, 5) The agricultural property bearing Sy No-51/3 measuring to an extent of 0.35 guntas out of 1 acre 35 guntas including 2 guntas of karab land, bounded on: East by: property of Siddappa, West by: property of Linganna, North by: property of Sy No-46/5, South by: property of Suresha, 6) The agricultural property bearing Sy No-46/4 measuring to an extent of 2 acre 9 guntas of land, bounded on: East by: property of Krishnappa and Dhananjaya, West by: property of Sy No-46/5, North by: property of Rajanna, South by: property of Krishnamurthy, 7) The agricultural property bearing Sy No- 46/5 measuring to an extent of 0.32 guntas of land, bounded on: East by: property of Sy No-46/4, West by: property of Sy no-46/6, North by: property of Ramu, South by: property of Narayanappa and Sy no-51/3, 8) The agricultural property bearing Sy No-46/6 measuring to an extent of 0.32 guntas of land, bounded on: East by: property of Sy No-46/5, West by: property of Linganna, North by: property of Ramu, South by: Property of Sy no- 51/3, 9) The agricultural property bearing Sy No-46/1A measuring to an extent of 1 acre 30 guntas of land, bounded on: East by: property of Muniyanna, West by: property of Sy No-46/2A, North by: property of Gopalaiah, South by: property of Srinivasaiah and 10) The agricultural property bearing Sy No-46/2A measuring to an extent of 0.15 guntas including 4 guntas of karab land, bounded on: East by: property of Sy no-46/1A, West by: Road, property of Dhananjaya and Charannaraju, North by: property of Gopalaiah, South by: property of Channamma, item no-4 to 10 properties situated at Maralenahalli Village, Kasaba Hobli, Doddaballapura Taluk, Bangalore Rural District 11) The agricultural property bearing Sy No-107/1A measuring to an extent of 1 acre 11 guntas of land, bounded on: East by: property of Linganna, West by: property of Gurusiddappa, North by: property of Rudrappa, South by: property of Ashwathappa and Narayanappa, 12). The agricultural property bearing Sy No-107/2E measuring to an extent of 0.07 guntas of land, bounded on: East by: property of Ashwathappa, West by: property of Mallappa, North by: property of Sy no-107/1A, South by: property of D.Ramaiah, item n-11 and 12 properties situated at Hanabe Village, Doddabelavangala Hobli, Doddaballapura Taluk, Bangalore Rural District, 13) All the part and parcel house property bearing Hanabe Gram Panchayathi Katha serial no-18, Assessment no-26/1, measuring to an extent of East West 40 square feet, North South 50 square feet totally measuring 2000 square feet (40x50), bounded on: East by: property of Anjinappa and Shanappa, West by: property of Veeranna, North by:property of Ashwathanarayanappa and Subanna, South by: Road and 14).All the part and parcel house property bearing Hanabe Gram Panchayathi Katha serial no-18 Assessment no-27, measuring to an extent of East West 70 square feet, North South 50 square feet, totally measuring 3500 square feet (70x50), bounded on: East by: property of Narayanappa, West by: property of Veeranna, North by: Road, South by : property of Kempegowda, item no-13 and 14 properties situated at Neralaghatta Village, Kasaba Hobli, Doddaballapura Taluk, Bangalore Rural District

You are hereby summoned to appear this Hon'ble court in person or by a pleader duly instructed and able to answer all material questions relating to the plaint. On 06/06/2026 at 11-00 am., to answer the questions, failing which the suit will be disposed off in your absence as ex-parte.

By order of the court
Chief Ministerial Officer, Senior Civil Judge & JMFC Court, Doddabaallapura-561203

Advocate for Plaintiff : **A.R.Ramakrishna**
Advocate, Vinayakanagara, 4th Ward, Rojipura, Opposite Court Complex, Doddaballapura-561203

ತುಮಕೂರು ಜಿಲ್ಲಾ ಪಂಚಾಯತ್,

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ತುಮಕೂರು ವಿಭಾಗ, ತುಮಕೂರು. ದೂ:0816-2252937

ಸಂಖ್ಯೆ:ಕಾಇಂ/ಪಂರಾಇವಿ/ತುವಿ/ತಾಂಶಾ/ಟೆಂಡರ್/2026-27/01 ದಿನಾಂಕ 02.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-01/2026-27
(ಕೆ.ಪಿ.ಪಿ ಪೋರ್ಟಲ್ ಮುಖಾಂತರ ಏಕ & ದ್ವಿ ಲಕೋಟೆ ಪದ್ಧತಿ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-1, KW-2, KW-3 & KW-4 (ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು-560 025, ದೂರವಾಣಿ: 080-22485867, 080-22485927ರಲ್ಲಿ ಹಾಗೂ ಪಂಚಾಯತ್‌ರಾಜ್ ಇಂಜಿನಿಯರಿಂಗ್/ಪಿ.ಡಬ್ಲ್ಯೂಡಿ ಇಲಾಖೆಯಲ್ಲಿ ಅರ್ಹ (ಸಿವಿಲ್) ನೋಂದಾಯಿಸಿದ ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವ್ಯಾಪ್ತಿಯ 2025-26 ನೇ ಸಾಲಿನ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ, 2025-26ನೇ ಸಾಲಿನ 5054-ರ ಕಾರ್ಯಕ್ರಮ, 2024-25ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ತರಗತಿ ಕೊಠಡಿಗಳ ದುರಸ್ತಿ ಯೋಜನೆ, 2024-25 ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಶೌಚಾಲಯ ಬ್ಲಾಕ್ ನಿರ್ಮಾಣ, 2018-19 ನೇ ಸಾಲಿನ ಪರಿಶಿಷ್ಟ ಜಾತಿ ವಿವಿಧ ಅಭಿವೃದ್ಧಿ ಯೋಜನೆ (ಬಂಡವಾಳ ಲೆ.ಶೀ4225-01-796-0-01) ಯೋಜನೆಗಳಡಿ ಕಾಮಗಾರಿಗಳಿಗೆ ಟೆಂಡರ್‌ನ್ನು ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

(Indent No:
1.RDPR/2025-26/BD/WORK_INDENT24930,
2.RDPR/2025-26/BD/WORK_INDENT24926,
3.RDPR/2025-26/BD/WORK_INDENT22856/CALL-2,
4.RDPR/2025-26/RD/WORK_INDENT25755,
5.RDPR/2025-26/RD/WORK_INDENT25756,
6.RDPR/2025-26/BD/WORK_INDENT25902,
7.RDPR/2025-26/BD/WORK_INDENT25901,
8.RDPR/2026-27/BD/WORK_INDENT25932,
9.RDPR/2025-26/BD/WORK_INDENT24189)

ಕಾಮಗಾರಿಗಳ ಟೆಂಡರ್‌ನ್ನು ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ - ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ http://www.KPPP.karnataka.gov.in ಮುಖಾಂತರ ದಿನಾಂಕ: 02.04.2026 ರಿಂದ 17.04.2026 ಸಂಜೆ 5.00 ಗಂಟೆವರೆಗೆ ಫಾರಂ ಫೀ ಕೆ.ಪಿ.ಪಿ.ಪೋರ್ಟಲ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816-2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಕೆ.ಪಿ.ಪಿ.-ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ತುಮಕೂರು.

DIPR/TUM/07/KSMCA/2026-27

GOVERNMENT OF KARNATAKA
KARNATAKA FOREST DEPARTMENT
Assistant Conservator of Forests,
Nagamangala Territorial Sub Division, Mandya Division
No: Acf/NMG/Outource/Tender/CR-1/2026-27
Date: 01-04-2026

Tender Notification

TENDER No. : Acf/NMG/Outsource/Tender/CR-1/2026-27. PROCUREMENT ENTITY : Karnataka Forest Department. TENDER INVITING AUTHORITY : Assistant Conservator of Forest, Nagamangala Territorial Sub Division, Mandya Division. PUBLISHED DATE : 01.04.2026. MAIL ID/ADDRESS TO REQUEST CLARIFICATIONS : acfnagamangala@gmail.com. CONTACT PERSON : Assistant Conservator of Forest, Nagamangala Territorial Sub Division, Mandya Division.

First Time Tender

LAST DATE & TIME FOR TENDER QUERIES/CLARFICATIONS : 13-04-2026, 5.30 PM. LAST DATE & TIME FOR SUBMISSION OF TENDERS : 15.04.2026-5.00 PM. ONLINE IN KARNATAKA PUBLIC PROCUREMENT PORTAL : https://kppp.karnataka.gov.in. DATE & TIME FOR OPENING OF TECHNICAL TENDER ONLINE IN KARNATAKA PUBLIC PROCUREMENT PORTAL : 16.04.2026, 5.10 PM. DATE & TIME FOR OPENING OF FINANCIAL TENDERS : 21.04.2026-5.20 PM.

Second Time Tender (If no successfull bids are received on first time)

LAST DATE & TIME FOR SUBMISSION OF TENDERS : 20.04.2026-5.30 PM. DATE AND TIME FOR OPENING OF TECHNICAL TENDER ONLINE IN KARNATAKA PUBLIC PROCUREMENT PORTAL : 27.04.2026, 5.00 PM. DATE & TIME FOR OPENING OF FINANCIAL TENDERS : 28.04.2026, 5.00 PM. ADDRESS FOR COMMUNICATION : Assistant Conservator of Forest, Nagamangala Territorial Sub Division, TB Extension, Nagamangala. AMOUNT PUT TO TENDER (Including Service charge, GST) : Rs.54,85,804.00/-. AMOUNT OF EARNEST MONEY DEPOSIT : Show in Table 1.1.

ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು.

PERIOD OF CONTRACT : 01.04.2026 to 31.03.2027 = 12 Months.

VALIDITY OF TENDER : 45 days from the last date for Submission of Tenders.

Sd/-Assitant Conservator of Forests, Nagamangala Sub Division, Mandya Division

ವಾಸಾಸಂಇ/[illegible]/008/2026-27

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ – 563101

e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in

ದೂರವಾಣಿ ಸಂಖ್ಯೆ: 08152-222022

ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು -4 ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-01/2026-27 ದಿನಾಂಕ: 02.04.2026

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಕೆ.ಜಿ.ಎಫ್ ತಾಲ್ಲೂಕು ವ್ಯಾಪ್ತಿಯಲ್ಲಿ **ಲೆಕ್ಕಶೀರ್ಷಿಕೆ: 8443-ಠೇವಣಿ ಪಂಕ್ತಿಗೆ** ಅಡಿಯಲ್ಲಿ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ ರೂ.330.00 ಲಕ್ಷಗಳು ಇ.ಎಂ.ಡಿ **ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್** ನಲ್ಲಿ **ನಮೂದಿಸಿರುತ್ತಾರೆ**, ಕಾಲಾವಧಿ : 11 ತಿಂಗಳು ನಿರ್ವಹಿಸಲು **ಕೆಡಬ್ಲ್ಯು-4 ರ ಕಾಮಗಾರಿಗೆ ಅರ್ಹ ನೋಂದಾಯಿತ ಸಿವಿಲ್ ಗುತ್ತಿಗೆದಾರರಿಂದ** ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು **ಕೆಡಬ್ಲ್ಯು-4 ರ** ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **18.04.2026** ರಂದು ಸಂಜೆ **16.00** ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **21.04.2026** ರಂದು ಬೆಳಗ್ಗೆ **11.30 ಗಂಟೆಯ** ನಂತರ ಕೆಪಿಪಿಪಿ ಪೋರ್ಟಲ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿಪಿ ಪೋರ್ಟಲ್‌ನಲ್ಲಿ **(Viz.,http://kppp.karnataka.gov.in)**ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:10/ಕೆಎಸ್‌ಎಂಸಿಎ/2026-27

[illegible]

ಸಂಖ್ಯೆ: [illegible]/31/2026-27 ದಿನಾಂಕ: 04.04.2026

-: ಸಾರ್ವಜನಿಕ ಪ್ರಕಟಣೆ :-

[illegible]

[illegible]

ಪ್ರಕಟಣೆ

[illegible] 04.04.2026 [illegible]

ಬಿಜೆಪಿ ಗೆಲುವು ಶತಸಿದ್ಧ: ಎಚ್‌ಡಿಕೆ



• **ಸಿಂಧನೂರು:** ರಾಜ್ಯದಲ್ಲಿ ಎರಡುವರೆ ಮೂರು ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಜನರ ವಿಶ್ವಾಸ, ನಂಬಿಕೆ ಕಳೆದುಕೊಂಡಿದ್ದು, ಈಗ ನಡೆಯುತ್ತಿರುವ ಉಪಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಗೆಲುವು ಸಿಗಲಿದೆ ಎಂದು ಕೇಂದ್ರ ಸರ್ಕಾರದ ಸಚಿವ ಎಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ಶನಿವಾರ ನಗರದ ಕಮ್ಮವಾರಿ ಕಲ್ಯಾಣ ಮಂಟಪದಲ್ಲಿ ನಡೆದ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್.ಟಿ. ರಾಮರಾವ್ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ರಾಜ್ಯದಲ್ಲಿ ನಡೆಯುತ್ತಿರುವ ಉಪಚುನಾವಣೆ ಎರಡು ಪಕ್ಷಗಳು ಅತ್ಯಂತ ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ. ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮೈತ್ರಿಯೊಂದಿಗೆ ಚುನಾವಣೆಯ ಅಖಾಡದಲ್ಲಿರುವ ಎರಡು ಕ್ಷೇತ್ರಗಳ ಇಬ್ಬರು ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದರು.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷದ ದುರಾಡಳಿತಕ್ಕೆ ಜನತೆ ಬೇಸತ್ತು ಹೋಗಿದ್ದು, ಈಗ ನಡೆಯುತ್ತಿರುವ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ತೆಗೆದು ಹಾಕಬೇಕು ಎನ್ನುವ ಭಾವನೆ ಜನರಲ್ಲಿ ಬಂದಿದೆ. ಈ ನಿಟ್ಟಿನಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಲಿದ್ದಾರೆ ಎಂದು ಹೇಳಿದರು. ನಾನು ಈಗ ಉಪಚುನಾವಣೆ ಹಿನ್ನೆಲೆಯಲ್ಲಿ ಇಂದು ಪ್ರಚಾರಕ್ಕೆ ತೆರಳುತ್ತಿದ್ದಾನೆ. ದಾವಣಗೆರೆ ಕ್ಷೇತ್ರದಲ್ಲಿ ಎರಡು ಕಡೆ ಸಭೆಗಳಲ್ಲಿ ಭಾಗವಹಿಸುತ್ತೇನೆ. ತದನಂತರ ಭಾನುವಾರ ಬಾಗಲಕೋಟೆ ಕ್ಷೇತ್ರದಲ್ಲಿ ಪ್ರಚಾರ ನಡೆಸುತ್ತೇನೆ. ಪ್ರತಿಷ್ಠಿತ ಎರಡು ಪಕ್ಷಗಳು ಗೆಲುವು ಸಾಧಿಸಲು ಹೋರಾಟ ಮಾಡುತ್ತಿದ್ದು, ಬಿಜೆಪಿ ಅಭ್ಯರ್ಥಿಗಳು ಎರಡು ಕಡೆ ಜಯ ಸಾಧಿಸುವ ವಿಶ್ವಾಸವಿದೆ ಎಂದು ಹೇಳಿದರು.

ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯ

• **ಬೆಂಗಳೂರು:** ರಾಜ್ಯದಲ್ಲಿರುವ ಹಳೆಯ ವಾಹನಗಳಿಗೂ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯ ಆದೇಶ ರಾಜ್ಯ ಸರ್ಕಾರ ಹಿಂಪಡೆದಿದೆ ಎನ್ನುವ ಸುದ್ದಿ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಈ ಹಿನ್ನಲೆಯಲ್ಲಿ ರಾಜ್ಯದಲ್ಲಿರುವ 2019ಕ್ಕಿಂತ ಮುಂಚಿತವಾಗಿ ನೋಂದಣಿಯಾದ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯ ಎಂದು ಸಾರಿಗೆ ಇಲಾಖೆ ಸ್ಪಷ್ಟಪಡಿಸಿದೆ.

ಇತ್ತೀಚೆಗೆ ಕೆಲವು ಟಿವಿ ಮತ್ತು ಇತರೆ ಮಾಧ್ಯಮಗಳಲ್ಲಿ ಹಳೆಯ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯವಲ್ಲ ಎಂಬ ಸುದ್ದಿಯನ್ನು ಪ್ರಸಾರ ಮಾಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 50ರಡಿ ಕೇಂದ್ರ ಸರ್ಕಾರವು 2018 ಡಿಸೆಂಬರ್ 4 ರಂದು ಅಧಿಸೂಚನೆ ಹೊರಡಿಸಿದ್ದಾರೆ. 2019ರ ಏಪ್ರಿಲ್ 1ಕ್ಕಿಂತ ಮುಂಚಿತವಾಗಿ ನೋಂದಣಿಯಾದ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು ಅಳವಡಿಸಲು ಕಡ್ಡಾಯಗೊಳಿಸಿ ಆದೇಶಿಸಿದೆ. ಅದರಂತೆ, ರಾಜ್ಯ ಸರ್ಕಾರವು 2023ರ ಆ.17 ರಂದು ಅಧಿಸೂಚನೆ ಹೊರಡಿಸಿ, 2019 ಏ.1ಕ್ಕಿಂತ ಮುಂಚಿತವಾಗಿ ನೋಂದಣಿಯಾದ ಎಲ್ಲಾ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು ಅಳವಡಿಕೆಯನ್ನು ಕಡ್ಡಾಯಗೊಳಿಸಿರುತ್ತದೆ.

ಸಧ್ಯ ಉಚ್ಚ ನ್ಯಾಯಾಲಯವು ನೀಡಿದ ಆದೇಶದಿಂದಾಗಿ, ವಾಹನಗಳಿಗೆ ಎಚ್‌ಎಸ್ ಆರ್‌ಪಿ ಅಳವಡಿಕೆಯ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದೆ.

ಕಿರುಸುದ್ದಿ

ಸಿಂಹ ಹೇಳಿಕೆಗೆ ಸುರ್ಜೆವಾಲ ಕಿಡಿ

• **ಬೆಂಗಳೂರು:** ಬಾಗಲಕೋಟೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರ ಬಗ್ಗೆ ಮಾಜಿ ಸಂಸದ ಪ್ರತಾಪ್ ಸಿಂಹ ನೀಡಿರುವ ಹೀನಾಯ ಕಟ್ ಹೇಳಿಕೆ ಬಿಜೆಪಿಯ ನೀಚ ರಾಜಕಾರಣವನ್ನು ಮತ್ತೊಮ್ಮೆ ಬಟ್ಟಬಯಲು ಮಾಡಿದೆ. ಪ್ರತಾಪ್ ಸಿಂಹರ ಈ ಆಕ್ರೋಶ ಹತಾಶೆಯಿಂದ ಹುಟ್ಟಿದ್ದು ಎನ್ನುವುದು ಈಗ ಸ್ಪಷ್ಟ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೆವಾಲಾ ಹೇಳಿದ್ದಾರೆ. ಎಕ್ಸ್‌ನಲ್ಲಿ ಬಿಜೆಪಿ ವಿರುದ್ಧ ಕಿಡಿಕಾರಿರುವ ಅವರು, ಹಿಂದುಳಿದ ಸಮುದಾಯದ ಅತ್ಯಂತ ಹಿರಿಯ ನಾಯಕ ಸಿದ್ದರಾಮಯ್ಯ ಅವರನ್ನು ಅವಮಾನಿಸಲು ಬಿಜೆಪಿ ಉದ್ದೇಶಪೂರ್ವಕವಾಗಿ ಪ್ರತಾಪ್ ಸಿಂಹರನ್ನು ಬಳಸಿಕೊಳ್ಳುತ್ತಿದೆ ಎಂದು ದೂರಿದ್ದಾರೆ. ಸಿದ್ದರಾಮಯ್ಯನವರ ವಿರುದ್ಧ ಬಿಜೆಪಿ ನಾಯಕ ಪ್ರತಾಪ್ ಸಿಂಹ ನೀಡಿರುವ ಅವಹೇಳನಕಾರಿ ಮತ್ತು ಅಸಹನೀಯ ಹೇಳಿಕೆಗಳಿಗಾಗಿ 6.5 ಕೋಟಿ ಕನ್ನಡಿಗರಿಗೆ, ವಿಶೇಷವಾಗಿ ಒಬಿಸಿ, ಎಸ್ಸಿ ಮತ್ತು ಅಲ್ಪಸಂಖ್ಯಾತರಿಗೆ ಸಾರ್ವಜನಿಕ ಕ್ಷಮಾಪಣೆ ಕೋರಬೇಕು ಆಗ್ರಹಿಸಿದ್ದಾರೆ.

ಕೋತಿಗಳ ದಾಳಿಗೆ 15 ಮಂದಿ ಗಾಯ

• **ಕೋಲಾರ:** ಹೊರವಲಯದಲ್ಲಿರುವ ದಕ್ಷಿಣ ಕಾಶಿ ಅಂತರಗಂಗೆ ಕ್ಷೇತ್ರದಲ್ಲಿ ಬಿರು ಬೇಸಿಗೆ ಆರಂಭವಾಗುತ್ತಿದ್ದಂತೆ ಅನ್ನ ನೀರು ಸಿಗದ ಹಿನ್ನೆಲೆ, ಕೋತಿಗಳ ದಾಳಿಯಿಂದ ಗಾಯಗೊಂಡು 15ಕ್ಕೂ ಹೆಚ್ಚು ಜನರು ಆಸ್ಪತ್ರೆ ಪಾಲಾಗಿದ್ದಾರೆ. ಹಲವರನ್ನು ತೀವ್ರವಾಗಿ ಕಚ್ಚಿ ಗಾಯಗೊಳಿಸಿರುವ ಮಂಗಗಳು ತಮ್ಮ ಹುಚ್ಚಿನ ದಾಳಿ ಮುಂದುವರಿಸಿವೆ. ಅಂತರಗಂಗೆ ತಪ್ಪಲಿನಲ್ಲಿರುವ ಸಾವಿರಾರು ಕೋತಿಗಳು ಇಲ್ಲಿಗೆ ಬರುವ ಪ್ರವಾಸಿಗರ ಮೇಲೆ ಎರಗಲಾರಂಭಿಸಿವೆ ಎಂದು ಮೂಲಗಳು ತಿಳಿಸಿವೆ.



ನಾಪತ್ತೆಯಾಗಿದ್ದ ಮಹಿಳಾ ಪಿಎಸ್‌ಐ ಪತ್ತೆ!

• **ತುಮಕೂರು:** ತೀವ್ರ ಆತಂಕ ಮತ್ತು ಕುತೂಹಲಕ್ಕೆ ಕಾರಣವಾಗಿದ್ದ ಮಹಿಳಾ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ನಾಪತ್ತೆ ಪ್ರಕರಣ ಸುಖಾಂತ್ಯ ಕಂಡಿದೆ. ತುಮಕೂರಿನ ಹೊಸ ಬಡಾವಣೆ ಪೊಲೀಸ್ ಠಾಣೆಯ ಪಿಎಸ್‌ಐ-2 ಆಗಿ ಕಾರ್ಯನಿರ್ವಹಿಸುತ್ತಿದ್ದ ಮಂಗಳಮ್ಮ ಅವರು ಕೊನೆಗೂ ಪತ್ತೆಯಾಗಿದ್ದಾರೆ. ನಿನ್ನೆ ಬೆಳಗ್ಗೆ ಡಿವೈಎಸ್‌ಪಿ ಕಚೇರಿಯಲ್ಲಿ ಮೀಟಿಂಗ್‌ನಲ್ಲಿ ಭಾಗಿಯಾಗಿದ್ದ ಮಂಗಳಮ್ಮ ಅವರು, ಸಭೆಯ ಮಧ್ಯೆಯೇ ಇಂಪಾರ್ಟೆಂಟ್ ಫೋನ್ ಬಂದಿದೆ ಎಂದು ಮೀಟಿಂಗ್‌ನಿಂದ ಹೊರಬಂದಿದ್ದರು. ಸಮವಸ್ತ್ರದಲ್ಲೇ ಹೊರಬಂದಿದ್ದ ಮಂಗಳಮ್ಮ ಆ ಬಳಿಕ ಎಲ್ಲಿ ಹೋದರೆಂಬ ಸುಳಿವು ಸಿಕ್ಕಿರಲಿಲ್ಲ. ಇಡೀ ದಿನ ಹುಡುಕಿದ್ರೂ, ನಿನ್ನೆ ಇಡೀ ದಿನ ಯಾರ ಸಂಪರ್ಕಕ್ಕೆ ಸಿಗದ ಹಿನ್ನೆಲೆ. ಆತಂಕಗೊಂಡು ಪಿಎಸ್ ಐ ಮಂಗಲಮ್ಮ ಪುತ್ರಿಯಿಂದ ದೂರು ನೀಡಿದ್ದರು.

ಕೌಟುಂಬಿಕ ಕಲಹವೇ ಕಾರಣ? ಪ್ರಾಥಮಿಕ ಮಾಹಿತಿ ಪ್ರಕಾರ, ಮನೆಯಲ್ಲಿ ನಡೆದಿದ್ದ ಕೌಟುಂಬಿಕ ಕಲಹದಿಂದ ಮಂಗಳಮ್ಮ ಅವರು ತೀವ್ರ ಮನನೊಂದಿದ್ದರು ಎನ್ನಲಾಗಿದೆ. ಇದೇ ಕಾರಣಕ್ಕೆ ಅವರು ಯಾರಿಗೂ ತಿಳಿಸದೆ ಮನೆ ಬಿಟ್ಟು ಹೋಗಿರಬಹುದು ಎಂಬ ಶಂಕೆ ವ್ಯಕ್ತವಾಗಿತ್ತು. ಪೊಲೀಸರು ತಕ್ಷಣ ಕಾರ್ಯಪ್ರವೃತ್ತರಾಗಿ ಹುಡುಕಾಟ ಆರಂಭಿಸಿದ್ದರು.

ಚಿಕ್ಕಮಗಳೂರಿನಲ್ಲಿ ಪತ್ತೆಯಾದ ಮಂಗಳಮ್ಮ: ತೀವ್ರ ಹುಡುಕಾಟದ ನಂತರ, ನಾಪತ್ತೆಯಾಗಿದ್ದ ಪಿಎಸ್‌ಐ ಮಂಗಳಮ್ಮ ಅವರು ಚಿಕ್ಕಮಗಳೂರಿನಲ್ಲಿರುವ ತಮ್ಮ ಸಂಬಂಧಿಕರ ಮನೆಯಲ್ಲಿರುವುದು ಪತ್ತೆಯಾಗಿದೆ. ಮನಸ್ತಾಪದಿಂದ ಬೇಸತ್ತು ಅವರು ಅಲ್ಲಿಗೆ ತೆರಳಿದ್ದರು ಎಂದು ತಿಳಿದುಬಂದಿದೆ.

ವಿದ್ಯಾಗಿರಿಯಲ್ಲಿ ಸುನೀಲ್‌ಕುಮಾರ ಭರ್ಜರಿ ಮತಯಾಚನೆ

ಫಲಿತಾಂಶ ರಾಜ್ಯಕ್ಕೆ ದಿಕ್ಸೂಚಿ

• **ಬಾಗಲಕೋಟೆ:** ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲುವುದರ ಮೂಲಕ ಮುಂದಿನ ಸಾರ್ವತ್ರಿಕ ಚುನಾವಣೆಗೆ ಮುನ್ನುಡಿ ಬರೆಯಲಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಬಿಜೆಪಿ ಪರವಾದ ಒಳ್ಳೆಯ ವಾತಾವರಣವಿದ್ದು, ಉಪಚುನಾವಣೆ ಮೂಲಕ ರಾಜ್ಯಕ್ಕೆ ಹೊಸ ದಿಕ್ಸೂಚಿ ಸಿಗಲಿದೆ ಎಂದು ಕಾರ್ಕಳ ಶಾಸಕ ವಿ.ಸುನೀಲ್‌ಕುಮಾರ ಹೇಳಿದರು.

ಉಪಚುನಾವಣೆ ನಿಮಿತ್ತ ನವನಗರದ ವಾರ್ಡ್ ನಂ.33ರಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ ಪರ ಮತಯಾಚನೆ ಮಾಡಿ ಮಾತನಾಡಿದ ಅವರು, ಬಿಜೆಪಿ ಅಭಿವೃದ್ಧಿ ಕಾರ್ಯಗಳ ಅರಿವು ಈ ಕ್ಷೇತ್ರದ ಜನರಿಗೆ ಇದೆ. ಮೂರು ವರ್ಷಗಳ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಆರೋಪ ಮಾಡುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಮುಸ್ಲಿಂ ಅತಿಯಾದ ಓಲೈಕೆಯಿಂದ ಅಶಾಂತಿ ಸೃಷ್ಟಿ, ಶಿವಾಜಿ ಮೆರವಣಿಗೆ, ಗಣೇಶ ಮೆರವಣಿಗೆಗಳ ಮೇಲೆ ಕಲ್ಲು ತೂರಾಟಗಳು ಕಾಂಗ್ರೆಸ್ ನೀತಿಗೆ ಕಾರಣವಾಗಿವೆ.

ಹಸಿಂಗಷ್ಟೆ ಜೋಡೆತ್ತು ಎಂದುಕೊಂಡಿರುವ ಸಿದ್ದರಾಮಯ್ಯ ಮತ್ತು ಡಿಕೆಶಿ ಬೇರೆ ಬೇರೆ ದಿಕ್ಕಿನಲ್ಲಿ ಓಡುತ್ತಿದ್ದಾರೆ. ಸರ್ಕಾರದಲ್ಲಿ ಅಭಿವೃದ್ಧಿ ಅನ್ನುವುದು ಕನಸು ಮಾತ್ರ. ಈ ಬಾರಿಯ ಬಜೆಟ್‌ನಲ್ಲಿ 1 ಲಕ್ಷ 32 ಸಾವಿರ ಕೋಟಿ ರೂ. ಸಾಲ ಮಾಡಿ ರಾಜ್ಯವನ್ನು ಸಾಲದ ಶೂಲಕ್ಕೆ ಏರಿಸಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಸರ್ಕಾರಿ ನೌಕರರಿಗೆ ಸಂಬಳ ಕೊಡಲೂ ಆಗದ ಆರ್ಥಿಕ ಸಂದಿಗ್ಧ ಪರಿಸ್ಥಿತಿ ರಾಜ್ಯಕ್ಕೆ ತಂದಿದ್ದಾರೆ. ಬಾಗಲಕೋಟೆಯಲ್ಲಿ ಮುಖ್ಯಮಂತ್ರಿಗಳು ಐದು ದಿನ ಬೀಡು ಬಿಟ್ಟಿದ್ದು ಕಾಳಜಿಗಾಗಿ ಅಲ್ಲ,ಸೋಲಿನ ಭಯಕ್ಕಾಗಿ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ಭ್ರಷ್ಟ ಆಡಳಿತ ಇಷ್ಟವಿಲ್ಲ ಎಂಬ ಸಂದೇಶವನ್ನು ಸರ್ಕಾರಕ್ಕೆ ಕೊಡಲು ಜನರು ಮುಂದಾಗಿದ್ದಾರೆ. ಗ್ಯಾರಂಟಿಗಳು ಎಸ್.ಸಿಪಿ, ಟಿಎಸ್.ಪಿ ಅನುದಾನಗಳಲ್ಲಿಯೇ ಬಳಕೆಯಾಗಬೇಕಿತ್ತಾ? ಎಂದು ಸರ್ಕಾರದ ವಿರುದ್ಧ ಪ್ರಶ್ನೆಗಳ ಸುರಿಮಳೆಗೈದರು.



> ದಲಿತರ ಮೇಲೆ ಕಾಳಜಿ ಇದ್ದಿದ್ದರೆ ಅವರ ಹಣವನ್ನು ಗ್ಯಾರಂಟಿಳಿಗೆ ಬಳಕೆ ಮಾಡಿದ್ದು ಏಕೆ, ಅಲ್ಪಸಂಖ್ಯಾತರ ಹಣವನ್ನು ಏಕೆ ಬಳಕೆ ಮಾಡಿಕೊಳ್ಳಲಿಲ್ಲ, ಅಲ್ಪಸಂಖ್ಯಾತರಿಗೆ ಹತ್ತು ಸಾವಿರ ಕೋಟಿ ಕೊಟ್ಟ ಸಿದ್ದರಾಮಯ್ಯ ಹಿಂದುಗಳ ಕಲ್ಯಾಣಕ್ಕೆ ಎಷ್ಟು ಕೋಟಿ ಕೊಟ್ಟಿದ್ದಾರೆ.
> ■ **ಸಿ.ಟಿ.ರವಿ,** ವಿಧಾನ ಪರಿಷತ್ ಸದಸ್ಯ

ಕಳೆತ್ತು ವಾಲ್ಮೀಕಿ ನಿಗಮ, ಭೋವಿ ನಿಗಮದ ಹಣ ನುಂಗಿ ಅಭಿವೃದ್ಧಿ ಕೆಲಸ ಒಂದೂ ಮಾಡದೇ ಸುಳ್ಳು ಹೇಳಿ ಕಾಲಹರಣ ಮಾಡಿತು. ಇದರ ಮೇಲೆಯೇ ದುಡಿಯೋ ಎತ್ತು ಯಾವುದು ಕಳೆತು ಯಾವುದು ಎಂದು ಜನಕ್ಕೆ ಗೊತ್ತಾಗುತ್ತದೆ. ಕೇಂದ್ರ ಸರ್ಕಾರ ಅಕ್ಕಿಯನ್ನು ಕೊಡದಿದ್ದರೆ ಇವರ ಹಣೆಬರಹ ಗೊತ್ತಾಗುತ್ತಿತ್ತು. ಮೋದಿ ಅವರು ಕೊಟ್ಟಿರುವುದನ್ನು ಕೇವಲ ಮುಟ್ಟಿ ಕೊಟ್ಟು ತಾವು ಕೊಟ್ಟಿದ್ದೇವೆ ಎಂದು ಬೀಗುತ್ತಾರೆ ಇದು ಯಾವ ಸೀಮೆಯ ನ್ಯಾಯ.

ಸಿದ್ದರಾಮಯ್ಯ ಸಾಲ ಮಾಡಿದ್ದು ಸುಳ್ಳಾ? ಸ್ವತಃ ಸಿಎಂ 5 ಲಕ್ಷ ಕೋಟಿಗೂ ಹೆಚ್ಚು ಸಾಲ ಮಾಡಿದ್ದಾರೆ. ಗ್ಯಾರಂಟಿ ನಾನು ಕೊಟ್ಟಿದ್ದು ಎಂದು ಹೇಳಿದ ಹಾಗೆ ಸಾಲ ನಾನೇ ಮಾಡಿದ್ದು ಎಂದು ಹೇಳಲಿ. ಬೆಲೆಗಳ ಹೆಚ್ಚಳದಿಂದ ಇಪ್ಪತ್ತು ರೂ. ಬಾಂಡ್ ಪೇಪರ್ ಕೂಡ ಮಾಯ ಮಾಡಿದ್ದಾರೆ. ಜನ ವತ್ತೆ ಇಟ್ಟ ತಮ್ಮ ಚಿನ್ನಕ್ಕೆ ಹಣ ಕಟ್ಟುವ ಸ್ಥಿತಿಗೆ ತಂದು ಇಟ್ಟಿದ್ದಾರೆ. ಬಾಗಲಕೋಟೆ ಹಿಂದುತ್ವ ಕೋಟೆ ಇಲ್ಲಿ ಬಿಜೆಪಿ ಗೆಲ್ಲಬೇಕು ಎಂದರು.

ವೀರಣ್ಣ ಚರಂತಿಮಠ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದರು. ಈ ವೇಳೆ ವಿಧಾನ ಪರಿಷತ ಸದಸ್ಯರಾದ ಪಿ.ಎಚ್.ಪೂಜಾರ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಸೇರಿದಂತೆ ಸಾವಿರಾರು ಜನ ಕಾರ್ಯಕರ್ತರು ಭಾಗವಹಿಸಿದ್ದರು.

ಡಿಸಿಎಂ ಡಿ.ಕೆ. ಶಿವಕುಮಾರ್ ವಿಶ್ವಾಸ

ಕೈಗೆ ದೊಡ್ಡ ಗೆಲುವು



• **ಬೆಂಗಳೂರು:** ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಂದ ಮತಕ್ಕಿಂತ ಈ ಬಾರಿಯ ಉಪಚುನಾವಣೆಯಲ್ಲಿ ಹೆಚ್ಚು ಮತ ಬೀಳಲಿದ್ದು, ನಮ್ಮ ಅಭ್ಯರ್ಥಿಗಳು ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಲಿದ್ದಾರೆ ಡಿಸಿಎಂ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸದಾಶಿವನಗರ ನಿವಾಸದಲ್ಲಿ ಶನಿವಾರ ಮಾಧ್ಯಮಗಳ ಜತೆಗೆ ಮಾತನಾಡಿ, ಗ್ಯಾರಂಟಿ ಫಲಾನುಭವಿಗಳಲ್ಲಿ ಕಳೆದ ಬಾರಿ ಬಿಜೆಪಿಗೆ ಮತ ಹಾಕಿರುವವರೂ ಕೂಡ ಈ ಬಾರಿ ಕಾಂಗ್ರೆಸ್‌ಗೆ ಮತ ಹಾಕುವುದಾಗಿ ತಿಳಿಸಿದ್ದಾರೆ. ಬೆಲೆ ಏರಿಕೆಯಾಗುತ್ತಿರುವ ಪರಿಸ್ಥಿತಿಯಲ್ಲಿ ಗ್ಯಾರಂಟಿ ಯೋಜನೆ ಎಷ್ಟು ನೆರವಾಗುತ್ತಿವೆ ಎಂದು ಸ್ಮರಿಸುತ್ತಿದ್ದಾರೆ. ಇವುಗಳನ್ನು ಉಳಿಸಿಕೊಳ್ಳಲು ಜನ ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರಕ್ಕೆ ಇರಲಿ ಮುಂಜಾಗ್ರತೆ: ಅನಿಲ ಪೂರೈಕೆ ಅಧಿಕಾರ ರಾಜ್ಯ ಸರ್ಕಾರದ ಕೈಯಲ್ಲಿಲ್ಲ, ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಕೇಂದ್ರ ಸರ್ಕಾರ ಸರಿಯಾಗಿ ಮುಂಜಾಗ್ರತೆ, ನೀತಿ ರೂಪಿಸಬೇಕಿತ್ತು. ಈ ವಿಚಾರದಲ್ಲಿ ವಿಫಲವಾಗಿದೆ. ಈ ವಿಚಾರವಾಗಿ ಬಿಜೆಪಿಯವರು ಈವರೆಗೂ ಯಾಕೆ ಮಾತನಾಡುತ್ತಿಲ್ಲ, ನಮ್ಮಿಂದ ತೊಂದರೆಯಾಗಿದೆ ಎಂದು ಒಪ್ಪಿಕೊಂಡು ಜನರ ಬಳಿ ಕ್ಷಮೆ ಕೋರಬೇಕು ಎಂದರು.

ರಾಜ್ಯದಲ್ಲಿ ಗ್ಯಾಸ್ ಅಭಾವದಿಂದ ಆಟೋ ಚಾಲಕರಿಗೆ ಬಹಳ ತೊಂದರೆಯಾಗುತ್ತಿದೆ. ಇದರಿಂದ ಸಂಚಾರ ವ್ಯವಸ್ಥೆಗೆ ಪರಿಣಾಮ ಬೀರುತ್ತಿದೆ. ಜತೆಗೆ ಹೋಟೆಲ್ ಕ್ಷೇತ್ರವು ಸಮಸ್ಯೆ ಎದುರಿಸುತ್ತಿದೆ. ಕೇಂದ್ರ ಸರ್ಕಾರ ಈ ಬಗ್ಗೆ ಗಮನಹರಿಸಬೇಕು ಎಂದು ಆಗ್ರಹಿಸಿದರು.

ಸಾಮಾಜಿಕ ನ್ಯಾಯದ ಪರ ಕಾಂಗ್ರೆಸ್: ಪರಂ

• **ಬಾಗಲಕೋಟೆ:** ಸಾಮಾಜಿಕ ನ್ಯಾಯದ ಪರ ಹಾಗೂ ಎಲ್ಲ ಸಮುದಾಯಕ್ಕೆ ಅನುಕೂಲಕರ ವಾತಾವರಣ ಕಲ್ಪಿಸುವ ಬದ್ಧತೆ ಹಾಗೂ ಸಂವಿಧಾನದ ಆಧಾರದ ಮೇಲೆ ಕಾಂಗ್ರೆಸ್ ಪಕ್ಷದ ಸರ್ಕಾರ ಕೆಲಸ ಮಾಡಲಿದೆ. ಬಿಜೆಪಿ ಕೋಮುವಾದದ ಬದ್ಧತೆಯನ್ನು ತೋರಿಸುತ್ತದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಡವರು, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರ ಜೀವನ ಮಟ್ಟ ಸುಧಾರಿಸಲು ಕಾಂಗ್ರೆಸ್ ಪಕ್ಷ ಕೆಲಸ ಮಾಡುತ್ತದೆ. ನಮ್ಮ ಸಾಮಾಜಿಕ ಬದ್ಧತೆ ವಿರುದ್ಧ ಬಿಜೆಪಿ ಕೆಲಸ ಮಾಡುತ್ತದೆ ಎಂದು ದೂರಿದರು. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸುವ ಮೂಲಕ ಅವರನ್ನು ಆರ್ಥಿಕವಾಗಿ ಮೇಲಕ್ಕೆತ್ತಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಉತ್ತಮ ಆಡಳಿತವನ್ನು ನೀಡುತ್ತಿದೆ. ಕಾನೂನು ಸುವ್ಯವಸ್ಥೆ ಕಾಪಾಡಲಾಗುತ್ತಿದೆ. ಕೊಲೆ ಪ್ರಕರಣಗಳು ಕಡಿಮೆಯಾಗಿವೆ. ಡ್ರಗ್ಸ್ ದಂದೆಯಲ್ಲಿ ಭಾಗಿಯಾದವರ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದರು.

ಟಿಕೆಟ್‌ಗಾಗಿ ಸಾಲಲ್ಲಿ ಶಾಸಕರ ಪಿಎ | ಆಟೋ ಚಾಲಕರ ಗೋಳಾಟ

ವಿಧಾನಸೌಧಕ್ಕೂ ಅಂಟಿದ ಐಪಿಎಲ್ ಜ್ವರ

• **ಬೆಂಗಳೂರು:** ಒಂದು ಕಡೆ ರಾಜ್ಯದಲ್ಲಿ ಆಟೋಗಳಿಗೆ ಗ್ಯಾಸ್ ಸಿಗುತ್ತಿಲ್ಲ ಅಂತ ಆಟೋ ಚಾಲಕರು ಗೋಳಾಡುತ್ತಾ ಗ್ಯಾಸ್‌ಗಾಗಿ ರಾತ್ರಿಯಿಡೀ ಕ್ಯೂ ನಿಲ್ಲುತ್ತಿದ್ದಾರೆ. ಮತ್ತೊಂದೆಡೆ ನಮ್ಮ ಜನಪ್ರತಿನಿಧಿಗಳು ಐಪಿಎಲ್ ಟಿಕೆಟ್ ಪಡೆಯೋಕೆ ತಮ್ಮ ಪಿಎಗಳನ್ನೇ ಕ್ಯೂ ನಿಲ್ಲಿಸಿದ್ದಾರೆ.

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರ ಮನವಿಗೆ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಸೂಚನೆಯನ್ವಯ ಪ್ರತಿ ಐಪಿಎಲ್ ಪಂದ್ಯಕ್ಕೆ ಶಾಸಕರಿಗೆ ಉಚಿತವಾಗಿ 3 ಟಿಕೆಟ್ ಕೊಡಲು ಕೆಎಸ್‌ಸಿಎ ನಿರ್ಧರಿಸಿತ್ತು. ಈ ನಡುವೆ ಭಾನುವಾರ(ಏ.5) ಬೆಂಗಳೂರು ಮತ್ತು ಚೆನ್ನೈ ನಡುವೆ ಪಂದ್ಯ ವಿರುವ ಹಿನ್ನೆಲೆಯಲ್ಲಿ ಟಿಕೆಟ್‌ಗಾಗಿ ಶಾಸಕರ ಆಪ್ತ ಸಹಾಯಕರು ಸ್ಪೀಕರ್ ಕಚೇರಿ ಮುಂದೆ ಕ್ಯೂ ನಿಂತು ಟಿಕೆಟ್ ಪಡೆದಿದ್ದಾರೆ. ಜನರ ಸಮಸ್ಯೆ ಕೇಳದ ಜನಪ್ರತಿನಿಧಿಗಳು ಐಪಿಎಲ್ ಟಿಕೆಟ್‌ಗಾಗಿ ಹೀಗೆ ವರ್ತನೆ ತೋರಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಕೆಲ ದಿನಗಳ ಹಿಂದೆ ಸದನದಲ್ಲಿ ಶಾಸಕರು ಬಹಿರಂಗವಾಗಿ ಟಿಕೆಟ್‌ಗಾಗಿ ಬೇಡಿಕೆ ಇಟ್ಟಿದ್ದರು. ವಿಐಪಿ ಟಿಕೆಟ್‌ಗಳೇ ಬೇಕು ಅಂತಾ ಒತ್ತಾಯಿಸಿದ್ದರು. ಶಾಸಕರ ಈ ಬೇಡಿಕೆಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದರು. ಜನರ ಸಮಸ್ಯೆ ಆಲಿಸುವುದಕ್ಕಿಂತ ಇವರಿಗೆ ಟಿಕೆಟ್‌ನದ್ದೆ ಚಿಂತೆ ಎಂದು ಕಿಡಿಕಾರಿದ್ದರು.

ನಮ್ಮ ಸಮಸ್ಯೆ ಕೇಳೋರಿಲ್ಲ: ಆಟೋ ಗ್ಯಾಸ್ ಇಲ್ಲದೇ ಆಟೋ ಚಾಲಕರು ಅತಂತ್ರರಾಗಿದ್ದಾರೆ. ಈ ಸಮಸ್ಯೆಗಳ ನಡುವೆ, ಜನಪ್ರತಿನಿಧಿಗಳು ಮಾತ್ರ ಕ್ರಿಕೆಟ್ ಮ್ಯಾಚ್ ನೋಡಲು ಮುಗಿಬಿದ್ದಿರುವುದನ್ನು ನೋಡಿ ಆಟೋ ಚಾಲಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಮ್ಮ ಸಮಸ್ಯೆಗಳು ಯಾರಿಗೂ ಬೇಕಿಲ್ಲ, ಐಪಿಎಲ್ ಟಿಕೆಟ್ ಇದ್ದರೆ ಸಾಕು ಅವರಿಗೆ, ನಾವು ಗ್ಯಾಸ್ ಸಿಗದೆ ಸಾಯುತ್ತಿದ್ದೇವೆ, ಗಂಟೆಗಟ್ಟಲೆ ಕ್ಯೂನಲ್ಲಿ ನಿಲ್ಲುತ್ತಿದ್ದೇವೆ. ದುಡಿಮೆ ಇಲ್ಲ ಎಂದು ಆಕ್ರೋಶ ಹೊರಹಾಕಿದರು.

ಟಿಕೆಟ್‌ಗಾಗಿ ಶಾಸಕರಿಗೆ ಕರೆ



• **ಬೆಂಗಳೂರು:** ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏ.5ರಂದು ಆರ್‌ಸಿಬಿ ಮತ್ತು ಸಿಎಸ್‌ಕೆ ಮಧ್ಯೆ ಹೈವೋಲ್ಟೇಜ್ ಪಂದ್ಯ ನಡೆಯಲಿದೆ ಇತ್ತ ಶಾಸಕರಿಗೆ ತಲಾ ಮೂರು ಐಪಿಎಲ್ ಟಿಕೆಟ್ ವಿತರಣೆ ಮಾಡಲಾಗಿದೆ. ಹೀಗಾಗಿ ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಸಂಬಂಧಿ ಎಂದು ಹೇಳಿಕೊಂಡು ರಾಜಾಜಿನಗರ ಶಾಸಕ ಸುರೇಶ್ ಕುಮಾರ್‌ಗೆ ದೂರವಾಣಿ ಕರೆ ಮಾಡಿರುವ ಘಟನೆ ನಡೆದಿದೆ. ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಸಂಬಂಧಿ ಎಂದು ಹೇಳಿರುವ ಸಂದೀಪ್ ಎನ್ನುವವರು , ತೆಲಂಗಾಣ ಸಿಎಂ ಕಚೇರಿಯಿಂದ ನಿಮ್ಮ ದೂರವಾಣಿ ಸಂಖ್ಯೆ ಪಡೆದಿದ್ದೇನೆ. ಐಪಿಎಲ್ ಟಿಕೆಟ್ ಪಡೆಯಲು ಸಹಾಯ ಎಂದಿದ್ದಾರೆ.

ಲವ್ ಜಿಹಾದ್ ಆರೋಪ | ನಾಲ್ಕು ಪ್ರಕರಣ ದಾಖಲು

ಆರೋಪಿ ಸಮೀರ್ ಮುಲ್ಲಾ ಬಂಧನ

• **ಹುಬ್ಬಳ್ಳಿ:** ಲವ್ ಜಿಹಾದ್ ಆರೋಪಕ್ಕೆ ಸಂಬಂಧಿಸಿದಂತೆ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಸೇರಿದಂತೆ ನಾಲ್ಕು ಪ್ರಕರಣಗಳು ದಾಖಲಾಗಿದ್ದು, ಪೊಲೀಸರು ಶನಿವಾರ ತನಿಖೆ ಚುರುಕುಗೊಳಿಸಿದ್ದಾರೆ. ಮೊಬೈಲ್ ಹಾಗೂ ಹಲವು ಸಾಕ್ಷ್ಯಗಳ ಸಂಗ್ರಹಿಸಿದ್ದಾರೆ. ಯುವತಿ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಮ್ ತರಬೇತುದಾರ ಸಮೀರ್ ಮುಲ್ಲಾನನ್ನು ವಿದ್ಯಾನಗರ ಪೊಲೀಸರು ಬಂಧಿಸಿದ್ದಾರೆ.

ಈಗಾಗಲೇ ಪೊಲೀಸರ ವಶದಲ್ಲಿರುವ ಜಿಮ್ ತರಬೇತುದಾರ ಸಮೀರ್ ಮುಲ್ಲಾ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪೊಲೀಸ್ ಆಯುಕ್ತ ಎನ್.ಶಶಿಕುಮಾರ ಸ್ವತಃ ಭೇಟಿ ನೀಡಿ ಕೆಲ ಹೊತ್ತು ವಿಚಾರಣೆ ನಡೆಸಿದರು. ವಿದ್ಯಾನಗರ ಪೊಲೀಸ್ ಠಾಣೆಗೆ ಭೇಟಿ ನೀಡಿ ದಾಖಲಾದ ಪ್ರಕರಣಗಳ ಕುರಿತು ಪೊಲೀಸರಿಂದ ಹಲವು ಮಾಹಿತಿ ಪಡೆದರು. ಇದೇ ವೇಳೆ ಯುವತಿಯನ್ನು ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ.ವಿದ್ಯಾನಗರ ಹಾಗೂ ಅಶೋಕನಗರ ಠಾಣೆಯಲ್ಲಿ 4 ಪ್ರಕರಣಗಳು ದಾಖಲಾಗಿವೆ. ಶನಿವಾರ ಸಮೀರ್ ಬಾವ ಲೂಕ್ ಎಂಬುವವರು ಯುವತಿ ಕುಟುಂಬಸ್ಥರ ಹಾಗೂ ಹಲವರ ಮೇಲೆ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಈ ಕುರಿತು ಹು-ಧಾ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಮಾಧ್ಯಮದರೊಂದಿಗೆ ಮಾತನಾಡಿ, ಯುವತಿ ತನ್ನ ಮೇಲೆ ಲೈಂಗಿಕ ದೌರ್ಜನ್ಯವಾಗಿದೆ, ಯುವತಿ ತಾಯಿ ಮನೆಗೆ ನುಗ್ಗಿ ಸಮೀರ್ ಮುಲ್ಲಾ ಕುಟುಂಬಸ್ಥರು ಹಲ್ಲೆ ಮಾಡಿ, ಮನೆ ಆಸ್ತಿಗಳಿಗೆ ಹಾನಿ ಮಾಡಿದ್ದಾರೆ ಎಂದು ಪ್ರಕರಣ ದಾಖಲಿಸಿದರೇ, ಯುವಕ ಸಮೀರ್, ಯುವತಿ ಕುಟುಂಬಸ್ಥರು ಹಾಗೂ ಹಲವರು ಸೇರಿ ನನ್ನ ಅಪಹರಿಸಿ ಹಲ್ಲೆ ಮಾಡಿದ್ದಾರೆ ಎಂದು ಪ್ರತಿದೂರು ನೀಡಿದ್ದಾರೆ ಎಂದರು.

ಯುವತಿ ಹಾಗೂ ಕುಟುಂಬಸ್ಥರು ಸಮೀರ್, ಆತನ ಸಹೋದರಿ ಹಾಗೂ ಬಾವ ಶೋಷಣೆ ಮಾಡಿದ್ದು, ಸಮೀರ್ ನೊಂದಿಗಿರು ಅಂತ ಬಲವಂತ ಮಾಡಿರುವುದಾಗಿ, ಬೇರೆ ಹುಡುಗಿಯರಿಗೆ ತೊಂದರೆ ಕೊಟ್ಟಿರುವುದುದಾಗಿ ಆರೋಪಿಸಿದ್ದು, ಅವರನ್ನು ಸಹ ವಿಚಾರಣೆಗೆ ಒಳಪಡಿಸಲಾಗುವುದು ಎಂದು ಹೇಳಿದರು.

ಪೊಲೀಸರಿಂದ ಮೊಬೈಲ್ ವಶ

ಲೈಂಗಿಕ ದೌರ್ಜನ್ಯ ನಡೆಸಿರುವ ವಿಡಿಯೋವೊಂದರ ಕುರಿತು ಶುಕ್ರವಾರ ಯುವತಿ ಹಾಗೂ ಯುವಕ ಸಮೀರ್ ಮುಲ್ಲಾ ಆರೋಪ ಹಾಗೂ ಪ್ರತ್ಯಾರೋಪ ಮಾಡಿದ್ದರು. ಈ ಹಿನ್ನೆಲೆ ತನಿಖಾಧಿಕಾರಿಗಳು ಯುವಕ ಹಾಗೂ ಯುವತಿ ಮೊಬೈಲ್ ವಶಕ್ಕೆ ಪಡೆದು ಪರಿಶೀಲನೆ ನಡೆಸಿದ್ದಾರೆ. ಪೊಲೀಸರಿಗೆ ತನಿಖೆ ವೇಳೆ ಹಲವು ಪ್ರಮುಖ ಮಾಹಿತಿ ದೊರೆತಿವೆ. ಪ್ರಕರಣಕ್ಕೆ ಸಂಬಂಧಿಸಿ ಮೊಬೈಲ್‌ಗಳ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಆಯುಕ್ತ ಎನ್. ಶಶಿಕುಮಾರ ತಿಳಿಸಿದರು.

ಸಮೀಕ್ಷೆಯಲ್ಲಿ ಅಘಾತಕಾರಿ ಅಂಶ ಬಹಿರಂಗ | ಸಾಮಾನ್ಯ ಗ್ಯಾಸ್ಟ್ರಿಕ್ ಅಥವಾ ಜೀರ್ಣಕ್ರಿಯೆ ಕ್ಯಾನ್ಸರ್‌ಗೆ ಆಹ್ವಾನ

ಗ್ಯಾಸ್ಟ್ರಿಕ್ ನಿರ್ಲಕ್ಷ್ಯವೇ ಕ್ಯಾನ್ಸರ್ ಕಾಯಿಲೆಗೆ ಮುನ್ನುಡಿ

▸ ಚಂದನ್ ಲಕ್ಕೂರು

ದಿಗಂತ ವಿಶೇಷ

• **ಬೆಂಗಳೂರು:** ಸಿಲಿಕಾನ್ ಸಿಟಿಯ ಜನಜೀವನ ಎಷ್ಟು ವೇಗವಾಗಿದೆಯೋ, ಅಷ್ಟೇ ಅಪಾಯಕಾರಿಯಾಗಿ ಜನರ ಆರೋಗ್ಯ ಶೈಲಿ ಬದಲಾಗುತ್ತಿದೆ. ಸಾಮಾನ್ಯ ಗ್ಯಾಸ್ಟ್ರಿಕ್ ಅಥವಾ ಜೀರ್ಣಕ್ರಿಯೆಯ ತೊಂದರೆ ಎಂದು ಭಾವಿಸಿ ಮನೆಮದ್ದುಗಳಿಗೆ ಮೊರೆ ಹೋಗುವ ಬೆಂಗಳೂರಿನ ಶೇ. 88ರಷ್ಟು ಮಂದಿ, ತಿಳಿಯದೆಯೇ ಮಾರಕ ಕೊಲೊರೆಕ್ಟಲ್ (ದೊಡ್ಡ ಕರುಳು) ಕ್ಯಾನ್ಸರ್‌ಗೆ ಆಹ್ವಾನ ನೀಡುತ್ತಿದ್ದಾರೆ ಎಂಬ ಆತಂಕಕಾರಿ ವಿಷಯ ಈಗ ಬೆಳಕಿಗೆ ಬಂದಿದೆ.

ಮೆರ್ಕ್ ಸ್ಪೆಷಾಲಿಟೀಸ್ ಪ್ರೈವೇಟ್ ಲಿಮಿಟೆಡ್ ಇತ್ತೀಚೆಗೆ ನಡೆಸಿದ ಜೀವನಶೈಲಿ ಮತ್ತು ಜೀರ್ಣಾಂಗ ಆರೋಗ್ಯ ಜಾಗೃತಿ ಸಮೀಕ್ಷೆಯಲ್ಲಿ ದೃಢಪಟ್ಟಿದೆ. ನಗರದ ನಿವಾಸಿಗಳು ಸಣ್ಣಪುಟ್ಟ ಜೀರ್ಣಕ್ರಿಯೆಯ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಿರುವುದು ಮತ್ತು ವೈದ್ಯಕೀಯ ಸಲಹೆ ಪಡೆಯುವಲ್ಲಿ ತೋರುತ್ತಿರುವ ವಿಳಂಬವು ಭವಿಷ್ಯದಲ್ಲಿ ದೊಡ್ಡ ಆರೋಗ್ಯ ದುರಂತಕ್ಕೆ ಕಾರಣವಾಗುವ ಮುನ್ಸೂಚನೆಯನ್ನು ನೀಡಿದೆ.

ಏನಿದು ಸಮೀಕ್ಷೆಯ ಅಂತರಾಳ? ದೇಶದ 14 ಪ್ರಮುಖ ನಗರಗಳಲ್ಲಿ 25 ರಿಂದ 65 ವರ್ಷದ ಸುಮಾರು 10,198 ಜನರನ್ನು ಈ ಸಮೀಕ್ಷೆಗೆ ಒಳಪಡಿಸಲಾಗಿತ್ತು. ಬೆಂಗಳೂರಿನವರು ಸಮೀಕ್ಷೆಯಲ್ಲಿ ಭಾಗವಹಿಸಿದ್ದ 932 ಜನರಲ್ಲಿ ಕೇವಲ ಶೇ.12ರಷ್ಟು ಮಂದಿ ಮಾತ್ರ ತಜ್ಞ ವೈದ್ಯರ ಸಲಹೆ ಪಡೆಯುತ್ತಿದ್ದಾರೆ. ಉಳಿದ ಶೇ. 88ರಷ್ಟು ಜನರು ಮಲಬದ್ಧತೆ ಮತ್ತು ಗ್ಯಾಸ್ಟ್ರಿಕ್‌ನಂತಹ ಸಮಸ್ಯೆಗಳಿಗೆ ತಾವೇ ಸ್ವಯಂ ಮದ್ದು ಅಥವಾ ಮನೆಮದ್ದು ಮಾಡಿಕೊಳ್ಳುತ್ತಿದ್ದಾರೆ. ಇದಕ್ಕಿಂತಲೂ ಭಯಾನಕ ಸಂಗತಿಯೆಂದರೆ, ಮಲವಿಸರ್ಜನೆಯ ಸಮಯದಲ್ಲಿ ರಕ್ತಸ್ರಾವ ಕಂಡುಬಂದರೂ ಶೇ. 26ರಷ್ಟು ಜನರು ವೈದ್ಯರ ಬಳಿ ಹೋಗದೆ ಮನೆಮದ್ದನ್ನೇ ನಂಬಿ ಕುಳಿತಿದ್ದಾರೆ.

ಆರಂಭದಲ್ಲೇ ಚಿಕಿತ್ಸೆ ಪಡೆದರೆ ಕ್ಯಾನ್ಸರನಿಂದ ಪಾರು: ಆರಂಭಿಕ ಲಕ್ಷಣಗಳನ್ನು ನಿರ್ಲಕ್ಷಿಸುವುದೇ ಕ್ಯಾನ್ಸರ್ ಉಲ್ಬಣಕ್ಕೆ ಮೂಲ ಕಾರಣ. ಸಾಮಾನ್ಯವಾಗಿ ಗುದದ್ವಾರದಲ್ಲಿ ಕಾಣಿಸಿಕೊಳ್ಳುವ ಸಣ್ಣ ಗಂಟುಗಳನ್ನು (ಪಾಲಿಪ್ಸ್) ಆರಂಭದಲ್ಲೇ ಪತ್ತೆಹಚ್ಚಿ ಚಿಕಿತ್ಸೆ ನೀಡದಿದ್ದರೆ ಅವು ಕ್ಯಾನ್ಸರ್ ಗಡ್ಡೆಗಳಾಗಿ ಪರಿವರ್ತನೆಯಾಗುತ್ತವೆ. ನಾರಿನಂಶವಿಲ್ಲದ ಆಹಾರ, ಅತಿಯಾದ ಸಂಸ್ಕರಿತ ಆಹಾರ ಸೇವನೆ, ತಂಬಾಕು ಮತ್ತು ವ್ಯಾಯಾಮದ ಕೊರತೆಯು ಈ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುತ್ತಿವೆ.



ಬದಲಾಗಬೇಕಿದೆ ಜೀವನಶೈಲಿ

ಸಮೀಕ್ಷೆಯ ಪ್ರಕಾರ, ಬೆಂಗಳೂರಿನ ಶೇ. 80ರಷ್ಟು ಜನರು ಪ್ರತಿನಿತ್ಯ ಹೋಟೆಲ್ ಅಥವಾ ಸಂಸ್ಕರಿತ ಆಹಾರದ ಮೇಲೆ ಅವಲಂಬಿತರಾಗಿದ್ದಾರೆ. ವ್ಯಾಯಾಮ ಮಾಡುವವರ ಸಂಖ್ಯೆ ಶೇ. 47ರಷ್ಟಿದ್ದು, ಶೇ. 36ರಷ್ಟು ಜನರು ತಂಬಾಕು ವ್ಯಸನಿಗಳಾಗಿದ್ದಾರೆ. ನಿರಂತರ ತೂಕ ಇಳಿಕೆ, ಮಲದಲ್ಲಿ ರಕ್ತ ಕಾಣಿಸಿಕೊಳ್ಳುವುದು ಅಥವಾ ಪದೇ ಪದೇ ಹೊಟ್ಟೆಯ ತೊಂದರೆ ಕಾಡುತ್ತಿದ್ದರೆ ತಕ್ಷಣವೇ ಎಚ್ಚೆತ್ತುಕೊಳ್ಳುವುದು ಒಳಿತು. ಕೊಲೊರೆಕ್ಟಲ್ ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲಿ ಪತ್ತೆಹಚ್ಚಿದರೆ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿದೆ. ಆದರೆ ಕೇವಲ ಗ್ಯಾಸ್ಟ್ರಿಕ್ ಎಂದು ನಿರ್ಲಕ್ಷಿಸಿದರೆ ಅದು ಜೀವಕ್ಕೇ ಕುತ್ತು ತರಬಹುದು ಎಂಬುದು ವೈದ್ಯಲೋಕದ ಕಳಕಳಿಯಾಗಿದೆ.

> ಜನರು ಉತ್ತಮ ಆರೋಗ್ಯ ಶೈಲಿ ರೂಪಿಸಿಕೊಳ್ಳದೇ ಇರುವುದು ಕೊಲೊರೆಕ್ಟಲ್ ಕ್ಯಾನ್ಸರ್‌ಗೆ ದಾರಿ ಮಾಡಿಕೊಡುತ್ತಿದೆ. ಗುದದ್ವಾರದಲ್ಲಿ ಸಣ್ಣದಾಗಿ ಗುಳ್ಳೆ ಮಾದರಿಯಲ್ಲಿ ಕಾಣಿಸಿಕೊಳ್ಳುವ ಪಾಲಿಪ್ಸ್ ಅನ್ನು ಕಡೆಗಣಿಸಿದರೆ ಅದು ಮುಂದೆ ಕ್ಯಾನ್ಸರ್ ಆಗಿ ಪರಿವರ್ತನೆಯಾಗುತ್ತದೆ.
> ■ **ಡಾ. ಎಂ.ಸಿ. ಸುರೇಶ್ ಬಾಬು,** ನಿರ್ದೇಶಕ ಕಿಮ್ಸ್

> ಸಮೀಕ್ಷೆಯ ಫಲಿತಾಂಶ ವೈದ್ಯಲೋಕಕ್ಕೆ ನಿಜಕ್ಕೂ ಆತಂಕಕಾರಿಯಾಗಿದೆ. ಜನರು ತಮಗಿರುವ ಆರೋಗ್ಯ ಸಮಸ್ಯೆಗಳಿಗೆ ವೈದ್ಯರಿಂದ ಸಲಹೆ ಪಡೆಯುವ ಬದಲು, ತಾವೇ ಸ್ವಯಂ ಔಷಧಿ ಮಾಡಿಕೊಳ್ಳುತ್ತಿರುವುದು ಅನಾರೋಗ್ಯಕ್ಕೆ ದೊಡ್ಡ ಆಹ್ವಾನ ನೀಡಿದಂತಿದೆ.
> ■ **ಡಾ. ಮಾನಸಿ, ಹಿರಿಯ ವೈದ್ಯೆ,** ಸ್ಪರ್ಶ ಆಸ್ಪತ್ರೆ

ಘಾಟಿ ವಿಭಾಗದಲ್ಲಿ ಸಂಚಾರಕ್ಕೆ ಸಮಸ್ಯೆಯಾಗದಂತೆ ಕ್ರಮವಹಿಸಿ

• **ಬೆಳ್ತಂಗಡಿ:** ಮಳೆಗಾಲದಲ್ಲಿ ಘಾಟಿ ವಿಭಾಗದಲ್ಲಿ ಸಂಚಾರಕ್ಕೆ ಸಮಸ್ಯೆ ಉಂಟಾಗದಂತೆ ಕ್ರಮವಹಿಸುವಂತೆ ರಾಷ್ಟ್ರೀಯ ಹೆದ್ದಾರಿ ಇಲಾಖೆ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕೀಹೊಳಿ ಸೂಚನೆ ನೀಡಿದರು.

ಅವರು ಶುಕ್ರವಾರ ಸಂಜೆ ಚಾರ್ಮಾಡಿ ಘಾಟಿ ವಿಭಾಗ ಮತ್ತು ಪುಂಜಾಲಕಟ್ಟೆ- ಚಾರ್ಮಾಡಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಯ ವೀಕ್ಷಣೆ ನಡೆಸಿದರು.ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಅಗತ್ಯ ಕಾಮಗಾರಿ ನಿರ್ವಹಿಸಲು ತಿಳಿಸಿದರು. ಪುಂಜಾಲಕಟ್ಟೆ- ಚಾರ್ಮಾಡಿ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ವೇಳೆ ತೆರವುಗೊಂಡ ಕಟ್ಟಡ, ಸ್ಥಳಗಳ ಮಾಲೀಕರಿಗೆ ನೀಡಲಾಗುವ ಪರಿಹಾರ ಧನ ವಿಳಂಬವಾಗುತ್ತಿರುವ ಕುರಿತು ಮಾಹಿತಿ ತಿಳಿದು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಸೂಚಿಸಿದರು. ಸಾರ್ವಜನಿಕರು, ವಾಹನ ಸವಾರರಿಗೆ ತೊಂದರೆ ಉಂಟಾಗದಂತೆ ಮಳೆಗಾಲಕ್ಕೆ ಆರಂಭಕ್ಕೆ ಮೊದಲು ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ತಿಳಿಸಿದರು.

ರಸ್ತೆ ಅಭಿವೃದ್ಧಿ ಹೊಂದಿದ ಕೆಲವು ಕಡೆ ರಸ್ತೆ ಅಂಕುಡೊಂಕಾಗಿ ಇರುವ ಬಗ್ಗೆ ಪ್ರಶ್ನಿಸಿದರು. ಹೆದ್ದಾರಿ ಬದಿ ಬರುವ ಶಾಲೆಗಳ ಮಕ್ಕಳು ರಸ್ತೆ ದಾಟುವಾವ ವೇಳೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಹೇಳಿದರು. ಹೆದ್ದಾರಿ ಅಭಿವೃದ್ಧಿ ಅಂಗವಾಗಿ ಹೊಸ ಸೇತುವೆಗಳು ನಿರ್ಮಾಣಗೊಳ್ಳುತ್ತಿದ್ದು ಇವುಗಳ ಕೆಲಸವನ್ನು ಬೇಗನೆ ಪೂರ್ಣಗೊಳಿಸುವಂತೆ ಸೂಚಿಸಿದರು.

ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಪ್ರಶಂಸೆ ಮಾಡಲು ಯೋಗ್ಯವಾದುದು ಯಾವುದು?

ಉದಾರತಾ

ಔದಾರ್ಯ ಅಥವಾ ಉದಾರತಾ ಎಂಬ ಗುಣವು ಅತ್ಯಂತ ಶ್ರೇಷ್ಠವಾದದ್ದು. ಇದು ಯಾರಲ್ಲಿ ಇರುತ್ತದೆಯೋ ಆ ವ್ಯಕ್ತಿಯನ್ನು ಪ್ರಶಂಸೆ ಮಾಡುವುದರಲ್ಲಿ, ಯಾವುದೇ ಅಂಜಿಕೆ ಇರಬಾರದು. ಏಕೆಂದರೆ ಆ ವ್ಯಕ್ತಿ ಈ ಗುಣದಿಂದ ಪ್ರಶಂಸೆಗೆ ಅರ್ಹನಾಗುತ್ತಾನೆ. ಹಾಗಾದರೆ ಈ 'ಉದಾರತಾ' ಎಂಬ ಗುಣವು ಏಕೆ ಅಷ್ಟು ಶ್ರೇಷ್ಠವಾಗಿದೆ ಎಂಬುದನ್ನು ತಿಳಿಯಬೇಕಾಗಿದೆ. 'ಔದಾರ್ಯ' ಎಂಬುದು ಒಂದು ಕೊಡುವ ಮನೋಧರ್ಮ. ಈ ಹಿಂದಿನ ಪ್ರಶ್ನೋತ್ತರದಲ್ಲಿ ಒಂದು ವಿಷಯವನ್ನು ಗಮನಿಸಿದ್ದೆವು. ಆ ವಿಷಯವನ್ನು ಇಲ್ಲಿ ನೆನಪಿಸಿಕೊಂಡು ಈ ಉತ್ತರವನ್ನು ಅರ್ಥ ಮಾಡಿಕೊಳ್ಳಬೇಕು. ಈ ಹಿಂದಿನ ಪ್ರಶ್ನೆಯಲ್ಲಿ ವೈಭವವಿದ್ದರೂ ಮತ್ತೊಬ್ಬರಿಗೆ ಕೊಡದಿರುವ ಅತಿಹೇಯವಾದ ಕೃಪಣತಾ ಎಂಬ ದೋಷವನ್ನು ವಿವರಿಸಿದ್ದಾಗಿತ್ತು. ಇದಕ್ಕೆ ವಿರುದ್ಧವಾದ ಗುಣವೇ ಉದಾರತಾ ಎಂಬುದು. ಅಂದರೆ ತನ್ನಲ್ಲಿ ಏನಿದೆಯೋ ಅದರಲ್ಲಿ ಕೊಟ್ಟು ಸಂತೋಷಪಡುವ, ತೃಪ್ತಿಪಡುವ ಮನಸ್ಸು, ಈ ಔದಾರ್ಯವೆಂಬ ಗುಣವಿಲ್ಲದಿದ್ದರೆ ದಾನ ಮಾಡುವ ಸ್ವಭಾವ ಹೇಗೆ ಬರಲು ಸಾಧ್ಯ. ಇದ್ದು ಕೊಟ್ಟರೆ ಅದು ಔದಾರ್ಯವೆನಿಸುವುದು. ತನ್ನಲ್ಲಿ ಇರುವಷ್ಟನ್ನು ದೀನದರಿದ್ರರಿಗೆ ಅವರ ಅವಶ್ಯಕತೆಗೆ ಅನುಗುಣವಾಗಿ ಸ್ಪಂದಿಸುವ ವಿಶೇಷ ಗುಣವೇ ಉದಾರತಾ. ಹಾಗಾಗಿ ಇಂತಹ ವಿಶೇಷ ಗುಣವನ್ನು ಪ್ರಶಂಸಿಸಬೇಕಾದುದು ಅತ್ಯಂತ ಅವಶ್ಯಕ. ಈ ಗುಣವು ಬರಲು ಹೇಗೆ ಸಾಧ್ಯ? ಎಂಬುದಕ್ಕೆ ಭಗವದ್ಗೀತೆಯಲ್ಲಿ ಯಾರು ಉದಾರರು ಎಂಬುದನ್ನು ಹೀಗೆ ಹೇಳಲಾಗಿದೆ. ಆರ್ತ, ಜಿಜ್ಞಾಸು ಅರ್ಥಾರ್ಥೀ ಮತ್ತು ಜ್ಞಾನಿ ಈ ನಾಲ್ವರನ್ನು ಉದಾರರು ಎಂಬುದಾಗಿ ಕರೆಯಬೇಕು. ಈ ನಾಲ್ವರಲ್ಲಿ ಜ್ಞಾನಿಯಾದವನು ಅತ್ಯಂತ ಶ್ರೇಷ್ಠ ಉದಾರಿ ಎಂಬುದಾಗಿ ತಿಳಿಯಬೇಕು. ಅಂದರೆ ಅಂತಹ ಜ್ಞಾನಿಗೆ ಮಾತ್ರ ಈ ವಿಶೇಷಗುಣ ಬರಲು ಸಾಧ್ಯ ಎಂಬುದು ಇದರ ತಾತ್ಪರ್ಯ. ಸಾಮಾನ್ಯ ಮಾನವನಿಗೆ ಅಲ್ಪಸ್ವಲ್ಪ ಔದಾರ್ಯದ ಗುಣ ಬರಬಹುದು. ಆದರೆ ಜ್ಞಾನಿಗೆ ಪರಿಪೂರ್ಣ ಔದಾರ್ಯ ಗುಣವು ಬರುತ್ತದೆ. ಏಕೆಂದರೆ ಜ್ಞಾನಿಯಾದವನಿಗೆ ತ್ಯಾಗ ಎಂಬ ಗುಣವು ವಿಶೇಷವಾಗಿರುತ್ತದೆ. ತ್ಯಾಗದಿಂದಲೇ ಅವನು ಅಮೃತತ್ವವನ್ನು ಪಡೆಯಬಹುದು ಎಂಬುದನ್ನು ಬಲವಾಗಿ ನಂಬಿದವನಾಗಿರುತ್ತಾನೆ. ಕೇವಲ ಸಂಪತ್ತನ್ನು ಮಾತ್ರವಲ್ಲದೆ ಈ ಜನ್ಮಕ್ಕೆ ಕಾರಣವಾದ ಶರೀರವೂ ಕೂಡ ತ್ಯಾಜ್ಯವಾದದ್ದು ಎಂಬ ಎಂಬ ತ್ಯಾಗ ಮನೋಧರ್ಮ ಅವನಿಗೆ ಇರುತ್ತದೆ. ಔದಾರ್ಯ ಇರುವವನು ಎಲ್ಲಾ ಕಾಲದಲ್ಲೂ ಶುದ್ಧನಾಗಿ ಇರುತ್ತಾನೆ. ಕಾರಣ ಇಷ್ಟೇ. ಔದಾರ್ಯ ಎಂಬ ಗುಣ ಇರುವುದರಿಂದಲೇ ಅವನು ಜ್ಞಾನಿಯಾದ, ಯೋಗಿಯಾದ, ಶೋಭಾ ವಿಲಾಸೋ ಮಾಧುರ್ಯಂ ಗಾಂಭೀರ್ಯಂ ಧೈರ್ಯತೇಜಸೀ? ಲಲಿತಾ ಔದಾರ್ಯಂ ಇತಿ ಅಷ್ಟ ಸತ್ತ್ವಜಾಃ ಪುರುಷಾಃ ಗುಣಾಃ? '' ಎಂದು ಸಾಹಿತ್ಯದರ್ಪಣ ಎಂಬ ಗ್ರಂಥದಲ್ಲಿ ಸಜ್ಜನಪುರುಷರ ಎಂಟು ಲಕ್ಷಣಗಳನ್ನು ಹೇಳಲಾಗಿದೆ. ಅದರಲ್ಲಿ ಔದಾರ್ಯ ಎಂಬ ಗುಣವನ್ನು ಎತ್ತಿ ಹೇಳಲಾಗಿದೆ. ಅಂದರೆ ಈ ಗುಣವು ಸತ್ತ್ವಗುಣದ ಪ್ರತೀಕವಾದದ್ದು. ಯಾರಲ್ಲಿ ಸತ್ತ್ವಗುಣ ಇರುತ್ತದೆಯೋ, ಅವರಲ್ಲಿ ಉದಾರತೆ ಇರುತ್ತದೆ. ಅಥವಾ ಉದಾರತೆ ಎಂಬುದು ಸತ್ತ್ವಗುಣದಿಂದಲೇ ಜಾಗೃತವಾಗುತ್ತದೆ ಎಂಬ ಅರ್ಥವೂ ಸತ್ಯವಾದದ್ದು. ಒಟ್ಟಿರೆ ಇಂತಹ ಸತ್ಪುರುಷನು ಉದಾರತಾ ಎಂಬ ಗುಣದಿಂದ ಪ್ರಶಂಸೆಗೆ ಅರ್ಹನಾಗುತ್ತಾನೆ.

ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ವಾದದಲ್ಲಿ ಸರಿಸಮನೆನಿಸಿದ ಜರಾಸಂಧ!

ಜರಾಸಂಧನನ್ನು ಎದುರಿಸಿ ಕೃಷ್ಣ ಮತ್ತು ಪಾಂಡವರಿಬ್ಬರು ನಿಂತಿದ್ದಾರೆ. ವೇಷಾಂತರದಲ್ಲಿ ಬಂದಿರುವುದಾದರೂ ತಾವು ವಾಸ್ತವವಾಗಿ ಯಾರೆಂಬುದನ್ನು ತಿಳಿಸಹೊರಟ ಕೃಷ್ಣನು ತನ್ನ ಮಾತನ್ನು ಮುಂದುವರೆಸುತ್ತಿದ್ದಾನೆ. ಜರಾಸಂಧನೇ, ಸ್ವರ್ಗಪ್ರಾಪ್ತಿ ವೇದಾಧ್ಯಯನದಿಂದ ಪ್ರಾಪ್ತಿಯಾಗಬಲ್ಲದು. ಸ್ವರ್ಗವನ್ನು ಹೊಂದಲು ಕಾರಣವೆನಿಸುವುದು ಮಹಾಯಶಸ್ಸು; ಸ್ವರ್ಗಸಂಪಾದನೆಗೆ ಹೇತುವಾದದ್ದು ತಪಸ್ಸು; ಇವೆಲ್ಲಕ್ಕಿಂತಲೂ ಮಿಗಿಲಾದದ್ದೆಂದರೆ ಹಿಂಜರಿಯದೆಯೇ ಯುದ್ಧದಲ್ಲಿ ಕ್ಷತ್ರಿಯನು ಮೃತ್ಯುವನ್ನು ಹೊಂದುವಂತಹುದು. ಯುದ್ಧದಲ್ಲಿಯ ಸಾವೆಂದರೆ ಕ್ಷತ್ರಿಯನು ವೈಜಯಂತವನ್ನು ಹೊಂದಿದಂತೆಯೇ. ಅದಂತೂ, ಇಂದ್ರನ ರಾಜ್ಯಗೃಹವೇ! ಸರ್ವಗುಣಗಳಿಂದಲೂ ಪರಿಪೂರ್ಣವಾದುದು. ಯುದ್ಧವೆಂಬುದನ್ನು ಆಧರಿಸಿಯೇ ಅಸುರರನ್ನು ಪರಾಭವಗೊಳಿಸಿ ಇಂದ್ರನು ಜಗದ್ರಕ್ಷಕನಾಗಿರುವುದು.

ಈಗ ನಮ್ಮೊಂದಿಗೆ ಯುದ್ಧವೆಂಬುದೇನುಂಟೋ ಅದು ನಿನಗೆ ಸ್ವರ್ಗಪ್ರಾಪಕವೇ ಸರಿ. ಈ ಬಗೆಯು ಮತ್ತಾರಿಗೆ ದೊರಕೀತು? ಮಾಗಧರ ವಿಪುಲವಾದ ಸೈನ್ಯವೆನಗಿದೆ ಎಂಬ ಬಾಹುಲ್ಯದ ಬಲದಿಂದ ನೀನು ದರ್ಪಗೊಂಡಿರುವೆ. ಹಾಗೆ ನೀನು ದರ್ಪಗೊಂಡು ಅನ್ಯರನ್ನು ಅವಮಾನಿಸುವುದಲ್ಲ, ತಿಳಿದುಕೋ. ನರನರನಲ್ಲೂ ವೀರ್ಯವಿರುವುದು, ನಿನಗೆ ಸಮಾನವೆನಿಸುವ ತೇಜಸ್ಸಿರುವುದು. ನಿನಗಿಂತಲೂ ಅತಿಶಯವಾದದ್ದೂ ಉಂಟು ರಾಜನೇ! ಎಲ್ಲಿಯವರೆಗೆ ಇದೆಲ್ಲಾ ನಿನ್ನ ಅರಿವಿಗೆ ಬರುವುದಿಲ್ಲವೋ, ಅಲ್ಲಿಯವರೆಗಷ್ಟೆ ಇದನ್ನೆಲ್ಲಾ ನಾವು ಸಹಿಸಿಕೊಳ್ಳಬೇಕಾಗಿಬರುವಂತಹುದು. ರಾಜನೇ, ನಾನು ನಿನಗೆ ಹೇಳುತ್ತಿರುವುದು ನಿನಗೆ ಯಾರು ಸಮಾನರೋ ಅಂತಹವರ ವಿಷಯದಲ್ಲಿ ನಿನ್ನ ಸ್ವಾಭಿಮಾನವನ್ನೂ ದರ್ಪವನ್ನೂ ಬಿಡು, ಮಾಗಧನೇ!

ನಿನ್ನ ಮಕ್ಕಳು ಮಂತ್ರಿಗಳೊಂದಿಗೆ ಹಾಗೂ ಸೈನ್ಯದೊಂದಿಗೆ ನೀನು ಯಮಲೋಕವನ್ನು ಸೇರಬಾರದಲ್ಲವೇ? ದಂಭೋದ್ಭವ, ಕಾರ್ತವೀರ್ಯ, ಉತ್ತರ, ಬೃಹದ್ರಥ-ಎಂಬೀ ನಾಲ್ವರು ರಾಜರೂ ನಾಶಹೊಂದಿದರು. ಏಕೆ? ತಮಗಿಂತಲೂ ಹಿರಿಯರನ್ನು ಅವಮಾನಗೊಳಿಸಿದ್ದಕ್ಕಾಗಿ. ನಿನ್ನೊಡನೆ ಯುದ್ಧಮಾಡಬಯಸುತ್ತಿರುವ ನಾವು ಬ್ರಾಹ್ಮಣರಲ್ಲ, ನಾನು ಶೌರಿಯಾದ ಹೃಷೀಕೇಶ, ಎಂದರೆ ವಾಸುದೇವಪುತ್ರ. ಹಾಗೂ ಇವರಿಬ್ಬರೂ ಪಾಂಡವರು. ಇವರಿಬ್ಬರಿಗೂ ನಾನು ಮಾತುಲೇಯ, ಎಂದರೆ ಸೋದರಮಾವನ ಮಗನಾದ ಕೃಷ್ಣ, ನಿನ್ನ ಶತ್ರು ಎಂಬುದಾಗಿ ತಿಳಿ. ಇದೋ, ಯುದ್ಧಕ್ಕೆ ನಿನ್ನನ್ನು ಆಹ್ವಾನಿಸುತ್ತಿದ್ದೇವೆ. ರಾಜನೇ, ಸ್ಥಿರನಾಗಿ ಯುದ್ಧಮಾಡು. ಮಾಗಧ, ನಿನಗಿರುವುದು ಎರಡೇ ಆಯ್ಕೆಗಳು. ಎಲ್ಲ ರಾಜರನ್ನೂ ಬಂಧಮುಕ್ತಗೊಳಿಸು; ಇಲ್ಲವೇ ಯಮಸದನಕ್ಕೆ ಹೋಗು ಎಂದನು. ಕೃಷ್ಣನು ಹೀಗೆ ಹೇಳಲು, ಜರಾಸಂಧನು ನುಡಿದನು: ಮೊದಲು ನೀನಿದನ್ನು ತಿಳಿದುಕೋ, ಕೃಷ್ಣಾ! ಯಾವ ರಾಜರು ನನ್ನೊಡನೆ ಸೆಣಸಿನಲ್ಲಿ ಸೋತಿಲ್ಲವೋ, ಅಂತಹವರನ್ನೊಬ್ಬರನ್ನೂ ನಾನು ಕೈದಿಯಾಗಿಸಿಲ್ಲ, ನನಗೆ ಪ್ರತಿಭಟಿಸಿಯೂ ನನ್ನಿಂದ ಸೋಲನ್ನು ಕಾಣದ ಯಾವೊಬ್ಬ ವ್ಯಕ್ತಿಯೂ ಇಲ್ಲಿಲ್ಲ, ಕೃಷ್ಣಾ! ಇದನ್ನೇ ಅಲ್ಲವೆ ಕ್ಷತ್ರಿಯನ ಜೀವಿಕೆಯೆಂಬುದಾಗಿ ಹೇಳುವುದು. ಪರಾಕ್ರಮವನ್ನು ತೋರಿಸಿ, ಶತ್ರುವನ್ನು ವಶಕ್ಕೆ ತೆಗೆದುಕೊಂಡು, ಬಳಿಕ ತನಗೆ ತೋಚಿದಂತೆ ಆಚರಿಸುವುದು. ದೇವತೆಗಳಿಗೆ ಬಲಿಗೊಡಲೆಂದು ಈ ರಾಜರುಗಳನ್ನು ನಾನು, ಕ್ಷತ್ರಿಯ-ವ್ರತವನ್ನು ಮರೆಯದೆ, ಸೆರೆಯಾಗಿಸಿದ್ದೇನೆ. ಈಗೇನು ನಿನಗೆ ಭಯಪಟ್ಟುಕೊಂಡು ಅವರುಗಳನ್ನು ನಾನು ವಿಮುಕ್ತಗೊಳಿಸಬೇಕೇನು? ನಿನ್ನ ಸೇನಾವ್ಯೂಹದೊಂದಿಗೆ ನನ್ನ ಸೇನಾವ್ಯೂಹವು ಹೋರಲಿ. ಅಥವಾ ಒಂಟಿಯಾಗಿ ಒಂಟಿಯಾದವನ ಮೇಲೆ ಹೋರಾಡುವುದೆಂದರೆ ಹಾಗೂ ಸರಿಯೇ. ಅಥವಾ ಇಬ್ಬರೊಂದಿಗೋ ಮೂವರೊಂದಿಗೋ ಸೆಣಸುವುದೆಂದರೆ ಹಾಗೂ ಸರಿಯೇ. ನಾನು ಯಾವುದಕ್ಕೂ ಸಿದ್ಧ ಎಂದನು ಜರಾಸಂಧ.

ಪರಿಚಯದ ಪರಿಪರಿಯ ಕಿರಿಕಿರಿಗಳು

ವಕ್ರದೃಷ್ಟಿ

• ಎಸ್.ರಾಮನಾಥ್
anakuramanath@gmail.com

ಬಹಳ ವರ್ಷಗಳ ಹಿಂದಿನ ಮಾತು. ಜರಗನಹಳ್ಳಿ ಶಿವಶಂಕರರು ಪ್ರತಿ ತಿಂಗಳು ನಡೆಸುತ್ತಿದ್ದ ಕಾರ್ಯಕ್ರಮವೊಂದಕ್ಕೆ ಮುಖ್ಯ ಅತಿಥಿಗಳಾಗಿ ಏಣಗಿ ಬಾಳಪ್ಪನವರು ಆಗಮಿಸಿದ್ದರು. ಪ್ರಾರ್ಥನೆ, ಸ್ವಾಗತಗಳ ನಂತರ ನಿರೂಪಕರು 'ಈಗ ಅತಿಥಿಗಳ ಪರಿಚಯವನ್ನು ಪರಮೇಶಿಯವರು (ನಿಜ ಹೆಸರಲ್ಲ) ಮಾಡಿಕೊಡುತ್ತಾರೆ' ಎಂದರು.

ಒರಳುಕಲ್ಲಿನಲ್ಲಿರುಬ್ಬುಗುಂಡು ಚಲಿಸುವರೀತಿಯಲ್ಲಿ ಉರುಟು ನಡೆಯಲ್ಲಿ ವೇದಿಕೆಯನ್ನೇರಿದ ಪರಮೇಶಿಯವರು ''ಇಂದಿನ ಮುಖ್ಯ ಅತಿಥಿಗಳು ಏಣಗಿ ಬಾಳಪ್ಪ ಉಕ್ಕೇರಿ'' ಎನ್ನುತ್ತಾ ಪರಿಚಯಕ್ಕೆ ಉಪಕ್ರಮಿಸಿದರು. ಹೌಹಾರಿದ ನಾನು ಅವರ ಗಮನವನ್ನು ಸೆಳೆಯಲು ಸಕಲ ಪ್ರಯತ್ನಗಳನ್ನೂ ಮಾಡಲಾರಂಭಿಸಿದೆ. ಪರಿಣಾಮಶೂನ್ಯ. ''ಏಣಗಿ ಬಾಳಪ್ಪ ಉಕ್ಕೇರಿಯವರು ಒಳ್ಳೆಯ ಆಡುಗಾರರು'' ಮುಂದುವರಿಸಿದರು ವ್ಯಕ್ತೋದರರು, ''ಅವರು ಆಡಿದರೆ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ.''

'ಆಡುವುದನ್ನು ನೋಡುವುದು ತಿಳಿದಿದೆ. ಆಡುವುದನ್ನು ಕೇಳುವುದೆ?' ಎಂಬ ಗೊಂದಲ ಯಾರಲ್ಲೂ ಮೂಡಲಿಲ್ಲ, ಆ ಹೊತ್ತಿಗೆ ಸಭೆಗೆ ಈ ಪರಿಚಯಕಾರನು ಹಜಾರ ಹಂಚಕನೆಂದು ಅರಿವಾಗಿತ್ತು. ತತ್ಪರಿಣಾಮ ಮುಖ್ಯ ಅತಿಥಿಗಳು ಉಕ್ಕೇರಿಯಲ್ಲ, ಹುಕ್ಕೇರಿ ಎಂದೂ, ಪರಿಚಯ ಮಾಡಿಕೊಡುತ್ತಿರುವ ವ್ಯಕ್ತಿಗೆ ಗಾಯಕ ಬಾಳಪ್ಪ ಹುಕ್ಕೇರಿಯೂ ತಿಳಿದಿಲ್ಲ, ನಾಟಕಕಾರ ಏಣಗಿ ಬಾಳಪ್ಪನವರೂ ತಿಳಿದಿಲ್ಲವೆಂಬುದು ಸ್ಪಷ್ಟವಾಗಿತ್ತು. ಆದರೆ ಸ್ವಯಂ ಪರಿಚಯಕಾರನಿಗೆ ತಿಳಿದಿರಲಿಲ್ಲವಲ್ಲ, ಅತ ಮುಂದುವರಿಸಿದರು:

''ಏಣಗಿ ಬಾಳಪ್ಪ ಉಕ್ಕೇರಿಯವರಿಗೆ ಈಗ ತೊಂಬತ್ತೇಳು ವರ್ಷ ವಯಸ್ಸು'' ಎಂದರವರು. ವಾಸ್ತವವಾಗಿ ಅಂದು ಏಣಗಿಯವರಿಗೆ ತೊಂಬತ್ತು ವರ್ಷಗಳು ತುಂಬಿದ್ದವು, ಇನ್ನು ಏಳು ವರ್ಷಗಳನ್ನು ಪರಿಚಯಕಾರರೇ ಬೋನಸ್ ಆಗಿ ನೀಡಿದ್ದರು. ಪರಿಚಯಕಾರರ ತಲೆಯನ್ನು ತುಂಬಿಕೊಂಡಿದ್ದ ಬಾಳಪ್ಪ ಹುಕ್ಕೇರಿ ಅಂದಿಗೆ ಗತಿಸಿ ಹಲವು ವರ್ಷಗಳಾಗಿದ್ದವು. ''ಇವರ ಎಸರಿನಲ್ಲಿ ಉಕ್ಕೇರಿ ಅಂತ ಇರೋದು ಯಾಕೆ ಅಂದರೆ ಈ ವಯಸ್ಸಿನಲ್ಲೂ ಅವರ ಉತ್ಸಾಹವು ಆಲಿನಂತೆ ಉಕ್ಕೇರುತ್ತಿದೆ. ಆದ್ದರಿಂದಲೇ ಅವರ ಎಸರು ಬಾಳಪ್ಪ ಉಕ್ಕೇರಿ!''

ಏಣಗಿಯವರಿಗೆ ಒದಗಿದ್ದ ವಯೋಸಹಜವಾದ ಕಿವುಡು ಈ ಪರಿಚಯವನ್ನು ಕೇಳಿಸಿಕೊಳ್ಳುವ ಸಂಕಷ್ಟದಿಂದ ಅವರನ್ನು ಪಾರು ಮಾಡಿತ್ತು.

ವೇದಿಕೆಯಲ್ಲದೆ ಹೊರಜಗತ್ತಿನಲ್ಲಿಯೂ ಒಬ್ಬರನ್ನು ಮತ್ತೊಬ್ಬರೆಂದು ಗ್ರಹಿಸುವ ಸನ್ನಿವೇಶಗಳು ಉದ್ಭವಿಸುತ್ತವೆ. ''ನಿಮ್ಮ 'ನಟಸಾರ್ವಭೌಮ' ಕಾದಂಬರಿಯನ್ನು ಓದಿದ್ದೇನೆ ಸಾರ್, ತುಂಬಾ ಚೆನ್ನಾಗಿದೆ'' ಎಂದು ಕಾಲೇಜು ಹುಡುಗನೊಬ್ಬನು ಶಿವರಾಮ ಕಾರಂತರಿಗೆ ನುಡಿದಿದ್ದ, ಕಾರಂತರು ''ಗುಡ್. ಅದರಲ್ಲಿ ಯಾವ ಪಾತ್ರ ಇಷ್ಟವಾಯಿತು?'' ಎನ್ನುತ್ತಾ ಮಾತು ಮುಂದುವರೆಸಿದ್ದರು. ಅನಂತರ ''ಕಾರಂತರೆ, ಅನಕೃ ಬರೆದ ಕೃತಿಯನ್ನು ನಿಮ್ಮದೆಂದರೂ ಸಮ್ಮತಿಸಿ ಮಾತನಾಡಿದ್ದೇಕೆ?'' ಎಂದು ಕೇಳಿದರೆ, ''ಯಾರದೇ ಆಗಲಿ, ಕನ್ನಡದ ಪುಸ್ತಕ ಓದಿದನಲ್ಲ, ಅದೇ ಸಂತೋಷ'' ಎಂದು ನುಡಿದಿದ್ದರು.

ಬಿ.ವಿ. ಕಾರಂತ ಮತ್ತು ಶಿವರಾಮ ಕಾರಂತರನ್ನು ಪರಸ್ಪರ ತಪ್ಪಾಗಿ ಗ್ರಹಿಸಿದ ಪ್ರಸಂಗಗಳಿವೆ. ''ನಿಮ್ಮ ಕಾದಂಬರಿಗಳನ್ನು ಓದಿದೆ ಸಾರ್'' ಎಂದು ಬಿ.ವಿ. ಕಾರಂತರಿಗೂ, ''ನಿಮ್ಮ 'ಹಯವದನ' ತುಂಬಾ ಚೆನ್ನಾಗಿದೆ ಸಾರ್'' ಎಂದು ಶಿವರಾಮ ಕಾರಂತರಿಗೂ ಜನರು ಹೇಳಿದುದುಂಟು. ಶಿವರಾಮ ಕಾರಂತರು ಮನದಲ್ಲಿಯೇ 'ಹಯವದನನಂತೆ ಹಯವದನ. ನನ್ನ ಮುಖವೇನು ಕುದುರೆಯ ಮುಖದಂತೆ ಇದೆಯೆ?' ಎಂದುಕೊಂಡಿದ್ದರೂ ಆಶ್ಚರ್ಯವಿಲ್ಲ.

ಇಂತಹ ಬದಲುಗ್ರಹಿಕೆ ವಿಶ್ವವ್ಯಾಪಿಯಾದ ಗುಣ. ಹಾಲಿವುಡ್ಡಿನ ಖ್ಯಾತ ನಟರಾದ ಪೀಟರ್ ಸೆಲ್ಲರ್ಸ್ ಮತ್ತು ವುಡಿ ಅಲನ್ 'ಕೆಸಿನೋ ರಾಯೇಲ್' ಎಂಬ ಚಿತ್ರವೊಂದರಲ್ಲಿ ಅಭಿನಯಿಸಿದ್ದರು. ಯಾವುದೋ ಸನ್ನಿವೇಶದ ಬಗ್ಗೆ ಚರ್ಚಿಸಲೆಂದು ಪೀಟರ್ ಸೆಲ್ಲರ್ಸ್ ಸ್ಟುಡಿಯೋವೊಂದಕ್ಕೆ ಹೋದಾಗ ಸ್ಟುಡಿಯೋದವನು ಸೆಲ್ಲರ್ಸ್‌ರನ್ನು ಅಲನ್ ಎಂದು ಭ್ರಮಿಸಿ, ''ಮಿಸ್ಟರ್ ಅಲನ್, ನೀವು ಬಂದದ್ದು ಬಹಳ ಸಂತೋಷ. ನಿಮ್ಮೊಡನೆ ನಟಿಸಿದ ಪೀಟರ್ ಸೆಲರ್ಸ್‌ನ ನಟನೆ ನನಗೆ ಏನೇನೂ ಹಿಡಿಸಲಿಲ್ಲ'' ಎನ್ನುತ್ತಾ ಸೆಲ್ಲರ್ಸ್‌ರ ಅಭಿನಯದ ಬಗ್ಗೆ ಕಟುನುಡಿಗಳನ್ನು ಆಡತೊಡಗಿದನು. ಎಲ್ಲವನ್ನೂ ಕೇಳಿಸಿಕೊಂಡ ಸೆಲ್ಲರ್ಸ್, ಕಡೆಗೆ ''ನಾನು ಅಲನ್ ಅಲ್ಲ, ಸೆಲ್ಲರ್ಸ್. ಗುಡ್ ಬೈ'' ಎನ್ನುತ್ತಾ ಹೊರನಡೆದರು.

ಹಾಲಿವುಡ್ಡಿನದೇ ಮತ್ತೊಂದು ಪ್ರಸಂಗವು ಅಭಿಮಾನಿಗಳನ್ನು ಒಳಗೊಂಡಿದ್ದಾಗಿದೆ. ಚಹರೆಯಲ್ಲಿ ಒಂದಿಷ್ಟು ಹೋಲಿಕೆ ಇದ್ದ ಟಾಮ್ ಹ್ಯಾಂಕ್ಸ್ ಮತ್ತು ಬಿಲ್ ಮರ್ರೆ ಈರ್ವರನ್ನು ಅಭಿಮಾನಿಗಳು ತಪ್ಪಾಗಿ ಗ್ರಹಿಸುತ್ತಿದ್ದುದುಂಟು. ಟಾಮ್ ಹ್ಯಾಂಕ್ಸ್ ''ನನ್ನನ್ನು ಮರ್ರೆ ಎಂದು ತಪ್ಪಾಗಿ ಗ್ರಹಿಸಿದ ಅಭಿಮಾನಿಗಳು ಮರ್ರೆಯ ಸ್ಮರಣಿಕೆಗಳ ಮೇಲೆ ನನ್ನ ಸಹಿಯನ್ನು ಕೋರಿದರು. ನಾನು ಅವುಗಳ ಮೇಲೆ ಬಿಲ್ ಮರ್ರೆ ಎಂದೇ ಸಹಿ ಹಾಕಿದೆ'' ಎಂದು ನುಡಿದಿದ್ದರು.

ಇತ್ತೀಚಿನ ದಿನಗಳಲ್ಲಿ ನಮ್ಮಲ್ಲಿ ಅತಿ ಹೆಚ್ಚು ಗೊಂದಲ ಮೂಡಿಸಿದವರೆಂದರೆ ಗುಂಡೂರಾವ್‌ದ್ವಯರು. ವೈ.ವಿ. ಗುಂಡೂರಾವ್ ಅತ್ಯುತ್ತಮ ಮಾತುಗಾರರು. ಲೀಲಾಜಾಲವಾಗಿ ಮಾತನಾಡುವ ಅವರಿಗೆ ಸಿಗ್ನೇಚರ್ ಹಾಕಲೂ ಬರೆಹಾಲಸ್ಯ. ವೈ.ಎನ್.ಗುಂಡೂರಾವ್ ಉತ್ತಮ ಬರೆಹಗಾರರು. 'ಮಾತನಾಡಿ ಬನ್ನಿ ಸಾರ್' ಎಂದರೆ ನುಡಿವಿರಕ್ತಿ. ಇಂತಿರುವಾಗ ವೈ.ವಿ.ಗೆ ''ನಿಮ್ಮ ಆರ್ಟಿಕಲ್ ಓದಿದೆ ಸಾರ್. ಸುಖತ್ತಾಗಿ ಬರೀತೀರಿ ಸಾರ್'' ಎಂಬ ಪ್ರಶಂಸೆಯೂ, ವೈ.ಎನ್.ಗೆ ''ಯೂಟ್ಯೂಬಲ್ಲಿ ನಿಮ್ಮ ವಿಡಿಯೋ ನೋಡಿದೆ ಸಾರ್. ಏನ್ ಸೂಪರ್ರಾಗಿ ಮಾತಾಡ್ತೀರಾ ಸಾರ್! ಸುಖತ್ ಹಾಸ್ಯ ನಿಮ್ಮದು'' ಎಂಬ ಪ್ರಶಂಸೆಯೂ ಆಗಾಗ್ಗೆ ಸಂದಾಯ ಆಗುತ್ತಲೇ ಇರುತ್ತವೆ. ''ನಾನವನಲ್ಲ'' ಎಂದು ಹೇಳೀ ಹೇಳೀ ರೋಸಿರುವ ಇಬ್ಬರೂ 'ಬಂದದ್ದೆಲ್ಲ ಬರಲಿ, ಅಭಿಮಾನದ ಹೊನಲಿರಲಿ' ಎಂಬ ಭಾವದಿಂದ ಸ್ವೀಕರಿಸುತ್ತಾರೆ.

ಸಾರ್ವಜನಿಕರ ಮಧ್ಯೆ ಪದೇ ಪದೇ ಕಂಡುಬಂದರೂ ಜನಮನದಲ್ಲಿ ಚಹರೆಯು ಅಚ್ಚೊತ್ತದಿರುವುದು ಆಶ್ಚರ್ಯದ ಸಂಗತಿಯೇ. ವೈ.ವಿ. ಗುಂಡೂರಾವ್‌ರನ್ನು 'ನೀವು ಡುಂಡಿರಾಜ್ ಅಲ್ವಾ?' ಎಂದೂ, ಡುಂಡಿರಾಜರನ್ನು 'ನೀವು ಎಮ್ಮೆಸ್ಸೆನ್ ಅಲ್ವಾ?' ಎಂದೂ, ಕೇಳಿದವರಿದ್ದಾರೆ. ನಾನಂತೂ ಜನರ ಕಣ್ಣಿಗೆ ಗಂಗಾವತಿ ಪ್ರಾಣೇಶ್, ನರಸಿಂಹಮೂರ್ತಿ, ಡುಂಡಿರಾಜ್ ಆಗಿ ಕಾಣಿಸಿಕೊಂಡಿದ್ದೇನೆ. ಡುಂಡಿಗೂ ನನಗೂ 'ಶಿರಸಾಮ್ಯ' ಏದೆ. ಮಿಕ್ಕವರಿಗೂ ನನಗೂ ಯಾವುದೇ ಹೋಲಿಕೆ ಇಲ್ಲದಿದ್ದರೂ ಅದು ಹೇಗೆ ಅವರು ಹಾಗೆ ಗ್ರಹಿಸಿದರೆಂಬುದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ.

ಚಹರೆಯನ್ನು ತಪ್ಪಾಗಿ ಗ್ರಹಿಸುವುದು ಒಂದು ವಿಧವಾದರೆ ಹೆಸರನ್ನು ತಪ್ಪಾಗಿ ಗ್ರಹಿಸುವುದು ಮತ್ತೊಂದು ಪರಿ. ಎಷ್ಟೋ ಸಭೆಗಳಲ್ಲಿ ನಾನು 'ರಾಮಮೂರ್ತಿ' ಎಂದು ಪರಿಚಯಗೊಂಡಿದ್ದೇನೆ, 'ರಮಾನಾಥ'ನಾಗಿ ರಮೆಯೆಂಬ ಹೆಣ್ಣಿನ ಕೈ ಹಿಡಿದಿದ್ದೇನೆ, 'ರಮಾನಂದ' ಆಗಿ ಯಾರಿಗೋ ಆನಂದ ನೀಡಿದ್ದೇನೆ. ನನ್ನ ಇನಿಷಿಯಲ್ ಆದ ಎಸ್ ನನ್ನ ತಂದೆಯವರಾದ ಎಸ್.ನರಸಿಂಹಮೂರ್ತಿಯವರನ್ನು ಸೂಚಿಸಿದರೆ, ಪರಿಚಯಕಾರರ ಪ್ರಕಾರ ನಾನು ಎಮ್ಮೆಸ್ಸೆನ್‌ರ ಮಗನಾಗಿದ್ದೆ! ಇನಿಷಿಯಲ್ ಎನ್ ಅನ್ನೂ ಎಸ್ ಆಗಿಸಿ, ನಾನು ಎಷ್ಟೇ ಬಾರಿ 'ನೋ' ಎಂದರೂ, ಪರಿಚಯಕಾರರು 'ಎಸ್' ಎಂದೇ ಮುಂದುವರಿಸಿದ್ದಿದೆ.

ಸಭೆಯೊಂದರಲ್ಲಿ ನನ್ನನ್ನು 'ಅಣುಕುಕಲೆಯಲ್ಲಿ ಪರಿಣತರಾದವರು' ಎಂದು ಪರಿಚಯಿಸಿದ್ದೇ ಅಲ್ಲದೆ, 'ಈಗ ಅಣಕುರಾಮನಾಥರಿಂದ ಮಿಮಿಕ್ರಿ! ಸಾರ್, ಸಿದ್ರಾಮಣ್ಣಂದೂ ಮಿಮಿಕ್ರಿ ಮಾಡ್ತೀರಾ ಸಾರ್?' ಎಂಬ ಉದ್ಘೋಷ!

''ನನ್ನದು ಮಿಮಿಕ್ರಿ ಅಲ್ಲ, ಅಣಕವಾಡು ಅಂದರೆ...''

ತಾಳ್ಮೆಗೂ, ಆ ಪರಿಚಯಕಾರನಿಗೂ ಬದ್ಧದ್ವೇಷ. ನನ್ನ ಮಾತನ್ನು ಅರ್ಧದಲ್ಲೇ ತುಂಡರಿಸಿದ ಅವನು, ''ಗೊತ್ತಾಯ್ತು ಬಿಡಿ ಸಾರ್. ಮಾತಿನ ಬದಲು ಹಾಡ್ತೀರ. ಅಂಬರೀಷ್ 'ನಾವಾಡುವ ನುಡಿಯೆ' ಹಾಡಿದರೆ ಹೇಗಿರತ್ತೆ ಅಂತ ತೋರಿಸಿ ಸಾರ್'' ಎಂದಿದ್ದ.

ಹಾಸ್ಯವಯಸ್ಸ ಭುವನೇಶ್ವರಿ ಹೆಗಡೆಯವರದು ಮತ್ತೊಂದು ವಿಧವಾದ ಪರಿಚಯಗ್ರಹಣ. ಅವರ ಪ್ರಬಂಧವೊಂದು ಬಿಬಿಎ ಮೊದಲ ಸೆಮಿಸ್ಟರ್‌ಗೆ ಪಠ್ಯವಾಗಿತ್ತು. ತತ್ಸಂಬಂಧವಾಗಿ ಪರೀಕ್ಷೆಯಲ್ಲಿ 'ನಾಲ್ಕು ಸಾಲುಗಳಲ್ಲಿ ಲೇಖಕಿಯ ಪರಿಚಯ ಬರೆಯಿರಿ' ಎಂಬ ನಾಲ್ಕು ಅಂಕಗಳ ಪ್ರಶ್ನೆಯಿದ್ದಿತು. ಅದಕ್ಕೆ ಬಂದ ಉತ್ತರಗಳು ಇಂತಿವೆ: ''ಲೇಖಕಿಯು ಸುಮಾರು 13 ಶತಮಾನಗಳ ಕಾಲ ಅರ್ಥಶಾಸ್ತ್ರ ಬೋಧನೆ ಮಾಡಿದ್ದಾರೆ.''

ಇನ್ನೊಬ್ಬರಿಗೆ ಹದಿಮೂರು ಶತಮಾನಗಳು ಮನುಷ್ಯರು ಇರಲಾರರೆಂಬ ಶಂಕೆ ಮೂಡಿದ್ದರಿಂದ, ''ಲೇಖಕಿಯು 3 ಶತಮಾನಗಳ ಕಾಲ ಬೋಧನೆ ಮಾಡಿದ್ದಾರೆ'' ಎಂದು ಬರೆದರೆ, ಮತ್ತೊಬ್ಬರಿಗೆ ಕೇವಲ ಶತಮಾನಗಳು ಚಿಲ್ಲರೆ ಸಮಯವೆನಿಸಿರಬೇಕು. ಅವರು ''ಶ್ರೀಮತಿ ಭುವನೇಶ್ವರಿ ಹೆಗಡೆಯವರು 3 ದಶಕ ಶತಮಾನ ಸಾಹಿತ್ಯ ರಚಿಸಿದ್ದಾರೆ'' ಎಂದಿದ್ದಾರೆ. ಅಲ್ಲದೆ ಭುವನೇಶ್ವರಿ ಹೆಗಡೆಯವರಿಗೆ ವಿದ್ಯಾರ್ಥಿಗಳ ಪ್ರಕಾರ ಕರ್ನಾಟಕ ರತ್ನ ಪ್ರಶಸ್ತಿ, ಜ್ಞಾನಪೀಠ ಹಾಗೂ ಪದ್ಮಭೂಷಣಗಳು ಲಭಿಸಿವೆ. ಲೇಖಕಿಯ ಜನನವು ಕರ್ನಾಟಕದ ಎಂಟು ಜಿಲ್ಲೆಗಳಲ್ಲಿ ಆಗಿದೆ!

ಇಂದುಶ್ರೀಯೊಡನೆ ನಾನು ನೂರಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಡಿಂಕು ಗೊಂಬೆಯೊಡನೆ ಇಂದು ಪ್ರದರ್ಶಿಸುವ ವೆಂಟ್ರಿಲಾಕ್ವಿಸಮ್ ಕಲೆಯನ್ನು 'ವೆಂಟ್ರಾಲಿಸಮ್', 'ವೆಂಟ್ರಿಕುಲಿಸಮ್', 'ವೆಂಟಲಿಸಮ್' ಎಂದವರಿದ್ದಾರೆ. 'ಎಂಟರ್‌ಟೈನ್‌ಮೆಂಟ್ ಕೇ ಲಿಯೇ ಕುಛ್ ಭೀ ಕರೇಗಾ' ದಫರಾಖಾನ್ ಅದನ್ನು 'ವೆಂಟ್ರಿಲೋಲೋಲೋಕ್ವಿಸಮ್' ಎಂದು ನುಡಿದು ಅದನ್ನು ಬಹಳ ಲೋ ಲೆವೆಲ್‌ಗೆ ಇಳಿಸಿದ್ದರು. ಇಂದುವಿನೊಡನೆ ನನ್ನನ್ನು ಕಂಡಿದ್ದ ಒಬ್ಬರು ನನ್ನತ್ತಲೇ ಪರೀಕ್ಷಾದೃಷ್ಟಿಯಿಂದ ನೋಡುತ್ತಿದ್ದರು. ಕುತೂಹಲವು ಕುದಿಮಟ್ಟವನ್ನು ತಲುಪಿದಾಗ ಬಳಿಸಾರಿ,

''ನೀವು... ನೀವೂ...'' ಎನ್ನಲಾರಂಭಿಸಿದರು.

ಬರೆವಣಿಗೆಯಿಂದಲೇ ಖ್ಯಾತನಾಗಿರಬಹುದೆಂದೆಣಿಸಿ ನಾನು ನನ್ನ ಪ್ರವರವನ್ನು ಬಿಚ್ಚುವುದಕ್ಕೆ ಮುಂಚೆಯೇ ಅವರಿಗೆ ನನ್ನ ಗುರುತು ಹತ್ತಿಬಿಟ್ಟಿತು, ಕೇಳಿಯೇಬಿಟ್ಟರು,

''ನೀವು ಡಿಂಕು ಅಲ್ವಾ?''

ಬಲೂಚಿಸ್ತಾನ; ಇದು ಕತೆಯಲ್ಲ, ವ್ಯಥೆ

• ಗುರುಪ್ರಸಾದ್ ಭಟ್ ಉಡುಪಿ

ಧುರಂಧರ್ 2 ಸಿನಿಮಾದಲ್ಲಿ ಎಸ್.ಪಿ. ಅಸ್ಲಮ್ 'ಏ ಬಲೂಚ್' ಎಂದು ಬಲೂಚಿಗಳನ್ನು ತಾತ್ಸಾರದಿಂದ ಅವಮಾನಿಸುವುದನ್ನೂ, ಐದು ಅಮಾಯಕ ಬಲೂಚಿ ವಿದ್ಯಾರ್ಥಿಗಳನ್ನು ಎಳೆದು ತಂದು ಅವರ ಎನ್‌ಕೌಂಟರ್ ಮಾಡುವ ದೃಶ್ಯವನ್ನೂ ಕಂಡು ಹೌಹಾರಿದ್ದೇವೆ. ಕಳೆದ ಐದಾರು ದಶಕಗಳಲ್ಲಿ ಬಲೂಚಿಗಳ ಮೇಲೆ ಪಾಕಿಸ್ತಾನದ ಪಠಾಣರು ಮತ್ತು ಪಂಜಾಬಿ ಸುನ್ನಿ ಮುಸ್ಲಿಮರು ನಡೆಸಿದ ದೌರ್ಜನ್ಯಕ್ಕೆ ಹೋಲಿಸಿದರೆ, ಧುರಂಧರ್ 2 ಸಿನಿಮಾದಲ್ಲಿ ತೋರಿಸಿದ್ದು ಕೇವಲ ಒಂದು ಸ್ಯಾಂಪಲ್. ಈ ಬಲೂಚಿಗಳು ಯಾರು? ಅವರ ಇತಿಹಾಸವೇನು?

ಮಹಾಭಾರತದ ಸಮಯದಲ್ಲಿ ಭದ್ರಗಣ ಕ್ಷತ್ರಿಯರು ವಾಸಿಸುತ್ತಿದ್ದ ಪ್ರಾಂತವನ್ನು 'ಪಾರದರಾಜ' (ಪಾರದ) ಎಂದೂ ಕರೆಯುತ್ತಿದ್ದರು ಮತ್ತು ಅದು ಗಾಂಧಾರದ ಅಧೀನವಾಗಿತ್ತು. ಸ್ವಾಭಾವಿಕವಾಗಿ ಅವರೆಲ್ಲರೂ ಕೌರವರಕ್ಕೆ ಜೋಡಿಸಿಕೆಟ್ಟರು. ಯುಧಿಷ್ಠಿರನ ಅಶ್ವಮೇಧ ಯಜ್ಞಕ್ಕಾಗಿ ಈ ಎಲ್ಲ ಪ್ರಾಂತಗಳನ್ನು ಅರ್ಜುನನು ಗೆದ್ದುಕೊಂಡನು.

'ಬಲೂಚ್' ಒಂದು ಸಂಸ್ಕೃತ ಶಬ್ದ 'ಬಲ+ಉಚ್ಚ', ಅಂದರೆ 'ಉಚ್ಚವರ್ಗೀಯ ಬಲವಂತ ಕ್ಷತ್ರಿಯರು' ಎಂದರ್ಥ. ಕ್ರಮೇಣ ಆಡುಭಾಷೆಯಲ್ಲಿ ಅದು 'ಬಲೂಚ್' ಎಂದಾಯಿತು. ಕೆಲವೊಂದು ವೇದಕಾಲದ ಗ್ರಂಥದಲ್ಲಿ ಈ ಕ್ಷೇತ್ರವನ್ನು 'ಬಲಾಕ್ಷ' ಎಂದೂ ಕರೆಯಲಾಗಿದೆ. ಬಲೂಚಿಸ್ತಾನವನ್ನು ಸಾವಿರಾರು ವರ್ಷಗಳಿಂದ ಉತ್ತಮ ಕ್ಷತ್ರಿಯ ಕುಲದ ಬಲಾಢ್ಯರ ನಾಡೆಂದೇ ಗುರುತಿಸಲಾಗುತ್ತಿತ್ತು. ಏಳನೆಯ ಶತಮಾನದಲ್ಲಿ ಚೀನಾದ ಪ್ರವಾಸಿಗ ಹುಯೆನ್‌ತ್ಸಾಂಗ್ ಕೂಡ ಇದರ ರಾಜಧಾನಿ 'ಶಂಭುರೀಶ್ವರ' ಎಂದೂ ಗುರುತಿಸಿ, ಇಲ್ಲೊಂದು ಬೃಹಸ್ಪತಿವನ ಮಂದಿರವಿತ್ತೆಂದು ಬರೆದಿದ್ದಾನೆ. ಗಾಂಧಾರವು ಇಸ್ಲಾಂ ದಾಳಿಗೆ ತತ್ತರಿಸಿ ಪತನವಾದ ನಂತರ, ಬಲೂಚ್ ಕೂಡ ಭಯೋತ್ಪಾದನೆಗೆ ತುತ್ತಾಗಿ ಸನಾತನ ಧರ್ಮ ನಶಿಸಿತು. ಇಸ್ಲಾಮಿಕ್ ಆಳ್ವಿಕೆ ಬಂದಿತು.

ಬಲೂಚ್ ಮತ್ತು ಮರಾಠರು

ಮೂರನೇ ಪಾಣಿಪತ್ ಯುದ್ಧದಲ್ಲಿ ಸೋತ ನಂತರ ಸುಮಾರು 30-50 ಸಾವಿರ ಮರಾಠಾ ಸೈನಿಕರನ್ನು ಮತ್ತವರ ಬಂಧು-ಬಾಂಧವರನ್ನು ಅಬ್ದಾಲಿ ಗುಲಾಮರನ್ನಾಗಿ ಸೆರೆಹಿಡಿದು 1500 ಕಿ.ಮೀ ದೂರದ ಬಲೂಚಿಸ್ತಾನ ಮೂಲಕ ಕಾಬೂಲಿಗೆ ಕೊಂಡೊಯ್ಯಲು ಪ್ರಯಾಣ ಬೆಳೆಸಿದ. ಸಾವಿರಾರು ಮರಾಠರು ಸರಿಯಾದ ಆಹಾರವಿಲ್ಲದೆ ಕಾಲ್ನಡಿಗೆಯಿಂದ ಬವಳಿ ಮಾರ್ಗದಲ್ಲಿಯೇ ಅಸುನೀಗಿದರು. ಅನೇಕ ಮರಾಠ ಸೈನಿಕರು ಹರ್ಯಾಣದ ಸುತ್ತುಮುತ್ತಲಿನ ಅರಣ್ಯಗಳಲ್ಲಿ ತಪ್ಪಿಸಿಕೊಂಡು ತಮ್ಮ ಜೀವ ರಕ್ಷಿಸಿಕೊಂಡರು. ಇಂದು ಕರ್ನಾಲ್, ರೋಹಟಕ್, ಭಿವಾನಿ ಪ್ರದೇಶದಲ್ಲಿ ಏಳರಿಂದ ಹತ್ತು ಲಕ್ಷ ಜನಸಂಖ್ಯೆಯಿರುವ ಅವರನ್ನು ರೋಡ ಅಥವಾ ರೋರ್ಮರಾಠರೆಂದು ಕರೆಯುತ್ತಾರೆ. ಉಳಿದುಳಿದ 25 ಸಾವಿರ ಮರಾಠರನ್ನು ಅಬ್ದಾಲಿ ಬಲೂಚಿಸ್ತಾನದ ದೇರಾ-ಬುಗ್ತಿ ಸುಲ್ತಾನ ಮೀರ್ನಾಸೀರ್ಖಾನನಿಗೆ ಸೈನಿಕ ಬೆಂಬಲ ನೀಡಿದ್ದಕ್ಕಾಗಿ ಉಡುಗೊರೆಯಾಗಿ ನೀಡಿದನು. ಈ ಮರಾಠರು ಮುಸ್ಲಿಮರಾಗಿ ಮತಾಂತರಗೊಂಡಿದ್ದರೂ ಇಂದಿಗೂ ತಮ್ಮತನವನ್ನು ಕಿಂಚಿತ್ ಕಾಪಾಡಿಕೊಂಡಿದ್ದಾರೆ. ತಾವೆಲ್ಲರೂ ಛತ್ರಪತಿ ಶಾಹು ಮಹಾರಾಜರ ವಂಶಜರೆಂದು ಹೆಮ್ಮೆಪಡುತ್ತಾರೆ. ಇಂದಿಗೂ ಬುಗ್ತಿ-ಮರಾಠರು ಬಲೂಚಿಸ್ತಾನದಲ್ಲಿ ಗಣೇಶೋತ್ಸವವನ್ನು ವೈಭವದಿಂದ ಆಚರಿಸಿಕೊಂಡು ಬಂದಿದ್ದಾರೆ. ಬುಗ್ತಿಗಳಲ್ಲಿ 'ಶಾಹು' ಎಂಬುದೊಂದು ಪ್ರತ್ಯೇಕ ಉಪಜಾತಿ.

ಸ್ವಾತಂತ್ರ್ಯ ಸಂಗ್ರಾಮ

ಬಲೂಚಿಗಳು ಮೀರ್ ಅಹ್ಮದ್ ಖಾನ್‌ಯಾರ ನೇತೃತ್ವದಲ್ಲಿ ತಮ್ಮದು ಸಂಪೂರ್ಣ ಸ್ವತಂತ್ರದೇಶವೆಂದು ಘೋಷಿಸಿಕೊಂಡರು. ಅವರ ಪರಿಕಲ್ಪನೆಯಲ್ಲಿ ಕಲಾತ್ರಾಜ್ಯ (ಬಲೂಚ್) ಹಾಗೂ ಸುತ್ತುಮುತ್ತಲಿನ ಖರನ್, ಲಾಸ್ಬೇಲ ಇತ್ಯಾದಿ ಪ್ರದೇಶಗಳನ್ನು ಒಳಗೊಂಡಿತ್ತು. ಬಲೂಚಿಸ್ತಾನದ ಸ್ವಾತಂತ್ರ್ಯ 226 ದಿನವಷ್ಟೇ ಬಾಳಿತು. ಅದರ ನಂತರ, ಬಲೂಚ್ ನಾಯಕ ಮೀರ್ ಯಾರ್‌ಖಾನನು ಜಿನ್ನಾನನ್ನು ತನ್ನ ದೇಶದ ಕಾನೂನು ಸಲಹೆಗಾರನನ್ನಾಗಿ ನಿಯುಕ್ತಿಮಾಡಿ ಕೆಟ್ಟನು. ಅದು ಕುರಿ ಹಿಂಡನ್ನು ಕಾಯಲು ತೋಳನಿಗೆ ಹೇಳಿದಂತಾಯಿತು. ಮೂಲತಃ ಜಿಹಾದಿ ಜಿನ್ನಾ ಎಂದಾದರೂ ಬಲೂಚಿಗಳ ಶುಭ ಕೋರಿಯಾನೇ? ಮಾರ್ಚ್ 26, 1948 ಪಾಕಿಸ್ತಾನಿ ಪಂಜಾಬಿ ಸುನ್ನಿ ಮತ್ತು ಪಠಾಣ ಮುಸ್ಲಿಂ ಸೈನ್ಯವು ಬಲೂಚಿಸ್ತಾನದಲ್ಲಿ ಸೈನ್ಯಕಾರ್ಯಾಚರಣೆ ನಡೆಸಿ, ಮಾರಣಹೋಮ ನಡೆಸಿತು. ಕಂಡವರನ್ನೆಲ್ಲ ಕೊಚ್ಚಿ ಹಾಕಲಾಯಿತು. ಅಳಿದವರೆಷ್ಟು, ಅಳಿಸಿಹೋದವರೆಷ್ಟು, ಉಳಿದವರೆಷ್ಟು ಎಂಬುದನ್ನು ಮೋಜಿನಲ್ಲಿದ್ದ ಜಿನ್ನಾ ಅಂತೂ ಲೆಕ್ಕವಿಡಲಿಲ್ಲ, ಬಂದೂಕಿಗೆ ಹೆದರಿ ಕಲಾತ್ ಪಾಕಿಸ್ತಾನದಲ್ಲಿ ತನ್ನ ಸ್ವತಂತ್ರದೇಶವನ್ನು ವಿಲೀನಗೊಳಿಸಲು ಸೇರ್ಪಡೆಯ ಒಪ್ಪಂದಕ್ಕೆ ಸಹಿಹಾಕಿದ. ಬಲೂಚಿಗಳ ಸಂಕಷ್ಟ ಎಣ್ಣೆಯ ಬಾಣಲಿಯಿಂದ ನೇರವಾಗಿ ಬೆಂಕಿಗೆ ಧುಮುಕಿದಂತಾಯಿತು.



ಕೈಬಿಟ್ಟ ನೆಹರೂ

ಮೀರ್ ಯಾರ್‌ಖಾನ್ ಕೊನೆ ಗಳಿಗೆಯಲ್ಲಿ ಒಂದು ದಾಳವನ್ನೆಸೆದ- ತಾನು ಬಲೂಚಿಸ್ತಾನವನ್ನು ಭಾರತ ದೇಶದೊಳಗೆ ವಿಲೀನಗೊಳಿಸಿದ್ದೇನೆ, ಪಾಕಿಸ್ತಾನದೊಳಗಲ್ಲ ಎಂದೂ ಹೇಳಿದ. ಆದರೆ, ನೆಹರೂ ಒಪ್ಪಿಕೊಳ್ಳಲಿಲ್ಲ, ಬಹುಶಃ ಪ್ರಿಯತಮೆ ಎಡ್ವಿನಾ ಬೇಡ ಎಂದಿರಬೇಕು. ಸರ್ದಾರ್ ವಲ್ಲಭಭಾಯ್ ಪಟೇಲ್ ಅಥವಾ ಮಂತ್ರಿಮಂಡಲದಲ್ಲಿ ಚರ್ಚಿಸದೇ ನನಗೆ ಬೇಡ ಎಂದುಬಿಟ್ಟರು. ಅದೇ ದಿನ ಸಂಜೆ ಭಾರತದ ರಾಜ್ಯ ಮಂತ್ರಾಲಯದ ಕಾರ್ಯದರ್ಶಿ ವಿ.ಪಿ. ಮೆನನ್ ಅವರು ಆಲ್ ಇಂಡಿಯಾ ರೇಡಿಯೋ ರೇಡಿಯೋ ಸಂದೇಶದಲ್ಲಿ ಬಲೂಚಿಸ್ತಾನದ ಖಾನ್ ಭಾರತದಲ್ಲಿ ತನ್ನ ದೇಶವನ್ನು ವಿಲೀನಗೊಳಿಸಬೇಕೆಂದು ನಿವೇದಿಸುತ್ತಿದ್ದಾನೆ. ಆದರೆ, ಪ್ರಧಾನಮಂತ್ರಿ ನೆಹರೂ ಅವರಿಗೆ ಇದರಲ್ಲಿ ಕಿಂಚಿತ್ತೂ ಅಭಿರುಚಿಯಿಲ್ಲ, ಬಲೂಚಿಸ್ತಾನ ಭಾರತದಲ್ಲಿ ಸೇರುವುದು ಬೇಡ. ಅವರ ಹಣೆಬರಹ ಅವರಿಗೆ ಎಂದುಬಿಟ್ಟರು! ಬಲೂಚಿಸ್ತಾನದ ಬೆನ್ನಿಗೆ ಬ್ರಿಟಿಷರು ಮೊದಲು ಚೂರಿ ಇರಿದರೆ, ನೆಹರೂ ಚುಚ್ಚಿದ್ದು ಎರಡನೆಯದು. ಅಲ್ಲಿಗೆ ಬಲೂಚಿಸ್ತಾನವನ್ನು ರಕ್ಷಿಸುವವರು, ಸಮರ್ಥಿಸುವವರು ಒಬ್ಬರೂ ಉಳಿಯಲಿಲ್ಲ, ಬಲೂಚ್ ಸುಲಭವಾಗಿ ಪಾಕಿಸ್ತಾನದ ವಶವಾಯಿತು. ಕಳೆದ 76 ವರ್ಷಗಳಲ್ಲಿ ಬಲೂಚಿಸ್ತಾನವು ಪುನಃ ಸ್ವಾತಂತ್ರ್ಯ ಪಡೆಯಲು ಹೋರಾಟ ಮಾಡುತ್ತಿದೆ. ಲಕ್ಷಾನುಗಟ್ಟಲೆ ಯುವಕ-ಯುವತಿಯರು ಬಲಿದಾನ ನೀಡಿದ್ದಾರೆ. ಅಕ್ಷರಶಃ ಜನರನ್ನು ರೇಗಿಸ್ತಾನದಲ್ಲಿ ಓಡಲು ಬಿಟ್ಟು, ಬೇಟೆನಾಯಿಗಳನ್ನು ಛೂಬಿಟ್ಟು, ಅವರನ್ನು ಬೆನ್ನಟ್ಟಿಕೊಂಡು ಹೊಡೆಯುವ ಮನೋರಂಜನಾ ಕ್ರೀಡೆ ಪಾಕಿಸ್ತಾನದ ಸುನ್ನಿ ಮುಸ್ಲಿಂ ಪಂಜಾಬಿ ಸೈನಿಕರ ಬಂದೂಕಿಗೆ ಶಿಕಾರಿಯಾಗಿದ್ದಾರೆ. 1947ರಲ್ಲಿ ಭಾರತಕ್ಕೆ ಸೇರುವ ಅವರ ನಿವೇದನೆಯನ್ನು ನೆಹರು ತಿರಸ್ಕರಿಸದಿದ್ದರೆ, ಬಹುಶಃ ಬಲೂಚಿಸ್ತಾನ ಇಂದು ಭಾರತಕ್ಕೆ ಸೇರಿದ ರಾಜ್ಯವಾಗಿರುತ್ತಿತ್ತು. ಇಂದಿಗೂ ಮರಾಠರು ಬಲೂಚಿಸ್ತಾನದ ಸ್ವಾತಂತ್ರ್ಯ ಸಮರದ ಮುಂಚೂಣಿಯಲ್ಲಿ ನಿಂತಿದ್ದು, ಅಪಾರ ಸಾವುನೋವಿನ ಹೊರತಾಗಿಯೂ ನಿರಂತರವಾಗಿ ಹೋರಾಡುತ್ತಿದ್ದಾರೆ. ಪಾಕಿಸ್ತಾನದ ಸೈನ್ಯಕ್ಕೆ ತೀವ್ರ ಪ್ರತಿರೋಧವನ್ನು ನೀಡುತ್ತಲೇ ಬಂದಿದ್ದು, ಅವರಿಗೆ ತಲೆನೋವಾಗಿದ್ದಾರೆ.

ಎರಡೂವರೆ ಶತಮಾನಗಳ ಹಿಂದೆ ಬಲವಂತದಿಂದ ಮುಸ್ಲಿಮರಾಗಬೇಕಾದರೂ ಮರಾಠರು ತಮ್ಮ ಧರ್ಮದ ಕೆಲವೊಂದು ಪ್ರಮುಖ ಕುರುಹುಗಳನ್ನು ಆಚರಣೆಯ ಮೂಲಕ ಕಾಯ್ದುಕೊಂಡಿದ್ದಾರೆ. ಅವರು ಈಗಲೂ ಮದುವೆಯ ಸಮಯದಲ್ಲಿ ವಧುವರರಿಗೆ ಅರಿಸಿನ ಅಭ್ಯಂಜನದ ರಿವಾಜು, ಸೆರಗು-ಶಲ್ಯಕ್ಕೆ ಗಂಟುಹಾಕುವುದು, ಮಾಂಗಲ್ಯ ತೊಡಿಸುವುದು, ಸಪ್ತಪದಿ, ನೂತನ ವಧು ಗೃಹಪ್ರವೇಶಿಸುವ ಮುನ್ನ ಹೊಸ್ತಿಲ ಮೇಲೆ ಅಕ್ಕಿಯ ಸೇರನ್ನಿಟ್ಟು ಅದನ್ನು ಬಲಗಾಲಿನಿಂದ ಮೆತ್ತನೆ ಒಳಗೆ ನೂಕಿ ಪ್ರವೇಶಿಸುವುದು ಇತ್ಯಾದಿ ಮರಾಠ ಪದ್ಧತಿಗಳನ್ನು ನಿಯಮಿತವಾಗಿ ಆಚರಿಸುವ ಮೂಲಕ ಕಾಪಾಡಿಕೊಂಡಿದ್ದಾರೆ. ಶಾಹು-ಬುಗ್ತಿ ಮರಾಠರು ತಮ್ಮ ತಾಯಿಯನ್ನು 'ಆಯಿ' ಎಂದೇ ಕರೆಯುತ್ತಾರೆ. ಗೋದಿ, ಗೋದಾ, ಕೋಮಲ್, ಕಮ್ಲಾ, ಜೀಜಾ, ಸಯೀ ಇತ್ಯಾದಿ ಹೆಣ್ಣುಮಕ್ಕಳ ಹೆಸರುಗಳು ಮರಾಠ ಸೊಗಡನ್ನು ಬೀರುತ್ತವೆ. ಬಲೂಚಿಸ್ತಾನದ ಭಾಷೆಯಲ್ಲಿಯೂ ಮರಾಠಿ ಭಾಷೆಯ ಪ್ರಭಾವ ಸಾಕಷ್ಟಿದೆ.

ಬಲೂಚಿಸ್ತಾನದ ಸ್ವಾತಂತ್ರ್ಯಹೋರಾಟದಲ್ಲಿ ಅಗ್ರೇಸರರಾಗಿರುವ ಬುಗ್ತಿ ವಂಶಜರು ಕಟ್ಟಿದ 'ದಿ ಮರ್ಹಟ್ಟಕ್ವಾಮೀ ಇತ್ತೇಹಾದ್ ಪಾಕಿಸ್ತಾನ್' ಎಂಬ ಸಂಸ್ಥೆಯು ಅಲ್ಲಿಯ ಅಧಿಕೃತ ಸೈನ್ಯವನ್ನೇ ಸೋಲಿಸುವಷ್ಟು ಬಲಶಾಲಿಗಳಾಗಿ ಸಶಸ್ತ್ರ ಪ್ರತಿರೋಧವನ್ನು ನೀಡುತ್ತಿದೆ. ಇಲ್ಲಿ 'ಮರ್ಹಟ್ಟ' ಅಂದರೆ 'ಮರಾಠಾ' ಎಂದರ್ಥ. ಬುಗ್ತಿ-ಮರಾಠ ಬುಡಕಟ್ಟು ಜನರು ತಮ್ಮ ಕ್ಷತ್ರಿಯ ಮೂಲ ಮತ್ತು ಇತಿಹಾಸವನ್ನು ಮರೆತಿಲ್ಲ, ನೂರಾರು ವರ್ಷಗಳಿಂದಲೂ ತಮ್ಮ ಪಾರಂಪರಿಕ ಸಂಸ್ಕೃತಿ ಮತ್ತು ಹಬ್ಬಹರಿದಿನಗಳ ಆಚರಣೆಯನ್ನು ಮರೆತಿಲ್ಲ. ಬುಗ್ತಿ-ಮರಾಠ ಮೂಲದ ಜನರು ಸೈನ್ಯ, ಶಿಕ್ಷಣ, ರಾಜಕೀಯ, ಕೃಷಿ ಕ್ಷೇತ್ರಗಳಲ್ಲಿ ತಮ್ಮದೇ ಛಾಪನ್ನು ಮೂಡಿಸಿದ್ದಾರೆ. ಅನೇಕ ಮರಾಠಿ ಶಬ್ದಗಳು, ಹೆಸರುಗಳು ಬಲೂಚಿಸ್ತಾನದ ಬುಗ್ತಿಯವರ ಭಾಷೆಯಲ್ಲಿ ಸಾಮರಸ್ಯದಿಂದ ವಿಲೀನಗೊಂಡಿವೆ.

ಇಂದಿಗೂ ಅವರು ಅನುಸರಿಸುತ್ತಿರುವುದು ಶಿವಾಜಿ ಮಹಾರಾಜರ 'ಗನೀಮಿಕಾವ' ಅಂದರೆ ಹೊಂಚುಹಾಕಿ ಕಾಯ್ದುಕೊಂಡಿದ್ದು ಹಠಾತ್ ಆಗಿ ದಾಳಿಮಾಡಿ ವೈರಿಯನ್ನು ಚಕಿತಗೊಳಿಸುವ ಗೆರಿಲ್ಲಾ ಯುದ್ಧನೀತಿ. ಬಲೂಚಿಸ್ತಾನದಲ್ಲಿ ಮೂರು ಲಕ್ಷ ಬಲಾಢ್ಯ ಬುಗ್ತಿ ಮತ್ತು ಮರ್ಹಟ್ಟ ಸ್ವಾತಂತ್ರ್ಯ ಹೋರಾಟಗಾರರಿಗೆ ಆದಷ್ಟು ಬೇಗನೆ ಪಾಕಿಸ್ತಾನದಿಂದ ವಿಮೋಚನೆಯಾಗಲಿ ಎಂಬುದೇ ಭಾರತೀಯರ ಆಶಯ.

ಮೌಲ್ಯ ತುಂಬುವ ಕಾರ್ಯಕರ್ತ

ಪತ್ರ ಮಿತ್ರ

ಹೊಸದಿಗಂತದಲ್ಲಿ ಎಪ್ರಿಲ್ 3ರಂದು ಪ್ರಕಟವಾದ "ಕಾರ್ಯಕರ್ತ? ಆತ ಬಂಗಾಳದಲ್ಲಿದ್ದಾನೆ!" ಲೇಖನವು ಕೇವಲ ರಾಜಕೀಯ ವಿಶ್ಲೇಷಣೆಯಲ್ಲ, ಬದಲಾಗಿ ಕಾರ್ಯಕರ್ತ ಎಂಬ ಪರಿಕಲ್ಪನೆಯ ಮರುಶೋಧನೆಯಂತಿದೆ. ಇಂದಿನ ರಾಜಕಾರಣದಲ್ಲಿ ಕಾರ್ಯಕರ್ತ ಎಂದರೆ ಕೇವಲ ಬಾವುಟ ಹಿಡಿಯುವವನು ಅಥವಾ ಸೌಲಭ್ಯಗಳನ್ನು ಆಶಿಸುವವನು ಎಂಬ ಸಾರ್ವತ್ರಿಕ ಲಕ್ಷಣಗಳ ನಡುವೆ, ಬಂಗಾಳದ ನೆಲದ ವಾಸ್ತವವನ್ನು ಬಳಸಿಕೊಂಡು ನೈಜ ಕಾರ್ಯಕರ್ತನ ವ್ಯಾಖ್ಯಾನವನ್ನು ಕಟ್ಟಿಕೊಡಲಾಗಿದೆ. ದೀನದಯಾಳ್ ಉಪಾಧ್ಯಾಯ ಮತ್ತು ಶ್ಯಾಮಪ್ರಸಾದ್ ಮುಖರ್ಜಿಯವರ ಆದರ್ಶಗಳನ್ನು ಪ್ರಸ್ತಾಪಿಸುವ ಮೂಲಕ ಲೇಖನವು ಬಲವಾದ ಸೈದ್ಧಾಂತಿಕ ಚೌಕಟ್ಟನ್ನು ಹೊಂದಿದೆ.

ಐಪಿಎಲ್ ಟಿಕೆಟ್ ಕೇಳುವ ಅಥವಾ ಅಧಿಕಾರಕ್ಕಾಗಿ ಬೆನ್ನುಬೀಳುವ ಇಂದಿನ ಕಾಲದ ಪುಡಾರಿ ಸಂಸ್ಕೃತಿಯನ್ನು ಪ್ರಶ್ನಿಸುವ ಮೂಲಕ ಲೇಖನವು ನೈತಿಕ ಎಚ್ಚರಿಕೆಯನ್ನು ನೀಡುತ್ತದೆ. ಪ್ರಾಣದ ಭಯದ ನಡುವೆಯೂ ಬಂಗಾಳದ ಕಾರ್ಯಕರ್ತ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ 20 ಗಂಟೆ ಪ್ರಯಾಣಿಸಿ ನಾಯಕನನ್ನು ನೋಡಲು ಬರುವ ಚಿತ್ರಣ ಓದುಗರ ಕಣ್ಣಾಲಿಗಳನ್ನು ತೇವಗೊಳಿಸುವಂತಿದೆ.


ಈ ಲೇಖನವು ರಾಜಕೀಯ ಪಕ್ಷದ ಕಾರ್ಯಕರ್ತರಿಗೆ ಮಾತ್ರವಲ್ಲದೆ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಂಬುವ ಪ್ರತಿಯೊಬ್ಬರಿಗೂ ತಲುಪಬೇಕಾದ ಬರಹವಾಗಿದೆ. ಇದು ರಾಜಕೀಯ ಅಂಧಾಭಿಮಾನಕ್ಕಿಂತ ಹೆಚ್ಚಾಗಿ ನೆಲದ ಸತ್ಯ ಮತ್ತು ಸಿದ್ಧಾಂತದ ಬದ್ಧತೆಯನ್ನು ಎತ್ತಿ ಹಿಡಿಯುತ್ತದೆ.

-ಶ್ರೀನಿವಾಸ್ ಹಳಗತ್ತಿ, ಮುಧೋಳ

ಝೂಂಬಿ ಡ್ರಗ್ : ಇದು ಹೊಸ ಕಾಲದ ಹೊಸ ಭೀತಿ

ಇತ್ತೀಚೆಗೆ ಚಂಡೀಗಢದ ವಸತಿ ಪ್ರದೇಶವೊಂದರಲ್ಲಿ ಬೆನ್ನಿನ ಮೇಲೆ ಡೆಲಿವರಿ ಬ್ಯಾಗನ್ನು ಹೊತ್ತ ಬ್ಲಿಂಕಿಟ್ ಡೆಲಿವರಿ ಬಾಯ್ ಒಬ್ಬ ಸುಮಾರು 2 ಗಂಟೆಗಳ ಕಾಲ ರಸ್ತೆಯಲ್ಲಿ ಯಾವುದೇ ಚಲನೆಯಿಲ್ಲದೆ, ತನ್ನ ಸುತ್ತಲ ಪರಿಸರದ ಬಗ್ಗೆ ಅರಿವಿಲ್ಲದೆ ಅರೆಪ್ರಜ್ಞಾವಸ್ಥೆಯ ಸ್ಥಿತಿಯಲ್ಲಿ ನಿಂತಿರುವ ವಿಚಿತ್ರ ಘಟನೆಯ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿರುವುದನ್ನು ಗಮನಿಸಿದ್ದೇವೆ. ಈ ವೀಡಿಯೋದಲ್ಲಿ ಅವನ ಬಾಯಿಯಲ್ಲಿ ಬೀಡಿಯಿರುವುದು, ಕಣ್ಣುಗಳು ನೆಟ್ಟಗಿರುವುದನ್ನು ಗಮನಿಸಬಹುದಾಗಿದೆ. ಇದು ಬಹುಶಃ ಡ್ರಗ್ ಸೇವನೆಯ ಪರಿಣಾಮವಾಗಿದ್ದು, ಅಮೆರಿಕಾದಲ್ಲಿ ಕುಖ್ಯಾತಿ ಪಡೆದಿರುವ ಝೂಂಬಿ ಡ್ರಗ್ ಭಾರತಕ್ಕೂ ಬಂದಿದೆಯಾ ಎಂದು ಆತಂಕವನ್ನೂ ಸೃಷ್ಟಿಸಿದೆ. ಇದು ಹೌದಾದಲ್ಲಿ, ರಸ್ತೆಯ ಮಧ್ಯೆ ಅಸ್ಥಿರವಾಗಿ ನಡೆಯುತ್ತಿರುವ ತನ್ನನ್ನು ತಾನೇ ನಿಯಂತ್ರಿಸಿಕೊಳ್ಳಲು ಅಸಮರ್ಥನಾಗಿರುವ ಆ ಯುವಕನ ವರ್ತನೆ ಭೀತಿ ಹುಟ್ಟಿಸುವುದು ಸಹಜ.

ಏನಿದು ಝೂಂಬಿ ಡ್ರಗ್? ಪ್ರಾಣಿಗಳಿಗೆ ಬಳಸುವ ಕ್ಸೈಲಜಿನ್ ಎಂಬ ಟ್ರ್ಯಾಂಕ್ವಿಲೈಜರ್ ಅನ್ನು ಝೂಂಬಿ ಡ್ರಗ್ ಎಂದು ಹೇಳಲಾಗುತ್ತದೆ. ಪ್ರಾಣಿಗಳ ನೋವಿಗೆ ಪರಿಹಾರ ನೀಡಲು ಉತ್ಪಾದಿಸಲಾದ ಇದು ಒಂದು ಬಗೆಯ ಶಾಂತಕ(sedative) ವಾಗಿದ್ದು, ಮಾನವರಿಗೆ ಬಳಸಲು ಅನುಮೋದಿತವಾಗಿಲ್ಲ. ಇದನ್ನು ಫೆಂಟನಿಲ್, ಮಾರ್ಫಿನ್ ಹಾಗೂ ಹೆರಾಯಿನ್‌ನಂತಹ ಒಪಿಯಾಯ್ಡ್‌ಗಳಲ್ಲಿ ಬೆರೆಸಲ್ಪಡುತ್ತದೆ. ಇದನ್ನು ಸೇವಿಸಿದವರು ಅರಿವಿಲ್ಲದ ಸ್ಥಿತಿ ತಲುಪಿ ದೇಹದ ನಿಯಂತ್ರಣ ಕಳೆದುಕೊಂಡಂತೆ ಕಾಣುವುದರಿಂದಲೇ 'ಝೂಂಬಿ ಡ್ರಗ್' ಎಂಬ ಹೆಸರು ಬಂದಿದೆ. ಇಂತಹ ಪ್ರಕರಣಗಳು ಹೆಚ್ಚಾಗಿ ಅಮೆರಿಕಾದಲ್ಲಿ ಕಂಡುಬರುತ್ತವೆ.



ಈ ಮದ್ದು ದೇಹದ ಮೇಲೆ ಬೀರುವ ಪರಿಣಾಮಗಳು ಅತ್ಯಂತ ಗಂಭೀರ. ಇದು ನರಮಂಡಲವನ್ನು ಮಂದಗೊಳಿಸಿ, ಉಸಿರಾಟದ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಕೆಲವೊಮ್ಮೆ ಚರ್ಮದಲ್ಲಿ ಗಾಯಗಳು ಉಂಟಾಗಿ ಅವು ಗಂಭೀರ ಸೋಂಕಿಗೆ ಕಾರಣವಾಗಬಹುದು. ದೀರ್ಘಕಾಲ ಬಳಸಿದರೆ ಅಂಗಾಂಗ ವೈಫಲ್ಯಕ್ಕೂ ದಾರಿ ಮಾಡಿಕೊಡಬಹುದು. ಮುಖ್ಯವಾಗಿ ಇದು ಓಪಿಯಾಯ್ಡ್ ಅಲ್ಲದಿರುವುದರಿಂದ ಕ್ಸೈಲಜಿನ್ ಮಿಶ್ರಿತ ಮದ್ದು ಸೇವಿಸಿದ ವ್ಯಕ್ತಿಯನ್ನು ಸಾಮಾನ್ಯ ನಾರ್ಕೋಟಿಕ್ ಔಷಧಗಳಿಂದ ತಕ್ಷಣ ರಕ್ಷಿಸುವುದು ಕಷ್ಟವಾಗಬಹುದು.

ಇತ್ತೀಚಿನ ವರ್ಷಗಳಲ್ಲಿ ಜಾಗತಿಕವಾಗಿ ಡ್ರಗ್ಸ್ ಸೇವನೆಯ ರೂಪಗಳು ಬದಲಾಗುತ್ತಿದ್ದು, ಹೊಸ ರಾಸಾಯನಿಕ ಸಂಯೋಜನೆಗಳು ಕಾಣಿಸಿಕೊಳ್ಳುತ್ತಿವೆ. ಡ್ರಗ್ಸ್ ಸೇವನೆಗೆ ಬಲಿಯಾಗುತ್ತಿರುವ ಯುವ ಸಮೂಹದ ಸಮಸ್ಯೆಯ ಮೂಲವನ್ನು ಗಮನಿಸಿದರೆ ಯುವಜನರಲ್ಲಿ ಹೆಚ್ಚುತ್ತಿರುವ ಒತ್ತಡ, ಉದ್ಯೋಗದ ಅನಿಶ್ಚಿತತೆ, ಮಾನಸಿಕ ಸಮಸ್ಯೆಗಳು ಮತ್ತು ಸಾಮಾಜಿಕ ಬೆಂಬಲದ ಕೊರತೆಗಳು ಪ್ರಮುಖ ಕಾರಣಗಳಾಗಿವೆ. ಡ್ರಗ್ಸ್ ಸೇವನೆ ಕೆಲವರಿಗೆ ತಾತ್ಕಾಲಿಕ ನಿರಾಳತೆಯನ್ನು ನೀಡಬಹುದು. ಆದರೆ ಅದು ದೀರ್ಘಕಾಲದಲ್ಲಿ ಜೀವಕ್ಕೆ ಕುತ್ತನ್ನು ಉಂಟುಮಾಡುತ್ತದೆ. ಅದರಲ್ಲೂ, 'ಝೂಂಬಿ ಡ್ರಗ್'ನಂತಹ ಅಪಾಯಕಾರಿ ಪದಾರ್ಥಗಳು ವ್ಯಕ್ತಿಯ ಜೀವನವನ್ನೇ ಸಂಪೂರ್ಣವಾಗಿ ಹಾಳು ಮಾಡಬಹುದು.

ಆದುದರಿಂದ, ಸರ್ಕಾರ ಈ ಬಗ್ಗೆ ಗಮನ ಹರಿಸಿ ಸೂಕ್ತ ಕಾನೂನು ಜಾರಿಗೊಳಿಸಬೇಕಾದ ಅವಶ್ಯಕತೆಯಿದೆ. ಹೊಸ ಹೊಸ ಬಗೆಯ ಡ್ರಗ್ಸ್ ಸಾಗಾಣಿಕೆಯನ್ನು ತಡೆಯಲು ಗಡಿ ನಿಯಂತ್ರಣ, ಗುಪ್ತಚರ ಮಾಹಿತಿ ವ್ಯವಸ್ಥೆ ಮತ್ತು ಕಠಿಣ ಕ್ರಮಗಳು ಅಗತ್ಯ. ಒಟ್ಟಿನಲ್ಲಿ, ಚಂಡೀಗಢದ ಈ ಘಟನೆ ನಮಗೆ ಒಂದು ಎಚ್ಚರಿಕೆಯ ಘಂಟೆಯಾಗಿದೆ. 'ಝೂಂಬಿ ಡ್ರಗ್'ನಂತಹ ಅಪಾಯಕಾರಿ ಪದಾರ್ಥಗಳು ನಮ್ಮ ಸಮಾಜಕ್ಕೆ ಪ್ರವೇಶಿಸದಂತೆ ತಡೆಯಲು ಜಾಗೃತಿ, ಕಠಿಣ ಕಾನೂನು ಕ್ರಮಗಳು ಮತ್ತು ಮಾನಸಿಕ ಆರೋಗ್ಯದ ಕಡೆ ಹೆಚ್ಚಿನ ಗಮನ ಅಗತ್ಯ.

-ಡಾ. ಮೈತ್ರಿ ಭಟ್, ವಿಟ್ಲ

ಕಿರುಸುದ್ದಿ

ಪೋಷಣೆಯಿಂದ ಬಾಳೆಯಲ್ಲಿ ಇಳುವರಿ

• **ಕೋಲಾರ:** ಬಾಳೆ ಬೆಳೆಯಲ್ಲಿ ಗೊನೆ ಪೋಷಣೆ ಮಾಡುವುದರಿಂದ ಗೊನೆಯ ತೂಕ ಹೆಚ್ಚಾಗುವುದರೊಂದಿಗೆ ಬಾಳೆ ಬೆಳೆಗಾರರು ಹೆಚ್ಚಿನ ಇಳುವರಿ ಮತ್ತು ಆದಾಯಗಳಿಸಬಹುದು ಎಂದು ತೋಟಗಾರಿಕಾ ಮಹಾವಿದ್ಯಾಲಯ ಕೋಲಾರದ ಹಣ್ಣು ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ನಾಗರಾಜ ಕೆ. ಎಸ್. ಅಭಿಪ್ರಾಯಪಟ್ಟರು. ಇಲ್ಲಿನ ತೋಟಗಾರಿಕಾ ಮಹಾವಿದ್ಯಾಲಯದ ವತಿಯಿಂದ ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ ತಾಲ್ಲೂಕಿನ ಅರಹಳ್ಳಿ ಗ್ರಾಮದಲ್ಲಿ ಆಯೋಜಿಸಲಾಗಿರುವ ಗ್ರಾಮೀಣ ತೋಟಗಾರಿಕಾ ಕಾರ್ಯಾನುಭವ ಶಿಬಿರದಲ್ಲಿ ಹಮ್ಮಿಕೊಳ್ಳಲಾದ ಬಾಳೆ ಬೆಳೆಯಲ್ಲಿ ಗೊನೆ ಪೋಷಣೆ ಪದ್ಧತಿ ಪ್ರಾತ್ಯಕ್ಷಿಕೆ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿ, ಬಾಳೆಗೊನೆಯ ಕೊನೆಯ ಕಾಯಿಗಳು ಕಚ್ಚಿದ ನಂತರ ಗಂಡು ಹೂವಿನ ಭಾಗ (ಮೂತಿ) ತೆಗೆದು, ಆ ಭಾಗದಲ್ಲಿ ಸೆಗಣಿ, ಯೂರಿಯಾ ಮತ್ತು ಸಲ್ಫೇಟ್ ಆಫ್ ಪೊಟ್ಯಾಷ್ ಮಿಶ್ರಣವನ್ನು ಬಳಸಿ ಕಟ್ಟಿದ್ದಲ್ಲಿ ಕಾಯಿಗಳ ಗಾತ್ರ, ಗೊನೆಯ ತೂಕ, ಗುಣಮಟ್ಟ ಹೆಚ್ಚಾಗುವುದರ ಜೊತೆಗೆ ಗೊನೆಯು ಬೇಗನೆ ಪಕ್ವವಾಗುವುದು ಮತ್ತು ಹೆಚ್ಚಿನ ಆದಾಯ ತರುವುದು ಎಂದರು. ತೋಟಗಾರಿಕಾ ಮಹಾವಿದ್ಯಾಲಯ, ಕೋಲಾರದ ಸಸ್ಯರೋಗ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಸದಾನಂದ ಮುತ್ರಿಫ್ ರವರು ಮಾತನಾಡಿ, ಬಾಳೆ ಬೆಳೆಯನ್ನು ಕಲ್ಪತರು ಎಂದು ಕರೆಯಲಾಗುತ್ತಿದೆ. ನೀರಾವರಿ ಅನುಕೂಲತೆ ಇದ್ದರೆ ಈ ಬೆಳೆ ಬೆಳೆದು ಅಧಿಕ ಲಾಭಗಳಿಸಬಹುದು ಎಂದರು. ಬಾಳೆ ಬೆಳೆಯ ಇಳುವರಿ ಹೆಚ್ಚಿಸಲು ಹಲವು ತಾಂತ್ರಿಕತೆಗಳು ಲಭ್ಯವಿದ್ದು, ಈ ನಿಟ್ಟಿನಲ್ಲಿ ಬಾಳೆ ಬೆಳೆಗಾರರು ತೋಟಗಾರಿಕಾ ಮಹಾವಿದ್ಯಾಲಯ ಅಥವಾ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವಿಜ್ಞಾನಿಗಳಿಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ ಎಂದರು. ಕೋಲಾರದ ತೋಟಗಾರಿಕಾ ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳು ಹಾಗೂ ಅರಹಳ್ಳಿ ಗ್ರಾಮದ ಬಾಳೆ ಬೆಳೆಗಾರರು ಹಾಗೂ ರೈತರು ಭಾಗವಹಿಸಿದ್ದರು.

ಬಾಬು ಜಗಜೀವನ ರಾಂ ಪ್ರತಿಮೆ ಸ್ಥಾಪನೆಗೆ ಮನವಿ

• **ಕೋಲಾರ:** ಹಸಿರು ಕ್ರಾಂತಿಯ ಹರಿಕಾರ ಭಾರತದ ಮಾಜಿ ಉಪ ಪ್ರಧಾನಮಂತ್ರಿ ಡಾ. ಜಗಜೀವನ ರಾಮ್‌ರವರ ಪ್ರತಿಮೆ ನಿರ್ಮಾಣಕ್ಕಾಗಿ ಗುದ್ದಲಿ ಪೂಜೆ ನೆರವೇರಿಸುವ ಮೂಲಕ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲು ಜಿಲ್ಲಾಡಳಿತ ಮುಂದಾಗಬೇಕೆಂದು ಕರ್ನಾಟಕ ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ಅಪರ ಜಿಲ್ಲಾಧಿಕಾರಿ ಎಸ್.ಎಂ.ಮಂಗಳ ಅವರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಕರ್ನಾಟಕ ಮಾದಿಗ ದಂಡೋರ ರಾಜ್ಯ ಮಾಜಿ ಉಪಾಧ್ಯಕ್ಷ ಸಾಹುಕಾರ್ ಶಂಕರಪ್ಪ ಮಾತನಾಡಿ, ದೇಶದ ದೀನ ದಲಿತರ ಉದ್ಧಾರಕ್ಕಾಗಿ ಶ್ರಮಿಸಿದ, ಆಹಾರ ಭದ್ರತೆ ಒದಗಿಸಿದ ಮಾಜಿ ಉಪ ಪ್ರಧಾನಿ ಬಾಬು ಜಗಜೀವನ ರಾಮ್ ರವರಿಗೆ ಗೌರವ ಸಲ್ಲಿಸುತ್ತಿರುವುದು ಸ್ವಾಗತಾರ್ಹ ಸಂಗತಿಯಾಗಿದೆ. ಹತ್ತಾರು ವರ್ಷಗಳಂತೆ ಈ ವರ್ಷವೂ ಕೇವಲ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವುದೇ ಅಲ್ಲದೆ ಅವರ ಪೂರ್ಣ ಪ್ರಮಾಣದ ನಿಂತಿರುವ ಭಂಗಿಯ ಪ್ರತಿಮೆಯನ್ನು ಸ್ಥಾಪಿಸುವ ಸಂಬಂಧ ರಾಜ್ಯದ ಶಕ್ತಿ ಕೇಂದ್ರವಾದ ವಿಧಾನಸೌಧದ ಮುಂದೆ ನಿರ್ಮಿಸಿದಂತೆ ಕೋಲಾರ ಜಿಲ್ಲೆಯ ಶಕ್ತಿ ಕೇಂದ್ರವಾದ ಜಿಲ್ಲಾ ಆಡಳಿತ ಭವನ ಮುಂದೆ ಶ್ರೀಯುತರ ಕಂಚಿನ ಪ್ರತಿಮೆ ನಿರ್ಮಿಸುವ ಸಂಬಂಧ ಏ. 5ರಂದು ಬಾಬು ಜಗಜೀವನ ರಾಮ್ ರವರ ಜನ್ಮ ದಿನಾಚರಣೆಗೆ ಅರ್ಥ ಕಲ್ಪಿಸುವಂತೆ ಗುದ್ದಲಿ ಪೂಜೆ ನೆರವೇರಿಸಬೇಕೆಂದು ಒತ್ತಾಯಿಸಿದರು. ನಿಯೋಗದಲ್ಲಿ ಜಾಂಭವ ಯುವಸೇನೆ ಶ್ರೀನಿವಾಸ್, ರಾಜೇಶ್, ವೆಂಕಟಸ್ವಾಮಿ, ನಾಗೇಶ್, ಮಧು ಎನ್ ಉಪಸ್ಥಿತರಿದ್ದರು.

ಗಣತಿ ಕಾರ್ಯದಿಂದ ಉಪನ್ಯಾಸಕರ ಬಿಡುಗಡೆಗೊಳಿಸಿ

• **ಬೆಂಗಳೂರು:** ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರನ್ನು ಜನಗಣತಿ-2027ರ ಕಾರ್ಯದಿಂದ ಬಿಡುಗಡೆ ಮಾಡುವಂತೆ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘವು ಶಾಲಾ ಶಿಕ್ಷಣ ಇಲಾಖೆ ಮತ್ತು ಜಿಬಿಎಗೆ ಮನವಿ ಸಲ್ಲಿಸಿದೆ. ಏ.1 ರಿಂದ 20ರವರೆಗೆ ದ್ವಿತೀಯ ಪಿಯು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳು ನಿಗದಿಯಾಗಿವೆ. ಏ. 10 ರಿಂದ ಮೇ 6 ರವರೆಗೆ ರಾಷ್ಟ್ರೀಯ ಮುಕ್ತ ಶಾಲಾ ಶಿಕ್ಷಣ ಸಂಸ್ಥೆಯ ಪರೀಕ್ಷೆಗಳಿವೆ, ಏ. 23 ಮತ್ತು 24 ರಂದು ಸಿಇಟಿ ಪರೀಕ್ಷೆಯಿದೆ, ಏ. 25 ರಿಂದ ಮೇ 8 ರವರೆಗೆ ದ್ವಿತೀಯ ಪಿಯು ಪರೀಕ್ಷೆ-2 ನಿಗದಿಯಾಗಿದ್ದು, ಮೇ 3 ರಂದು ನೀಟ್ ಪರೀಕ್ಷೆ ನಡೆಯಲಿದೆ. ಏ.7ಕ್ಕೆ ದ್ವಿತೀಯ ಪಿಯು ಫಲಿತಾಂಶ ಪ್ರಕಟವಾದರೆ, ನಂತರ ಆರಂಭವಾಗುವ ಅಂಕಗಳ ಮರು ಎಣಿಕೆ ಮತ್ತು ಮರು ಮೌಲ್ಯಮಾಪನ ಪ್ರಕ್ರಿಯೆಗಳಿವೆ. ಉಪನ್ಯಾಸಕರನ್ನು ಜನಗಣತಿ ಕರ್ತವ್ಯದಿಂದ ಮುಕ್ತಗೊಳಿಸಬೇಕೆಂದು ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್. ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಮಂಡ್ಯದಲ್ಲೂ ಆಟೋ ಗ್ಯಾಸ್ ಖಾಲಿ | ಸರದಿಯಲ್ಲಿ ನಿಂತ ಆಟೋಗಳು | ತ್ರಿಚಕ್ರ ವಾಹನಗಳ ಸಂಚಾರ ವಿರಳ

ಆಟೋ ಚಾಲಕರ ಸ್ಥಿತಿ ಅಯೋಮಯ

• **ಮಂಡ್ಯ:** ಪೆಟ್ರೋಲ್ ವಾಹನಗಳದ್ದು ಒಂದು ಬಗೆಯ ಸಂಕಟವಾದರೆ, ಗ್ಯಾಸ್ ಆಟೋಗಳು ಗ್ಯಾಸ್ ಬಂಕ್‌ಗಳ ಮುಂದೆ ಸರದಿಯಲ್ಲಿ ನಿಂತಿದ್ದರೂ ಕೂಡ ಅನಿಲದ ಕೊರತೆಯಿಂದಾಗಿ ಆಟೋಗಳ ಸಂಚಾರ ವಿರಳವಾಗಿದೆ.

ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ದೇಶದ ಮೇಲೆ ಸಾಕಷ್ಟು ಪರಿಣಾಮ ಬೀರಿದೆ. ಅದರಂತೆ ಮಂಡ್ಯ ನಗರದಲ್ಲೂ ಡೀಸೆಲ್, ಪೆಟ್ರೋಲ್ ಮತ್ತು ಗ್ಯಾಸ್ ಅವಲಂಬಿತ ವಾಹನಗಳ ಮೇಲೆ ಬೀರಿದೆ. ಇದರಿಂದಾಗಿ ನಿತ್ಯವೂ ಗ್ಯಾಸ್ ಮತ್ತು ಪೆಟ್ರೋಲ್ ಬಂಕ್ ಮುಂದೆ ಸರದಿಯಲ್ಲಿ ನಿಂತಲ್ಲೇ ನಿಂತಿರುವುದು ಕಂಡು ಬಂದಿದೆ.

ಶನಿವಾರ ಬೆಳಗ್ಗೆಯಿಂದ ಗ್ಯಾಸ್ ಖಾಲಿಯಾಗಿದೆಂದು ಬಂಕ್‌ಗಳ ಮುಂದೆ ಬೋರ್ಡ್ ಹಾಕಲಾಗಿದೆ. ಇದರಿಂದಾಗಿ ವಾಹನಗಳ ಸಂಚಾರ ವಿರಳವಾಗಿದೆ. ಆಟೋ ಮತ್ತು ಇತರ ವಾಹನಗಳನ್ನು ನಂಬಿರುವವ ಗ್ರಾಹಕರ ಸ್ಥಿತಿ ಕೂಡ ಅಯೋಮಯವಾಗಿದೆ. ಅಲ್ಲದೆ, ಸ್ವಂತ ವಾಹನಗಳಿಗೂ ಪೆಟ್ರೋಲ್ ಮತ್ತು ಗ್ಯಾಸ್ ಇಲ್ಲದ ಕಾರಣ ವಾಹನಗಳು ಕೆಲವು ಬಂಕ್ ಬಳಿ ನಿಂತಿದ್ದರೆ. ಕೆಲವು ಮನೆಯ ಬಳಿಯಲ್ಲೇ ನಿಂತಿವೆ.

ಇಲ್ಲಿನ ಅಶೋಕನಗರ ಮತ್ತು ಕಲ್ಲಹಳ್ಳಿಯಲ್ಲಿ ಎರಡು ಆಟೋ ಗ್ಯಾಸ್ ಬಂಕ್‌ಗಳಿವೆ. ಇದರಲ್ಲಿ ಅಶೋಕನಗರದ ಬಂಕ್‌ನಲ್ಲಿ ಗ್ಯಾಸ್ ಖಾಲಿಯಾಗಿರುವ ಬೋರ್ಡ್ ಹಾಕಲಾಗಿದೆ. ಮತ್ತೊಂದು ಬಂಕ್‌ನಲ್ಲಿ ಗ್ಯಾಸ್ ನೀಡಲಾಗುತ್ತಿದ್ದರೂ ಯಾವಾಗ ಖಾಲಿಯಾಗುವುದೋ ಗೊತ್ತಿಲ್ಲ, ಇದರಿಂದ ಎಲ್‌ಪಿಜಿ ಆಟೋ ಚಾಲಕರು ತೀವ್ರ ಸಂಕಷ್ಟ ಎದುರಿಸುವಂತಾಗಿದೆ. ಯುದ್ಧ ಆರಂಭಕ್ಕೂ ಮುನ್ನ ಅಶೋಕನಗರ ಬಂಕ್‌ನಲ್ಲಿ ನಿತ್ಯ 9 ರಿಂದ 10 ಟನ್ ಗ್ಯಾಸ್ ಸರಬರಾಜಾಗುತ್ತಿತ್ತು. ಪ್ರತಿದಿನ ಆಟೋಗಳಿಗೆ 2 ಸಾವಿರ ಲೀಟರ್‌ನಷ್ಟು ಗ್ಯಾಸ್ ತುಂಬಿಸಿಕೊಡಲಾಗುತ್ತಿತ್ತು. ಯುದ್ಧ ಆರಂಭವಾದ ನಂತರದಲ್ಲಿ ಆಟೋ ಗ್ಯಾಸ್‌ಗೆ ದಿಢೀರ್ ಬೇಡಿಕೆ ಸೃಷ್ಟಿಯಾಯಿತು.



ಬೇರೆ ಬೇರೆ ಕಡೆಗಳಲ್ಲಿರುವ ಬಂಕ್‌ಗಳಲ್ಲಿ ಸಿಎನ್‌ಜಿ ಗ್ಯಾಸ್ ಖಾಲಿಯಾಗಿರುವುದರಿಂದ ಮದ್ದೂರು, ಮಳವಳ್ಳಿ ಸೇರಿದಂತೆ ಇತರೆ ಭಾಗಗಳಿಂದಲೂ ಗ್ಯಾಸ್ ತುಂಬಿಸಿಕೊಳ್ಳಲು ಮಂಡ್ಯಕ್ಕೆ ಬರುತ್ತಿದ್ದಾರೆ. ಪರಿಣಾಮ ನಿತ್ಯದ ಬೇಡಿಕೆ 2 ಸಾವಿರ ಲೀಟರ್ ಇದ್ದದ್ದು ಒಮ್ಮೆಗೇ ಐದು ಸಾವಿರ ಲೀಟರ್‌ಗೆ ಏರಿಕೆಯಾಯಿತು.

ಈ ಮೊದಲು ಆಟೋ ಚಾಲಕರು 200ರು., 400 ರು.ಗಳಿಗೆ ಗ್ಯಾಸ್ ತುಂಬಿಸಿಕೊಳ್ಳುತ್ತಿದ್ದವರು ಈಗ ಫುಲ್ ಟ್ಯಾಂಕ್ ಗ್ಯಾಸ್ ಮಾಡಿಸಿಕೊಳ್ಳುತ್ತಿದ್ದಾರೆ. ಬೇರೆ ಬೇರೆ ಕಡೆಗಳಿಂದಲೂ ಬಂಕ್‌ಗಳಿಗೆ ಆಟೋ ಚಾಲಕರು ಲಗ್ಗೆ ಇಡುತ್ತಿರುವುದರಿಂದ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ, ಎಂದು ಗ್ಯಾಸ್ ಬಂಕ್‌ನವರು ಹೇಳುವ ಮಾತಾಗಿದೆ.

ನಿತ್ಯ 9ರಿಂದ 10ಟನ್ ಆಟೋಗ್ಯಾಸ್ ಬರುತ್ತಿದ್ದ ಕಡೆ ಈಗ ಕೇವಲ ಅರ್ಧ ಟನ್ ಗ್ಯಾಸ್ ಮಾತ್ರ ಪೂರೈಕೆಯಾಗುತ್ತಿದೆ. ಇದರಿಂದ ನಿತ್ಯ 5 ಸಾವಿರ ಲೀಟರ್ ಗ್ಯಾಸ್‌ನ್ನು ಆಟೋಗಳಿಗೆ ನೀಡುವುದಕ್ಕೆ ಸಾಧ್ಯವಾಗುತ್ತಿಲ್ಲ, ನಿತ್ಯ ಬರುತ್ತಿದ್ದ ಆಟೋ ಗ್ಯಾಸ್ ಈಗ ಎರಡು-ಮೂರು ದಿನಕ್ಕೊಮ್ಮೆ ಬರುತ್ತಿದೆ. ಮುಂದೆ ಮತ್ತಷ್ಟು ವಿಳಂಬವಾಗಬಹುದೆಂದೂ ಹೇಳಲಾಗುತ್ತಿದೆ. ನಮ್ಮ ಬಂಕ್‌ನಲ್ಲಿ ದಾಸ್ತಾನಿದ್ದ ಗ್ಯಾಸ್‌ನ್ನು ಶನಿವಾರ ಬೆಳಗ್ಗೆ 9ಗಂಟೆಯವರೆಗೆ ನೀಡಲಾಗಿದೆ. ಅನಂತರ ಖಾಲಿಯಾಗಿದ್ದು, ನಾಳೆ ಮಧ್ಯಾಹ್ನ ಬರುವುದಾಗಿ ಹೇಳುತ್ತಿದ್ದಾರೆ. ಅಲ್ಲಿಯವರೆಗೆ ಕಾದು ಕೂರಬೇಕಿರುವುದು ಅನಿವಾರ್ಯವಾಗಿದೆ.

ಗ್ಯಾಸ್ ಬೆಲೆ ಈಗ ದುಬಾರಿ

ಯುದ್ಧ ಆರಂಭವಾಗುವುದಕ್ಕೆ ಮುನ್ನ ಲೀಟರ್ ಗ್ಯಾಸ್‌ಗೆ 53 ರೂ. ಇತ್ತು. ಈಗ 88 ರು.ಗಳಿಗೆ ಏರಿಕೆಯಾಗಿದೆ. ಹೆಚ್ಚು ಹಣ ಕೊಟ್ಟರೂ ಸರಿಯಾದ ಪ್ರಮಾಣದ ಗ್ಯಾಸ್ ಸಿಗುತ್ತಿಲ್ಲ. ಇಂದು ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಬಂದಿದ್ದರು. ನಾವು ಸರ್ಕಾರಕ್ಕೆ ಮನವಿ ಸಲ್ಲಿಸುತ್ತೇವೆ. ಗ್ಯಾಸ್ ಕೊಡಿ ಇಲ್ಲವೇ ಅಲ್ಲಿಯವರೆಗೆ ಪರಿಹಾರವನ್ನಾದರೂ ಕೊಡಿ. ನಮಗೆ ಜೀವನ ನಡೆಸಲು ತುಂಬಾ ಕಷ್ಟವಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆಂದು .ಗ್ಯಾಸ್ ಬಂಕ್ ಮ್ಯಾನೇಜರ್ ಶಿವಕುಮಾರ್ ಹೇಳಿದರು.

ಕಣ್ಣೀರು ಹಾಕುವಂತಾಗಿದೆ

ಎಲ್‌ಪಿಜಿಯನ್ನೇ ನಂಬಿ ಜೀವನ ನಡೆಸುತ್ತಿರುವ ಆಟೋ ಚಾಲಕರು ಕಣ್ಣೀರು ಹಾಕುವಂತಾಗಿದೆ. ಗ್ಯಾಸ್ ಖಾಲಿಯಾಗಿರುವುದರಿಂದ ಬಂಕ್ ಮುಚ್ಚಿದೆ. ಗ್ಯಾಸ್ ಸ್ಟೇಷನ್‌ನಲ್ಲಿ ಆಟೋ ಎಲ್‌ಪಿಜಿ ಲಭ್ಯತೆ ಇಲ್ಲವೆಂದು ತಿಳಿದು ಚಾಲಕರು ನಿರಾಸೆಯಿಂದ ತೆರಳುವಂತಾಗಿದೆ. ಆಟೋ ಓಡಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದೇವೆ. ಈಗ ಗ್ಯಾಸ್ ಬೆಲೆಯೂ 30 ರೂ. ಹೆಚ್ಚಾಗಿದೆ. ಅಷ್ಟು ಹಣ ಕೊಟ್ಟರೂ ಗ್ಯಾಸ್ ಸಿಗುತ್ತಿಲ್ಲ, ಸರ್ಕಾರ ಕೂಡಲೇ ಗ್ಯಾಸ್‌ಗೆ ವ್ಯವಸ್ಥೆ ಮಾಡಬೇಕೆಂದು ಆಟೋ ಚಾಲಕ ಅರುಣ್ ಆತಂಕಪಟ್ಟರು.

ದಾಬಸ್‌ಪೇಟೆಯಲ್ಲಿ ಏಕಾಏಕಿ ಬಾಗಿಲು ಮುಚ್ಚಿದ ಕಾರ್ಖಾನೆ

ಬೀದಿಪಾಲಾದ ಕಾರ್ಮಿಕರು: ಆತಂಕ



• **ದಾಬಸ್‌ಪೇಟೆ:** ಶಿವಗಂಗೆ ಶಾರದಾ ಕ್ರಾಸ್ ಇಂಡಸ್ಟ್ರಿ ಇಂಟೆಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಏಕಾಏಕಿ ಬಾಗಿಲು ಮುಚ್ಚಿರುವುದರಿಂದ ಇಲ್ಲಿನ ನೌಕರರ ಕಂಗಾಲಾಗಿದ್ದಾರೆ.

ಕಳೆದ ಐದಾರು ತಿಂಗಳಿಂದ ಸುಗಮ ನಡೆಯುತ್ತಿದ್ದ ನೆಲಮಂಗಲ ತಾಲೂಕಿನ ಸೋಂಪುರ ಹೋಬಳಿಯ ಶಿವಗಂಗೆಶಾರದಾ ಕ್ರಾಸ್ ಇಂಡಸ್ಟ್ರಿ ಇಂಟೆಕ್ಸ್ ಪ್ರೈವೇಟ್ ಲಿಮಿಟೆಡ್ ಏಕಾಏಕಿ ಬಾಗಿಲು ಮುಚ್ಚಿರುವುದರಿಂದ ಹಲವಾರು ಕಾರ್ಮಿಕರು ಬೀದಿಗೆ ಬಿದ್ದಂತಾಗಿದೆ. ಕಾರ್ಖಾನೆಯಲ್ಲಿ ಸುಮಾರು 280 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಆದರೆ, ಕಾರ್ಮಿಕರು ಕಾರ್ಖಾನೆಗೆ ಬಾಗಿಲು ಹಾಕಿದ್ದರಿಂದ ಮುಂದಿನ ದಾರಿ ಯಾವುದು ಎಂಬ ಹುಡುಕಾಡ ನಡೆಸಬೇಕಾಗಿದೆ. ಕಾರ್ಮಿಕ ಜಯರಾಮ್ ಮಾತನಾಡಿ, ಕಾರ್ಖಾನೆ ಬಾಗಿಲು ಮುಚ್ಚಿರುವುದರಿಂದ ಕಾರ್ಮಿಕರು ಮುಂದೆ ಉದ್ಯೋಗಕ್ಕಾಗಿ ಅಲೆದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕಪಟ್ಟರು.

ಕಾರ್ಖಾನೆಯ ಅರುಣ್ ಕುಮಾರ್ ಮಾತನಾಡಿ, ನಾವು ಮಾಡಿದ ಕೆಲಸದ ದಿನದ ಸಂಬಳವನ್ನು ನೀಡಿದ್ದಾರೆ. ಆದರೆ, ಒಂದು ತಿಂಗಳ ಹಣ ಕೊಟ್ಟಿಲ್ಲ, ಮುಂದಿನ ತಿಂಗಳು ಕಟ್ಟುತ್ತಾರೆ ಎಂದು ಭರವಸೆ ನೀಡಿದ್ದಾರೆಂದರು.

ಪೆತ್ತನಹಳ್ಳಿ ಸರಕಾರಿ ಪ್ರಾಥಮಿಕ ಶಾಲೆ ಕೊಠಡಿಗಳ ಜೀರ್ಣೋದ್ಧಾರ

ಶಾಲೆ ಉಳಿವಿಗೆ ಶಿಕ್ಷಕರು, ಅಧಿಕಾರಿಗಳ ಶ್ರಮ

• **ತಾವರೆಕೆರೆ:** ಹೊಸಕೋಟೆ ತಾಲೂಕು ಪೆತ್ತನಹಳ್ಳಿಯಲ್ಲಿ ಎರಡು ಶಾಲಾ ಕೊಠಡಿಗಳ ದುರಸ್ತಿ ಹಾಗೂ ಜೀರ್ಣೋದ್ಧಾರ ಕಾರ್ಯಕ್ರಮವನ್ನು ಎಸ್‌ಡಿಎಂಸಿ, ಗ್ರಾಮಸ್ಥರು ಮತ್ತು ಡಿ. ಜನಟ್ಟೆ ಪಂಚಾಯಿತಿಯಿಂದ ಇಲಾಖೆ ಸಹಕಾರದೊಂದಿಗೆ ನೆರವೇರಿಸಲಾಯಿತು.

ಶಾಲೆ ಆವರಣ ಮತ್ತು ಶಾಲಾ ಕೊಠಡಿಗಳು ನಿರ್ಮಲತ್ವವನ್ನು ತುಂಬಿಕೊಂಡಿತ್ತು. ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದ ಹೊಸಕೋಟೆ ತಾಲೂಕಿನ ತಾಲೂಕ್ ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳಾದ ಮುನಿಯಪ್ಪ ಅವರು ಶಿಕ್ಷಕರ ಕಾಳಜಿಯಿಂದಾಗಿ ಈ ದಿನ ಶಿಥಿಲಾವ್ಯವಸ್ಥೆಯಲ್ಲಿ ಇದ್ದಂತ ಕೊಠಡಿಗಳು ಸುಸಜ್ಜಿತವಾಗಿ ಪುನರ್ ನಿರ್ಮಾಣಗೊಂಡಿರುವುದು ಅವರ ಕರ್ತವ್ಯ ನಿಷ್ಠೆಗೆ ಹಿಡಿದ ಕನ್ನಡಿ ಎಂದು ಬಣ್ಣಿಸಿದರು.

ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ಸಮಾಜಕ್ಕೆ ಸರ್ಕಾರದ ಋಣದ ಜತೆಗೆ ತಂದೆ ತಾಯಿ ಮತ್ತು ಗುರು ಹಿರಿಯರ ಋಣವನ್ನು ತೀರಿಸಲು ವಿದ್ಯಾವಂತರಾಗಿ ಸಮಾಜಕ್ಕೆ ಪ್ರಜ್ಞಾವಂತ ನಾಗರಿಕರಾಗಿ ಕೊಡುಗೆ ನೀಡಬೇಕೆಂದು ಕರೆಕೊಟ್ಟರು.



ಕಾರ್ಯಕ್ರಮದಲಿ ಮುಖ್ಯ ಶಿಕ್ಷಕರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಪೆತ್ತನಹಳ್ಳಿ ವಿ. ಸುಬ್ಬರಾಯಪ್ಪ ಮಾತನಾಡಿ, ಕ ರಾ ಪ್ರಾ ಶಾ ಶಿ ಸಂಘದ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯ ಕೊಠಡಿಗಳು ಶಿಥಿಲಾವ್ಯಸ್ಥೆಯಲ್ಲಿದ್ದವು. ಕೊಠಡಿಗಳನ್ನು ದುರಸ್ತಿಗೊಳಿಸಿ ನೂತನ ಕೊಠಡಿಯನ್ನಾಗಿ ವಿದ್ಯಾರ್ಥಿಗಳಿಗೆ ಅನುಕೂಲಿಸಲು ವಿಶೇಷ ಮುತವರ್ಜಿಯನ್ನು ವಹಿಸಿ ಅಭಿವೃದ್ಧಿಪಡಿಸಿದ್ದಾರೆಂದರು. ಡಿ.ಜಿ. ಜಟ್ಟೆ ಪಂಚಾಯಿತಿಯ ಮಾಜಿ ಅಧ್ಯಕ್ಷ ಸುರೇಶ್ ರವರ ಕೊಡುಗೆಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿ.ಸುಬ್ರಹ್ಮಣಿ , ಗುತ್ತಿಗೆದಾರರಾದ ಚಂದ್ರೇಗೌಡ , ಎಸ್ ಡಿಎಂ ಸಿ ಗ್ರಾಮದ ನಿಕಟ ಪೂರ್ವ ಅಧ್ಯಕ್ಷರು ಹಾಗೂ ಶಾಲಾ ದಾನಿಗಳಾದ ಸುಬ್ರಹ್ಮಣಿ ,ಹಳೇ ವಿದ್ಯಾರ್ಥಿಗಳ ಸಂಘದ ಎಲ್ಲಾ ಪದಾಧಿಕಾರಿಗಳು ಶಾಲಾ ಕಟ್ಟಡದ ನಿವೇಶನದ ದಾನಿಗಳಾದ ಮುನೇಗೌಡ , ಬೈರೇಗೌಡ ಸತೀಶ್‌ಗೌಡ ಹಾಗೂ ಪೋಷಕರು ಮತ್ತು ಶಾಲಾ ಶಿಕ್ಷಣ ಇಲಾಖೆಯ ಹೊಸಕೋಟೆ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ಕೆ. ಪದ್ಮನಾಭ ಅವರ ಸಹಕಾರ ಹಾಗೂ ಮಾರ್ಗದರ್ಶನದೊಂದಿಗೆ ಈ ಕೆಲಸ ಸುಸೂತ್ರವಾಗಿ ನಡೆಯಲು ಸಾಧ್ಯವಾಯಿತು ಎಂದು ಹೇಳಿದರು

ಕಾರ್ಯಕ್ರಮದಲ್ಲಿ ಕರಾಪ್ರಾಶಾಶಿ ಸಂಘದ ಅಧ್ಯಕ್ಷರಾದ ಮುನಿಸ್ವಾಮಯ್ಯ ಎಂ. ರಾಜ್ಯ ಉಪಾಧ್ಯಕ್ಷರಾದ ಶ್ರೀನಿವಾಸಪ್ಪ, ಎಂ.ಶ್ರೀಗಂಗಾಧರಯ್ಯ ಎಂ. ಜಿಲ್ಲಾ ಸಹಕಾರಿದರ್ಶಿ, ಜಿ.ಪಿ.ನಾಗರಾಜ್, ಪ್ರಧಾನ ಕಾರ್ಯದರ್ಶಿ ಲಲಿತಮ್ಮ , ಉಪಾಧ್ಯಕ್ಷರಾದ ಅಣ್ಣಯ್ಯಪ್ಪ , ರಾಜ್ಯ ಪರಿಷತ್ ಸದಸ್ಯರಾ ಕ ರಾ ಸಿ ನೌ ಸಂಘ ದ ದೇವರಾಜ್ ಹಾಜರಿದ್ದರು.

ರಾಮೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ



• **ತಾವರೆಕೆರೆ:** ನಂದಗುಡಿ ಹೋಬಳಿ ತಾವರೆಕೆರೆ ಗ್ರಾಮದಲ್ಲಿ ನಡೆಯುವ ಕುಲದೇವತಾ ದೊಡ್ಡದೇವರ ಜಾತ್ರೆ ಮಹೋತ್ಸವ ನಡೆಯಿತು. ದೇವರ ಕಂಬಿ ಮತ್ತು ದೀಪ ಹೊತ್ತ 22ಪಲ್ಲಕ್ಕಿಗಳು ಗ್ರಾಮ ದೇವತೆ ಶ್ರೀ ಪಟಾಲಮ್ಮ ದೇವಿ ದೇವಾಲಯದ ಮುಂದೆ ನಿಂತು ಪೂಜಾ ಮತ್ತು ಮಹಾಮಂಗಳಾರತಿ ನಡೆಯಿತು.

ಆದ ನಂತರ 22ಕಂಬಿ ಯಜಮಾನರು ಮತ್ತು ಸಾವಿರಾರು ಭಕ್ತರು ವೀರಗಾಸೆ ಡೊಳ್ಳುಕುಣಿತ, ವಾದ್ಯಗೋಷ್ಠಿಯೊಂದಿಗೆ ಗ್ರಾಮದ ದೊಡ್ಡ ಬೀದಿಯಲ್ಲಿ ಮೆರವಣಿಗೆ ಸಾಗಿತು. ಶ್ರೀ ಸಿದ್ದೇಶ್ವರ ಸ್ವಾಮಿ, ಶ್ರೀ ರಾಮೇಶ್ವರ ಸ್ವಾಮಿ, ಶ್ರೀ ಭಕ್ತೇಶ್ವರ ಸ್ವಾಮಿ, ವದಲಿ ರಾಮೇಶ್ವರ ಸ್ವಾಮಿ ದೇವರನ್ನು ತಲೆಯ ಮೇಲೆ ಹೊತ್ತುಕೊಂಡು ಸಾಗಿದರು. ಜಾತ್ರೆ ನಡೆಯುವ ಶ್ರೀ ರಾಮೇಶ್ವರ ದೇವಾಲಯದ ಮುಂಭಾಗದಲ್ಲಿ ಪೂಜೆ ನಂತರ ಒಂದೇ ಜಾಗದಲ್ಲಿ 22 ಕಂಬಿ ದೀಪ ಹೊತ್ತ ದೇವರ ದರ್ಶನವನ್ನು ಸರದಿಯಲ್ಲಿ ನಿಂತು ಭಕ್ತರು ಪಡೆದುಕೊಂಡರು.

ದಿ ಟೌನ್ ಕೋ ಅಪರೇಟಿವ್ ಬ್ಯಾಂಕಿನ ಲೆಕ್ಕಪತ್ರ ಮಂಡನೆ

5.28 ಕೋಟಿ ರೂ. ವಾರ್ಷಿಕ ಲಾಭ

• **ಹೊಸಕೋಟೆ:** ದಿ ಟೌನ್ ಕೋಆಪರೇಟಿವ್ ಬ್ಯಾಂಕ್ ದುಡಿಯುವ ಬಂಡವಾಳ 347.85 ರೂ. ನಿಂದ 367.65 ಕೋಟಿ ರೂ.ಗೆ ಏರಿಕೆಯಾಗಿದೆ. ವರ್ಷಾಂತ್ಯದ ವರದಿ ಪ್ರಕಾರ 5.28 ಕೋಟಿ ರೂ. ನಿವ್ವಳ ಲಾಭಗಳಿಸಿದೆ ಎಂದು ಬ್ಯಾಂಕ್ ಅಧ್ಯಕ್ಷ ಎಸ್ . ಮಂಜುನಾಥ್ ತಿಳಿಸಿದರು.

ನಗರದ ಬ್ಯಾಂಕ್ ಸಭಾಂಗಣದಲ್ಲಿ 2025-26ನೇ ಸಾಲಿನ ಲೆಕ್ಕ ಪತ್ರದ ವರದಿ ಮಂಡಿಸಿ ಮಾತನಾಡಿ, ಬ್ಯಾಂಕಿನಲ್ಲಿ ಒಟ್ಟು 17,181 ಸದಸ್ಯರಿದ್ದಾರೆ. ಷೇರು ಬಂಡವಾಳ 11.87 ಕೋಟಿ ರೂ. ಕ್ರೋಢೀಕರಿಸಲಾಗಿದೆ. 51.05 ಕೋಟಿ ರೂ. ನಿಧಿಗೆ, 297.04 ಕೋಟಿ ರೂ. ಠೇವಣಿ, ಸಾಲ ಹಾಗೂ ಮುಂಗಡ 163.22 ಕೋಟಿ ರೂ, ಹೂಡಿಕೆ 187.12 ಕೋಟಿ ರೂ. ದುಡಿಯುವ ಬಂಡವಾಳ 367.65 ಕೋಟಿ ರೂ. ಎಂದಾಗಿದೆ. ನಿವ್ವಳ ಲಾಭ 5.28 ರಷ್ಟು ಹೊಂದುವ ಮೂಲಕ ಲಾಭದ ಪ್ರಮಾಣ ಶೇ .23ರಷ್ಟು ಏರಿಕೆಯಾಗಿದೆ. ಇದಕ್ಕೆಲ್ಲ ಕಾರಣ ನಮ್ಮ ಬ್ಯಾಂಕಿನ ಷೇರುದಾರರಾಗಿದ್ದಾರೆ. ಪ್ರಸ್ತುತ ಬ್ಯಾಂಕಿನಲ್ಲಿ 17,187 ಸಾಮಾನ್ಯ ಸದಸ್ಯರಿದ್ದಾರೆ. 835 ಸಹ ಸದಸ್ಯರಿದ್ದಾರೆ. 29,306 ಠೇವಣಿ ಖಾತೆಗಳಿವೆ. 1518 ಸಾಲದ ಖಾತೆಗಳಿವೆಂದು ವಿವರಿಸಿದರು.

ಬ್ಯಾಂಕ್ ಹೆಚ್ಚಿನ ಲಾಭ ಗಳಿಸುತ್ತಿದೆ. ಆದ್ದರಿಂದ ಸ್ವಂತ ಬಂಡವಾಳ ವೃದ್ಧಿಯಾಗಿ ಸುಭದ್ರ ಸ್ಥಿತಿಯಲ್ಲಿದೆ. ಪ್ರಾಮಾಣಿಕವಾಗಿ ಸದಸ್ಯರಿಗೆ ಡಿವಿಡೆಂಟ್ ಪಾವತಿ, ಉಚಿತ ಆರೋಗ್ಯ ತಪಾಸಣೆ, ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸೆ ಶಿಬಿರ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಉನ್ನತ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡುವುದು ಸದಸ್ಯರ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆಂದರು.

ಬ್ಯಾಂಕಿನ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಠೇವಣಿ ಇಡುವುದರ ಬಗ್ಗೆ ಸದಸ್ಯರು ಮುಂದಾಗಬೇಕು. ಹೆಚ್ಚು ಗ್ರಾಹಕರನ್ನು ಸೆಳೆಯುವ ಕೆಲಸವಾಗುವ ಮೂಲಕ ಇನ್ನಷ್ಟು ಪ್ರಗತಿಯತ್ತ ಬ್ಯಾಂಕ್ ಸಾಗಲು ಸಹಕರಿಸಿ ಎಂದರು.



ದಿ ಟೌನ್ ಕೋ ಆಪರೇಟಿವ್ ಬ್ಯಾಂಕ್‌ನ ಉಪಾಧ್ಯಕ್ಷ ಅಕ್ತರ್ ಬೈರಿ, ನಿರ್ದೇಶಕರಾದ ಎಸ್.ನಾಗರಾಜ್, ಎಚ್. ಎಸ್. ಗೋಪಾಲ್, ಎ.ಅಫ್ಸರ್, ಕೆ.ಕಿರಣ್, ಕಿರಣ್‌ಕುಮಾರ್, ಕೆ. ಬಿ. ನಾಗರಾಜ್, ಜಿ.ಯು. ವಿಷ್ಣು, ಎಸ್ .ಮುರಳಿ, ಎನ್ . ಬಾಲಚಂದ್ರನ್, ಸರೋಜಮ್ಮ, ವೃತ್ತಿಪರ ನಿರ್ದೇಶಕರಾದ ಎಚ್ .ಕೆ. ವಿಕ್ರಮ್, ಆರ್. ಮಂಜುನಾಥ್, ಪ್ರಧಾನ ವ್ಯವಸ್ಥಾಪಕ ಎ.ನಾಗರಾಜ್ ಸೇರಿ ಸಿಬ್ಬಂದಿ ಹಾಜರಿದ್ದರು.

ಶ್ರೀ ಧರ್ಮರಾಯಸ್ವಾಮಿ ದ್ರೌಪದಾಂಬಾದೇವಿ 52ನೇ ಕರಗೋತ್ಸವ

ಅಪಾರ ಭಕ್ತರ ಸಮೂಹದಲ್ಲಿ ಮೆರವಣಿಗೆ

• **ತಾವರೆಕೆರೆ:** ಹೊಸಕೋಟೆ ತಾಲೂಕಿನ ಮುಗಬಾಳ ಗ್ರಾಮದಲ್ಲಿ 52ನೇ ವರ್ಷದ ಶ್ರೀ ಧರ್ಮರಾಯಸ್ವಾಮಿ ದ್ರೌಪದಾಂಬಾದೇವಿಯ ಹೂವಿನ ಕರಗ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಕರಗ ಮಹೋತ್ಸವ ಎಂಟು ದಿನಗಳ ಕಾಲ ವೈಭವ ಹಾಗೂ ಬಾಳ ವಿಜೃಂಭಣೆಯಿಂದ ಕರಗ ಮಹೋತ್ಸವ ನೆರವೇರಿತು. ಎರಡನೇ ಬಾರಿ ಕರಗ ಹೊತ್ತು ಯಶಸ್ವಿಗೊಳಿಸಿದ ನಾಗರಾಜ್ ಅವರು ತಡರಾತ್ರಿ ಒಂದು ಮೂವತ್ತಕ್ಕೆ ದೇವಾಲಯದಿಂದ ಹೊರಬಂದ ಕರಗ ವೀರ ಕುಮಾರರ ಗೋವಿಂದ ಗೋವಿಂದ ಎನ್ನುವ ನಾಮಜಪದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕರಗ ಹೊತ್ತು ಸಂಚರಿಸಿತು. ನಂತರ ಬೆಳಗ್ಗೆ 9.30ಗಂಟೆಗೆ ಸರಿಯಾಗಿ ಕರಗವನ್ನು ಮರಳಿ ದೇವಾಲಯಕ್ಕೆ ತಂದಿರಿಸಲಾಯಿತು. ವನ್ನಿಕುಲದ ಯಜಮಾನರಾದ ಸಂದೀಪ್. ಕೆ ಮಾತನಾಡಿ , ಗ್ರಾಮದಲ್ಲಿ 52 ವರ್ಷದಿಂದ ನಿರಂತರವಾಗಿ ಶ್ರೀ ದ್ರೌಪದಿ ಧರ್ಮರಾಯ ಸ್ವಾಮಿ ಕರಗ ಮಹೋತ್ಸವ ನಡೆಯುತ್ತಾ ಬಂದಿದೆಂದರು. ಕಳೆದ ಬಾರಿ ಅನಿಲ್ ಅವರು ಕರಗದ ಪೂಜಾರಿಯಾಗಿ ಯಶಸ್ವಿಗೊಳಿಸಿದ್ದರು. ಈ ವರ್ಷ ನಾಗರಾಜ್ ಕರಗ ಹೊತ್ತು ಯಶಸ್ವಿಗೊಳಿಸಿದ್ದಾರೆ. ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆಂದು ಹೇಳಿದರು.



ಸುಮಾರು 20ಕ್ಕೂ ಹೆಚ್ಚು ಪಲ್ಲಕ್ಕಿ ಉತ್ಸವ ಹಾಗೂ ಮೈಸೂರು ದಸರಾದ ದೀಪ ಅಲಂಕಾರ ನಡೆಸಿದಂತೆ ಗ್ರಾಮದ ಪ್ರತಿ ಬೀದಿ ಹಾಗೂ ಪ್ರಮುಖ ರಸ್ತೆಯಲ್ಲಿ ವಿವಿಧ ರೀತಿಯ ದೀಪಾಲಂಕಾರಗಳು ನೋಡುಗರ ಗಮನ ಸೆಳೆಯಿತು. ಅಂದು ನಮ್ಮ ಹಿರಿಯರು ನಡೆಸಿಕೊಂಡು ಬಂದಂತೆ ಇಂದು ನಮ್ಮ ಪೀಳಿಗೆ ಅದೇ ರೀತಿ ಸಕಲ ಶಾಸ್ತ್ರೋಕ್ತವಾಗಿ ಕರಗ ಮಹೋತ್ಸವವನ್ನು ನಡೆಸಲಾಗಿದೆ. ಕರಗ ಮಹೋತ್ಸವ ಕೇವಲ ಒಂದು ಆಚರಣೆ ಮಾತ್ರವಲ್ಲ. ಇದು ಭಕ್ತಿ ಶಕ್ತಿ ಮತ್ತು ಏಕತೆಯ ಸಂಕೇತವಾಗಿದೆ.

ದೇವಿ ಅನುಗ್ರಹದಿಂದ ನಮ್ಮ ಜೀವನದಲ್ಲಿ ಶಾಂತಿ ಸಮೃದ್ಧಿ ಮತ್ತು ಆರೋಗ್ಯ ನೆಲೆಸಲಿ. ಮುಖ್ಯವಾಗಿ ಗ್ರಾಮದಲ್ಲಿ ಮುಸ್ಲಿಮ್ ಸಮುದಾಯದ ಬಾಂಧವರು ಹೆಚ್ಚಾಗಿದೆ. ಕರಗ ಮಹೋತ್ಸವ ಬಂದಾಗ ಹಬ್ಬವನ್ನು ಆಚರಿಸುತ್ತೇವೆ. ಇದು ಗ್ರಾಮದ ಒಂದು ವಿಶೇಷವಾಗಿದೆ. ಇಂದಿನ ಯುವ ಪೀಳಿಗೆ ನಮ್ಮ ಪರಂಪರೆಯನ್ನು ಅರಿತು ಅದನ್ನು ಮುಂದಿನ ಪೀಳಿಗೆಗೆ ಸಾಗಿಸುವುದು ಅತ್ಯಂತ ಮುಖ್ಯವಾಗಿದೆ. ಈ ಮಹೋತ್ಸವವನ್ನು ಯಶಸ್ವಿಯಾಗಿ ಆಯೋಜಿಸಿದ ಎಲ್ಲರಿಗೂ ಧನ್ಯವಾದ ತಿಳಿಸಿದರು.

ವನ್ನಿಕುಲ ಯಜಮಾನ ಜಿ.ಎಂ. ಕೃಷ್ಣಪ್ಪನವರ ಮಗ ಸಂದೀಪ್ ಕೆ, ಗೌಡರ ಚೆನ್ನಮ್ಮ ಅವರ ಮುನಿವೆಂಕಟಪ್ಪ, ಗಣಾಚಾರಿ ದೊಡ್ಡ ಕೃಷ್ಣಪ್ಪ, ಕೋಲಾಕರ್ ಆರ್. ನಾಗರಾಜ್, ಖಜಾಂಚಿ ಮುನಿರಾಜು ಹಾಗೂ ವನ್ನಿಕುಲ ಕ್ಷತ್ರಿಯ ಕುಲಸ್ಥರು ಹಾಗೂ ಮುಗಬಾಳ ಗ್ರಾಮಸ್ಥರಿದ್ದರು.

ಚಂದಾಪುರ ಜಿಎನ್‌ಆರ್‌ಕಟ್ಟೆ ಬಳಗ ಆಯೋಜನೆ | ಪಾನಕ ವಿತರಣೆ

ಶ್ರೀರಾಮನವಮಿಯ ಅದ್ದೂರಿ ಆಚರಣೆ

• **ಆನೇಕಲ್:** ತಾಲೂಕಿನ ಚಂದಾಪುರದಲ್ಲಿ ಜಿ.ಎನ್. ಆರ್.ಕಟ್ಟೆ ಬಳಗ ಮತ್ತು ಸ್ನೇಹಿತರಿಂದ ಅದ್ದೂರಿಯಾಗಿ ಶ್ರೀರಾಮ ನವಮಿಯನ್ನು ಆಚರಿಸಲಾಯಿತು.

ಇನ್ನು ಕಳೆದ 40 ವರ್ಷದಿಂದ ಜಿ.ಎನ್. ಆರ್. ಕಟ್ಟೆ ಬಳಗದವರಿಂದ ಶ್ರೀ ರಾಮ ನವಮಿಯನ್ನು ಚಂದಾಪುರದಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ. ಇನ್ನು ಶ್ರೀ ರಾಮ ನವಮಿ ಅಂಗವಾಗಿ ಸಾವಿರಾರು ಸಾರ್ವಜನಿಕರಿಗೆ ಅನ್ನದಾಸೋಹ. ಅರವಂಟಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಹಾಗೆಯೇ ಸುಗಮ ಸಂಗೀತ ಸೇರಿದಂತೆ ಹಲವು ವಿಶೇಷ ಪೂಜಾ ಕಾರ್ಯಕ್ರಮಗಳು ಶಾಸ್ತ್ರೋಕ್ತವಾಗಿ ನೆರವೇರಿತು. ಇನ್ನು ಕಾರ್ಯಕ್ರಮದಲ್ಲಿ ಬಿಜೆಪಿ ಮಂಡಲದ ಅಧ್ಯಕ್ಷ ಎಸ್.ಆರ್.ಟಿ.ಅಶೋಕ್ ರೆಡ್ಡಿ ಮಾತನಾಡಿ, ಚಂದಾಪುರದ ಹಿಂದುಪರ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಒಗ್ಗಟ್ಟಾಗಿ ಶ್ರೀ ರಾಮನವಮಿ ಅಂಗವಾಗಿ ದೇವರಿಗೆ ವಿಶೇಷ ಪೂಜೆ, ಭಕ್ತಿ ಗೀತೆಗಳು ಹಮ್ಮಿಕೊಂಡು ಸಾವಿರಾರು ಭಕ್ತರಿಗೆ ಅನ್ನ ದಾನ ಹಾಗೂ ನೀರು ಮಜ್ಜಿಗೆ ವಿತರಣೆ ಮಾಡಲಾಯಿತು. ದೇವರ ಕೃಪೆಯಿಂದ ನಾಡಿನಲ್ಲಿ ಉತ್ತಮ ಮಳೆ ಬೆಳೆಯಾಗಿ ರೈತರು ಸೇರಿದಂತೆ ಎಲ್ಲರನ್ನೂ ದೇವರು ನೆಮ್ಮದಿಯಾಗಿಡಲ್ಲಿ ಎಂದು ಪ್ರಾರ್ಥಿಸಿದರು.



ಬಿಜೆಪಿ ಮುಖಂಡರಾದ ಹುಲ್ಲಹಳ್ಳಿ ಶ್ರೀನಿವಾಸ್ ಮಾತನಾಡಿ, ಶ್ರೀರಾಮನವಮಿ ಪ್ರಯುಕ್ತ ಚಂದಾಪುರದಲ್ಲಿ ಬಿಜೆಪಿ ಕಾರ್ಯಕರ್ತರು ಒಟ್ಟುಗೂಡಿ 41ವರ್ಷದಿಂದ ಶ್ರೀರಾಮ ನವಮಿ ಅಂಗವಾಗಿ ದೇವರಿಗೆ ವಿಶೇಷ ಪೂಜೆ ನೆರವೇರಿಸಿ ದೇವರನ್ನು ನೆನೆಯುವ ಮೂಲಕ ಸಾವಿರಾರು ಭಕ್ತರಿಗೆ ಅನ್ನದಾನ , ನೀರು ಮಜ್ಜಿಗೆ, ಪಾನಕವನ್ನು ವಿತರಣೆ ಮಾಡಲಾಗಿದೆ. ಇನ್ನು ಈ ರೀತಿ ದೇವರ ಕಾರ್ಯಗಳು ನಿರಂತರವಾಗಿ ನಡೆದರೆ ಹಿಂದು ಧರ್ಮವನ್ನು ನಾವು ಕಾಪಾಡಬಹುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಚಂದಾಪುರ ಪುರಸಭಾ ಅಧ್ಯಕ್ಷೆ ಶಾರದಾ ವರದರಾಜು, ಮುಖಂಡರಾದ ಹುಲ್ಲಹಳ್ಳಿ ಶ್ರೀನಿವಾಸ್, ನಾರಾಯಣರೆಡ್ಡಿ, ಕೃಷ್ಣಾರೆಡ್ಡಿ, ನಾಗರಾಜುರೆಡ್ಡಿ, ರಮೇಶ್‌ರೆಡ್ಡಿ, ಸುಧಾಕರ್‌ರೆಡ್ಡಿ, ಮಂಜುಳಾನೀಲಕಂಠಪ್ಪ, ಮುರಳಿರೆಡ್ಡಿ, ಮುರಳಿ ಸೇರಿದಂತೆ ಅನೇಕರಿದ್ದರು.

ಕಿರುಸುದ್ದಿ

ಸಾರ್ವಜನಿಕರ ನೆಮ್ಮದಿಗೆ ಭಂಗ: ರೌಡಿ ಸೆರೆ

• **ಬೆಂಗಳೂರು:** ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಸಕ್ರಿಯವಾಗಿ ರೌಡಿ ಚಟುವಟಿಕೆಯಲ್ಲಿ ತೊಡಗಿದ್ದ ಆರೋಪಿಯನ್ನು ಮಹಾಲಕ್ಷ್ಮೀ ಲೇಔಟ್ ಠಾಣಾ ಪೊಲೀಸರು ಗೂಂಡಾ ಕಾಯ್ದೆಯಲ್ಲಿ ಬಂಧಿಸಿದ್ದಾರೆ. ಕುಖ್ಯಾತ ರೌಡಿ ವಿನಯ್ ಕುಮಾರ್ (30) ಬಂಧಿತ ಆರೋಪಿ. ಈತ ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗ ತರುತ್ತಿದ್ದ ಕಾರಣ ಆರೋಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ. ರೌಡಿ ವಿನಯ್ ವಿರುದ್ಧ 2010 ರಿಂದ 2025 ರ ಡಿಸೆಂಬರ್ ವರೆಗೆ ಒಟ್ಟು 29 ಗಂಭೀರ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಈತನ ವಿರುದ್ಧ ಕೊಲೆ, ಕೊಲೆ ಯತ್ನ, ದರೋಡೆ, ದರೋಡೆಗೆ ಸಂಚು, ದೊಂಬಿ, ಹಲ್ಲೆ ಹಾಗೂ ಸುಲಿಗೆಯಂತಹ ಹಲವು ಪ್ರಕರಣಗಳು ಮಹಾಲಕ್ಷ್ಮೀ ಲೇಔಟ್, ನಂದಿನಿ ಲೇಔಟ್, ಪೀಣ್ಯಾ, ವೈಯಾಲಿಕಾವಲ್, ಎಸ್.ಆರ್. ನಗರ ಮತ್ತು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ.

ಜಾಮೀನು ಉಲ್ಲಂಘಿಸಿ ತಲೆಮರೆಸಿಕೊಂಡಿದ್ದ: ಕಳೆದ ವರ್ಷ ಕೊಲೆ ಯತ್ನ ಪ್ರಕರಣದಲ್ಲಿ ಬಂಧಿತನಾಗಿದ್ದ ವಿನಯ್, ಜಾಮೀನಿನ ಮೇಲೆ ಹೊರಬಂದಿದ್ದನು. ಆದರೆ ಜಾಮೀನಿನ ಷರತ್ತುಗಳನ್ನು ಉಲ್ಲಂಘಿಸಿ, ವಿಚಾರಣೆಗೆ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದನು. ಅಷ್ಟೇ ಅಲ್ಲದೆ ತನ್ನ ರೌಡಿ ಚಟುವಟಿಕೆಗಳನ್ನು ಮುಂದುವರಿಸುವ ಮೂಲಕ ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸುತ್ತಿದ್ದನು.

ಪೊಲೀಸ್ ಆಯುಕ್ತರ ಆದೇಶ: ಈತನ ಪುಂಡಾಟಿಕೆಗೆ ಕಡಿವಾಣ ಹಾಕಲು ಮಹಾಲಕ್ಷ್ಮೀ ಲೇಔಟ್ ಪೊಲೀಸರು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಉತ್ತರ ವಿಭಾಗದ ಡಿಸಿಪಿ ಹಾಗೂ ಮಲ್ಲೇಶ್ವರ ಉಪವಿಭಾಗದ ಎಸಿಪಿ ಅವರು ಪರಿಶೀಲಿಸಿ ವರದಿಯನ್ನು ಸಲ್ಲಿಸಿದ್ದರು. ಈ ವರದಿಯನ್ನು ಆಧರಿಸಿ ಪೊಲೀಸ್ ಆಯುಕ್ತರು ನ್ಯಾಯಾಲಯದ ಸಲಹಾ ಮಂಡಳಿ ಹಾಗೂ ಸರ್ಕಾರದ ಅನುಮೋದನೆಯೊಂದಿಗೆ ವಿನಯ್ ಕುಮಾರ್ ಮೇಲೆ ಒಂದು ವರ್ಷದ ಅವಧಿಗೆ ಗೂಂಡಾ ಕಾಯ್ದೆಯಡಿ ಬಂಧನವನ್ನು ಮುಂದುವರಿಸಲು ಆದೇಶ ಹೊರಡಿಸಿದ್ದಾರೆ. ಸದ್ಯ ಆರೋಪಿಯನ್ನು ಪೊಲೀಸರು ಬಂಧಿಸಿ ಜೈಲಿಗೆ ಅಟ್ಟಿದ್ದಾರೆ.

ಐದು ಕಿರು ಹೊತ್ತಗೆ ಬಿಡುಗಡೆ ಕಾರ್ಯಕ್ರಮ

• **ಮಂಡ್ಯ:** ಜನಗಣ ಮುದ್ರಣ ಮತ್ತು ಪ್ರಕಾಶನ, ಮಂಡ್ಯ ಜಿಲ್ಲಾ ಜರ್ನಲಿಸ್ಟ್ ಕ್ಲಬ್‌ನ ಸಹಯೋಗದಲ್ಲಿ ಏ.7ರಂದು ಜಿಲ್ಲೆಗೆ ಸಂಬಂಧಪಟ್ಟ ವಿವಿಧ ಕ್ಷೇತ್ರಗಳ ಐದು ಕಿರು ಹೊತ್ತಿಗೆಗಳ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ಪತ್ರಕರ್ತ ಕೌಡ್ಲೆ ಚನ್ನಪ್ಪ ತಿಳಿಸಿದ್ದಾರೆ. ನಗರದ ಕಲಾಮಂದಿರ ಪಕ್ಕದಲ್ಲಿರುವ ಎಚ್.ಹೊಂಬೇಗೌಡ ಕಾನೂನು ಕಾಲೇಜಿನಲ್ಲಿ ಅಂದು ಬೆಳಗ್ಗೆ 10 ಗಂಟೆಗೆ ಜಿಲ್ಲೆಗೆ ಸಂಬಂಧಪಟ್ಟ 5 ವಿವಿಧ ಕ್ಷೇತ್ರಗಳ ಐದು ಕಿರು ಹೊತ್ತಿಗೆಗಳ ಬಿಡುಗಡೆ ಸಮಾರಂಭವನ್ನು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಲಿದ್ದು, ಚುಂಚಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಾನಿಧ್ಯ ವಹಿಸುವರು. ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅಧ್ಯಕ್ಷತೆ ವಹಿಸಲಿದ್ದು, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಪಿ.ರವಿಕುಮಾರ್ ಗಣಿಗ, ಕೆ.ಎಂ. ಉದಯ್ ಅವರು ಒಂದೊಂದು ಕಿರು ಹೊತ್ತಿಗೆಗಳನ್ನು ಬಿಡುಗಡೆಗೊಳಿಸಲಿದ್ದಾರೆ. ಜಿಲ್ಲೆಯಲ್ಲಿ ಹಾಲಿ 20 ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರಿದ್ದಾರೆ. ಅವರು ಸಲ್ಲಿಸಿರುವ ಸಹಕಾರ ಕ್ಷೇತ್ರದ ಸೇವೆಯ ವಿವರಗಳು ಬಗ್ಗೆ ನಾ ಕಂಡಂತೆ ಜಿ.ಮಾದೇಗೌಡ, ಇವತ್ತಿನ ಸಕ್ಕರೆ ಕಾರ್ಖಾನೆಗಳ ಅಧೋಗತಿ ಹಾಗೂ ಸಹಕಾರ ಕ್ಷೇತ್ರದ ಸ್ಥಿತಿಗತಿ...ಈ ಕುರಿತು ಕಿರು ಹೊತ್ತಿಗೆಗಳನ್ನು ಹೊರತರಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವತಿ ನಾಪತ್ತೆ

• **ಮಂಡ್ಯ:** ಕೆ.ಆರ್. ಪೇಟೆ. ತಾಲ್ಲೂಕಿನ ಅಗ್ರಹಾರಕನಹಳ್ಳಿ ಗ್ರಾಮದ ಎಚ್.ಎಲ್.ಅಂಜಲಿ (21) ಎಂಬುವರು ಕಾಣೆಯಾಗಿದ್ದಾರೆ.



ಚಹರೆ: ಸುಮಾರು 5.1 ಅಡಿ ಎತ್ತರ, ದುಂಡು ಮುಖ, ಗೋಧಿ ಮೈಬಣ್ಣ, ಕಪ್ಪು ಬಣ್ಣದ ಟಿ ಶರ್ಟ್, ಕಪ್ಪು ಜಾಕೆಟ್ ಮತ್ತು ನೀಲಿ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ.ಇವರ ಸುಳಿವು ಸಿಕ್ಕಲ್ಲಿ ದೂ.ಸಂ: 08232224500, 08212445168ನ್ನು ಸಂಪರ್ಕಿಸಬಹುದು ಎಂದು ಕೆ.ಆರ್. ಪೇಟೆ. ಪೊಲೀಸ್ ಠಾಣೆಯ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ

• **ಮಂಡ್ಯ:** 66/11 ಕೆ.ವಿ ಕೋಲಕಾರನದೊಡ್ಡಿ, ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಫ್-07 ಪುರ ಫೀಡರ್ ಮಾರ್ಗದಲ್ಲಿ ಲಿಂಕ್‌ಲೈನ್ ಹಮ್ಮಿಕೊಂಡಿರುವುದರಿಂದ ಏ.6 ರಂದು ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.ಕೋಲಕಾರನದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದ ಪುರ ಫೀಡರ್‌ನ ಪ್ರದೇಶಗಳಾದ ಟಿ. ಮಲ್ಲಿಗೆರೆ, ತಗ್ಗಹಳ್ಳಿ, ಹಳುವಾಡಿ, ಪುರ, ಮರಸಿಂಗನಹಳ್ಳಿ, ತಿಮ್ಮನಹೊಸೂರು, ಲೋಕಸರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಇಂದಿರಾ ಕ್ಯಾಂಟೀನ್‌ನಲ್ಲಿ ಸಿಲಿಂಡರ್ ಕೊರತೆ | ಗ್ರಾಹಕರಿಗೆ ಗುಣಮಟ್ಟದ ಆಹಾರದ ಗುರಿ

ಸೌದೆ ಒಲೆಯಲ್ಲೇ ಊಟ ತಯಾರಿ

• **ವಿಜಯಪುರ:** ವಾಣಿಜ್ಯ ಸಿಲಿಂಡರ್‌ಗಳ ಅಭಾವದಿಂದಾಗಿ ಹೋಟೆಲ್ ಉದ್ಯಮ ತೀವ್ರ ಸಂಕಷ್ಟಕ್ಕೆ ಸಿಲುಕಿರುವುದು ಒಂದೆಡೆಯಾದರೆ, ಬಡವರ ಹಸಿವು ನೀಗಿಸುವ 'ಇಂದಿರಾ ಕ್ಯಾಂಟೀನ್'ಗೂ ಇದರ ಬಿಸಿ ತಟ್ಟಿದ್ದು, ಸೌದೆ ಒಲೆಯಲ್ಲಿ ಅಡುಗೆ ಸಿದ್ಧಪಡಿಸಲಾಗುತ್ತಿದೆ.

ವಿಜಯಪುರ ಪಟ್ಟಣದ ಪುರಸಭೆ ಪಕ್ಕದಲ್ಲಿರುವ ಇಂದಿರಾ ಕ್ಯಾಂಟೀನ್‌ನಲ್ಲಿ, ಕಳೆದ ಒಂದು ವಾರದಿಂದ ಗ್ಯಾಸ್ ಪೂರೈಕೆ ಯಾಗದಿರುವುದರಿಂದ ಸೌದೆ ಒಲೆಯ ಮೂಲಕ ಅಡುಗೆ ತಯಾರಿಸಬೇಕಾದ ಪರಿಸ್ಥಿತಿ ನಿರ್ಮಾಣಗೊಂಡಿದೆ. ಕ್ಯಾಂಟೀನ್ ಒಳಗಡೆ ಸೌದೆ ಒಲೆ ಇಟ್ಟು ಅಡುಗೆ ಮಾಡಲು ಸೂಕ್ತ ವ್ಯವಸ್ಥೆ ಇಲ್ಲದ ಕಾರಣ, ಅಡುಗೆ ಸಿಬ್ಬಂದಿ ಅನಿವಾರ್ಯವಾಗಿ ಹೊರಗಡೆಯೇ ಅಡುಗೆ ಮಾಡುತ್ತಿದ್ದಾರೆ. ಸುಡುವ ಬಿಸಿಲಿನಲ್ಲಿ ಸೌದೆ ಉರಿಸಿ ಅಡುಗೆ ಮಾಡುವುದು ಸಿಬ್ಬಂದಿಗೆ ಸವಾಲಿನ ಕೆಲಸವಾಗಿದೆ.

ಕ್ಯಾಂಟೀನ್ ಪಕ್ಕದಲ್ಲೇ ಶಾಲೆಯಿದ್ದು, ಸೌದೆ ಒಲೆಯಿಂದ ಹೊರ ಬರುವ ದಟ್ಟ ಹೊಗೆ ಶಾಲಾ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಹೊಗೆಯಿಂದಾಗಿ ಮಕ್ಕಳು ಪಾಠ ಕೇಳಲು ತೊಂದರೆಯಾಗುತ್ತಿದೆ ಎಂದು ಸ್ಥಳೀಯರು ದೂರಿದ್ದಾರೆ. ಅಡುಗೆ ತಯಾರಿಸಲು ಒಂದು ಲೋಡ್ ಸೌದೆಗೆ 5 ರಿಂದ 6 ಸಾವಿರ ರೂ. ಖರ್ಚಾಗುತ್ತಿದೆ. ಮಾರುಕಟ್ಟೆಯಲ್ಲಿ ಒಣ ಸೌದೆ ಸಿಗುತ್ತಿಲ್ಲ, ಹೀಗಾಗಿ ಹಸಿ ಸೌದೆ ಬಳಸುವುದರಿಂದ ಅಡುಗೆ ತಡವಾಗುತ್ತಿದ್ದು, ವಿಪರೀತ ಹೊಗೆಯಿಂದ ಆರೋಗ್ಯದ ಮೇಲೂ ಪರಿಣಾಮ ಬೀಳುತ್ತಿದೆ ಎಂದು ಕ್ಯಾಂಟೀನ್ ಸಿಬ್ಬಂದಿಯೊಬ್ಬರು ತಿಳಿಸಿದರು.





ಅಧಿಕಾರಿಗಳು ವಾಣಿಜ್ಯ ಸಿಲಿಂಡರ್ ಪೂರೈಸಲಿ

ಪ್ರತಿನಿತ್ಯ ಸಾವಿರಾರು ಕಾರ್ಮಿಕರು, ಹಮಾಲಿಗಳು ಮತ್ತು ನಿರ್ಮಾಣ ಕಾರ್ಯಕರ್ತರು ಈ ಕ್ಯಾಂಟೀನ್ ಅವಲಂಬಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗಮನಹರಿಸಿ ವಾಣಿಜ್ಯ ಸಿಲಿಂಡರ್ ಪೂರೈಕೆಗೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಆಹಾರ ಮೆನುವಿನಲ್ಲಿ ವ್ಯತ್ಯಯ; ಬೆಳಗ್ಗೆ 7.30 ಕ್ಕೆ ತಿಂಡಿ, ಮಧ್ಯಾಹ್ನ 12.30 ಕ್ಕೆ ಊಟ ಹಾಗೂ ಸಂಜೆ 7 ಗಂಟೆಗೆ ರಾತ್ರಿ ಊಟ ಸಿದ್ಧವಾಗಿರಬೇಕು. ಆದರೆ ಸಿಲಿಂಡರ್ ಇಲ್ಲದ ಕಾರಣ ಚಪಾತಿ ಸುಡುವ ಮಿಷನ್ ಸ್ಥಗಿತಗೊಂಡಿದೆ.

ಹೊರಗಿನಿಂದ ಚಪಾತಿ ಪೂರೈಕೆ

ಗ್ರಾಹಕರು ಬಂದು ಇಡ್ಲಿ, ಚಪಾತಿ ಕೇಳುತ್ತಾರೆ. ಒಲೆಯಲ್ಲಿ ಇವುಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಅನಿವಾರ್ಯವಾಗಿ ಹೊರಗಿನಿಂದ ಚಪಾತಿ ತಂದು ಕೊಡುತ್ತಿದ್ದೇವೆ. ಶೀಘ್ರವಾಗಿ ಗ್ಯಾಸ್ ಪೂರೈಕೆ ಮಾಡದಿದ್ದರೆ ಹೆಚ್ಚು ತೊಂದರೆಯಾಗಲಿದೆ ಎಂದು ಅಡುಗೆ ತಯಾರಕ ಚನ್ನಬಸವ ಹೇಳಿದರು.

ಗುತ್ತಿಗೆದಾರರು ಕರೆ ಸ್ವೀಕರಿಸುತ್ತಿಲ್ಲ

ಗ್ಯಾಸ್ ಗುತ್ತಿಗೆದಾರರು ಫೋನ್ ಮಾಡಿದರೆ ಅವರು ಕರೆಯನ್ನು ಸ್ವೀಕರಿಸುತ್ತಿಲ್ಲ. ಅನಿವಾರ್ಯವಾಗಿ ಮೂರು ಪಟ್ಟು ಹಣ ನೀಡಿ ಸೌದೆ ತರಿಸಿ ರೈಸ್ ಬಾತ್, ಉಪ್ಪಿಟ್ಟು ಮಾಡುತ್ತಿದ್ದೇವೆ. ಕ್ಯಾಂಟೀನ್ ನಂಬಿ ಬರುವ ನೂರಾರು ಕೂಲಿ ಕಾರ್ಮಿಕರಿಗೆ ತೊಂದರೆಯಾಗಬಾರದೆಂದು ಈ ಸಾಹಸ ಮಾಡುತ್ತಿದ್ದೇವೆ ಎಂದು ಕ್ಯಾಂಟೀನ್‌ನ ಸಿಬ್ಬಂದಿ ಸರಸ್ವತಮ್ಮ ಹೇಳಿದರು.

ಐಪಿಎಲ್-2026ರ ಟಿಕೆಟ್ ಖರೀದಿಯಲ್ಲಿ ವಂಚನೆ

1.46 ಲಕ್ಷ ಕಳೆದುಕೊಂಡ ಟೆಕ್ಕಿ

• **ಬೆಂಗಳೂರು:** ಐಪಿಎಲ್ 2026ರ ಟಿಕೆಟ್‌ಗಳನ್ನು ಅಧಿಕೃತ ಪ್ಲಾಟ್‌ಫಾರ್ಮ್‌ಗಳನ್ನು ಬಿಟ್ಟು ಸಾಮಾಜಿಕ ಜಾಲತಾಣದಲ್ಲಿ ಟಿಕೆಟ್ ಖರೀದಿಸಲು ಹೋದ ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬರು ಬರೋಬ್ಬರಿ 1.46 ಲಕ್ಷ ರೂ. ಕಳೆದುಕೊಂಡು ವಂಚನೆಗೆ ಒಳಗಾದ ಘಟನೆ ನಡೆದಿದ್ದು, ಈ ಸಂಬಂಧ ಮಹದೇವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇನ್‌ಸ್ಟಾಗ್ರಾಮ್ ಪರಿಚಯವೇ ಮುಳುವಾಯಿತು: ಬಿ. ನಾರಾಯಣಪುರ ನಿವಾಸಿಯಾದ 25 ವರ್ಷದ ಯುವಕನಿಗೆ ಇನ್‌ಸ್ಟಾಗ್ರಾಮ್‌ನಲ್ಲಿ ವ್ಯಕ್ತಿಯೊಬ್ಬನ ಪರಿಚಯವಾಗಿತ್ತು. ಆತ ತನ್ನನ್ನು ಚಿನ್ನಸ್ವಾಮಿ ಕ್ರೀಡಾಂಗಣದ ಟಿಕೆಟ್ ಕೌಂಟರ್‌ನ ಹಿರಿಯ ಮೇಲ್ವಿಚಾರಕ ಸುಮಿತ್ ಬಿಸ್ವಾಲ್ ಎಂದು ಸುಳ್ಳು ಹೆಸರಿನಲ್ಲಿ ಪರಿಚಯಿಸಿಕೊಂಡಿದ್ದ. ಕೇವಲ ಟಿಕೆಟ್ ಮಾತ್ರವಲ್ಲದೆ, ಪಂದ್ಯದ ವೇಳೆ ವಿಶೇಷ ಊಟದ ಕೂಪನ್‌ಗಳು ಹಾಗೂ ಪ್ರೀಮಿಯಂ ಸೌಲಭ್ಯಗಳನ್ನು ಕೊಡಿಸುವುದಾಗಿ ನಂಬಿಸಿ ಸಂತ್ರಸ್ತನನ್ನು ಮೋಸದ ಜಾಲಕ್ಕೆ ಎಳೆದಿದ್ದ. ಆರಂಭದಲ್ಲಿ ಎರಡು ಟಿಕೆಟ್‌ಗಳಿಗೆ ಕೇವಲ 3,700 ರೂ. ದರ ನಿಗದಿ ಮಾಡಿದ್ದ ಆರೋಪಿ, ನಂತರ ಭದ್ರತಾ ಠೇವಣಿ, ಹೆಚ್ಚುವರಿ ಐಡಿ ಕಾರ್ಡ್ ಪ್ರಕ್ರಿಯೆ ಮತ್ತು ಫುಡ್ ಕೂಪನ್ ಹೆಸರಿನಲ್ಲಿ ಹಂತ ಹಂತವಾಗಿ ಹಣ ಪಾವತಿಸುವಂತೆ ಸಂತ್ರಸ್ತನ ಮೇಲೆ ಒತ್ತಡ ಹೇರಿದ್ದ. ಇದನ್ನು ನಿಜವೆಂದು ನಂಬಿದ ಟೆಕ್ಕಿ, ತನ್ನ ಹಾಗೂ ತಾಯಿಯ ಖಾತೆಯಿಂದ ಯುಪಿಐ ಮೂಲಕ ಒಟ್ಟು 1.46 ಲಕ್ಷ ರೂ.ಗಳನ್ನು ಆರೋಪಿಯ ಖಾತೆಗೆ ವರ್ಗಾಯಿಸಿದ್ದರು.

ನಕಲಿ ಇ-ಮೇಲ್ ನೀಡಿ ಯಾಮಾರಿಸಿದ ಖದೀಮ: ವಂಚಕನು ನಂಬಿಕೆ ಹುಟ್ಟಿಸಲು ನಕಲಿ ಇಮೇಲ್ ದೃಢೀಕರಣ ಪತ್ರವನ್ನೂ ಕಳುಹಿಸಿದ್ದಲ್ಲದೆ, ಪಂದ್ಯದ ದಿನ ಕ್ರೀಡಾಂಗಣದ ಗೇಟ್ ಸಂಖ್ಯೆ 10ರ ಬಳಿ ಬರುವಂತೆ ಸೂಚಿಸಿದ್ದ. ಆದರೆ, ಹಣ ಪಡೆದ ಬಳಿಕ ಆತ ಟಿಕೆಟ್ ನೀಡದೆ ಸಂಪರ್ಕ ಕಡಿತಗೊಳಿಸಿದ್ದಾನೆ. ಅಂತಿಮವಾಗಿ ಹಣವನ್ನೂ ಹಿಂದಿರುಗಿಸದೆ ಕೈಕೊಟ್ಟಾಗ, ತಾನು ಮೋಸ ಹೋಗಿರುವುದು ಟೆಕ್ಕಿಗೆ ಅರಿವಾಗಿದೆ. ಮಹದೇವಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಐಪಿಎಲ್ ಟಿಕೆಟ್ ಕೇವಲ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಮಾತ್ರ ಖರೀದಿಸಬೇಕು ಮತ್ತು ಅಪರಿಚಿತರಿಗೆ ಹಣ ವರ್ಗಾವಣೆ ಮಾಡುವ ಮುನ್ನ ಎಚ್ಚರದಿಂದಿರಬೇಕು ಎಂದು ಪೊಲೀಸರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಪ್ರಾಣಿಪಕ್ಷಿಗಳಿಗೆ ನೀರುಣಿಸುವ ಕಾರ್ಯ

• **ಹುಲಿಯೂರು:** ಬೇಸಿಗೆಯ ಬಿಸಿಲ ತಾಪಕ್ಕೆ ತತ್ತರಿಸುತ್ತಿರುವ ಪಕ್ಷಿ ಸಂಕುಲದ ರಕ್ಷಣೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ವಿನೂತನ ಮತ್ತು ಮಾದರಿ ಕಾರ್ಯಕ್ಕೆ ಮುಂದಾಗಿದೆ. 'ಕಸದಿಂದ ರಸ' ಎಂಬ ಪರಿಕಲ್ಪನೆಯಲ್ಲಿ ಶನಿವಾರದಿಂದ ಆರಂಭಿಸಿರುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಬಳಸಿಕೊಂಡು ಪಕ್ಷಿಗಳಿಗೆ ನೀರುಣಿಸುವ ಅಭಿಯಾನ ಸಾರ್ವಜನಿಕರ ಶ್ಲಾಘನೆಗೆ ಪಾತ್ರವಾಗಿದೆ.

ಸಾಮಾನ್ಯವಾಗಿ ಪ್ಲಾಸ್ಟಿಕ್ ಬಾಕ್ಸ್ ಅಥವಾ ಬಾಟಲಿಗಳನ್ನು ಎಸೆಯುವ ಬದಲಾಗಿ, ಅವುಗಳನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲಾಗಿದೆ. ವೇಸ್ಟ್ ಪ್ಲಾಸ್ಟಿಕ್ ಚಾಕಲೇಟ್ ಬಾಕ್ಸ್‌ಗಳನ್ನು ಅರ್ಧಕ್ಕೆ ತುಂಡು ಮಾಡಿ, ಸುಂದರವಾದ ನೀರಿನ ಪಾತ್ರೆಗಳನ್ನಾಗಿ ಪರಿವರ್ತಿಸಿ ಮರಗಳಿಗೆ ಕಟ್ಟುವ ಮೂಲಕ ಪರಿಸರ ಕಾಳಜಿಯ ಜೊತೆಗೆ ಪಕ್ಷಿಗಳ ದಾಹ ತಣಿಸುವ ಕೆಲಸ ಮಾಡಲಾಗಿದೆ. ಮೂಕ ಪಕ್ಷಿಗಳ ದಾಹ ತಣಿಸುವ ಮೂಲಕ ಧರ್ಮಸ್ಥಳ ಯೋಜನೆಯು ಮತ್ತೊಮ್ಮೆ ತನ್ನ ಸಾಮಾಜಿಕ ಬದ್ಧತೆಯನ್ನು ಸಾಬೀತುಪಡಿಸಿದೆ. ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಹಾಗೂ ಹೇಮಾವತಿ ಅಮ್ಮನವರ ಆಶಯದಂತೆ ಹಮ್ಮಿಕೊಳ್ಳಲಾದ ಈ ಅಭಿಯಾನವು ಪರಿಸರ ಪ್ರೇಮದ ಸಂಕೇತವಾಗಿ ಮೂಡಿಬಂದಿದೆ. ಮೊದಲನೇ ಹಂತದಲ್ಲಿ ಹುಲಿಯೂರಿನ ಗಾಂಧಿ ಭವನ ಹಾಗೂ ಅಂಬೇಡ್ಕರ್ ಭವನದ ಆವರಣದಲ್ಲಿರುವ ಮರಗಳಿಗೆ ನೀರಿನ ಡಬ್ಬಿಗಳನ್ನು ಅಳವಡಿಸಲಾಗಿದೆ. ಕೇವಲ ನೀರಿನ ಡಬ್ಬಿಗಳನ್ನು ಇಡುವುದಕ್ಕೆ ಸೀಮಿತವಾಗದೆ, ಅದರ ನಿರಂತರ ನಿರ್ವಹಣೆಯತ್ತಲೂ ಯೋಜನೆ ಗಮನಹರಿಸಿದೆ. ಪ್ರತಿನಿತ್ಯ ಆ ಡಬ್ಬಿಗಳಿಗೆ ನೀರು ತುಂಬಿಸುವ ಮತ್ತು ಅವುಗಳ ಸ್ವಚ್ಛತೆಯನ್ನು ಕಾಪಾಡುವ ಜವಾಬ್ದಾರಿಯನ್ನು ಯೋಜನೆ ವಿಎಲ್‌ಎ (ವಿಲೇಜ್ ಲೆವೆಲ್ ಅಸಿಸ್ಟೆಂಟ್) ಗಳಿಗೆ ವಹಿಸಲಾಗಿದೆ. ಯೋಜನಾಧಿಕಾರಿ ರಾಮಚಂದ್ರ ಡಿ., ಜ್ಞಾನವಿಕಾಸ ಸಮನ್ವಯಾಧಿಕಾರಿ ಸುನಿತಾ, ಮೇಲ್ವಿಚಾರಕಿ ಉಮಾದೇವಿ, ಶಿಕ್ಷಕಿಯರಾದ ಅಂಬಿಕಾ, ಗಾಯತ್ರಮ್ಮ, ಸೇವಾಪ್ರತಿನಿಧಿ ರತ್ನಮ್ಮ, ಭಾಗ್ಯಮ್ಮ, ಕೇಶವಮೂರ್ತಿ ಹಾಗೂ ಊರಿನ ಗಣ್ಯರು ಈ ಮಾನವೀಯ ಕಾರ್ಯದಲ್ಲಿ ಕೈಜೋಡಿಸಿ ಯಶಸ್ವಿಗೊಳಿಸಿದ್ದಾರೆ. ಉರಗ ಪ್ರೇಮಿ, ಹುಳಿಯಾರು ಎಚ್.ಡಿ.ಯತೀಶ್ ಮಾತನಾಡಿ, ಸುಡುತ್ತಿರುವ ಬೇಸಿಗೆಯ ಬಿಸಿಲಿಗೆ ಭೂಮಿ ಕಾಯುತ್ತಿದೆ, ಕೆರೆ-ಕುಂಟೆಗಳು ಬತ್ತುತ್ತಿವೆ. ಮನುಷ್ಯರೇ ದಾಹ ತಾಳಲಾರದೆ ಪರದಾಡುತ್ತಿರುವ ಈ ಕಾಲದಲ್ಲಿ, ಬಾಯಾರಿದ ಮೂಕ ಹಕ್ಕಿಗಳ ನೆರವಿಗೆ ಬರಲು ಮುಂದಾಗಿದೆ. ಯೋಜನೆಯ ಈ ಕಾರ್ಯವು ಕೇವಲ ಮನುಷ್ಯರ ಏಳಿಗೆಗೆ ಮಾತ್ರವಲ್ಲದೆ, ಜೀವಸಂಕುಲದ ಉಳಿವಿನ ಬಗ್ಗೆ ಸಂಸ್ಥೆ ಹೊಂದಿರುವ ಕಾಳಜಿಯನ್ನು ಎತ್ತಿ ತೋರಿಸುತ್ತಿದೆಂದರು.



ಮೂಗು ಮುನೇಶ್ವರಸ್ವಾಮಿಗೆ ಪರುವು ಮಹೋತ್ಸವ



• **ವಿಜಯಪುರ:** ಇಲ್ಲಿನ ಹೊರವಲಯದ ಭರತನಗರದ 3ನೇ ವಾರ್ಡ್ ಚನ್ನಸಂದ್ರ ದಿನ್ನೆ ಬಳಿ ಇರುವ ಮೂಗು ಮುನೇಶ್ವರಸ್ವಾಮಿ ದೇವಾಲಯದಲ್ಲಿ ಪರುವು ಮಹೋತ್ಸವ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಮಹೋತ್ಸವ ಅಂಗವಾಗಿ ದೇವಾಲಯದ ಮೂಗು ಮುನೇಶ್ವರಸ್ವಾಮಿ ಮೂರ್ತಿಗೆ ವಿವಿಧ ಬಗೆಯ ಪುಷ್ಪದಿಂದ ಅಲಂಕರಿಸಿ, ಪಂಚಾಮೃತ ಅಭಿಷೇಕ, ಗಣಪತಿ ಪೂಜೆ, ಮಹಾಸಂಕಲ್ಪ, ವಾಸುದೇವ, ಪುಣ್ಯಾಹ, ಗಣಪತಿ ಹೋಮ, ವಾಸ್ತು ಹೋಮ, ಮಹಾಮೃತ್ಯುಂಜಯ ಹೋಮ, ಗ್ರಾಮ ದೇವತಾ ಹೋಮ ನಡೆಯಿತು. ಪಟ್ಟಣದಲ್ಲಿ ಮೂಗು ಮುನೇಶ್ವರಸ್ವಾಮಿ ದೇವಾಲಯ ಹೆಚ್ಚು ಪ್ರಸಿದ್ಧಿ ಹೊಂದಿದ್ದು, ಪರವು ಮಹೋತ್ಸವಕ್ಕೆ ಪಟ್ಟಣದ ಸೇರಿದಂತೆ ಗ್ರಾಮೀಣ ಭಾಗದಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಪೂಜೆ ಸಲ್ಲಿಸುವರು. ಇಲ್ಲಿಗೆ ಬರುವ ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಸ್ಥಳೀಯ ಮುಖಂಡ ಮರವೆ ಕೆಂಪಣ್ಣ ತಿಳಿಸಿದರು. ಧಾರ್ಮಿಕ ಕೈಂಕರ್ಯಗಳನ್ನು ಅರ್ಚಕ ಶ್ರೀನಾಥ್ ಭಟ್ಟಾಚಾರ್ಯ ನಡೆಸಿಕೊಟ್ಟರು. ಸಂಗೀತ ನಿರ್ದೇಶಕ ಎಂ.ವಿ.ನಾಯ್ಡು ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ದೇವಾಲಯದ ಅರ್ಚಕ ಮುನಿಕೃಷ್ಣಪ್ಪ, ಮಂಜಣ್ಣ, ಜಿ.ರಾಜಗೋಪಾಲ್, ರಮೇಶ್ ಇದ್ದರು.

ದೇವನಹಳ್ಳಿಯಲ್ಲಿ ಕಾಲುಬಾಯಿ ಲಸಿಕಾ ಅಭಿಯಾನ

ಏ.23ರಿಂದ ರಾಸುಗಳಿಗೆ ಉಚಿತ ಲಸಿಕೆ

• **ದೇವನಹಳ್ಳಿ:** ಏ.23 ರಿಂದ ಜಾನುವಾರುಗಳಿಗೆ ಉಚಿತ ಕಾಲು ಬಾಯಿ ಲಸಿಕೆ ಹಾಕುವ ಅಭಿಯಾನ ಹಮ್ಮಿಕೊಳ್ಳಲಾಗಿದೆ. ರೈತರು ತಮ್ಮ ಜಾನುವಾರಿಗೆ ಉಚಿತ ಕಾಲುಬಾಯಿ ಲಸಿಕೆ ಹಾಕಿಸಿ ಎಂದು ಎಂದು ಅಪರ ಜಿಲ್ಲಾಧಿಕಾರಿ ಸೈಯಿದಾ ಆಯಿಷಾ ಹೇಳಿದರು.

ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ 9ನೇ ಸುತ್ತಿನ ಕಾಲುಬಾಯಿ ಲಸಿಕಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಸ್ತುತ ಜಾನುವಾರು ಗಣತಿಯಂತೆ ಒಟ್ಟು 1.31.986 ದನ. 9,090 ಎಮ್ಮೆಗಳಿವೆ, ಒಟ್ಟು 1,41,076 ಜಾನುವಾರುಗಳಿಗೆ ಏ. 23ರಿಂದ ಮೇ 22ರವರೆಗೆ 9ನೇ ಸುತ್ತಿನ ಕಾಲುಬಾಯಿ ರೋಗ ಲಸಿಕಾ ಕಾರ್ಯಕ್ರಮವನ್ನು ಬಮುಲ್ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದೆ. ಶೇಕಡಾ 100 ರಷ್ಟು ಗುರಿ ಸಾಧಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಒಟ್ಟು 1687 ಬ್ಲಾಕ್ ಗಳನ್ನಾಗಿ ವಿಂಗಡಿಸಲಾಗಿದೆ. ಒಟ್ಟು 199 ತಂಡಗಳಲ್ಲಿ ಇಲಾಖಾ ಅಧಿಕಾರಿ, ಸಿಬ್ಬಂದಿ ಮತ್ತು ಬಮುಲ್ ಸಿಬ್ಬಂದಿ ಸೇರಿ ಒಟ್ಟು 333 ಲಸಿಕೆದಾರರು ಪ್ರತಿದಿನ ಬೆಳಗ್ಗೆ 5.30ಯಿಂದ ಬೆಳಗ್ಗೆ 11.00 ಗಂಟೆಯವರೆಗೆ ನಿಗದಿತ ವೇಳಾಪಟ್ಟಿಯಂತೆ ಗ್ರಾಮಗಳಿಗೆ ಭೇಟಿ ನೀಡಿ, ಜಾನುವಾರುಗಳಿಗೆ ಕಾಲುಬಾಯಿ ಜ್ವರದ ಲಸಿಕೆಯನ್ನು ಉಚಿತವಾಗಿ ನೀಡಲಿದ್ದಾರೆ. ಪ್ರತಿ ಗ್ರಾಮವಾರು ಮೈಕ್ರೋಪ್ಲಾನ್ ಮಾಡಲಾಗಿದೆ. ಅದರನ್ವಯ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಈ ಲಸಿಕಾ ಕಾರ್ಯಕ್ರಮದ ಕುರಿತು ರೈತರಿಗೆ ಮನವರಿಕೆ ಮಾಡಿ ಕೊಡುವ ಸಲುವಾಗಿ ಬ್ಯಾನರ್, ಪೋಸ್ಟರ್ ತು ಕರಪತ್ರವನ್ನು ಮುದ್ರಿಸಿ, ಜಿಲ್ಲೆಯ ಪ್ರತಿ ಪಶುವೈದ್ಯಕೀಯ ಸಂಸ್ಥೆ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ಆವರಣದಲ್ಲಿ ಪ್ರದರ್ಶಿಸಲಾಗಿದೆ ಎಂದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 1,53,500 ಡೋಸಸ್ ಕಾಲುಬಾಯಿ ರೋಗ ಲಸಿಕೆ ಲಭ್ಯವಿರುತ್ತದೆ. ಲಸಿಕಾ ಕಾರ್ಯಕ್ರಮಕ್ಕೆ ಅಗತ್ಯವಿರುವ ಸಿರಿಂಜ್ ಗಳು ಸರಬರಾಜಾಗಿವೆ. ಬಮುಲ್‌ನಿಂದ ಈ ಲಸಿಕಾ ಕಾರ್ಯಕ್ರಮಕ್ಕೆ 38 ಲಸಿಕೆದಾರರನ್ನು ಒದಗಿಸಲಾಗುತ್ತಿದೆ.

ಉಪನಿರ್ದೇಶಕ ಡಾ. ಜಗದೀಶ್ ಕುಮಾರ್ ಮಾತನಾಡಿ, ಪ್ರತಿ ರಾಸಿಗೆ ಒಂದರಂತೆ ಸಿರಿಂಜ್ ಮತ್ತು ಸೂಜಿಯನ್ನು ಬಳಸಿ ಲಸಿಕೆ ಹಾಕಲಾಗುವುದು. ರೈತ ಬಾಂಧವರು ತಮ್ಮ ಮೂರು ತಿಂಗಳ ಮೇಲ್ಪಟ್ಟ ಎಲ್ಲಾ ಜಾನುವಾರುಗಳಿಗೆ ತಪ್ಪದೇ ಕಾಲುಬಾಯಿ ರೋಗ ಲಸಿಕೆ ಹಾಕಿಸಿ ಹಾಗೂ ಕರುಗಳಿಗೆ 21 ದಿನದ ನಂತರ ಬೂಸ್ಟರ್ ಡೋಸ್ ಲಸಿಕೆ ಹಾಕಿಸಿ ಹಾಗೂ ಲಸಿಕೆ ಮಾಡಿದ ಆದರಂತೆ ರೈತ ಬಾಂಧವರು ಈ ಲಸಿಕಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ವಿನಂತಿಸಲಾಗಿದೆ ಎಂದು ಹೇಳಿದರು.

ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರಮೇಶ್, ಮುಖ್ಯಪಶುವೈದ್ಯಾಧಿಕಾರ ಡಾ. ನಾರಾಯಣಸ್ವಾಮಿ, ಡಾ.ಸದಾಶಿವಮೂರ್ತಿ, ಡಾ.ಮಂಜುನಾಥ್ ಎಂ.ಕೆ. ಹಾಜರಿದ್ದರು.



ಸಂವಿಧಾನ ಓದು ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿದ ಹೈಕೋರ್ಟ್ ನ್ಯಾ. ಎಂ.ಪಿ.ಸಂದೇಶ್

ಮಧ್ಯಪ್ರಾಚ್ಯದ ಯುದ್ಧ ವಿರೋಧಿಸಿ ನಾಗರಿಕರು ಧ್ವನಿ ಎತ್ತಲಿ

• **ನೆಲಮಂಗಲ:** ಸಂವಿಧಾನ ಹಾಗೂ ಸಮಾಜ ಉಳಿಯಲು ಮಕ್ಕಳಿಗೆ ಪೋಷಕರು, ಶಿಕ್ಷಕರು ಶಿಕ್ಷಣ, ಸಂಸ್ಕಾರ ಕಲಿಸುವ ಅನಿವಾರ್ಯತೆ ಇದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ತಿಳಿಸಿದರು.

ನಗರದ ಬೈರವೇಶ್ವರ ನಗರದ ಹರ್ಷ ಸಮೂಹ ಸಂಸ್ಥೆಗಳ ಸಭಾಂಗಣದಲ್ಲಿ ಸಂವಿಧಾನ ಓದು ಅಭಿಯಾನದ ಅಂಗವಾಗಿ ಆಯೋಜಿಸಲಾಗಿದ್ದ ಜಿಲ್ಲಾಮಟ್ಟದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ಸಂವಿಧಾನ ಎಂಬುದು ಕೇವಲ ಒಂದು ಲಿಖಿತ ಗ್ರಂಥವಲ್ಲ, ಅದು ಪ್ರತಿಯೊಬ್ಬ ನಾಗರಿಕನ ಹಕ್ಕು ಮತ್ತು ಕರ್ತವ್ಯವನ್ನು ನೆನಪಿಸುವ ದಾರಿದೀಪವಾಗಿದೆಂದು ಹೇಳಿದರು.

ಪ್ರತಿಯೊಬ್ಬರು ವಿವೇಕನಂದರು ಹೇಳಿದಂತೆ ಶಿಸ್ತು, ಶ್ರಮ, ಸಮಯ ಪ್ರಜ್ಞೆ, ಆತ್ಮವಿಶ್ವಾಸ, ನಿರ್ಧಾರಯತೆಯನ್ನು ಇಟ್ಟುಕೊಂಡಿರಬೇಕು. ಇತ್ತೀಚಿಗೆ ಹಣದ ಹಿಂದೆ ಬಿದ್ದು ಸಮಾಜ ನಾಶ ಮಾಡುತ್ತಿದ್ದಾರೆಂದರು. ದೇಶದ ಅನೇಕ ಸಮಸ್ಯೆಯಲ್ಲಿ ಭ್ರಷ್ಟಾಚಾರವೂ ದೊಡ್ಡ ಸಮಸ್ಯೆಯಾಗಿದೆ, ನ್ಯಾಯಾಧೀಶರ ಬಳಿಯೂ ಲಂಚ ಪಡೆದ ಉದಾಹರಣೆ ಇದೆ. ಅದು ಕೆಲ ದಿನದ ಹಿಂದೆ 84 ಯುವ ನ್ಯಾಯಾಧೀಶರ ಆಯ್ಕೆ ಮಾಡಲಾಗಿತ್ತು, 14 ಯುವ ನ್ಯಾಯಾಧೀಶರನ್ನು ಜಯನಗರದ ಆಸ್ಪತ್ರೆಗೆ ಮೆಡಿಕಲ್ ಸರ್ಟಿಫಿಕೇಟ್ ಪಡೆಯಲು ಹೋದಾಗ ವೈದ್ಯರು 14 ಸಾವಿರ ಲಂಚ ಪಡೆದಿದ್ದಾರೆಂದು ದೂರಿದರು. ಗಡಿ ಮತ್ತು ನದಿ ಸಂರಕ್ಷಣ ಆಯೋಗದ ಅಧ್ಯಕ್ಷ ಎಚ್.ಎನ್. ನಾಗಮೋಹನ್‌ದಾಸ್ ಮಾತನಾಡಿ, ಬುದ್ಧ, ಬಸವ, ಗಾಂಧೀಜಿ, ಅಂಬೇಡ್ಕರ್ ಅವರ ಸಂದೇಶದಲ್ಲಿ ಸಂವಿಧಾನ ರಚನೆಯಾಗಿ ಭಾರತದ ಬಹುಕೋಟಿ ಜನರ ರಕ್ಷಣೆಗೆ ಬಲವಾಗಿದೆಂದು ತಿಳಿಸಿದರು. ಇಂದು ನಾವು ಸಂವಿಧಾನವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದೇವೆ. ಸಂವಿಧಾನ ಉಳಿಯಬೇಕಾದರೆ ದೇಶದ ಯುವ ಸಮುದಾಯ ಸಂವಿಧಾನವನ್ನು ಕಲಿಯುವ, ಕಲಿಸುವ, ಉಳಿಸುವ ಕೆಲಸ ಮಾಡಬೇಕು. ಯುವ ಸಮುದಾಯ ಎಚ್ಚರವಾದರೆ ಸಂವಿಧಾನದ ಆಶಯಗಳಿಗೆ ಮತ್ತಷ್ಟು ಬಲ ಬರುತ್ತದೆ ಎಂದರು.

ಹರ್ಷ ಸಮೂಹ ಸಂಸ್ಥೆ ಅಧ್ಯಕ್ಷ ಡಾ.ಶಿವಕುಮಾರ್ ಮಾತನಾಡಿ, ಸಂವಿಧಾನದ ಅನಿವಾರ್ಯತೆ ಹಾಗೂ ಅದರ ರಕ್ಷಣೆ,ಪಾಲನೆಯ ಬಗ್ಗೆ ಮಾಹಿತಿ ನೀಡಿರುವುದು ಇಂದಿನ ಪೀಳಿಗೆಗೆ ಬಹಳ ಮುಖ್ಯವಾದ ಸಂಗತಿಯಾಗಿದೆಂದರು.

ಪ್ರಶಸ್ತಿ ವಿತರಣೆ : ಸಂವಿಧಾನ ಓದು ಅಭಿಯಾನ ಸಮಿತಿ ಹಾಗೂ ಹರ್ಷ ಸಮೂಹ ಸಂಸ್ಥೆ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಥಮ ಸ್ಥಾನವನ್ನು ಸರಕಾರಿ ಪ್ರಥಮ ದರ್ಜೆಕಾಲೇಜು ಸಿದ್ದವ್ವ ಭೀರಪ್ಪ ಪೂಜಾರಿ 15,000 ನಗದು, ದ್ವಿತೀಯ ಬಹುಮಾನ ಹರ್ಷವಿದ್ಯಾಸಂಸ್ಥೆಯ ಲಕ್ಷ್ಮೀ 10,000 ನಗದು ಹಾಗೂ ತೃತೀಯ ಬಹುಮಾನ ಬಸವೇಶ್ವರ ಮಹಿಳಾ ಪ್ರಥಮ ದರ್ಜೆಯ ನಿಖಿತಾ ಎಚ್.ಆರ್ 5,000 ರೂ. ನಗದು ಪುರಸ್ಕಾರರ ಜತೆ 50 ವಿದ್ಯಾರ್ಥಿಗಳಿಗೆ ಸಮಾಧಾನಕರ ಬಹುಮಾನವನ್ನು ಹರ್ಷ ಸಮೂಹ ಸಂಸ್ಥೆ ಅಧ್ಯಕ್ಷ ಶಿವಕುಮಾರ್ ಸಹಕಾರದೊಂದಿಗೆ ನೀಡಲಾಯಿತು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಕೆ.ಕೇಶವಮೂರ್ತಿ, ಬೆಂಗಳೂರು ಸರ್ಕಾರಿ ಕಲಾ ಕಾಲೇಜಿನ ಪ್ರಾಧ್ಯಾಪಕ ಡಾ. ರುದ್ರೇಶ್ ಅದರಂಗಿ, ಸಂವಿಧಾನ ಓದು ಅಭಿಯಾನ ಬಿ.ರಾಜಶೇಖರ್‌ಮೂರ್ತಿ, ರಾಜಗೋರೂರು, ಹರ್ಷ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜಿಂಗ್ ಸ್ಟಡೀಸ್‌ನ ಪ್ರಾಂಶುಪಾಲೆ ಡಾ.ಸಂಧ್ಯಾ, ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಸುಜಾತಾ ಸೇರಿದಂತೆ ಮತ್ತಿತರರಿದ್ದರು.



ಸರಸ್ವತಿ ಗೋಸ್ವಾಮಿ ಪ್ರಭುಪಾದರ 153ನೇ ಜಯಂತಿ

ಶ್ರೀಲ ಪ್ರಭುಪಾದರ ಆದರ್ಶ ಪಾಲಿಸಲಿ



• ಬೆಂಗಳೂರು: ನಾವು ಆಚಾರ್ಯ ಶ್ರೀಲ ಪ್ರಭುಪಾದರ ಆದರ್ಶವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮತ್ತು ಎಂದಿಗೂ ಸತ್ಯ, ನೀತಿಯನ್ನು ಅನುಸರಿಸಬೇಕು. ಸಮಾಜ ಸೇವೆಯನ್ನು ನಮ್ಮ ಕರ್ತವ್ಯವೆಂದು ಪರಿಗಣಿಸಬೇಕು ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಹೇಳಿದರು.

ಆಚಾರ್ಯ ಶ್ರೀಲ ಭಕ್ತಿ ಸಿದ್ಧಾಂತ ಸರಸ್ವತಿ ಗೋಸ್ವಾಮಿ ಪ್ರಭುಪಾದರ 153ನೇ ಜನ್ಮ ದಿನಾಚರಣೆ ಮತ್ತು ಗೌಡಿಯಾ ಮಿಷನ್‌ನ ಹೊಸ ದೇವಾಲಯದ ಶಿಲಾನ್ಯಾಸ ಸಮಾರಂಭದಲ್ಲಿ ಮಾತನಾಡಿದ ಅವರು, ಆಚಾರ್ಯ ಶ್ರೀಲ ಪ್ರಭುಪಾದರ ಜೀವನವು ಜ್ಞಾನ, ತಪಸ್ಸು, ಶಿಸ್ತು ಮತ್ತು ಸೇವೆಯ ಗಮನಾರ್ಹ ಸಂಯೋಜನೆಯಾಗಿತ್ತು. ಅವರು ತಮ್ಮ ಜೀವನದ ಪ್ರತಿ ಕ್ಷಣವನ್ನು ದೇವರ ಮೇಲಿನ ಭಕ್ತಿ ಮತ್ತು ಮಾನವಕುಲದ ಕಲ್ಯಾಣಕ್ಕಾಗಿ ಮುಡಿಪಾಗಿಟ್ಟರು ಎಂದರು.

ಆಚಾರ್ಯ ಶ್ರೀಲ ಪ್ರಭುಪಾದರು ಸ್ಥಾಪಿಸಿದ ಗೌಡೀಯ ಮಠವು ಭಾರತೀಯ ಆಧ್ಯಾತ್ಮಿಕತೆಗೆ ಬಲವಾದ ಸಾಂಸ್ಥಿಕ ಅಡಿಪಾಯವನ್ನು ಒದಗಿಸಿತು. ಈ ಸಂಸ್ಥೆಯು ಇಂದಿಗೂ ಶಿಕ್ಷಣ, ಮೌಲ್ಯಗಳು, ಸೇವೆ ಮತ್ತು ಆಧ್ಯಾತ್ಮಿಕ ಅಭ್ಯಾಸದ ಮೂಲಕ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿದೆ ಎಂದು ಹೇಳಿದರು.

ತಮ್ಮ ಜೀವನ ಮತ್ತು ಕಾರ್ಯಗಳ ಮೂಲಕ, ವಸುಧೈವ ಕುಟುಂಬಕಂ ಎಂಬ ಮನೋಭಾವವನ್ನು ಸಾಕಾರಗೊಳಿಸಿದರು. ಇಂದು, ಜಗತ್ತು ಅನೇಕ ಸವಾಲುಗಳನ್ನು ಎದುರಿಸುತ್ತಿರುವಾಗ, ಭಾರತದ ಈ ಅಧ್ಯಾತ್ಮಿಕ ದೃಷ್ಟಿಕೋನ ಮಾತ್ರ ಜಾಗತಿಕ ಶಾಂತಿ ಮತ್ತು ಸಾಮರಸ್ಯಕ್ಕೆ ದಾರಿ ಮಾಡಿಕೊಡುತ್ತದೆ. ಈ ಮಠವು ಪೂಜಾ ಕೇಂದ್ರ ಮಾತ್ರವಲ್ಲದೆ ಜ್ಞಾನ, ಶಿಕ್ಷಣ, ಸಂಸ್ಕೃತಿ ಮತ್ತು ಸೇವೆಯ ಕೇಂದ್ರವೂ ಆಗಿದೆ ಎಂದು ತಿಳಿಸಿದರು.

ಇಂದಿನ ಯುಗದಲ್ಲಿ, ಯುವಜನರು ಅನೇಕ ಸವಾಲುಗಳನ್ನು ಎದುರಿಸುತ್ತಿರುವಾಗ, ಪ್ರಭುಪಾದರ ಚಿಂತನೆಗಳು ಅವರಿಗೆ ಸರಿಯಾದ ಮಾರ್ಗವನ್ನು ತೋರಿಸುವಲ್ಲಿ ಇನ್ನೂ ಬಹಳ ಪ್ರಸ್ತುತವಾಗಿವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಆಚಾರ್ಯ ಬಿ.ಎಸ್. ಸನ್ಯಾಸಿ ಮಹಾರಾಜರು, ಗೌಡೀಯ ಮಿಷನ್ ಅಧ್ಯಕ್ಷರು ಸೇರಿದಂತೆ ಇತರರಿದ್ದರು.

ಎಡ-ಬಲ ನೋಡುವ ಪ್ರವೃತ್ತಿ ಅಪಾಯಕಾರಿ

• ಬೆಂಗಳೂರು: ಎಲ್ಲವನ್ನೂ ಎಡ-ಬಲ ಮಸೂರಗಳ ಮೂಲಕ ನೋಡುವ ಪ್ರವೃತ್ತಿ ಅಪಾಯಕಾರಿ ಎಂದು ವಿಕ್ರಮ ಸಾಪ್ತಾಹಿಕ ಸಂಪಾದಕ ರಮೇಶ ದೊಡ್ಡಪುರ ಅಭಿಪ್ರಾಯಪಟ್ಟರು. ಸಮನ್ವಿತ ಸಂಸ್ಥೆ ವತಿಯಿಂದ ವಾಡಿಯಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ನಾಲ್ಕು ಪುಸ್ತಕಗಳ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಸಮಾಜದಲ್ಲಿ ವಿಷಯಗಳನ್ನು ಚರ್ಚಿಸುವಾಗ ಸಾಮಾನ್ಯ ರೂಪಕ್ಕೆ ಮಾಡುವ ನಡವಳಿಕೆ ಹೆಚ್ಚಾಗಿದೆ. ಎಲ್ಲವನ್ನೂ ಎಡ-ಬಲ ಮಸೂರಗಳ ಮೂಲಕ ನೋಡುವ ಪ್ರವೃತ್ತಿ ಅಪಾಯಕಾರಿ ಎಂದು ಅಭಿಪ್ರಾಯಪಟ್ಟರು. ಪತ್ರಕರ್ತೆ ವಿದ್ಯಾರಶ್ಮಿ ಪೆಲ್ಲತಡ್ಕ ಮಾತನಾಡಿ, ಇಂದು ತಂತ್ರಜ್ಞಾನವು ಎಲ್ಲ ಕ್ಷೇತ್ರಗಳನ್ನೂ ಆವರಿಸುತಿದೆ. ಇತ್ತೀಚೆಗೆ ಎಐ ಸಾಹಿತ್ಯ ಅನುವಾದ ಕ್ಷೇತ್ರದಲ್ಲೂ ಅಧಿಕೃತವಾಗಿ ಕಾಲಿರಿಸಿದೆ. ಸಾಂಸ್ಕೃತಿಕ ಭಿನ್ನತೆಗಳು ಮಾಯವಾಗಿ ಎಲ್ಲೆಡೆ ಏಕರೂಪತೆ ಆವರಿಸುತ್ತಿದೆ. ಮೊದಲು ಕೆಲವೇ ಪ್ರದೇಶಗಳಲ್ಲಿ ಸೀಮಿತವಾಗಿದ್ದ ವರಮಹಾಲಕ್ಷ್ಮಿ ವ್ರತದಂತಹ ಆಚರಣೆಗಳು ಸಾರ್ವತ್ರಿಕವಾಗಿದೆ ಎಂದರು. ಆಯಾ ಪ್ರದೇಶದ ಸೊಗಡು ಮತ್ತು ವೈವಿಧ್ಯಗಳು ನಾಶವಾಗುವ ಅಪಾಯವನ್ನೂ ಗ್ರಹಿಸಬೇಕಾಗಿದೆ. ಇಂದು ಕರಾವಳಿ, ಹುಬ್ಬಳ್ಳಿಯಂತಹ ಪ್ರಾದೇಶಿಕ ಸೊಗಡಿನ ಕನ್ನಡ ಭಾಷಿಕರ ಭಾಷೆಯೂ ಬೆಂಗಳೂರಿನ ಕಂಗ್ಲಿಷ್ ಪ್ರಭಾವಕ್ಕೆ ಸಿಲುಕುತ್ತಿವೆ. ಸೃಜನಶೀಲತೆಯನ್ನು ಜತನವಾಗಿರಿಸುವ ಮೂಲಕ ತಂತ್ರಜ್ಞಾನ ತಂದೊಡ್ಡುವ ಅಪಾಯಗಳನ್ನು ಸಮರ್ಥವಾಗಿ ಎದುರಿಸಬಹುದು ಎಂದು ಹೇಳಿದರು. ಕೃತಿಕಾರರಾದ ಎಂ.ಆರ್ ದತ್ತಾತ್ರಿ, ಬಿ.ಎಸ್.ಜಯಪ್ರಕಾಶ ನಾರಾಯಣ, ರಾಧಾಕೃಷ್ಣ ಕೌಂಡಿನ್ಯ ಮುಂತಾದವರು ಉಪಸ್ಥಿತರಿದ್ದರು.

ಸಮನ್ವಿತ ಸಂಸ್ಥೆಯ ನಾಲ್ಕು ಪುಸ್ತಕಗಳ ಲೋಕಾರ್ಪಣೆ

ಚಿನ್ನದ ಪದಕ



ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವದಲ್ಲಿ ಸ್ನೇಹ ಟಿ., ಅಭಿಷೇಕ್ ಶ್ರೀರಾಮ್ ಮತ್ತು ದಿವ್ಯಶ್ರೀ ಎಸ್ ಅವರು ವಿವಿಧ ವಿಷಯದಲ್ಲಿ ಗರಿಷ್ಠ ಅಂಕಗಳಿಸಿ ಚಿನ್ನದ ಪದಕ ಹಾಗೂ ನಗದನ್ನು ಸ್ವೀಕರಿಸಿದರು.

ಕಿರುಸುದ್ದಿ

ಜನಗಣತಿಗೆ ಗೈರಾದ ಸಿಬ್ಬಂದಿ ವಿರುದ್ಧ ಕ್ರಮ

• ಬೆಂಗಳೂರು: ರಾಷ್ಟ್ರೀಯ ಜನಗಣತಿ -2027 ಕಾರ್ಯಕ್ಕೆ ಗೈರಾಗುವ ಸಿಬ್ಬಂದಿ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದೆಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ತಿಳಿಸಿದ್ದಾರೆ. ಈ ವಿಷಯವಾಗಿ ಮಾಧ್ಯಮ ಪ್ರಕಟಣೆ ನೀಡಿರುವ ಅವರು, ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜನಗಣತಿ-2027 ಮನೆಪಟ್ಟಿ ಮತ್ತು ವಸತಿ ಗಣತಿ ಕಾರ್ಯವು ಏಪ್ರಿಲ್ 16 ರಿಂದ ಮೇ 15 ರ ವರೆಗೆ ನಡೆಯಲಿದ್ದು, ಈ ಸಮೀಕ್ಷಾ ಕಾರ್ಯಕ್ಕೆ 4678 ಗಣತಿದಾರರು, 798 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿರುತ್ತದೆ ಎಂದು ಮಾಹಿತಿ ನೀಡಿದ್ದಾರೆ. ಜನಗಣತಿ ಸಿಬ್ಬಂದಿಗೆ ಏ.6 ರಿಂದ 8 ರ ವರೆಗೆ ಒಟ್ಟು 16 ತರಬೇತಿ ಕೇಂದ್ರಗಳಲ್ಲಿ ತರಬೇತಿ ನೀಡಲಾಗುತ್ತಿದ್ದು, ಈಗಾಗಲೇ ನೀಡಿರುವ ಆದೇಶದಲ್ಲಿ ತರಬೇತಿ ಸ್ಥಳ ಹಾಗೂ ದಿನಾಂಕಗಳನ್ನು ನಿಗದಿಪಡಿಸಲಾಗಿರುತ್ತದೆ. ತರಬೇತಿ ಕಾರ್ಯಕ್ಕೆ ಜನಗಣತಿ ಸಿಬ್ಬಂದಿ ಕಡ್ಡಾಯವಾಗಿ ಹಾಜರಾಗತಕ್ಕದ್ದು, ತಪ್ಪಿದಲ್ಲಿ, ಅಂತಹ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ತಿಳಿಸಿದ್ದಾರೆ.

ಪ್ರಯಾಣಿಕರ ದಟ್ಟಣೆ: ವಿಶೇಷ ರೈಲು ಸಂಚಾರ

• ಬೆಂಗಳೂರು: ಬೇಸಿಗೆ ಅವಧಿಯಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿವಾರಿಸಲು, ನೈರುತ್ಯ ರೈಲ್ವೆ ಮೈಸೂರು ಮತ್ತು ಜೋದಪುರ್ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲು ಸಂಚರಿಸಲಿವೆ. ರೈಲು ಸಂಖ್ಯೆ 06273 ಮೈಸೂರು - ಜೋದಪುರ್ ಎಕ್ಸ್‌ಪ್ರೆಸ್ ವಿಶೇಷ ಈ ರೈಲು ಮೈಸೂರು ನಿಲ್ದಾಣದಿಂದ ರಾತ್ರಿ 8:15 ಗಂಟೆಗೆ ಸೋಮವಾರಗಳಲ್ಲಿ, ಅಂದರೆ 13, 20 ಮತ್ತು 27 ರಂದು ಹೊರಡಲಿದ್ದು, ಜೋದಪುರ್‌ಗೆ ಬುಧವಾರ 5 ಗಂಟೆಗೆ ತಲುಪಲಿದೆ. ರೈಲು ಸಂಖ್ಯೆ 06274 ಜೋದಪುರ್ - ಮೈಸೂರು ಎಕ್ಸ್‌ಪ್ರೆಸ್ ವಿಶೇಷ ರೈಲು ಜೋದಪುರ್ ನಿಲ್ದಾಣದಿಂದ ರಾತ್ರಿ 10:45 ಗಂಟೆಗೆ ಗುರುವಾರಗಳಲ್ಲಿ, ಅಂದರೆ 16, 23 ಮತ್ತು 30 ರಂದು ಹೊರಡಲಿದ್ದು, ಮೈಸೂರಿಗೆ ಶನಿವಾರ 6 ಗಂಟೆಗೆ ತಲುಪಲಿದೆ.

ಕ್ಷುಲ್ಲಕ ಕಾರಣಕ್ಕೆ ಯುವಕನ ಹತ್ಯೆ

ಬೆಂಗಳೂರು: ಕ್ಷುಲ್ಲಕ ಕಾರಣಕ್ಕೆ ಯುವಕನ ಬರ್ಬರ ಹತ್ಯೆ ಮಾಡಿರುವ ಆಘಾತಕಾರಿ ಘಟನೆ ಜೆ.ಸಿ.ನಗರದ ಮುಖ್ಯರಸ್ತೆಯಲ್ಲಿ ನಡೆದಿದೆ. ವಿಜಯ್ (22) ಕೊಲೆಯಾದ ವ್ಯಕ್ತಿಯಾಗಿದ್ದು, ಶನಿವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ವಿಜಯ್‌ಗೆ ಚಾಕು ಇರಿದು ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ. ಆರೋಪಿಗಳಾದ ಕಿರಣ್ ಮತ್ತು ವಿನೋದ್ ಎಂಬುವರನ್ನು ಪೊಲೀಸರು ವಶಕ್ಕೆ ಪಡೆದಿದ್ದು ತನಿಖೆ ಮುಂದುವರಿದಿದೆ. ಶುಕ್ರವಾರ ರಾತ್ರಿ ಕುಡಿದು ಹೋಗುವಾಗ ವಿಜಯ್ ಬೈಕ್‌ಗೆ ವಿನೋದ್ ಬೈಕ್‌ಗೆ ಟಚ್ ಆಗಿತ್ತು. ಇದೇ ವಿಚಾರವಾಗಿ ಗಲಾಟೆ ಕೂಡ ನಡೆದಿತ್ತು. ವಿಷಯವನ್ನು ಅಲ್ಲಿಗೆ ಬಿಡದೆ ಶನಿವಾರ ಬೆಳಗ್ಗೆ ವಿಜಯ್ ಹುಡುಕಿಕೊಂಡು ಆರೋಪಿಗಳಾದ ಕಿರಣ್ ಮತ್ತು ವಿನೋದ್ ಹೋಗಿದ್ದರು. ಮನೆ ಬಳಿ ತೆರಳಿದ್ದಾಗ ವಿಜಯ್ ಸಿಗದಿದ್ದರಿಂದ ಫೋನ್ ಮಾಡಿ ಆತನನ್ನು ಮತ್ತೆ ಬಾರ್ ಬಳಿಗೆ ಕರೆಸಿಕೊಂಡಿದ್ದರು. ವಿಜಯ್ ಸ್ಥಳಕ್ಕೆ ಬರುತ್ತಿದ್ದಂತೆ ಗಲಾಟೆ ಶುರುಮಾಡಿದ್ದು, ಈ ವೇಳೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ವಿಜಯ್ ಹೊಟ್ಟೆಗೆ ಚಾಕು ಇರಿಯಲಾಗಿದೆ. ತೀವ್ರ ರಕ್ತಸ್ರಾವವಾಗಿ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಜೆ.ಸಿ.ನಗರ ಠಾಣೆ ನಡೆಸಿದ್ದಾರೆ.

ಕಾರಿಡಾರ್-1, ಕಾರಿಡಾರ್-4 ಜೋಡಣೆ ಪ್ರಗತಿ | ಸಂಪಿಗೆ ಲೈನ್ ಮಾರ್ಗಕ್ಕೆ ರೈಲ್ವೆ ಇಲಾಖೆ ಒಪ್ಪಿಗೆ

ಭರದಿಂದ ಸಾಗಿದೆ ಕಾಮಗಾರಿ

• ಬೆಂಗಳೂರು: ದಶಕಗಳ ಕಾಲದ ನಿರೀಕ್ಷೆಯಾಗಿದ್ದ ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಕಾಮಗಾರಿ ಈಗ ಕೇವಲ ಕಾಗದದ ಮೇಲಷ್ಟೇ ಉಳಿಯದೆ ವಾಸ್ತವವಾಗಿ ಭರದಿಂದ ಸಾಗುತ್ತಿದೆ.



ಯೋಜನೆಯ ನಾಲ್ಕು ಪ್ರಮುಖ ಕಾರಿಡಾರ್ ಪೈಕಿ ಕಾರಿಡಾರ್-2 ಮಲ್ಲಿಗೆ ಲೈನ್ ಮತ್ತು ಕಾರಿಡಾರ್-4 ಕನಕ ಲೈನ್ ಅತ್ಯಂತ ನಿರ್ಣಾಯಕ ಹಂತದಲ್ಲಿವೆ. ಮೆಜೆಸ್ಟಿಕ್‌ನಿಂದ ದೇವನಹಳ್ಳಿವರೆಗಿನ ಕಾರಿಡಾರ್-1 ಸಂಪಿಗೆ ಲೈನ್ ಮಾರ್ಗಕ್ಕೆ ರೈಲ್ವೆ ಇಲಾಖೆಯಿಂದ ಅನುಮೋದನೆ ದೊರೆತಿದೆ.

ಸೈಟ್ ಫೀಸಿಬಿಲಿಟಿ ಪರೀಕ್ಷೆಗಳು ನಡೆಯುತ್ತಿದೆ. ಯಲಹಂಕ ನಿಲ್ದಾಣದ ಬಳಿ ಕಾರಿಡಾರ್-1 ಮತ್ತು ಕಾರಿಡಾರ್-4ನ್ನು ಜೋಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಕಾರಿಡಾರ್-2 ಮಲ್ಲಿಗೆ ಲೈನ್ ಮಾರ್ಗದ ಭೂಸ್ವಾಧೀನ ಪ್ರಕ್ರಿಯೆಯು ಶೇ.100 ರಷ್ಟು ಪೂರ್ಣಗೊಂಡಿದೆ. ರೈಲ್ವೆ, ಖಾಸಗಿ ಮತ್ತು ರಕ್ಷಣಾ ಇಲಾಖೆಗಳಿಂದ ಅಗತ್ಯವಿರುವ ಎಲ್ಲಾ ಭೂಮಿಯನ್ನು ಯೋಜನೆಯ ಜಾರಿಯ ಹೊಣೆ ಹೊತ್ತಿರುವ ಕೆ-ರೈಡ್ ತನ್ನ ವಶಕ್ಕೆ ಪಡೆದುಕೊಂಡಿದೆ. ಕೆಂಗೇರಿಯಿಂದ ವೈಟ್‌ಫೀಲ್ಡ್‌ವರೆಗಿನ ಕಾರಿಡಾರ್-3 ಪಾರಿಜಾತ ಲೈನ್ ಮಾರ್ಗಕ್ಕೆ ರೈಲ್ವೆ ಅನುಮೋದನೆ ಸಿಕ್ಕಿದ್ದು, ಉಳಿದ ಕಾರಿಡಾರ್‌ಗಳ ಭೂಸ್ವಾಧೀನದ ನಂತರ ಇಲ್ಲಿ ಕೆಲಸ ಆರಂಭವಾಗಲಿದೆ ಎಂದು ಕೆ-ರೈಡ್ ಅಧಿಕಾರಿಗಳು ತಿಳಿಸಿದ್ದಾರೆ. ಹೀಲಲಿಗೆಯಿಂದ ರಾಜನಕುಂಟೆವರೆಗಿನ ಕಾರಿಡಾರ್-4 ಕನಕ ಲೈನ್ ಮಾರ್ಗಕ್ಕೆ ಟೆಂಡರ್ ಪ್ರಕ್ರಿಯೆಗಳು ವಿವಿಧ ಹಂತಗಳಲ್ಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ಯಾಕೇಜ್ ಸಿ2ಎ ಮತ್ತು ಸಿ2ಬಿ ಅಡಿಯಲ್ಲಿ ಒಟ್ಟು 8 ನಿಲ್ದಾಣಗಳ ಕಾಮಗಾರಿ ಭರದಿಂದ ಸಾಗುತ್ತಿದ್ದು, ಕಸ್ತೂರಿ ನಗರ , ಬಾಣಸವಾಡಿ, ಹೆಬ್ಬಾಳ, ಯಶವಂತಪುರ, ಶೆಟ್ಟಿಹಳ್ಳಿ, ಮಾದಾವರಹಳ್ಳಿ, ಚಿಕ್ಕಬಾಣಾವರ ನಿಲ್ದಾಣಗಳಲ್ಲಿ ಪ್ರಾಥಮಿಕ ಕೆಲಸಗಳು ಶೇ.100 ರಷ್ಟು ಪೂರ್ಣಗೊಂಡಿದ್ದು, ಇನ್ನುಳಿದ ಕೆಲಸವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪರಿಸರ ಸಂರಕ್ಷಣೆ ಬದ್ಧತೆ: ಅಭಿವೃದ್ಧಿಯ ಜೊತೆಗೆ ಪರಿಸರ ಕಾಪಾಡಲು ಕೆ-ರೈಡ್ ಹೆಜ್ಜೆ ಇಟ್ಟಿದ್ದು, ಎನ್‌ಪಿಎಸ್‌ಎಲ್ ಲೇಔಟ್‌ನಲ್ಲಿ 30,000 ಮತ್ತು ಬೊಮ್ಮನಹಳ್ಳಿ ಲೇಔಟ್‌ನಲ್ಲಿ 57,000 ದಂತೆ ಒಟ್ಟು 87,000 ಸಸಿಗಳನ್ನು ನೆಡುವ ಗುರಿ ಹೊಂದಲಾಗಿದೆ. ಜಪಾನಿನ ತಂತ್ರಜ್ಞಾನದ ಮೂಲಕ ಕಡಿಮೆ ಅವಧಿಯಲ್ಲಿ ದಟ್ಟ ಅರಣ್ಯ ಬೆಳೆಸಲಾಗುತ್ತಿದೆ. ಸುಮಾರು 3 ಹೆಕ್ಟೇರ್ ಪ್ರದೇಶದಲ್ಲಿ ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಪ್ರಭೇದಗಳು ಸೇರಿದಂತೆ 30,000 ಸಸಿಗಳನ್ನು ಬೆಳೆಸಲಾಗುತ್ತಿದೆ ಎಂದು ಕೆ-ರೈಡ್ ತಿಳಿಸಿದೆ.

ಭೂಸ್ವಾಧೀನ ಪ್ರಕ್ರಿಯೆಯಿಂದ ವಿಳಂಬ

ಬೆಂಗಳೂರು ಉಪನಗರ ರೈಲು ಯೋಜನೆ ವಿಳಂಬಕ್ಕೆ ರಾಜ್ಯ ಸರ್ಕಾರದ ಭೂಸ್ವಾಧೀನ ಪ್ರಕ್ರಿಯೆಯೇ ಪ್ರಮುಖ ಕಾರಣ.148.17 ಕಿಮೀ ಉದ್ದದ ಮಹತ್ವಾಕಾಂಕ್ಷಿ ಯೋಜನೆಗೆ ರೂ.15,767 ಕೋಟಿ ವೆಚ್ಚ ಅಂದಾಜಿಸಲಾಗಿದ್ದು, ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇ.20 ರಷ್ಟು ಹೂಡಿಕೆ ಮಾಡುತ್ತಿವೆ. ಉಳಿದ ಶೇ.60 ರಷ್ಟು ಹಣವನ್ನು ಸಾಲದ ಮೂಲಕ ಸಂಗ್ರಹಿಸಲಾಗುತ್ತಿದೆ. ಈಗಾಗಲೇ ಈ ಯೋಜನೆಗೆ ರೂ.2,659 ಕೋಟಿ ವೆಚ್ಚವಾಗಿದೆ.ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಲೋಕಸಭೆಯಲ್ಲಿ ಮಾಹಿತಿ ನೀಡಿದ್ದಾರೆ.



> ಕಳೆದ ಕೆಲವು ವರ್ಷಗಳಲ್ಲಿ ಭೂಸ್ವಾಧೀನ ಮತ್ತು ಸಮನ್ವಯದ ಕೊರತೆಯಂತಹ ಸವಾಲುಗಳನ್ನು ಎದುರಿಸಿದ್ದರೂ, ಪ್ರಸ್ತುತ ಕೆ-ರೈಡ್ ತಂಡವು ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿದೆ. ತಾಂತ್ರಿಕ ಅಡೆತಡೆಗಳನ್ನು ಯಶಸ್ವಿಯಾಗಿ ನಿವಾರಿಸಲಾಗುತ್ತಿದೆ.
> ■ ಲಕ್ಷ್ಮಣ್ ಸಿಂಗ್, ಕೆ-ರೈಡ್ ಎಂಡಿ

ಮಾರಾಮಾರಿಯಲ್ಲಿ ಅಂತ್ಯ

• ಬೆಂಗಳೂರು: ನಗರದ ಅವಲಹಳ್ಳಿಯ ಸ್ಕಿನ್ ಶೈನ್ ಫ್ಯಾಮಿಲಿ ಸಲೂನ್‌ನಲ್ಲಿ ಸಣ್ಣ ಕಾರಣಕ್ಕೆ ಶುರುವಾದ ವಿವಾದವೊಂದು ಇದೀಗ ಭೀಕರ ಮಾರಾಮಾರಿಯಲ್ಲಿ ಅಂತ್ಯವಾಗಿದೆ.

ಅವಲಹಳ್ಳಿಯ ಠಾಣಾ ವ್ಯಾಪ್ತಿಯ ಸಲೂನ್‌ವೊಂದರ ಮಾಲೀಕ ಮೋಹನ್ ಕುಮಾರ್ ತನ್ನ ಬಳಿ ಕೆಲಸ ಮಾಡುತ್ತಿದ್ದ ಬ್ಯೂಟಿಷಿಯನ್‌ಗೆ ಪ್ರೇಮ ನಿವೇದನೆ ಮಾಡಿದ್ದ ಎನ್ನಲಾಗಿದೆ. ಆದರೆ, ಬ್ಯೂಟಿಷಿಯನ್ ಈ ಪ್ರಸ್ತಾಪವನ್ನು ಕಟುವಾಗಿ ನಿರಾಕರಿಸಿದ್ದರು. ಈ ಸಂಬಂಧ ಆಕೆಯನ್ನು ಕೆಲಸದಿಂದ ವಜಾಗೊಳಿಸಿರುವುದು ಈ ಸಂಘರ್ಷಕ್ಕೆ ಮೂಲ ಕಾರಣವಾಗಿದೆ ಎನ್ನಲಾಗಿದೆ.

ಈ ವಿಚಾರವಾಗಿ ಮಾಲೀಕ ಮತ್ತು ಸಿಬ್ಬಂದಿ ನಡುವೆ ಮನಸ್ತಾಪ ಏರ್ಪಟ್ಟು, ಅಂತಿಮವಾಗಿ ಮೋಹನ್ ಕುಮಾರ್ ಆಕೆಯನ್ನು ಕೆಲಸದಿಂದ ತೆಗೆದುಹಾಕಿದ್ದರು.

ಈ ವಿಷಯ ತಿಳಿದ ಬ್ಯೂಟಿಷಿಯನ್ ಪತಿ ಆಕ್ರೋಶಗೊಂಡಿದ್ದರು. ತನ್ನ ಪತ್ನಿಯನ್ನು ಕೆಲಸದಿಂದ ತೆಗೆದುಹಾಕಿದ್ದಕ್ಕೆ ಸೇಡು ತೀರಿಸಿಕೊಳ್ಳಲು ನಿರ್ಧರಿಸಿದ ಪತಿ, ನಾಲ್ಕೈದು ಜನರ ಗುಂಪು ಕಟ್ಟಿಕೊಂಡು ಸಲೂನ್‌ಗೆ ನುಗ್ಗಿದ್ದಾರೆ. ಈ ವೇಳೆ ಮಾಲೀಕ ಮೋಹನ್ ಕುಮಾರ್ ಮೇಲೆ ತಂಡ ಮನಬಂದಂತೆ ಹಲ್ಲೆ ನಡೆಸಿದೆ. ಗಲಾಟೆ ತಡೆಯಲು ಮುಂದಾದ ಮೋಹನ್ ಪತ್ನಿ ಶ್ರೀಜಾ ಅವರ ಮೇಲೆಯೂ ಹಲ್ಲೆ ನಡೆಸಲಾಗಿದೆ. ದುಷ್ಕರ್ಮಿಗಳು ಸಲೂನ್‌ನ ಪೀಠೋಪಕರಣ ವನ್ನು ಧ್ವಂಸಗೊಳಿಸಿ ದಾಂಧಲೆ ನಡೆಸಿದ್ದಾರೆ. ಈ ಇಡೀ ದಾಳಿಯ ದೃಶ್ಯ ಸಲೂನ್‌ನಲ್ಲಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಹಲ್ಲೆಗೊಳಗಾದ ಮೋಹನ್ ಕುಮಾರ್ ಅವರು ಬ್ಯೂಟಿಷಿಯನ್, ಆಕೆಯ ಪತಿ ಹಾಗೂ ಬೆಂಬಲಿಗರ ವಿರುದ್ಧ ಅವಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದು, ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ತನಿಖೆ ಚುರುಕುಗೊಳಿಸಿದ್ದಾರೆ

ಅವಲಹಳ್ಳಿ ಸ್ಕಿನ್ ಶೈನ್ ಫ್ಯಾಮಿಲಿ ಸಲೂನ್: ಪ್ರೇಮ ವಿವಾದ

1,273 ಕೋಟಿ ರೂ.ಆದಾಯ ಸಂಗ್ರಹ ಗುರಿ

• ಬೆಂಗಳೂರು: ಬೆಂಗಳೂರು ಕೇಂದ್ರ ಪ್ರಾದೇಶಿಕ ಸಾರಿಗೆ ಕಚೇರಿಯಿಂದ ಈ ವರ್ಷ ಒಟ್ಟು 1,273 ಕೋಟಿ ರೂ. ಆದಾಯ ಸಂಗ್ರಹಿಸುವ ಮೂಲಕ ಕರ್ನಾಟಕದಲ್ಲಿಯೇ ನಂಬರ್ 1 ಮತ್ತು ದೇಶದಲ್ಲಿ 3ನೇ ಸ್ಥಾನ ಪಡೆದಿದ್ದೇವೆ ಎಂದು ಬೆಂಗಳೂರು ಕೇಂದ್ರ ಪ್ರಾದೇಶಿಕ ಸಾರಿಗೆ ಅಧಿಕಾರಿ ದೀಪಕ್.ಎಲ್ ಹೇಳಿದರು. ವಾಹನಗಳ ಜೀವಿತಾವಧಿ ತೆರಿಗೆ, ವಾಣಿಜ್ಯ ವಾಹನಗಳ ತೆರಿಗೆ, ಬಾಕಿ ವಸೂಲಾತಿ ಹಾಗೂ ಎನ್‌ಫೋರ್ಸ್‌ಮೆಂಟ್ ಮೂಲಕ ಈ ಸಾಧನೆ ಮಾಡಲಾಗಿದೆ.

ಐಪಿಎಲ್ ಪಂದ್ಯ ವೇಳೆ ಮೊಬೈಲ್ ಕಳವು ಜಾಲ

13 ಜನರ ಬಂಧನ



• ಬೆಂಗಳೂರು: ಎಂ. ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ನಡೆದ ಐಪಿಎಲ್ ಪಂದ್ಯದ ವೇಳೆ ಪ್ರೇಕ್ಷಕರ ಮೊಬೈಲ್ ಕಳ್ಳತನ ಮಾಡುತ್ತಿದ್ದ ಬೃಹತ್ ಜಾಲವೊಂದನ್ನು ಬೇಧಿಸುವಲ್ಲಿ ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಸೋಹನ್ ಕುಮಾರ್, ಸಂಜೀತ್ ಕುಮಾರ್ (24), ಇಖಾಲ್ ಕುಮಾರ್ (23), ಶುಭಮ್ ಕುಮಾರ್ ಸೇರಿದಂತೆ ಈ ಕಾರ್ಯಾಚರಣೆಯಲ್ಲಿ 9 ಮಂದಿ ಕಾನೂನು ಸಂಘರ್ಷಕ್ಕೊಳಗಾದ ಬಾಲಕರು ಸೇರಿ ಒಟ್ಟು 13 ಜನರನ್ನು ಬಂಧಿಸಲಾಗಿದೆ. ಇವರಿಂದ ವಿವಿಧ ಕಂಪನಿಗಳ 75 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಳೆದ ಮಾ.28ರಂದು ನಡೆದ ಆರ್‌ಸಿಬಿ ಮತ್ತು ಎಸ್‌ಆರ್‌ಎಚ್ ನಡುವಿನ ಪಂದ್ಯದ ವೇಳೆ, ಪಂದ್ಯ ವೀಕ್ಷಿಸಲು ಬಂದಿದ್ದ ಪ್ರೇಕ್ಷಕರ ಮೊಬೈಲ್ ಫೋನ್‌ಗಳು ಕಳ್ಳತನವಾಗಿದ್ದವು.

ಈ ಸಂಬಂಧ ತನಿಖೆ ಆರಂಭಿಸಿದ ಪೊಲೀಸರು ಮಾ.31 ರಂದು ಓರ್ವ ಆರೋಪಿ ಮತ್ತು ಮೂವರು ಬಾಲಕರನ್ನು ವಶಕ್ಕೆ ಪಡೆದಿದ್ದರು. ಇವರಿಂದ 21 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿತ್ತು. ನಂತರ ತನಿಖೆಯನ್ನು ತೀವ್ರಗೊಳಿಸಿದ ಪೊಲೀಸರು ಏ.2 ರಂದು ಪ್ರಕರಣಕ್ಕೆ ಸಂಬಂಧಿಸಿದ ಮತ್ತೆ ಆರು ಬಾಲಕರನ್ನು ಬಂಧಿಸಿ ಬಾಲ ನ್ಯಾಯ ಮಂಡಳಿಯ ಮುಂದೆ ಹಾಜರುಪಡಿಸಿದರು.

ಏ.3 ರಂದು ಪೊಲೀಸ್ ಕಸ್ಟಡಿಯಲ್ಲಿದ್ದ ಆರೋಪಿಗಳ ವಿಚಾರಣೆ ನಡೆಸಿದಾಗ, ಸಾರ್ವಜನಿಕರಿಂದ ಕಳ್ಳತನ ಮಾಡಿದ್ದ 70 ಮೊಬೈಲ್‌ಗಳು ಹಾಗೂ ಕೃತ್ಯಕ್ಕೆ ಬಳಸಿದ್ದ 5 ಮೊಬೈಲ್‌ಗಳು ಪತ್ತೆಯಾಗಿವೆ. ನ್ಯಾಯಾಲಯದ ಆದೇಶದಂತೆ ಬಂಧಿತ ಒಂಬತ್ತು ಬಾಲಕರನ್ನು ಸರ್ಕಾರಿ ಬಾಲ ಮಂದಿರಕ್ಕೆ ಕಳುಹಿಸಲಾಗಿದೆ. ಉಳಿದ ಮೂವರು ಆರೋಪಿಗಳನ್ನು ಏಳು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ. ಪ್ರಕರಣದ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ.ಹಾಕೆ ಅವರ ಮಾರ್ಗದರ್ಶನದಲ್ಲಿ ಕಬ್ಬನ್ ಪಾರ್ಕ್ ಉಪ ವಿಭಾಗದ ಎಸಿಪಿ ಡಾ. ಪ್ರಿಯದರ್ಶಿನಿ ಸಾಣೆಕೊಪ್ಪ ಹಾಗೂ ಇನ್ಸ್‌ಪೆಕ್ಟರ್ ದೇವೇಂದ್ರಪ್ಪ ಕೆ.ಎಸ್. ನೇತೃತ್ವದ ತಂಡ ಈ ಯಶಸ್ವಿ ಕಾರ್ಯಾಚರಣೆ ನಡೆಸಿದೆ.

ಮದ್ಯದ ಅಮಲಿನಲ್ಲಿ ಕಾರು ಅಪಘಾತ: ಓರ್ವ ಸಾವು

• ಬೆಂಗಳೂರು: ಮದ್ಯದ ಅಮಲಿನಲ್ಲಿ ಅತಿ ವೇಗವಾಗಿ ಕಾರು ಚಾಲನೆ ಮಾಡಿದ ಪರಿಣಾಮವಾಗಿ ಬುಲೆಟ್ ಬೈಕ್ ಸವಾರರೊಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಜೀವನ ಭೀಮಾನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಪ್ರತೀಕ್ (19) ಮೃತಪಟ್ಟ ದುರ್ದೈವಿ. ಮಲ್ಲೇಶ್ ಪಾಳ್ಯದ ಮಾರುತಿನಗರದ 10ನೇ ಮುಖ್ಯರಸ್ತೆಯಲ್ಲಿ ಪ್ರತೀಕ್ ರಾಯಲ್ ಎನ್ ಫೀಲ್ಡ್ ಬುಲೆಟ್ ಬೈಕ್‌ನಲ್ಲಿ ಶುಕ್ರವಾರ ರಾತ್ರಿ 11 ಗಂಟೆ ಸುಮಾರಿನಲ್ಲಿ ಸಂಚರಿಸುತ್ತಿದ್ದರು. ಇದೇ ವೇಳೆ ಅದೇ ರಸ್ತೆಯಲ್ಲಿ ಅತಿ ವೇಗವಾಗಿ ಬಂದ ಇನೋವಾ ಕಾರು ಬೈಕ್‌ಗೆ ಹಿಂದಿನಿಂದ ಜೋರಾಗಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಪ್ರತೀಕ್ ಅವರು ಗಂಭೀರವಾಗಿ ಗಾಯಗೊಂಡು ರಸ್ತೆಗೆ ಅಪ್ಪಳಿಸಿದ್ದು, ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.

ಅಪಘಾತ ಎಸಗಿದ ಕಾರು ಚಾಲಕ ಅರ್ಪಿತ್ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈತನನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ, ಚಾಲಕ ಮದ್ಯಸೇವಿಸಿ ವಾಹನ ಚಾಲನೆ ಮಾಡಿರುವುದು ದೃಢಪಟ್ಟಿದೆ. ಕುಡಿದ ಅಮಲಿನಲ್ಲಿ ಕಾರಿನ ಮೇಲೆ ನಿಯಂತ್ರಣ ತಪ್ಪಿದ್ದೇ ಈ ಭೀಕರ ಅಪಘಾತಕ್ಕೆ ಕಾರಣವಾಗಿದೆ ಎಂದು ತಿಳಿದುಬಂದಿದೆ. ವಿಷಯ ತಿಳಿಯುತ್ತಿದ್ದಂತೆಯೇ ಜೀವನ ಭೀಮಾನಗರ ಸಂಚಾರ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿ ಅರ್ಪಿತ್‌ನನ್ನು ಬಂಧಿಸಿ ಕಾನೂನು ಕ್ರಮ ಕೈಗೊಂಡಿದ್ದಾರೆ.



ಏ.11ರಂದು ನಡೆಯಲಿರುವ ಜನತಾ ಸಮಾವೇಶದ ಪೂರ್ವಸಿದ್ಧತೆ ಕುರಿತು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್‌ನ ಜಿಬಿಎ ಅಧ್ಯಕ್ಷ ಎಚ್.ಎಂ.ರಮೇಶ್‌ಗೌಡ ಅವರ ನೇತೃತ್ವದಲ್ಲಿ ಮುಖಂಡರು ಹಾಗೂ ಕಾರ್ಯಕರ್ತರ ಸಭೆ ನಡೆಸಲಾಯಿತು.

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್

ಪ್ರಸಕ್ತ 68.86 ಕೋಟಿ ರೂ.ಲಾಭ

• ಬೆಂಗಳೂರ: ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿಗೆ 2025-26ರ ಆರ್ಥಿಕ ಸಾಲಿನಲ್ಲಿ, ಸುಮಾರು 68.86 ಕೋಟಿ ರೂ.ಲಾಭಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಅವಲಹಳ್ಳಿ ಚಂದ್ರಪ್ಪ. ಆರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಮ್ಮ ಬ್ಯಾಂಕು ಕರ್ನಾಟಕದಾದ್ಯಂತ ಕಾರ್ಯ ಕ್ಷೇತ್ರ ವ್ಯಾಪ್ತಿ ಹೊಂದಿದೆ. ಬೆಂಗಳೂರಿನಲ್ಲಿ ಇಪ್ಪತ್ತು ಶಾಖೆ, ಮೈಸೂರಿನಲ್ಲಿ ಒಂದು ಶಾಖೆ ಮತ್ತು ರಾಮನಗರದಲ್ಲಿ ಒಂದು ಶಾಖೆ ಒಟ್ಟು 22 ಶಾಖೆಗಳನ್ನು ಹೊಂದಿದೆಂದರು.



ಬ್ಯಾಂಕು ದೇಶದ ಸ್ವಾತಂತ್ರಪೂರ್ವ ಅಂದರೆ 1907ನ ಏ.6 ರಂದು ಪ್ರಾರಂಭಗೊಂಡು, 119 ವರ್ಷಗಳಿಗೂ ಮೀರಿದ ಅವಧಿಗೆ ಬ್ಯಾಂಕಿಂಗ್ ಸೇವೆಯನ್ನು ಗ್ರಾಹಕರುಗಳಿಗೆ ನೀಡುತ್ತಾ ಬಂದಿದೆ. 2025-26 ರ ಹಣಕಾಸಿನ ವರ್ಷದಲ್ಲಿ ಆಡಿಟ್ ಪೂರ್ವ 68.86 ಕೋಟಿ ರೂ. ಲಾಭಗಳಿದೆ ಮತ್ತು ತೆರಿಗೆ ,ಅವಕಾಶಗಳ ನಂತರ 29.86 ಕೋಟಿ ರೂ.ನಿವ್ವಳ ಲಾಭಗಳಿಸಿದೆ ಎಂದು ತಿಳಿಸಿದರು.

ಬ್ಯಾಂಕ್‌ನ ಉಪಾಧ್ಯಕ್ಷ ಡಾ.ದೇವರಾಜ್ ಮಾತನಾಡಿ, ಬ್ಯಾಂಕು ಷೇರು ಸಂಗ್ರಹದಲ್ಲಿ, ಸ್ವಂತ ನಿಧಿ ಕ್ರೋಢೀಕರಣದಲ್ಲಿ, ಠೇವಣಿಸಂಗ್ರಹಣೆಯಲ್ಲಿ, ಸಾಲ ನೀಡಿಕೆಯಲ್ಲಿ ಮತ್ತು ಲಾಭ ಗಳಿಕೆಯಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಅಗ್ರಸ್ಥಾನದಲ್ಲಿ ಮುಂದುವರೆದಿದೆ. ಬ್ಯಾಂಕಿನ ನಿವ್ವಳ ಅನುತ್ಪಾದಕ ಸಾಲಗಳು ಶೇಕಡ ಶೂನ್ಯ ಇರುತ್ತವೆ ಎಂದು ಹೇಳಿದರು.

ಪ್ರಧಾನ ವ್ಯವಸ್ಥಾಪಕ ಮಂಜುನಾಥ ಮಾತನಾಡಿ, ಬ್ಯಾಂಕಿನ ಷೇರು ಬಂಡವಾಳ 96.06 ಕೋಟಿ ರೂ., ಆಪದ್ಧನ ನಿಧಿ ಮತ್ತು ಇತರೆ ನಿಧಿ 555.37ಕೋಟಿ ರೂ.,ಠೇವಣಿ ಸಂಗ್ರಹಣೆ 2324.44 ಕೋಟಿ ರೂ., ಒಟ್ಟು ದುಡಿಯುವ ಬಂಡವಾಳ 2975.87 ಕೋಟಿ ರೂ., ಬ್ಯಾಂಕ್ ನೀಡಿರುವ ಸಾಲ ಮತ್ತು ಮುಂಗಡ 1525.44 ಕೋಟಿ ರೂ., ಸರ್ಕಾರಿ ಸಾಲ ಪತ್ರ ಮತ್ತು ಇತರೆ ಗುಂತಾಯಗಳಲ್ಲಿ ತೊಡಗಿಸಿರುವ ಮೊಬಲಗು 1308.82ಕೋಟಿ ರೂ., ಬ್ಯಾಂಕಿನ ಒಟ್ಟು ವ್ಯವಹಾರ 3849.88 ಕೋಟಿ ರೂ.ಗಳಿಗೂ ಮೀರಿದೆ ಎಂದು ತಿಳಿಸಿದರು.

ಪ್ರತಿಯೊಬ್ಬರಿಗೂ ಸೂರು; ಬಿಡಿಎ ಕನಸು

• ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಒಂದು ಸ್ವಂತ ಮನೆ ಇರಬೇಕು ಅನ್ನೋದು ಪ್ರತಿಯೊಬ್ಬರ ಕನಸನ್ನು ನನಸಾಗಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಚಿಂತನೆ ನಡೆಸಿದೆ. ನಗರದ ಆರು ಪ್ರಮುಖ ಲೇಔಟ್‌ಗಳಲ್ಲಿ ಬರೋಬ್ಬರಿ 4,000 ಕ್ಕೂ ಹೆಚ್ಚುಫ್ಲ್ಯಾಟ್ ಗಳನ್ನು ಮಾರಾಟ ಮಾಡಲು ಸಿದ್ಧತೆ ಮಾಡುತ್ತಿದೆ.



ವಿವಿಧ ಲೇಔಟ್‌ಗಳಲ್ಲಿ 4,000ಕ್ಕೂ ಹೆಚ್ಚು ಫ್ಲ್ಯಾಟ್‌ನಿರ್ಮಾಣಕ್ಕೆ ಸಿದ್ಧತೆ

ಸುಮಾರು 3,200 ಕೋಟಿ ರೂಪಾಯಿ ಮೌಲ್ಯದ ಈ ಬೃಹತ್ ವಸತಿ ಯೋಜನೆಗಳು ಈಗ ನಿರ್ಮಾಣ ಹಂತದಲ್ಲಿದ್ದು, ಈ ವರ್ಷದ ಅಂತ್ಯದ ವೇಳೆಗೆ ಕಾಮಗಾರಿ ಪೂರ್ಣಗೊಳ್ಳುವ ಸಾಧ್ಯತೆ ಇದ್ದು, ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಇವುಗಳನ್ನ ಹಂತ ಹಂತವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುವ ಯೋಜನೆಯಲ್ಲಿ ಬಿಡಿಎ ಇದೆ. ನಗರದ ಎಲೆಕ್ಟ್ರಾನಿಕ್ ಸಿಟಿ, ಕೊಣದಾಸಪುರ, ಕಾಳತಮ್ಮನಹಳ್ಳಿ ಮತ್ತು ಕೆಂಚನಪುರ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಬಿಡಿಎ ಈ ಅಪಾರ್ಟ್‌ಮೆಂಟ್‌ಗಳನ್ನು ಅಭಿವೃದ್ಧಿಪಡಿಸುತ್ತಿದೆ. ಇಲ್ಲಿ ಅವಶ್ಯಕತೆಗೆ ತಕ್ಕಂತೆ 1 ಬಿಎಚ್‌ಕೆ, 2 ಬಿಎಚ್‌ಕೆ, 3 ಬಿಎಚ್‌ಕೆ ಹಾಗೂ 4 ಬಿಎಚ್‌ಕೆ ಫ್ಲಾಟ್‌ಗಳು ಇರಲಿವೆ. ವಿಶೇಷವಾಗಿ ಕೊಣದಾಸಪುರದಲ್ಲಿ ಹಂತ 1 ರ ಅಡಿಯಲ್ಲಿ ಬರೋಬ್ಬರಿ 1,928 ಫ್ಲಾಟ್‌ಗಳು ನಿರ್ಮಾಣವಾಗುತ್ತಿದ್ದು, ಇದರಲ್ಲಿ 480 2-ಬಿಎಚ್‌ಕೆ ಮತ್ತು 1,448 3-ಬಿಎಚ್‌ಕೆ ಮನೆಗಳು ಇರಲಿವೆ ಎಂದು ಬಿಡಿಎ ತಿಳಿಸಿದೆ.

ಕೈಗಾರಿಕಾ ಕೌಶಲಾಭಿವೃದ್ಧಿ ಕಾರ್ಯಕ್ರಮಕ್ಕೆ ಚಾಲನೆ

ಯೋಜನೆ ಅನುಷ್ಠಾನಕ್ಕೆ ತರಬೇತಿ

• ಕೆಂಗೇರಿ: ಎಲೆಕ್ಟ್ರಾನಿಕ್ಸ್ ವಸ್ತುಗಳ ಉತ್ಪಾದನೆಯ ಅನುಸರಣೆ ಮತ್ತು ಕೌಶಲ ತರಬೇತಿ ನೀಡಲು ಆರ್.ವಿ.ವಿಶ್ವವಿದ್ಯಾಲಯ ಮತ್ತು ಬಜಾಜ್ ಆಟೋ ಫೌಂಡೇಷನ್ ಒಪ್ಪಂದ ಮಾಡಿಕೊಂಡಿದೆ ಎಂದು ಆರ್.ವಿ.ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಹ್ಮಣ್ಯ ತಿಳಿಸಿದರು.



ಆರ್.ವಿ.ಇಂಜಿನೀಯರಿಂಗ್ ಕಾಲೇಜು ಮತ್ತು ಬಜಾಜ್ ಆಟೋ ಫೌಂಡೇಷನ್ ನಡುವೆ ಒಪ್ಪಂದ ಕೈಗಾರಿಕಾ ಕೌಶಲಾಭಿವೃದ್ಧಿ ಕಾರ್ಯಕ್ರಮದಲ್ಲಿ, ಮಾತನಾಡಿ, ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಆರ್.ವಿ.ಇಂಜಿನೀಯರಿಂಗ್ ಕಾಲೇಜು ಮತ್ತು ಬಜಾಜ್ ಆಟೋ ಫೌಂಡೇಷನ್ ನಡುವೆ ಎಲೆಕ್ಟ್ರಾನಿಕ್ಸ್ ಉತ್ಪಾದನೆ ಕೇಂದ್ರವನ್ನು ಸ್ಥಾಪಿಸಲು ಒಪ್ಪಂದ ಕಾಯಿದೆ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕೌಶಲ ತರಬೇತಿ ಕಾರ್ಯಕ್ರಮದಲ್ಲಿ ಜಾರಿಯಾಗಲಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆ ಹೆಚ್ಚಿಸುವುದರ ಜತೆಗೆ ಸಂಸ್ಥೆಯ ಉದ್ಯೋಗಾವಕಾಶಗಳನ್ನು ಮತ್ತಷ್ಟು ಬಲಪಡಿಸಲು ಸಾಧ್ಯವಾಗುತ್ತದೆ ಪ್ರತಿ ವರ್ಷ ಸುಮಾರು 70 ಕಂಪನಿಗಳು ಆರ್.ವಿ. ಇಂಜಿನೀಯರಿಂಗ್ ಕಾಲೇಜ್‌ಗೆ ಭೇಟಿ ನೀಡಿ ಉತ್ತಮ ವೇತನದ ಉದ್ಯೋಗ ನೀಡುತ್ತಿವೆ ಎಂದರು. ಬಜಾಜ್ ಆಟೋ ಫೌಂಡೇಷನ್ ಕೌಶಲ್ಯ ವಿಭಾಗದ ಮುಖ್ಯಸ್ಥ ರಮೇಶ್ ವೇಣುಗೋಪಾಲ್, ಆರ್.ಎಸ್.ಎಸ್.ಟಿ ಉಪಾಧ್ಯಕ್ಷ ಎಂ. ಸಿ. ಚಂದ್ರಶೇಖರ ರಾಜು ಮತ್ತಿತರರಿದ್ದರು.

ಇಂದು ನಗರದಲ್ಲಿ...

- ಕಲ್ಯಾಣ ಕರ್ನಾಟಕ ನಿವಾಸಿಗಳ ಸಂಘದಿಂದ ಐಎಎಸ್ ತೇರ್ಗಡೆಯಾದವರಿಗೆ ಅಭಿನಂದನಾ ಸಮಾರಂಭ, ಸ್ಥಳ: ಪಿಡಬ್ಲ್ಯುಡಿ ಭವನ, ಕೆ.ಆರ್ ವೃತ್ತ, ಬೆಳಗ್ಗೆ 10.30
- ಮಿಥಿಕ್ ಸೊಸೈಟಿಯಿಂದ ಉಪನ್ಯಾಸ, ಸ್ಥಳ: ಮಿಥಿಕ್ ಸೊಸೈಟಿ, ಬೆಳಗ್ಗೆ 11
- ಇಸ್ಕಾನ್ ದೇವಸ್ಥಾನದಿಂದ ಶ್ರೀರಾಮೋತ್ಸವ, ಸ್ಥಳ: ಇಸ್ಕಾನ್ ದೇವಾಲಯ ರಾಜಾಜಿನಗರ, ಸಂಜೆ 6
- ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿಯಿಂದ ಭರತನಾಟ್ಯ ಕಾರ್ಯಕ್ರಮ, ಸ್ಥಳ: ರಾಗೀಗುಡ್ಡ ದೇವಸ್ಥಾನ, ಸಂಜೆ 6.30

ಜಾಗತಿಕ ಯುದ್ಧ ಮಧ್ಯೆ ಭಾರತದ ಸುಗಮ ಹಾದಿ





• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಯುದ್ಧದಿಂದಾಗಿ ಕಳೆದೊಂದು ತಿಂಗಳಿನಿಂದ ಜಗತ್ತು ಹಲವಾರು ರೀತಿಯ ಸಮಸ್ಯೆಯನ್ನು ಎದುರಿಸುತ್ತಿದೆ. ಇಂಧನ ಸರಬರಾಜು ಕೊರತೆಯಿಂದ ಹಲವು ದೇಶಗಳಲ್ಲಿ ಮನೆಯಿಂದಲೇ ಕೆಲಸ(ವರ್ಕ್ ಫ್ರಂ ಹೋಮ್) ಶಾಲಾ ಮಕ್ಕಳಿಗೆ ಆನ್‌ಲೈನ್ ತರಗತಿ ಸೇರಿದಂತೆ ಹಲವು ಬದಲಾವಣೆಗಳನ್ನು ತಂದಿದೆ. ಆದರೇ ಭಾರತ ಮಾತ್ರ ಯಾವುದೇ ಬದಲಾವಣೆಗಳನ್ನು ತರದೇ ಎಂದಿನಂತೇ ಜೀವನ ನಡೆಸುತ್ತಿದೆ. ನಿರ್ಬಂಧಗಳ ಹೊರತಾಗಿಯೂ, ಯುದ್ಧಗ್ರಸ್ತ ಮಾರ್ಗದ ಮೂಲಕ ಅತಿ ಹೆಚ್ಚು ಹಡಗುಗಳನ್ನು ಸಾಗಿಸಿ ಮಾಡಿದ ದೇಶಗಳಲ್ಲಿ ಭಾರತ ಅಗ್ರಸ್ಥಾನದಲ್ಲಿದೆ. ಇದಕ್ಕೆ ಜ್ವಲಂತ ಸಾಕ್ಷಿ ಎಂಬಂತೆ ಸಂಘರ್ಷ ಆರಂಭವಾದ ನಂತರ ಈ ವರೆಗೂ



ಕನಿಷ್ಠ 8 ಭಾರತೀಯ ಹಡಗುಗಳು ಹಾರ್ಮುಜ್ ಜಲಸಂಧಿಯನ್ನು ದಾಟಿವೆ. ಸಂಘರ್ಷದ ನಡುವೆ ಶುಕ್ರವಾರ ಭಾರತ ಧ್ವಜ ಹಾರಿಸಿರುವ ಎಳನೇ ಎಲ್‌ಪಿಜಿ ಟ್ಯಾಂಕರ್ ಗ್ರೀನ್ ಸಾನ್ವಿ ಹಾರ್ಮುಜ್ ಜಲಸಂಧಿಯನ್ನು ದಾಟಿದ ಸಂದರ್ಭದಲ್ಲಿ, ಇರಾನ್ ಭಾರತಕ್ಕೆ ವಿಶೇಷ ಸಂದೇಶವೊಂದನ್ನು ರವಾನಿಸಿದೆ. ಭಾರತದ ರಾಜತಂತ್ರದ ಯಶಸ್ಸನ್ನು ಜಗತ್ತೇ ನಿಬ್ಬೆರಗಾಗಿ ನೋಡುವಂತೆ ಮಾಡಿದೆ. ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಮಾಡಿದ ಪೋಸ್ಟ್‌ನಲ್ಲಿ ಮುಂಬೈಯಲ್ಲಿರುವ ಇರಾನ್ ದೂತಾವಾಸ ಕಚೇರಿ ಭಾರತ, ವಿಶೇಷವಾಗಿ ಗುಜರಾತ್, ನಮ್ಮ ಸಾಮೂಹಿಕ ಇತಿಹಾಸದಲ್ಲಿ ಒಂದು ಅತ್ಯಂತ ಮೌಲ್ಯವಾದ ಸ್ಥಾನ ಹೊಂದಿದೆ ಎಂದು ತಿಳಿಸಿದೆ.

ಶತ್ರು ಪೈಲಟ್ ಹುಡುಕಿ

• **ಟೆಲ್ ಅವಿವ್/ಟೆಹ್ರಾನ್:** ನೈಋತ್ಯ ಇರಾನ್‌ನ ದೂರದ ಪ್ರದೇಶದಲ್ಲಿ ನಾಪತ್ತೆಯಾದ ಪೈಲಟ್‌ನನ್ನು ಪತ್ತೆಹಚ್ಚಲು ಅಮೆರಿಕ ಸೇನೆ ಶನಿವಾರ ತೀವ್ರ ಹುಡುಕಾಟ ನಡೆಸಿತು. ಇಸ್ಲಾಮಿಕ್ ರಿಪಬ್ಲಿಕ್ ಶುಕ್ರವಾರ ಅಮೆರಿಕದ ಯುದ್ಧವಿಮಾನವನ್ನು ಹೊಡೆದುರುಳಿಸಿ, ಪೈಲಟ್‌ನನ್ನು ಒಪ್ಪಿಸುವವರಿಗೆ ಬಹುಮಾನ ಘೋಷಿಸಿದೆ. ಅಮೆರಿಕ ಪೈಲಟ್‌ಗಾಗಿ ಹುಡುಕಾಟ ಇರಾನ್‌ನ ನೈಋತ್ಯ ಪ್ರಾಂತ್ಯ ಕೊಹ್ಗಿಲ್ಯೂಯೆ ಮತ್ತು ಬೊಯರ್-ಅಹ್ಮದ್‌ನ ಪರ್ವತ ಪ್ರದೇಶದಲ್ಲಿ ಕೇಂದ್ರೀಕೃತವಾಗಿದೆ. ಇರಾನ್ ತನ್ನ ನಿವಾಸಿಗಳಿಗೆ ಯಾವುದೇ ಶತ್ರು ಪೈಲಟ್ ಸಿಕ್ಕರೆ ಪೊಲೀಸರಿಗೆ ಒಪ್ಪಿಸಿ ಎಂದು ಕರೆ ನೀಡಿದೆ. ಪ್ರತ್ಯೇಕವಾಗಿ, ಇರಾನ್ ರಾಜ್ಯ ಮಾಧ್ಯಮ ತಿಳಿಸಿದ ಪ್ರಕಾರ ಅಮೆರಿಕದ ಎ-10 ದಾಳಿ ವಿಮಾನ ಒಂದು ಇರಾನಿ ರಕ್ಷಣಾ ಪಡೆಯ ಹೊಡೆತಕ್ಕೆ ಸಿಲುಕಿ ಪರ್ಷಿಯನ್ ಕೊಲ್ಲಿಯಲ್ಲಿ ಪತನಗೊಂಡಿದೆ.

ಮಾತುಕತೆ ನಿಂತಿಲ್ಲ

ಪಾಕಿಸ್ತಾನ, ಟರ್ಕಿ ಮತ್ತು ಈಜಿಪ್ಟ್‌ನ ಮಧ್ಯವರ್ತಿಗಳು ಅಮೆರಿಕ ಮತ್ತು ಇರಾನ್ ಅನ್ನು ಮತ್ತೆ ಮಾತುಕತೆಯ ಮೇಜಿಗೆ ತರಲು ಇನ್ನೂ ಕೆಲಸ ಮಾಡುತ್ತಿದ್ದಾರೆ. ಯುದ್ಧವನ್ನು ನಿಲ್ಲಿಸಲು ಮತ್ತು ನಿರ್ಣಾಯಕ ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ಅಮೆರಿಕ ಮತ್ತು ಇರಾನಿನ ಬೇಡಿಕೆಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಪ್ರಾದೇಶಿಕ ಶಕ್ತಿಗಳು ರಾಜಿ ಮಾರ್ಗ ಹುಡುಕುತ್ತಿವೆ ಎಂದು ಮೂಲಗಳು ಹೇಳಿವೆ.

ಪಾಕ್‌ಗೆ ಹೋಗಲ್ಲ ಎಂದಿಲ್ಲ

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘಚಿ ಅವರು ಮಾತನಾಡಿ, ಮಾತುಕತೆಗಾಗಿ ಪಾಕ್‌ಗೆ ಹೋಗಲ್ಲ ಎಂದು ನಾವು ಹೇಳಿಲ್ಲ ಎಂದಿದ್ದಾರೆ. ಜತೆಗೆ ಅಮೆರಿಕ ಜತೆಗೆ ಮಾತುಕತೆ ಆರಂಭಿಸಲು ಇಚ್ಛೆ ಇದೆ ಎಂದಿದ್ದಾರೆ. ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಟರ್ಕಿ ವಿದೇಶಾಂಗ ಸಚಿವರ ಜತೆ ಮಾತುಕತೆ ನಡೆಸಿರುವುದಾಗಿ ಹೇಳಿದ್ದಾರೆ.

ಇರಾನ್‌ನೊಂದಿಗೆ ಯಾವುದೇ ಪಾವತಿ ಸಮಸ್ಯೆ ಇಲ್ಲ: ಕೇಂದ್ರ

• **ಹೊಸದಿಲ್ಲಿ:** ಭಾರತದತ್ತ ಬರುತ್ತಿದ್ದ ಕಚ್ಚಾ ತೈಲ ಕ್ಯಾರಿಯರ್ ಹಡಗು ಪಾವತಿ ಸಮಸ್ಯೆಯಿಂದ ಚೀನಾಗೆ ಮಾರ್ಗ ಬದಲಾಯಿಸಿದೆಯೆಂಬ ವರದಿಯನ್ನು ತೈಲ ಸಚಿವಾಲಯವು ತಳ್ಳಿಹಾಕಿದೆ. ಇರಾನ್‌ನೊಂದಿಗೆ ಯಾವುದೇ ಪಾವತಿ ಸಂಬಂಧಿತ ಸಮಸ್ಯೆಗಳಿಲ್ಲ, ನಮಗೆ ಬರಬೇಕಾಗಿದ್ದ ಸಂಪೂರ್ಣ ಕಚ್ಚಾ ತೈಲ ಈಗಾಗಲೇ ಪೂರೈಕೆಯಾಗಿವೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಶನಿವಾರ ಸ್ಪಷ್ಟಪಡಿಸಿದೆ.

ಭಾರತದ ವದಿನಾರ್‌ನಿಂದ ಇರಾನಿ ಕಚ್ಚಾ ತೈಲ ಹಡಗು ಚೀನಾಗೆ ಮಾರ್ಗ ಬದಲಿಸಿದ್ದು ಪಾವತಿ ಸಮಸ್ಯೆಗಳಿಂದ ಎಂಬುದು ತಪ್ಪು ಮಾಹಿತಿ. ಹಣಕಾಸು ಲೆಕ್ಕಾಚಾರಗಳನ್ನು ಗಮನದಲ್ಲಿಟ್ಟು, ಇರಾನ್ ಸಹಿತ 40 ರಾಷ್ಟ್ರಗಳ ವಿವಿಧ ಕಂಪನಿಗಳಿಂದ ಭಾರತ ಕಚ್ಚಾ ತೈಲ ಆಮದು ಮಾಡುತ್ತದೆ. ಹೀಗಾಗಿ ಇರಾನ್ ತೈಲ ಖರೀದಿಯಲ್ಲೂ ಯಾವುದೇ ಪಾವತಿ ಸಮಸ್ಯೆ ಎದುರಾಗಿಲ್ಲ ಎಂದು ಅದು ಹೇಳಿಕೊಂಡಿದೆ. ಹಡಗಿನ ಮಾರ್ಗ ಬದಲಾವಣೆ ಸುದ್ದಿಯಲ್ಲಿ ತೈಲ ವ್ಯಾಪಾರ ಹೇಗೆ ನಡೆಯುತ್ತದೆ ಎಂಬ ಸತ್ಯವನ್ನು ಕಡೆಗಣಿಸಲ್ಪಟ್ಟಿದೆ. ಬಿಲ್ ಪಾವತಿಸಿದ ಬಳಿಕ ಹಡಗುಗಳು ತಮ್ಮ ಸಂಚಾರ ಆರಂಭಿಸುತ್ತವೆ. ಮುಂದಿನ ತಿಂಗಳುಗಳಿಗೆ ಅಗತ್ಯವಿರುವ ಕಚ್ಚಾ ತೈಲವನ್ನು ಭಾರತ ಹೊಂದಿದೆ. ಇರಾನ್‌ನಿಂದ ಬರಬೇಕಾಗಿದ್ದ ಕಚ್ಚಾ ತೈಲ ಈಗಾಗಲೇ ಬಂದಿವೆ ಎಂದು ತೈಲ ಸಚಿವಾಲಯ ತಿಳಿಸಿದೆ. ಎಲ್‌ಪಿಜಿ ಪೂರೈಕೆ ವಿಚಾರದಲ್ಲೂ ಈ ರೀತಿ ತಪ್ಪು ಮಾಹಿತಿ ಪ್ರಸರಿಸಲಾಗಿದೆ.

ಇರಾನ್‌ಗೆ ಮತ್ತೆ ಟ್ರಂಪ್ ಗಡುವು

- ಇರಾನ್ ವಿರುದ್ಧ ಮತ್ತೆ ಕಿಡಿಕಾರಿದ ಟ್ರಂಪ್
- ಯುದ್ಧ ವಿಮಾನ ಪತನವಾದ ಮೇಲೆ ಆಕ್ರೋಶ
- ಮತ್ತೊಬ್ಬ ಪೈಲಟ್‌ಗಾಗಿ ನಡೆಯುತ್ತಲೇ ಇದೆ ಶೋಧ

• **ದುಬೈ/ವಾಷಿಂಗ್ಟನ್:** ಇರಾನ್ ವಿರುದ್ಧದ ಯುದ್ಧದಲ್ಲಿ ಅಮೆರಿಕದ ಎರಡು ಯುದ್ಧ ವಿಮಾನ ಪತನವಾಗಿರುವ ಘಟನೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ತೀವ್ರ ಆಕ್ರೋಶದ ವಿಚಾರವಾಗಿದ್ದು, ಈಗ ತನ್ನ ಜತೆ ಡೀಲ್ ಮಾಡಿಕೊಳ್ಳಲು 48 ಗಂಟೆಗಳ ಗಡುವು ನೀಡಿದ್ದಾರೆ. ಈ ಹಿಂದೆ ಯುದ್ಧದಲ್ಲಿ ಇರಾನ್ ಸೋತಿದೆ ಎಂದು ಟ್ರಂಪ್ ಘೋಷಿಸಿದ ತರುವಾಯ, ಈ ದೇಶವು ಅಮೆರಿಕದ ಯುದ್ಧ ವಿಮಾನಗಳನ್ನು ಟಾರ್ಗೆಟ್ ಮಾಡಿತ್ತು. ಅಷ್ಟೇ ಅಲ್ಲ, ಯಶಸ್ವಿಯಾಗಿ ಒಂದು ಯುದ್ಧ ವಿಮಾನವನ್ನು ಹೊಡೆದುರುಳಿಸಲಾಗಿದೆ. ಇದನ್ನು ಅಮೆರಿಕ ಕೂಡ ಒಪ್ಪಿಕೊಂಡಿದೆ. ಆದರೆ ಒಬ್ಬ ಪೈಲಟ್ ಮಾತ್ರ ಸಿಕ್ಕಿದ್ದು, ಮತ್ತೊಬ್ಬರ ಬಗ್ಗೆ ಸುಳಿವೇ ಇಲ್ಲ, ಇದೂ ಆಕ್ರೋಶಕ್ಕೆ ಕಾರಣವಾಗಿದೆ.

ಸಿಬ್ಬಂದಿಗಾಗಿ ಹುಡುಕಾಟ

ಸುಮಾರು ಐದು ವಾರಗಳ ಹಿಂದೆ ಇರಾನ್ ಯುದ್ಧ ಪ್ರಾರಂಭವಾದ ನಂತರ ಮೊದಲ ಗುಂಡಿನ ದಾಳಿ ಸೇರಿದಂತೆ ಎರಡು ಯುಎಸ್ ಯುದ್ಧ ವಿಮಾನಗಳು ಪತನಗೊಂಡ ನಂತರ, ಕಾಣೆಯಾದ ಯುಎಸ್ ಪೈಲಟ್‌ಗಾಗಿ ಹುಡುಕಾಟ ನಡೆಯುತ್ತಿದ್ದು, ಇನ್ನೊಬ್ಬರನ್ನು ರಕ್ಷಿಸಲಾಗಿದೆ.



ದುಬೈನಲ್ಲಿ ಒರಾಕಲ್ ಕಚೇರಿಗೆ ಹಾನಿ

ಇರಾನ್‌ನ ಅರೆಸೈನಿಕ ರಿವಲ್ಯೂಷನರಿ ಗಾರ್ಡ್ ಒರಾಕಲ್ ಕಂಪನಿಯನ್ನು ಗುರಿ ಮಾಡಿ ಬೆದರಿಕೆ ಹಾಕಿದ ನಂತರ, ಯುಎಇ ದುಬೈನಲ್ಲಿರುವ ಒರಾಕಲ್ ಕಚೇರಿಗೆ ಅನುಮಾನಾಸ್ಪದ ಇರಾನಿ ಡ್ರೋನ್ ಹಾನಿ ಮಾಡಿದೆ. ಎಪಿ ಸಂಸ್ಥೆಯು ಕಟ್ಟಡದ ನೈಋತ್ಯ ಮೂಲೆಯಲ್ಲಿ ದೊಡ್ಡ ರಂಧ್ರ ಕಾಣಿಸಿದ ದೃಶ್ಯಗಳನ್ನು ಪರಿಶೀಲಿಸಿ ದೃಢಪಡಿಸಿದೆ. ದುಬೈ ಮೀಡಿಯಾ ಕಚೇರಿ ಇದನ್ನು ವೈಮಾನಿಕ ತಡೆ ಸಮಯದಲ್ಲಿ ಬಿದ್ದ ಅವಶೇಷಗಳಿಂದ ಉಂಟಾದ ಸಣ್ಣ ಘಟನೆ ಎಂದು ಬಣ್ಣಿಸಿ, ಯಾವುದೇ ಗಾಯಗಳಾಗಿಲ್ಲ ಎಂದಿದೆ.

ಬುಶೆಹರ್ ಪರಮಾಣು ಸ್ಥಾವರ ಬಳಿ ದಾಳಿ

• **ಬುಶೆಹರ್:** ಇರಾನ್‌ನ ಬುಶೆಹರ್ ಪರಮಾಣು ವಿದ್ಯುತ್ ಸ್ಥಾವರದ ಸಮೀಪ ಶನಿವಾರ ಕ್ಷಿಪಣಿಯೊಂದು ಅಪ್ಪಳಿಸಿದ್ದು, ಭದ್ರತಾ ತಂಡದ ಓರ್ವ ಸದಸ್ಯ ಮೃತಪಟ್ಟಿದ್ದಾರೆ. ಕಳೆದ ಎರಡು ವಾರಗಳಲ್ಲಿ ಈ ಪ್ರದೇಶದ ಮೇಲೆ ನಡೆದ ನಾಲ್ಕನೇ ದಾಳಿ ಇದಾಗಿದೆ. ಸ್ಫೋಟದ ಅವಶೇಷಗಳು ತಗುಲಿ ಸ್ಥಾವರದ ಭೌತಿಕ ರಕ್ಷಣಾ ವಿಭಾಗದ ಸಿಬ್ಬಂದಿಯೊಬ್ಬರು ಮೃತಪಟ್ಟಿರುವುದನ್ನು ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (ಐಎಇಎ) ಖಚಿತಪಡಿಸಿದೆ. ಸ್ಫೋಟದ ತೀವ್ರತೆ ಮತ್ತು ಅವಶೇಷಗಳಿಂದಾಗಿ ಸ್ಥಾವರದ ಒಳಗಿನ ಕಟ್ಟಡವೊಂದಕ್ಕೂ ಹಾನಿಯಾಗಿದೆ. ಆದರೆ, ದಾಳಿಯ ನಂತರ ವಿಕಿರಣ ಮಟ್ಟದಲ್ಲಿ ಯಾವುದೇ ಹೆಚ್ಚಳ ಕಂಡುಬಂದಿಲ್ಲ ಎಂದು ಇರಾನ್ ಅಧಿಕಾರಿಗಳು ಮತ್ತು ಅಂತಾರಾಷ್ಟ್ರೀಯ ವೀಕ್ಷಕರು ವರದಿ ಮಾಡಿದ್ದಾರೆ. ಐಎಇಎ ಮಹಾನಿರ್ದೇಶಕ ರಾಫೆಲ್ ಮರಿಯಾನೊ ಗ್ರೋಸಿ ಈ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಇಸ್ರೇಲ್ ವೈಮಾನಿಕ ದಾಳಿ

ಟೆಹ್ರಾನ್‌ನಲ್ಲಿರುವ ಬ್ಯಾಲಿಸ್ಟಿಕ್ ಮತ್ತು ವಿಮಾನ ವಿರೋಧಿ ಕ್ಷಿಪಣಿ ಸಂಗ್ರಹಣಾ ಕೇಂದ್ರಗಳ ಮೇಲೆ ಶನಿವಾರ ತನ್ನ ವಾಯುಪಡೆ ದಾಳಿ ನಡೆಸಿದೆ ಎಂದು ಇಸ್ರೇಲ್ ಸೇನೆ ಖಚಿತಪಡಿಸಿದೆ. ಶಸ್ತ್ರಾಸ್ತ್ರ ತಯಾರಿಕಾ ಘಟಕಗಳು ಮತ್ತು ಮಿಲಿಟರಿ ಸಂಶೋಧನಾ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದೆ. ಇರಾನ್‌ನ ಪ್ರಮುಖ ರಕ್ಷಣಾ ವ್ಯವಸ್ಥೆಗಳಿಗೆ ಹಾನಿ ಮಾಡುವ ಉದ್ದೇಶದಿಂದ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ, ಎಂದು ಇಸ್ರೇಲ್ ಹೇಳಿದೆ.

ಇರಾನ್‌ನ ಪೆಟ್ರೋಕೆಮಿಕಲ್ ಘಟಕದ ಮೇಲೆ ದಾಳಿ

ಯುಎಸ್ ಮತ್ತು ಇಸ್ರೇಲಿ ಯುದ್ಧ ವಿಮಾನಗಳು ಶನಿವಾರ ಇರಾನ್ ಮೇಲೆ ದಾಳಿ ಮಾಡುವುದನ್ನು ಮುಂದುವರಿಸಿದ್ದು, ಪೆಟ್ರೋಕೆಮಿಕಲ್ ಸೌಲಭ್ಯ ಸೇರಿದಂತೆ ಹಲವಾರು ಗುರಿಗಳನ್ನು ಹೊಡೆದಿವೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಇರಾನ್‌ನ ಅಧಿಕೃತ ಇಂಗ್ಲಿಷ್ ಭಾಷೆಯ ಪತ್ರಿಕೆ ಟೆಹ್ರಾನ್ ಟೈಮ್ಸ್ ಪಶ್ಚಿಮ ನಗರವಾದ ಮೆಹ್ರಾನ್‌ನಲ್ಲಿರುವ ಇರಾನ್‌ನ ಕೃಷಿ ಸಚಿವಾಲಯಕ್ಕೆ ಸೇರಿದ ಕೇಂದ್ರದ ಮೇಲೆ ವೈಮಾನಿಕ ದಾಳಿ ನಡೆದಿದೆ ಎಂದು ವರದಿ ಮಾಡಿದೆ.

ವಿಕಿರಣಶೀಲ ಪರಿಣಾಮ ಎಲ್ಲರ ಮೇಲೆ

ಬುಶೆಹರ್ ಪರಮಾಣು ವಿದ್ಯುತ್ ಸ್ಥಾವರದ ಮೇಲಿನ ನಿರಂತರ ದಾಳಿಯ ವಿಕಿರಣಶೀಲ ಪರಿಣಾಮವು ಟೆಹ್ರಾನ್ ಅಲ್ಲ, ಪ್ರಾದೇಶಿಕ ರಾಜಧಾನಿಗಳಲ್ಲಿ ಜೀವನವನ್ನು ಕೊನೆಗೊಳಿಸುತ್ತದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಶನಿವಾರ ಎಚ್ಚರಿಕೆ ನೀಡಿದ್ದಾರೆ. ಸ್ಥಾವರದ ಮೇಲೆ ಪದೇ ಪದೆ ನಡೆಯುತ್ತಿರುವ ದಾಳಿಗಳ ಬಗ್ಗೆ ಪಾಶ್ಚಿಮಾತ್ಯ ಸರ್ಕಾರಗಳು ಮೌನವಾಗಿವೆ ಎಂದು ಅವರು ಆರೋಪಿಸಿದರು. ಬುಶೆಹರ್ ಸಂಕೀರ್ಣದ ಮೇಲೆ ಶನಿವಾರ ನಾಲ್ಕನೇ ದಾಳಿ ನಡೆದಿದ್ದು, ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ. ಆದರೆ, ಇಂಟರ್ನ್ಯಾಷನಲ್ ಅಟಾಮಿಕ್ ಎನರ್ಜಿ ಏಜೆನ್ಸಿಯ ಪ್ರಕಾರ, ವಿಕಿರಣದ ಮಟ್ಟದಲ್ಲಿ ಯಾವುದೇ ಹೆಚ್ಚಳ ವರದಿಯಾಗಿಲ್ಲ.

ಕತಾರ್‌ಗೆ ಮೆಲೋನಿ ಭೇಟಿ

ಇರಾನ್ ಬಾಂಬ್ ದಾಳಿಯಿಂದ ಹಾನಿಗೊಳಗಾದ ಕತಾರ್ ಇಂಧನ ಮೂಲಸೌಕರ್ಯವನ್ನು ಪುನಸ್ಥಾಪಿಸಲು ಸಹಾಯ ಮಾಡುವುದಾಗಿ ಇಟಲಿ ಪ್ರಧಾನಿ ಮೆಲೋನಿ ಕತಾರ್ ನಾಯಕರಿಗೆ ಭರವಸೆ ನೀಡಿದರು. ಇರಾನ್ ವಿರುದ್ಧ ಯುಎಸ್-ಇಸ್ರೇಲ್ ಯುದ್ಧ ಪ್ರಾರಂಭವಾದ ನಂತರ ಗಲ್ಫ್ ಪ್ರದೇಶಕ್ಕೆ ಭೇಟಿ ನೀಡಿದ ಮೊದಲ ಇಯು, ಜಿ20 ಮತ್ತು ನ್ಯಾಟೋ ನಾಯಕಿ ಎಂಬ ಹೆಗ್ಗಳಿಕೆಗೂ ಮೆಲೋನಿ ಪಾತ್ರರಾಗಿದ್ದಾರೆ. ಸೌದಿ ಅರೇಬಿಯಾದಲ್ಲಿ ಶುಕ್ರವಾರ ಎರಡು ದಿನಗಳ ಭೇಟಿಯನ್ನು ಪ್ರಾರಂಭಿಸಿದ ಅವರು ಯುಎಇಗೂ ಭೇಟಿ ನೀಡಲಿದ್ದಾರೆ. ಮೆಲೋನಿ ಮತ್ತು ಕತಾರ್‌ನ ಅಮೀರ್ ಶೇಖ್ ತಮೀಮ್ ಬಿನ್ ಹಮದ್ ಅಲ್-ಥಾನಿ ಅವರು ಹೋರ್ಮುಜ್ ಜಲಸಂಧಿಯನ್ನು ತೆರೆಯುವ ಅಗತ್ಯವನ್ನು ಪುನರುಚ್ಚರಿಸಿದರು.

ಕಿರುಸುದ್ದಿ

ಎಟಿಎಸ್‌ನಿಂದ ನಾಲ್ವರು ಉಗ್ರರ ಸೆರೆ

• **ಲಖನೌ:** ರಾಷ್ಟ್ರೀಯ ಮೂಲಸೌಕರ್ಯ ಮತ್ತು ರಾಜಕೀಯ ಮುಖಂಡರ ಮೇಲೆ ದಾಳಿ ನಡೆಸಲು ಸಂಚು ರೂಪಿಸಿದ್ದ ಪಾಕಿಸ್ತಾನ ಮೂಲದ ಜಾಲಕ್ಕೆ ಸೇರಿದ ನಾಲ್ವರು ವ್ಯಕ್ತಿಗಳನ್ನು ಉತ್ತರ ಪ್ರದೇಶ ಭಯೋತ್ಪಾದನಾ ನಿರೋಧಕ ದಳ (ಎಟಿಎಸ್) ಏಪ್ರಿಲ್ 2 ರಂದು ಬಂಧಿಸಿದೆ. ಲಕ್ನೋ ರೈಲ್ವೇ ನಿಲ್ದಾಣದ ಬಳಿ ರೈಲ್ವೆ ಸಿಗ್ನಲ್‌ಗಳನ್ನು ಗುರಿಯಾಗಿಸಿಕೊಂಡಿದ್ದ ಸಾಕಿಬ್, ಅರ್ಬಾಜ್, ವಿಕಾಸ್ ಪೆಹ್ಲಾವತ್ ಮತ್ತು ಲೋಕೇಶ್ ಅವರನ್ನು ಬಂಧಿಸಲಾಗಿದೆ. ಬಂಧಿತರಿಂದ ದಹನಕಾರಿ ವಸ್ತುಗಳು, ಸ್ಮಾರ್ಟ್‌ಫೋನ್‌ಗಳು ಮತ್ತು ಕರಪತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ತಂಡ, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕ ಸಾಧಿಸಲು ಸಾಮಾಜಿಕ ಮಾಧ್ಯಮಗಳನ್ನು ಬಳಸುತ್ತಿತ್ತು ಹಾಗೂ ಘಾಜಿಯಾಬಾದ್, ಅಲಿಗಢ ಮತ್ತು ಲಕ್ನೋಗಳಲ್ಲಿ ಸಂಚು ರೂಪಿಸಲು ಸ್ಥಳ ಪರಿಶೀಲನೆ ನಡೆಸಿತ್ತು ಎಂದು ತಿಳಿದುಬಂದಿದೆ.

ಸಂಕಷ್ಟ ನಡುವೆಯೂ ಭಾರತ ದೃಢ: ಜೈಶಂಕರ್

• **ರಾಯ್ಪುರ:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಮಿಲಿಟರಿ ಸಂಘರ್ಷದಂತಹ ಜಾಗತಿಕ ಆಘಾತಗಳನ್ನು ಭಾರತ ಯಶಸ್ವಿಯಾಗಿ ಎದುರಿಸಿದೆ. ತನ್ನ ಸನ್ನದ್ಧತೆಯನ್ನು ಸಾಬೀತುಪಡಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಶನಿವಾರ ತಿಳಿಸಿದ್ದಾರೆ. ಭಾರತ ಇಂದು ವಿಶ್ವದ ಅಗ್ರ ಐದು ಆರ್ಥಿಕತೆಗಳಲ್ಲಿ ಒಂದಾಗಿದೆ. ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ, ಪ್ರಾತಿನಿಧಿಕ ರಾಜಕಾರಣ ಮತ್ತು ನಿರ್ಣಾಯಕ ನಾಯಕತ್ವದಿಂದ ಈ ಸ್ಥಾನ ಲಭ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಫೆ.28ರಂದು ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ನಡೆಸಿದ ನಂತರ ಆರಂಭವಾದ ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ನಡುವೆಯೂ ದೇಶ ಆಂತರಿಕ ಮತ್ತು ಬಾಹ್ಯ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಿದೆ ಎಂದು ಅವರು ಹೇಳಿದರು.

ಸಾವಿರ ಕೆಜಿ ತೂಕದ ದೇಸಿ ವೈಮಾನಿಕ ಬಾಂಬ್ ಅಭಿವೃದ್ಧಿ

• **ಹೊಸದಿಲ್ಲಿ:** ಭಾರತೀಯ ವಾಯುಪಡೆಗೆ (ಐಎಎಫ್) ಬೆಂಬಲ ನೀಡಲು 1,000 ಕೆಜಿ ತೂಕದ ವೈಮಾನಿಕ ಬಾಂಬ್‌ಗಳ ಸ್ವದೇಶಿ ವಿನ್ಯಾಸ, ಅಭಿವೃದ್ಧಿ ಮತ್ತು ಖರೀದಿಗಾಗಿ ರಕ್ಷಣಾ ಸಚಿವಾಲಯ ಆಸಕ್ತಿ ಪತ್ರವನ್ನು (ಇಒಐ) ಹೊರಡಿಸಿದೆ. ಈ ಯೋಜನೆ ಕೈಗಾರಿಕಾ ಅನುದಾನಿತ 'ಮೇಕ್-' ಉಪ-ವರ್ಗದಲ್ಲಿ ನಡೆಯಲಿದ್ದು, ಎರಡು ಪ್ರತ್ಯೇಕ ಹಂತಗಳನ್ನು ಒಳಗೊಂಡಿದೆ. ಆರಂಭದಲ್ಲಿ, ಅಭಿವೃದ್ಧಿ ಸಂಸ್ಥೆಗಳು ಆರು ಮಾದರಿಗಳನ್ನು (ಪ್ರೊಟೊಟೈಪ್) ತಯಾರಿಸಲಿವೆ. ಯಶಸ್ವಿ ಪ್ರಯೋಗಗಳ ನಂತರ, ಸ್ವದೇಶಿ ವಿನ್ಯಾಸ, ಅಭಿವೃದ್ಧಿ ಮತ್ತು ತಯಾರಿಕೆ (ಐಡಿಡಿಎಂ) ವರ್ಗದಲ್ಲಿ 600 ಬಾಂಬ್‌ಗಳನ್ನು ಖರೀದಿಸಲು ಸಚಿವಾಲಯ ಯೋಜಿಸಿದೆ.

ರಕ್ಷಣಾ ರಫ್ತು ದಾಖಲೆ ಮಟ್ಟದ ಏರಿಕೆ

• **ಹೊಸದಿಲ್ಲಿ:** ಭಾರತದ ರಕ್ಷಣಾ ರಫ್ತು 2025-26 ಆರ್ಥಿಕ ವರ್ಷದಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದ್ದು, ಒಟ್ಟು 38,424 ಕೋಟಿ ರೂ. ದಾಖಲಾಗಿದೆ. 2016-17ರಲ್ಲಿ ಕೇವಲ 1,522 ಕೋಟಿ ರೂ. ಇದ್ದ ರಫ್ತು, ಕಳೆದ ದಶಕದಲ್ಲಿ ಸುಮಾರು 25 ಪಟ್ಟು ಏರಿಕೆಯಾಗಿರುವುದು ಗಮನಾರ್ಹವಾಗಿದೆ. ಇದರಿಂದ ಜಾಗತಿಕ ರಕ್ಷಣಾ ಮಾರುಕಟ್ಟೆಯಲ್ಲಿ ಭಾರತದ ಸ್ಥಾನ ಮತ್ತಷ್ಟು ಬಲಗೊಂಡಿದೆ. ಭಾರತೀಯ ರಕ್ಷಣಾ ಉತ್ಪನ್ನಗಳಿಗೆ ಜಾಗತಿಕ ಮಟ್ಟದಲ್ಲಿ ಬೇಡಿಕೆ ಹೆಚ್ಚುತ್ತಿದ್ದು, ಮ್ಯಾನ್ಮಾರ್ ಅತಿ ದೊಡ್ಡ ಖರೀದಿದಾರ ದೇಶವಾಗಿ ಹೊರಹೊಮ್ಮಿದೆ. ಒಟ್ಟು ರಫ್ತಿನಲ್ಲಿ



ಸುಮಾರು ಶೇ.28 ಪಾಲು ಮ್ಯಾನ್ಮಾರ್‌ಗೆ ಸೇರಿದೆ. ಫಿಲಿಪ್ಪೈನ್ಸ್ (19%) ಮತ್ತು ಆರ್ಮೇನಿಯಾ (15%) ಮುಂದಿನ ಸ್ಥಾನಗಳಲ್ಲಿ ಇದ್ದು, ಈ ಮೂರು ದೇಶಗಳೇ ಒಟ್ಟು ರಫ್ತಿನ 60% ಕ್ಕೂ ಹೆಚ್ಚು ಪಾಲು ಹೊಂದಿವೆ. ಇದಲ್ಲದೆ ಶ್ರೀಲಂಕಾ, ಮೋರಿಷಸ್, ಸೆಶೆಲ್ಸ್, ವಿಯೆಟ್ನಾಂ ಸೇರಿದಂತೆ ಅನೇಕ ದೇಶಗಳೂ ಭಾರತೀಯ ರಕ್ಷಣಾ ಸಾಧನಗಳನ್ನು ಖರೀದಿಸುತ್ತಿವೆ.

ರಫ್ತಾಗುತ್ತಿರುವ ಉತ್ಪನ್ನಗಳಲ್ಲಿ ನೌಕಾಪಡೆಗೆ ಸಂಬಂಧಿಸಿದ ಸಾಧನಗಳೇ ಪ್ರಮುಖವಾಗಿದ್ದು, ಒಟ್ಟು ರಫ್ತಿನಲ್ಲಿ ಸುಮಾರು ಶೇ.55 ಪಾಲು ಹೊಂದಿವೆ. ಇದಕ್ಕೆ ಜೊತೆಗೆ ಗನ್ ಮತ್ತು ತೋಪು ವ್ಯವಸ್ಥೆಗಳು, ಕ್ಷಿಪಣಿ ವ್ಯವಸ್ಥೆಗಳು, ನಿಗಾ ಸಾಧನಗಳು, ಸೆನ್ಸರ್‌ಗಳು, ವಿಮಾನ ಮತ್ತು ಇತರೆ ಉನ್ನತ ತಂತ್ರಜ್ಞಾನಾಧಾರಿತ ರಕ್ಷಣಾ ಸಾಧನಗಳೂ ರಫ್ತಾಗುತ್ತಿವೆ.

ಕೊರೋನಾ ಅವಧಿಯಲ್ಲಿ ಸ್ವಲ್ಪ ಕುಸಿತ ಕಂಡಿದ್ದರೂ, 2021-22ರಿಂದ ರಫ್ತು ಮತ್ತೆ ವೇಗ ಪಡೆದುಕೊಂಡಿದ್ದು, 2023-24ರಿಂದ 2025-26ರ ಅವಧಿಯಲ್ಲಿ 21,083 ಕೋಟಿ ರೂ.ನಿಂದ 38,424 ಕೋಟಿ ರೂ.ಗೆ ಏರಿಕೆಯಾಗಿದೆ.

ಈ ಸಾಧನೆ ಆತ್ಮನಿರ್ಭರ ಭಾರತ ದೃಷ್ಟಿಕೋನಕ್ಕೆ ಮತ್ತಷ್ಟು ಬಲ ನೀಡಿದ್ದು, ಭಾರತವು ಜಾಗತಿಕ ರಕ್ಷಣಾ ಸರಬರಾಜು ಕ್ಷೇತ್ರದಲ್ಲಿ ಪ್ರಮುಖ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ. ಮುಂದಿನ ವರ್ಷಗಳಲ್ಲಿ ಭಾರತದ ರಕ್ಷಣಾ ರಫ್ತು ಇನ್ನಷ್ಟು ಏರಿಕೆಯಾಗುವ ನಿರೀಕ್ಷೆ ವ್ಯಕ್ತವಾಗಿದೆ.

- 38,424 ಕೋಟಿ ರೂ. ಇತಿಹಾಸದಲ್ಲೇ ಅತಿ ಹೆಚ್ಚು ರಫ್ತು
- 2016ರಿಂದ 25 ಪಟ್ಟು ಏರಿಕೆ
- ಮ್ಯಾನ್ಮಾರ್, ಫಿಲಿಪ್ಪೈನ್ಸ್, ಆರ್ಮೇನಿಯಾ ಪ್ರಮುಖ ಖರೀದಿದಾರರು
- ನೌಕಾ ಸಾಧನಗಳಿಗೆ 55% ಪಾಲು

ಭಾರತ ಏನು ರಫ್ತು ಮಾಡುತ್ತಿದೆ?

ಭಾರತದ ರಕ್ಷಣಾ ರಫ್ತಿನಲ್ಲಿ ನೌಕಾಪಡೆಗೆ ಸಂಬಂಧಿಸಿದ ಸಾಧನಗಳೇ ಮುಂಚೂಣಿಯಲ್ಲಿದ್ದು, ಒಟ್ಟು ರಫ್ತಿನಲ್ಲಿ ಸುಮಾರು 55% ಪಾಲು ಹೊಂದಿವೆ.

- ಗನ್ ಹಾಗೂ ತೋಪು ವ್ಯವಸ್ಥೆಗಳು
- ಕ್ಷಿಪಣಿ ವ್ಯವಸ್ಥೆಗಳು
- ನಿಗಾವ್ಯವಸ್ಥೆ ಮತ್ತು ಸೆನ್ಸರ್‌ಗಳು
- ವಿಮಾನ ಹಾಗೂ ರಕ್ಷಣಾ ತಂತ್ರಜ್ಞಾನ

ಲಡಾಖ್: ಗಗನಯಾತ್ರಿಗಳ ಮಾನಸಿಕ, ದೈಹಿಕ ಪರೀಕ್ಷೆ

• **ಹೊಸದಿಲ್ಲಿ:** ಗಗನಯಾತ್ರಿಗಳ ಮಾನಸಿಕ, ದೈಹಿಕ, ಮತ್ತು ಕಾರ್ಯಾಚರಣಾ ಸಾಮರ್ಥ್ಯ ಪರೀಕ್ಷೆಯ ಉದ್ದೇಶದಿಂದ ಇಸ್ರೋ ಲಡಾಖ್‌ನಲ್ಲಿ ಮಿಷನ್ ಮಿತ್ರ ಕಾರ್ಯಾಚರಣೆಗೆ ಚಾಲನೆ ನೀಡಿದೆ. ಅತಿ ಎತ್ತರದ ಪ್ರದೇಶಗಳಲ್ಲಿ ಕ್ರೂ ಸದಸ್ಯರು ಹೇಗೆ ಕಾರ್ಯಾಚರಣೆ ನಡೆಸುತ್ತಾರೆಂದು ಗಮನಿಸಲಾಗುವುದು. ಭಾರತದ ಮಹತ್ವಾಕಾಂಕ್ಷಿ ಬಾಹ್ಯಾಕಾಶ ಯೋಜನೆ ಗಗನಯಾನ ಹಾಗೂ ಮುಂಬರುವ ದೀರ್ಘಕಾಲದ ಯೋಜನೆಗಳಿಗಾಗಿ ಕ್ರೂ ಸದಸ್ಯರ ಪ್ರದರ್ಶನವನ್ನು ಅಳೆಯಲಾಗುವುದು. ಸಮುದ್ರ ಮಟ್ಟದಿಂದ 3,500 ಮೀ. ಎತ್ತರದ ಲೇಹ್‌ನಲ್ಲಿ ಏ.9ರವರೆಗೆ ಮಿಷನ್ ಮಿತ್ರ (ಪರಸ್ಪರ ಕಾರ್ಯಸಾಧ್ಯಗಳ ನಕ್ಷೆ ಮತ್ತು ಪ್ರತಿಕ್ರಿಯೆ ಮೌಲ್ಯಮಾಪನ) ನಡೆಸಲಾಗುತ್ತಿದೆ. ಹೈಪೋಕ್ಸಿಯಾ (ಆಮ್ಲಜನಕದ ಕೊರತೆ), ಕಡಿಮೆ ತಾಪಮಾನದ ಪರಿಸ್ಥಿತಿಯ ಅನುಕರಣೆ ಮತ್ತು ಬಾಹ್ಯಾಕಾಶ ಯಾನಕ್ಕೆ ಸ್ವಾಭಾವಿಕ ಹೋಲಿಕೆಯ ಏಕಾಂಗಿತನದ ಪರಿಸರದಲ್ಲಿದ್ದು ಪರೀಕ್ಷೆ ನಡೆಸಲಾಗುತ್ತದೆ. ಇಸ್ರೋ ಹಾಗೂ ಭಾರತೀಯ ವಾಯುಪಡೆಯ ಏರೋಸ್ಪೇಸ್ ಮೆಡಿಸಿನ್ ಸಂಸ್ಥೆ ಈ ಮಿಷನ್ ಅನ್ನು ವಿನ್ಯಾಸಗೊಳಿಸಿದ್ದು, ಬೆಂಗಳೂರಿನ ನವೋದ್ಯಮ ಪ್ರೋಟೋಪ್ಲಾನೆಟ್ ಸೌಲಭ್ಯ ನಿರ್ವಹಣೆ ಮತ್ತು ಕಾನೂನುಬದ್ಧ ಪ್ರೋಟೋಕಾಲ್‌ಗಳ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಎಲ್ಲಾ ಮಾನವ ಬಾಹ್ಯಾಕಾಶ ಯೋಜನೆಗಳಲ್ಲಿ ಸಿಬ್ಬಂದಿಯ ಸುರಕ್ಷತೆ ಮತ್ತು ಕಾರ್ಯಕ್ಷಮತೆ ಅತ್ಯಂತ ಮುಖ್ಯ ಅಂಶಗಳಾಗಿವೆ. ಪರಿಣಾಮಕಾರಿ ಸಂವಹನ ನಡೆಸುವುದು, ಒತ್ತಡಕ್ಕೆ ಹೊಂದಿಕೊಳ್ಳುವುದು, ಮಾನಸಿಕ ಸ್ಥೈರ್ಯವನ್ನು ಕಾಪಾಡುವುದು ಮತ್ತು ಪರಸ್ಪರ ಬೆಂಬಲಿಸುವ ಸಾಮರ್ಥ್ಯವೇ ಎಲ್ಲಾ ಯೋಜನೆಗಳ ಯಶಸ್ಸು ಮತ್ತು ಸುರಕ್ಷತೆಯನ್ನು ನಿರ್ಧರಿಸುತ್ತದೆ ಎಂದು ಇಸ್ರೋ ತನ್ನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಫ್ಘಾನಿಸ್ತಾನದಲ್ಲಿ 5.8 ತೀವ್ರತೆಯ ಭೂಕಂಪ: 8 ಮಂದಿ ಸಾವು

• **ಕಾಬೂಲ್:** ಅಫ್ಘಾನಿಸ್ತಾನದ ಉತ್ತರ ಮತ್ತು ಪೂರ್ವ ಭಾಗ ಹಾಗೂ ಪಾಕಿಸ್ತಾನದ ಪಶ್ಚಿಮ ಭಾಗದಲ್ಲಿ ಶುಕ್ರವಾರ ತಡರಾತ್ರಿ 5.8 ತೀವ್ರತೆಯ ಭೂಕಂಪ ಸಂಭವಿಸಿದ್ದು, ಕಾಬೂಲ್‌ನಲ್ಲಿ ಕನಿಷ್ಠ ಎಂಟು ಜನರು ಮೃತಪಟ್ಟಿದ್ದಾರೆ. ಕಾಬೂಲ್ ಗವರ್ನರ್ ವಕ್ತಾರ ಹಫೀಜುಲ್ಲಾ ಬಕಾರತ್ ಮಾತನಾಡಿ, ಕಾಬೂಲ್‌ನ ಹೊರವಲಯದಲ್ಲಿ ಮನೆಯೊಂದು ಕುಸಿದು ಒಂದೇ ಕುಟುಂಬದ ಎಂಟು ಮಂದಿ ಮೃತಪಟ್ಟಿದ್ದು, ಮಗುವೊಂದು ಗಾಯಗೊಂಡಿದೆ ಎಂದು ತಿಳಿಸಿದ್ದಾರೆ. ಆರೋಗ್ಯ ಸಚಿವಾಲಯದ ವಕ್ತಾರ ಶರಾಫತ್ ಜಮಾನ್ ಅವರು ಪ್ರಾಂತೀಯ ಆರೋಗ್ಯ ಅಧಿಕಾರಿಗಳನ್ನು ಜಾಗರೂಕರಾಗಿರುವಂತೆ ಸೂಚಿಸಿದ್ದಾರೆ. ಭೂಕಂಪದ ಕೇಂದ್ರಬಿಂದು ಕುಂದುಜ್ ನಗರದಿಂದ 150 ಕಿಲೋಮೀಟರ್ ದೂರದಲ್ಲಿರುವ ಹಿಂದೂ ಕುಶ್ ಪರ್ವತ ಶ್ರೇಣಿಯಲ್ಲಿತ್ತು. ಇಸ್ಲಾಮಾಬಾದ್, ಪೇಶಾವರ ಮತ್ತು ಸ್ವಾತ್ ನಗರಗಳಲ್ಲಿಯೂ ನಡುಕ ಉಂಟಾಗಿದೆಯಾದರೂ, ಪಾಕಿಸ್ತಾನದಲ್ಲಿ ಯಾವುದೇ ಹಾನಿಯಾದ ಬಗ್ಗೆ ವರದಿಯಾಗಿಲ್ಲ. ಕಳೆದ ಆಗಸ್ಟ್‌ನಲ್ಲಿ ಸಂಭವಿಸಿದ 6.0 ತೀವ್ರತೆಯ ಭೂಕಂಪಕ್ಕೆ 2,200 ಜನರು ಬಲಿಯಾಗಿದ್ದರು.

ರಾಷ್ಟ್ರೀಯ ಚೇತನ ಜಾಗೃತಿಗೆ ಆರ್‌ಎಸ್‌ಎಸ್ ಭಾರೀ ಅಭಿಯಾನ | 62 ಸಾವಿರ ಕಾರ್ಯಕ್ರಮ, 32 ಲಕ್ಷ ಸ್ವಯಂಸೇವಕರು

ಹತ್ತು ಕೋಟಿ ಮನೆಗಳನ್ನು ತಲುಪಿದ ಆರ್‌ಎಸ್‌ಎಸ್

• **ಹೊಸದಿಲ್ಲಿ :** ಸಮಾಜದಲ್ಲಿ ಗುರುತು ಆಧಾರಿತ ಭೇದಗಳನ್ನು ಉಂಟುಮಾಡುವ ಯತ್ನಗಳ ನಡುವೆಯೂ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ದೇಶದಲ್ಲಿ ರಾಷ್ಟ್ರೀಯ ಚೇತನವನ್ನು ಜಾಗೃತಿಗೊಳಿಸುವಲ್ಲಿ ಹಾಗೂ ವಿಸ್ತರಿಸುವಲ್ಲಿ ಮಹತ್ತರ ಸಾಧನೆ ಮಾಡಿದೆ ಎಂದು ಸಂಘದೊಂದಿಗೆ ಸಂಬಂಧಿತ ವಾರಪತ್ರಿಕೆ ಆರ್ಗನೈಸರ್ ತನ್ನ ಸಂಪಾದಕೀಯದಲ್ಲಿ ಪ್ರಶಂಸಿಸಿದೆ. 2025ರ ವಿಜಯದಶಮಿ ಉತ್ಸವದಿಂದ ಆರಂಭವಾದ ಸಂಘದ ಈ ಭಾರೀ ಅಭಿಯಾನವು ದೇಶವ್ಯಾಪಿಯಾಗಿ ಬಿರುಸುಗೊಂಡಿದ್ದು, ಕೇವಲ 15 ದಿನಗಳ ಅವಧಿಯಲ್ಲಿ 62,000ಕ್ಕೂ ಹೆಚ್ಚು ಕಾರ್ಯಕ್ರಮಗಳು ನಡೆಸಿದ್ದು, 32 ಲಕ್ಷಕ್ಕೂ ಅಧಿಕ ಸ್ವಯಂಸೇವಕರು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. 22,000 ಸ್ಥಳಗಳಲ್ಲಿ ನಡೆದ ಪಥ ಸಂಚಲನಗಳಲ್ಲಿ 25 ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿರುವುದು ಗಮನಾರ್ಹವಾಗಿದೆ.

ಇದಕ್ಕೂ ಮೀರಿ, ಮನೆಮನೆಗೆ ತಲುಪುವ ಗೃಹ ಸಂಪರ್ಕ ಅಭಿಯಾನದ ಮೂಲಕ ಸಂಘವು ತನ್ನ ಪಂಚ ಪರಿವರ್ತನೆ ಸಂದೇಶವನ್ನು 10 ಕೋಟಿಗೂ ಅಧಿಕ ಕುಟುಂಬಗಳಿಗೆ ತಲುಪಿಸಿದೆ. ಈ ಅಭಿಯಾನವು 46 ಪ್ರಾಂತಗಳಲ್ಲಿ 37 ಪ್ರಾಂತಗಳನ್ನು ವ್ಯಾಪಿಸಿದೆ ಎಂದು ಸಂಪಾದಕೀಯ ತಿಳಿಸಿದೆ.

ಈ ಪ್ರಕ್ರಿಯೆಯಿಂದ ರಾಷ್ಟ್ರದ "ಸುಪ್ತ ಶಕ್ತಿ" ಜಾಗೃತಿಗೊಂಡಿದ್ದು,



ಸಂಘದ ಕಾರ್ಯಗಳ ಬಗ್ಗೆ ಜನರಲ್ಲಿ ಇರುವ ಪ್ರಶ್ನೆಗಳು ಮತ್ತು ಭಿನ್ನಾಭಿಪ್ರಾಯಗಳನ್ನೂ ನೇರವಾಗಿ ಅರಿಯುವ ಅವಕಾಶ ಸಿಕ್ಕಿದೆ ಎಂದು ಉಲ್ಲೇಖಿಸಲಾಗಿದೆ.

ದೇಶದಾದ್ಯಂತ ನಡೆದ ಹಿಂದೂ ಸಮಾವೇಶಗಳಲ್ಲಿ ಜಾತಿ, ಪಂಥ, ರಾಜಕೀಯ ಭೇದಗಳನ್ನು ಮೀರಿ 3 ಕೋಟಿಗೂ ಹೆಚ್ಚು ಜನರು ಭಾಗವಹಿಸಿದ್ದು, ಸಾಮಾಜಿಕ ಏಕತೆ ಬಲಪಡಿಸುವಲ್ಲಿ ಸಂಘದ ಪ್ರಯತ್ನಗಳು ಸ್ಪಷ್ಟವಾಗಿವೆ. ಸ್ಥಳೀಯ ಮಟ್ಟದಲ್ಲಿ 20ರಿಂದ 40 ಪ್ರಮುಖ ವ್ಯಕ್ತಿಗಳು ಹಾಗೂ ಸಂಘಟನೆಗಳ ಸಹಭಾಗಿತ್ವದಲ್ಲಿ ಈ ಕಾರ್ಯಕ್ರಮಗಳು ನಡೆದವು.

ಸದ್ಭಾವ ಬೈಠಕ್ ಹಾಗೂ ಪ್ರಮುಖ ಜನ ಸಂಗೋಷ್ಠಿಗಳ ಮೂಲಕ ಸಮಾಜದ ಬೌದ್ಧಿಕ ಹಾಗೂ ಸಾಮಾಜಿಕ ನಾಯಕತ್ವವನ್ನು

- 22 ಸಾವಿರ ಸ್ಥಳಗಳಲ್ಲಿ ಪಥ ಸಂಚಲನ, 25 ಲಕ್ಷ ಮಂದಿ ಭಾಗಿ
- ಆರ್ಗನೈಸರ್ ಸಂಪಾದಕೀಯದಲ್ಲಿ ಸಂಘದ ಕಾರ್ಯಗಳಿಗೆ ಮೆಚ್ಚುಗೆ



'ಮಾಜವನ್ನು ಗುರುತು ಆಧಾರಿತ ಭೇದಗಳ ಮೂಲಕ ವಿಭಜಿಸಲು ನಡೆಯುವ ಯತ್ನಗಳು ಮತ್ತು ಜಾಗತಿಕ ಅಸ್ಥಿರ ಪರಿಸ್ಥಿತಿಗಳು ಒಂದಾಗಿರುವ ಸಂದರ್ಭದಲ್ಲಿ, ಸಂಘವು ಭಾರತದ ರಾಷ್ಟ್ರೀಯ ಚೇತನವನ್ನು ಜಾಗೃತಿಗೊಳಿಸುವ ಮತ್ತು ವಿಸ್ತರಿಸುವಲ್ಲಿ ಗಮನಾರ್ಹ ಸಾಮರ್ಥ್ಯವನ್ನು ಪ್ರದರ್ಶಿಸಿದೆ.

■ ಪ್ರಫುಲ್ಲ ಕೇತ್ಕರ್, ಆರ್ಗನೈಸರ್ ಸಂಪಾದಕ

ಒಂದೇ ವೇದಿಕೆಗೆ ತರಲಾಗಿದ್ದು, ಸಾಮಾಜಿಕ ಸೌಹಾರ್ದತೆಗೆ ಒತ್ತು ನೀಡಲಾಗಿದೆ. ಸಂಘದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸಲು ಮುಕ್ತ ಪ್ರಶ್ನೋತ್ತರ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಜನಸಂಪರ್ಕದ ಮೂಲಕ ನೇರ ಸಂವಾದ ನಡೆಸಲಾಗಿದೆ ಎಂದು ಸಂಪಾದಕೀಯ ಹೇಳಿದೆ.

ರಾಷ್ಟ್ರಪುನರ್‌ನಿರ್ಮಾಣಕ್ಕೆ 'ಜಾಗೃತಿ ಶಕ್ತಿ, ಸುಪ್ತ ಶಕ್ತಿ ಹಾಗೂ ಸಜ್ಜನ ಶಕ್ತಿ' ಪ್ರಮುಖ ಕಂಬಗಳೆಂದು ಉಲ್ಲೇಖಿಸಿದ ಪತ್ರಿಕೆ, ಸಂಘವು ದೇಶದ ತಲುಪದ ವರ್ಗಗಳತ್ತವೂ ಗಮನ ಹರಿಸಿದೆ ಎಂದು ತಿಳಿಸಿದೆ.

ಇದೇ ವೇಳೆ, ಹರಿಯಾಣದ ಸಮಾಲ್ಖಾದಲ್ಲಿ ನಡೆದ ಅಖಿಲ ಭಾರತೀಯ ಪ್ರತಿನಿಧಿ ಸಭೆಯಲ್ಲಿ 2025-26ರ ಕಾರ್ಯಗಳನ್ನು ಪರಿಶೀಲಿಸಿ, ಮುಂದಿನ ಕಾರ್ಯಯೋಜನೆ ರೂಪಿಸಲಾಗಿದೆ. ಸಂಘದ ಕಾರ್ಯವಿಸ್ತರಣೆ, ಸಕಾರಾತ್ಮಕ ಶಕ್ತಿಗಳ ಸಕ್ರಿಯ ಪಾಲ್ಗೊಳ್ಳಿಕೆ ಹಾಗೂ ಸಾಮಾಜಿಕ ಸೌಹಾರ್ದತೆ ಬಲಪಡಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಸರಸಂಘಚಾಲಕ್ ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಸೇರಿದಂತೆ ಹಿರಿಯ ಪದಾಧಿಕಾರಿಗಳು ಹಾಗೂ ಬಿಜೆಪಿ ಸೇರಿ 32 ಸಹೋದರ ಸಂಘಟನೆಗಳ ಪ್ರಮುಖರು ಸಭೆಯಲ್ಲಿ ಭಾಗವಹಿಸಿದ್ದರು.

AFFIDAVIT

I, G RANI PRASAD, aged about 57 years, W/o Mr. G Prasad, residing at Silver Brick Homes 413, Unit 202, 7th Main Road, Balaji Layout, Vajarahalli, Kanakapura Road, Bangalore-560109. I hereby declare that my name has been wrongly mentioned as **RANI PRASAD**, instead of **G RANI PRASAD** in my account with STOCK HOLDING CORPORATION OF INDIA LIMITED. That my correct name is **G RANI PRASAD** and the same has been mentioned in all my records including Aadhaar Card and PAN card. Also my name is mentioned as **Garakapati Rani Prasad** with the income tax department for all tax filing purposes. I declare that the correct details are as follows: Name: **G RANI PRASAD**. This affidavit is required by me to submit to concerned authority evidencing my correct name **G RANI PRASAD** vide affidavit dated 17-06-2025 sworn before notary Aravind patil G.G at Bangalore.

ಮಾನ್ಯ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದೇವನಹಳ್ಳಿ
ಓ.ಎಸ್. ನಂ. 716/2025

[illegible]

ಮಾನ್ಯ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದೇವನಹಳ್ಳಿ
ಓ.ಎಸ್. ನಂ. 715/2025

[illegible]

IN THE COURT OF THE 1st ADDL SENIOR CIVIL JUDGE AND J.M.F.C AT NELAMANGALA
O.S No. 967/2024

PLAINTIFF: Muniyamma, Since by her LR's.
- V/s -
DEFENDANTS: Maajegowda and others.
DEFENDANT No.4: Smt. Bhagyamma, D/o Late Gangamma, 38 years, R/at: Lingenahalli, Mahadevapura Dakale, Kasaba Hobli, Nelamangala Taluk, Bangalore Rural District-562123.

SUMMONS UNDER ORDER 5 RULE 20 (1-A) OF C.P.C.

WHEREAS, the plaintiff have filed the above suit against you and others for the relief of partition and other reliefs of the suit schedule properties. The Hon'ble Court has posted the above case on **10-06-2026** at 11:00 A.M. for your appearance personally or through your counsel, on that day. Hence, you are Notice/summoned to appear before the court on the said date personally or through your counsel, on that day otherwise the Hon'ble Court will be deciding the matter in your absence by placing you ex-parte.

SCHEDULE

1. Land bearing Sy No 20/1 measuring to an extent of 6 acres 30 guntas bounded as follows: **East by:** Proprties of Premakka, Gangahanumaiah and Hanumantharayappa and road, **West by:** Properties of Lenkappa, **North by:** Properties of Venkataswamaiah and Hanumantharayappa, **South by:** Properties of Kariyappa and road.
2. Land bearing Sy No 20/1 measuring to an extent of 7 acres 9 guntas bounded as follows: **East by:** Properties of C.D John, **West by:** Perperties of Rangappa, **North by:** Properties of Annaiah, **South by:** Properties of Kariyappa.
3. Land bearing Sy No 20/1 measuring to an extent of 28 guntas, bounded as follows: **East by:** Property of Gangahanumaiah, **West by:** Property of Lenkappa, **North by:** Property of Muniyappa, **South by:** Property of Hanumantharayappa.
4. Land bearing Sy No 19/P1 measuring to an extent of 3 acres, bounded as follows: **East by:** Property of HEL Property, **West by:** Property of Lenkappa, **North by:** Gnagahanumaiah and Property of Hanumantharayappa, **South by:** Property of Lenkappa.

All are situated at Lingenahalli village, Kasaba Hobli, Nelamangala Taluk, Bangalore Rural District.

Given under my hand and seal of the court on this 13-03-2026

By order of the Court, Sheristedar, Court of Senior Civil Judge & JMFC, Nelamangala.

H.D & ASSOCIATES, Advocate
No.2968, 13th Main, Community Hall Road, 2nd Stage, Rajajinagar, Bangalore-560021.
Mob: 9343783974

IN THE COURT OF 1st ADDL. DISTRICT AND SESSION JUDGE AT RAMANAGARA
R.A. No. 11/2025

BETWEEN : 1. Smt. Jayamma D/o late Gundaiah, Aged about 58 years **2. Sri. Raju** S/o late Gundaiah Aged about 56 years **3. Sri. Somashekar** S/o late Gundaiah Aged about 50 years
4. Smt. Sukanya D/o late Gundaiah, Aged about 47 years Appellants No-1 to 4 Are R/at No. 1951/1952/2, 10th cross, Mangalawara Pete, Ramanagara District Channapatna Taluk,
5. Sri. Ramu S/o late, Venkataiah Aged about 50 years **6. Sri. Swami** S/o late, Venkataiah Aged about 44 years **7. Sri. Raju** S/o late, Venkataiah Aged about 46 years Appellants No.5 to 7 Residing at No. 154/A 4th Cross, Gandhinagara, Ramanagara.
8. Smt. Venkatamma D/o Maridoddaiah Aged about 75 years, Residing at No-3417, Troop Lane, 1st Cross, Ramanagara **9. Smt. Siddamma** W/o late Doddaiah Aged about 58 years
10. Sri. Kumar.D S/o late, Doddaiah Aged about 26 years Appellants No-9 and 10 residing At Gollahalli Village, Bidadi Hobli, Ramanagara Taluk & District.
AND : 1. Smt. Hanumamma D/o Hottaia Aged about 80 years, Residing at Gollahalli Village, Bidadi Hobli, Ramanagara Taluk & district
2. Smt. Puttamadamma W/o Late Doddaiah, Aged about 58 years, R/a Indiranagara, Bidadi Ramanagara Taluk and District Since Died Rep. by her LRs' **a. Bhagavathi** D/o Late Doddaiah & Puttamadamma, Aged about 52 years
b. Sri.Ravikumar S/o Late Doddaiah & Puttamadamma, Aged about 49 years
c. Sri.Somashekar S/o Late Doddaiah & Puttamadamma, Aged about 47 years
d. Pavithra D/o. Late Doddaiah & Puttamadamma, Aged about 41 years
3. Sri.Maridodda @ Maridoddaiah S/o. Late Hottaiah Aged about 75 years
4. Smt.Jayamma W/o Maridodda @ Maridoddaiah, Aged about 65 years Respondent No.3 & 4 R/a No 2496, 7th (A) Cross, Magaji Stores Road, II Stage, RPC Layout, Vijayanagara, Bangalore - 560040. **5. Smt. Nagamma** Wife of Sri. Venkatappa Aged about 68 years, Residing at 4th Cross Gandhinagara Ramanagara
6. Sri. Venkateshaiah S/o. Late Maridoddaiah, Aged about 58 years, R/a Gollahalli Village, Bidadi Hobli, Ramanagara Taluk and District Dead rep. by his LRs' **a. Sri.Srinivas** S/o late Venkateshaiah Aged about 38 years **b. Smt. Nethravathi** D/o late, Venkateshaiah Aged about 34 years Respondents 9 and 10 are R/a Gollahalli Village, Bidadi Hobli, Ramanagara Taluk **7. Sri. Venkatesh** S/o. Late Doddavenkataiah, Aged about 50 years, R/at Gollahalli Village Bidadi Hobli, Ramanagara Taluk and District Dead Rep. by LRs' **a. Smt. Jayamma** W/o. Late Venkatesh Aged about 50 years
b. Veena D/o late Venkatesh Aged about 28 years
c. Vinodh S/o late Venkatesh Aged about 28 years LRs' are R/a. Gollahalli Village, Bidadi post and Hobli, Ramanagara Taluk and District.
8. Smt. Boramma W/o Late Doddavenkataiah, Aged about 74 years, R/at Gollahalli Village, Bidadi Hobli, Ramanagara Taluk and District Dead Rep. by [illegible]

[illegible]

NOTICE / SUMMONS TO legal heirs of the Respondent No.1 i.e., Respondent No. 1(a) to 1(d)

1. **Ammaniyamma** D/o late Hanumamma, Aged about 63 years [illegible] 562109 [illegible]
2. **Umadevamma** D/o Late Hanumamma Aged about 60 years [illegible] R.R. Nagara Bengaluru-560098 ...**Respondent No.1(c)**
3. **Leelavathi** D/o Late Hanumamma Aged about 60 years [illegible] 562109 ...**Respondent No.1(b)**
4. **Thayamma** D/o Late Hanumamma Aged about 55 years [illegible] Aditya Layout [illegible] ...**Respondent No.1(d)**

[illegible]

Given under my hand and seal [illegible] 26-3-2026

By Order of the Court
Sd/- Chief Ministerial Officer
District & Session Court, Ramanagara

Joshi Law Chambers,
Sanjaya.R Advocate,
#401, [illegible]
Sheshadripuram Main Road, Bengaluru-20
(M) 8217246254 9164442922
Email - sanju25191@gmail.com

[illegible]

Pri Civil Judge & JMFC Doddaballapura.

ಅರ್ಜಿದಾರರ ಪರ ವಕೀಲರು :
ಎನ್.ಆರ್.[illegible], ವಕೀಲರು, ನಂ.3080, [illegible]
ದಿನಾಂಕ: 02.04.2026.

[illegible]

ದಿನಾಂಕ: 27/3/2026 [illegible]

ನ್ಯಾಯಾಲಯದ ಆದೇಶದ ಮೇರೆಗೆ,
[illegible]

ವಾದಿ ಪರ ವಕೀಲರು.
[illegible] ದಿನಾಂಕ: 27.03.2026

PUBLIC NOTICE

This is to inform the general public that my client **Sri. C. Krishnamurthy**, S/o Chowdappa, Aged About 43 Years, Residing at No.38/2/3, 2nd Cross, 3rd Block, Thirumenahalli, Bangalore-560064, is the absolute owner of the property mentioned below and he having acquired the same through Registered Gift Deed Dated 17.02.2021, executed by **Sri.Chowdappa** S/o Late.Narasappa, which is **registered as** bearing Document No. YAN-1-06861/2020-21 of Book-1, Stored in CD No.YAND1210, Registered in the office of Sub-registrar, Yelahanka, and intend to avail loan facility on the security of the Schedule Property from **IDFC First Bank Limited**, Koramangala Branch, Bangalore, by way of registered Deed of Mortgage/Deposit of Title Deed, if any persons including an individual, a Hindu Undivided family, a Company, Banks, Non-Banking Financial Institution(s), lender/s and/or Creditors having any objection, claim, right, title and/or interest in respect of said properties or any part or portion thereof by way of sale, Memorandum of understanding, exchange, mortgage, pledge, charge, gift, trust, inheritance, succession, possession, lease, tenancy, maintenance easement, license, bequeath, bequest, share, assignment, lien, attachment or otherwise or demand of any nature whatsoever are hereby requested to inform the same in writing supported with original/certified copies of documents with the undersigned advocate within **7 days** from the date of the publication of this Notice, failing which the claim or objection if any shall deemed to have been waived.

THE SCHEDULE ABOVE REFERRED TO

All that piece and parcel of the **Property bearing Site No.21, Old Khatha No.21, Present Khatha No.80/21/21, As present Computerized E-Aasti in Form-A the Property No.80/21/21, New E-PID No.1172281484**, Situated at Thirumenahalli Village, Yelahanka Hobli, Yelahanka Taluk, Bangalore Urban District, Presently comes under the limit of Bangalore Northern City Corporation, **Measuring East to West 33 Feet and North to South: 45 ½ Feet, in all Measuring 1501.5 Square Feet**, along with Building Constructed thereon and bounded on: **East by:** Property belongs to Puttegowda, **West by:** Property belongs to Chowdappa, **North by:** Venugopalswamy Temple Property, **South by:** Road.

IMSHAD PASHA, Advocate
A.N. LAW ASSOCIATES
No. FF-31 & 32, 1st Floor, No.2, HHS & HMS Complex, Cubbonpet Main Road, Near Halasuru Gate Police Station, Bangalore-560 002.

ಕರ್ನಾಟಕ ಸರ್ಕಾರ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಮಹಾತ್ಮಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು-22

ಸಂ: [illegible]/2026-27 ದಿ: 04.04.2026

ಪ್ರಕಟಣೆ

ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ ಸಮಸ್ತ ಪೇಟೆ ಕಾರ್ಯಕರ್ತರು, ರೈತಬಾಂಧವರು ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀ ರಾಜೇಶ್ ಕೃಷ್ಣ S/o ಶ್ರೀ ಎಸ್.ಪಿ.ಕೃಷ್ಣಾರೆಡ್ಡಿ ಇವರು ದಿನಾಂಕ: 27.03.2026 ರಂದು ಈ ಕಛೇರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಮೆ|| ಶ್ರೀಕೃಷ್ಣ ಟ್ರೇಡ್ ಲಿಂಕ್ಸ್, ನಂ.5/9, ಬಿ.ಡಿ.ಎ ಪ್ರದೇಶ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು, ಸಂಸ್ಥೆಯ ವ್ಯಾಪಾರಾಭಿವೃದ್ಧಿಗಾಗಿ ತಮ್ಮ ಜೊತೆಯಲ್ಲಿ ಜಿ.ಶ್ರೀಧರ್ S/o ಲೇಟ್ ಗುರುಸ್ವಾಮಿ ಗುಪ್ತ ಹಾಗೂ ಸುಚಿತ ಶ್ರೀಧರ್ D/o ಜಿ.ಶ್ರೀಧರ್, ನಂ.9, ಗುರುಕೃಪಾ, 3ನೇ ಕ್ರಾಸ್, ಕಲ್ಯಾಣ ಗಾರ್ಡನ್ ಹತ್ತಿರ, ಅಶೋಕನಗರ, ಬಿ.ಎಸ್.ಕೆ 1ನೇ ಹಂತ, ಬನಶಂಕರಿ, ಬೆಂಗಳೂರು ದಕ್ಷಿಣ ಇವರುಗಳನ್ನು ಜೊತೆದಾರರಾಗಿ ಸೇರಿಸಿಕೊಳ್ಳಲು ಅನುಮತಿ ನೀಡಲು ಕೋರಿರುತ್ತಾರೆ.

ಆದುದರಿಂದ ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಯಾರಿಂದಲಾದರೂ ಆಕ್ಷೇಪಣೆ / ತಕರಾರುಗಳಿದ್ದಲ್ಲಿ ಈ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ದಾಖಲೆ ಸಹಿತ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಬೆಂಗಳೂರು, ಇವರಿಗೆ ಸಲ್ಲಿಸಲು ತಿಳಿಸಲಾಗಿದೆ ಮತ್ತು ನಿಗದಿತ ಅವಧಿ ಮುಗಿದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/- ಕಾರ್ಯದರ್ಶಿ

IN THE COURT OF THE PRINCIPAL JUNIOR CIVIL JUDGE AND JMFC AT ANEKAL
C.MIS.No. 582 of 2026

Smt. Manjula, W/o. Muniswamy, R/at.No.72, Marasur Village, , Marasur Kasaba Cirle, Marasur, Anekal Taluk, Bangalore District - 562106.... **PETITIONER** -V/s-
The Tahsildhar, Registrar of Birth & Deaths, Anekal Taluk, Anekal, Bangalore Rural District. ... **RESPONDENT**

NOTICE

WHEREAS, the Petitioner have filed the above petition for the death certificate Grand Father of petitioners Namely Late.Kenchappa, S/o. Late. Madhanagiriyappa died in at petitioner mother house at Chennena Agrahara Village, Samandur Post & Panchayath Kasaba Hobli, Anekal Taluk, Bangalore District. Pin-562106. Died on 20.08.1982 you are hereby informed to appear this Hon'ble Court in person or any legal heirs or by a pleader duly instructed on **05.05.2026 at 11:00 A.M.** in forenoon to show cause against the claim failing which the matter will be heard and determined ex-party.

Given under my hand and seal of the Court on this 04/04/2026

By order of the Court, Sheristedar, Civil Judge Jr.dvn and J.M.F.C Court, Anekal

Advocate for Petitioner: **T. MANJUNATH**
No. 5/39A, Guruvayur Nilayam, Hosur Town & Taluk, Krishnagiri District, Tamil Nadu.

BEFORE THE HON'BLE PRL. JUDGE FAMILY COURT AT BENGALURU
M.C. NO. 8057/2025

BETWEEN : Smt. Sujatha.D.G. **: Petitioner**
AND : Sri. Nagaraju.H. **: Respondent**

NOTICE TO THE RESPONDENT BY WAY OF PAPER PUBLICATION

To : Sri. NAGARAJU.H., S/o. Late. Huchappa.C., Aged about 43 Years, Occ: Real Estate Business, R/at No. 29, 4th-C Cross, 9th Main, Avalahalli New Extension, Bengaluru-560026.

WHEREAS the petitioner in the above petition has filed the above petition against the Respondent seeking for dissolution of the marriage and the petition filed U/S. 13 (1)(i-a) of Hindu Marriage Act, 1955.

You are hereby summoned to appear in person before this Hon'ble Principal Judge, Family Court at Bengaluru.

Take Notice that in default of your appearance on the day of **30th APRIL 2026**, the petition will be heard and determined in your absence.

Given under my hand and seal of this Hon'ble Court on 12th MARCH 2026.

By Order of the Court
Sd/- Senior Sheristedar
Family Court Bengaluru

ADVOCATE FOR THE PETITIONER
SRI. HARISH.K., Advocate,
Office at No:19, 2nd Main Road, Deepanjali Nagar, Bengaluru-560029.
Mob: 76767 88876

IN THE COURT OF THE PRL CIVIL JUDGE AND J.M.F.C. AT CHICKBALLAPUR
Crl Misc No. 19/2026

Petitioners: 1. Sri. Muniraju.B.H, S/o late Hanumappa Aged about 36 years, **2. Smt. Anjinamma**, D/o late Hanumappa Aged about 38 years, **3. Sri. Murthy.B.H**, S/o late Hanumappa Aged about 40 years, **4. Smt. Hanumakka**, D/o Hanumanthappa, Aged about 65 years, **5. Smt. Sathyamma**, W/o Late Hanumappa, Aged about 58 years, All are R/at. Bandahalli Village, Nandi hobli, Chickballapur Taluk and District. -V/s-
Respondent : The Tahsildar, Chickballapur Taluk, Chickballapur

DRAFT PAPER PUBLICATION

The petitioners have filed the above petition for grant death certificate of Smt.Chinnamma W/o Munishami, who died on [illegible] at Beedaganahalli Village, Nandi Hobli, Chickballapur Taluk and district. and issue death certificate. Any person have any right or interest may appear before Hon'ble Court **on 04.05.2026 at 11. am** in person or through pleader toile your objections if any. Take notice that in default of your appearance on the date before mentioned in the petition, it will be heard and determine ex-parte 02/04/2026

By order of the court
Sheristhedar, Civil Judge & JMCF Court Chickballapur.
Advocate : **C.Krishnamurthy**, Chickballapur

IN THE COURT OF CIVIL JUDGE & JMFC AT CHICKBALLAPUR
Crl. Misc. No.47/2026.

PETITIONERS : 1. Sri. Munikrishnappa S/o late Dodda Munivenkatappa, Aged about 58 years, **2. Sri. Shiva Kumar T.M.**, S/o Munikrishnappa, Aged about 30 years, Both are residing at Hosahalli Village, Vijayapura Hobli, Devanahalli Taluk. V/s
RESPONDENT : The Registrar of Birth & Death, The Tahasildar, Chickballapur Taluk.

Draft paper publication

[illegible]

By Order of the Court, Chief Ministerial Officer, Prl Civil Judge and JMFC Court at Chickballapur

Advocate for petitioner : **Smt. Shruthi**, Advocate, Chickballapur.

ಮಾನ್ಯ ಸಹಾಯಕ ಆಯುಕ್ತರು, ಕೋಲಾರ ಉಪ ವಿಭಾಗ, ಕೋಲಾರ

[illegible]

ನ್ಯಾಯಾಲಯದ ಆದೇಶದ ಮೇರೆಗೆ
THASILDAR, Office of the Assistant Comissioner, Kolar Sub Division, KOLAR.
ಮೇಲ್ಮನವಿದಾರರ ಪರ ವಕೀಲರು : ಶ್ರೀ. ಎ. ಅನಿಲ್ ಕುಮಾರ್, ವಕೀಲರು, ಮಾಲೂರು, ಸ್ಥಳ: ಕೋಲಾರ,
ದಿನಾಂಕ: 04.04.26

IN THE COURT OF THE PRINICIPAL CIVIL JUDGE AND J.M.F.C. AT PAVAGADA
Crl. Mis.No. 110/2026

PETITIONER: Bavaji S/O Late Imam Sab, Aged about 50 years, Yarpalya Village, Gundlahalli Post, Kasaba Hobli Pavagada Taluk. **V/S**
RESPONDENT; 1. The Tahasildar, Registrar of Births and Deaths, Nada Kacheri Pavagada, Kasaba Hobli, Pavagada Taluk, Pavagada. **2. The Revenue Inspector**, Kasaba Hobli, Pavagada Taluk, **3. The Village Accountant**, Gundlahalli Circle. Kasaba Hobli, Pavagada Taluk **4. Buden.B** D/O Late Imam Sab Age about 70 years. **5. Mugbhula** D/O Late Imam Sab Age about 63 years. **6. Beebijan** D/O Late Imam Sab, Age about 62 years. **7. Rajiya** D/O Late Imam Sab Age about 60 years **8. Maabunni** D/O Late Imam Sab Age about 59 years. **9. Aseena** D/O Late Imam Sab Age about 59 years **10. Methaji** D/O Late Imam Sab Age about 62 years No. 4 to 10 are R/O at Yarapalya Village, Gundlahalli Post, Kasaba Hobli, Pavagada Taluk

PAPER PUBLICATION

WHEREAS, the petitioner has filed the above petition seeking issue of Death Certificate of Father by Name **Imam Sab S/o Late Buden Sab was died on 04-12-2001** now the matter is set down for issue notice/suit summons to all or any interested persons or legal heirs whoever got any objection over the above said Death Certificate may appear in this case either as respondent/petitioners and may prosecute the same on the date of hearing on **4/5/2026** you are hereby called upon to appear before this Hon'ble court **at 11.00** am. on the said date of hearing either in person or through your counsel. If you fails to appear this court, the matter will be heard and decided exparte.Given under my hand and seal of the court this day of 2/4/2026.

By the order of the Court
Sheristedar, CMO, Pri.Civill Judge court, Pavagada
Advocate for petitioner;
V.D.Venkataswamy Advocate, Pavagada.

IN THE COURT OF THE HON'BLE, DISTREICT AND SESSIONS JUDGE AT KOLAR
P & SC. NO. 47/2026

BETWEEN ; Sri. Girish M s/o Munivenkatareddy, Aged about 22 years R/at Itharasanahalli Village, Holur Hobli Kolar Taluk. **...Petitioner**
AND
NIL.........Respondent

NOTICE TO THE INTRESTED PERSONS UNDER ORDER 5 RULE 20 OF CPC

The petitioner hereinabove named filed this petition Under Section 276 of Indian Succession Act 1925 for grant of probate before this Hon'ble court in P & SC.No. 47/2026 for obtaining probate certificate in favour of the petitioner in respect of the schedule property on the basis of the registered Will executed by deceased Munivenkatappa S/o Late Narayanappa had bequeathed the schedule property in favour of the petitioner through registered Will document 24.11.2022 before the sub Register Kolar vide dated document No.KLR-3-00144/2022-2023. Munivenkatappa S/o Late Narayanappa was passed The said away at 11.2.2026 at Itharasanahalli village, Holur Hobli, Kolar Taluk.

Hence this Hon'ble court fixed the date of for appearance of the interested persons through their advocate on 10-06-2026 that day at 11.00.am to file your objections if any, for issue of probate certificate Failing which the matter will be heard and determined exparte.

SCHEDULE PROPERTY

The land bearing Sy.No.41/2 measuring 39.08 guntas situated at Itharasanahalli village, Holur Hobli, Kolar Taluk bounded East by :Land of Reddappa V S/o Venkataramappa, West by : Land of Munivenkatappa S/o Dodda Venkataramappa, North by : Government oni, South by : Pond in Sy.No.41/2.

Given under my hand and the seal of the court on this 4th Day of April 2026.

By the order of the Court
Chief Administrative officer, Hon'ble District & Sessions Court Kolar.
Advocate for petitioner
T.G.Manmatha Reddy
Venkatesha, Advocates, Kolar.
Kolar, Date:04.04.2026

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಿ.ಎ ನಿವೇಶನ ಖಾತೆ ನಂ. 31-511-371, ವಾರ್ಡ್ ನಂ. 20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110

ಸಂ: ಬಿಐಎಪಿಎ/ಟಿಪಿ/ಭೂಉಬ/205/2025-26/23 ದಿನಾಂಕ : 04.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ.ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀಮತಿ ದಾಸಮ್ಮ - ಮುನಿಶ್ಯಾಮಪ್ಪ	ದೇವನಹಳ್ಳಿ	ಕಸಬಾ	ಕೋಡಗುರ್ಕಿ	152/1	1-14	ವ್ಯವಸಾಯ	ವಸತಿ
2.	ಮೆ|| ಸಾಯಿಸೃಷ್ಟಿ (ಅಬಚೆಟ್ಟನಹಳ್ಳಿ) ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಪರವಾಗಿ ಅಧಿಕೃತ ಸಹಿದಾರರು ಶ್ರೀ ಪ್ರಕಾಶ್ ಬಿನ್ ಸಲ್ಲಾಂ ಶ್ರೀಧರರೆಡ್ಡಿ	ದೇವನಹಳ್ಳಿ	ಕಸಬಾ	ಕೋಡಗುರ್ಕಿ	176/2	1-14	ವ್ಯವಸಾಯ	ವಸತಿ
3.		ದೇವನಹಳ್ಳಿ	ಕಸಬಾ	ಕೋಡಗುರ್ಕಿ	176/7	1-14	ವ್ಯವಸಾಯ	ವಸತಿ
4.	ಶ್ರೀ ಬತ್ತಿನ ಕುಮಾರಸ್ವಾಮಿ ರೆಡ್ಡಿ ಬಿನ್ ಲೇಟ್ ನಾರಾಯಣ ರೆಡ್ಡಿ	ದೇವನಹಳ್ಳಿ	ಕಸಬಾ	ಕೋಡಗುರ್ಕಿ	181/2	2-18.08	ವ್ಯವಸಾಯ	ವಸತಿ
5.	ಮೆ|| ಪಿ.ಎಂ.ಪಾಟೀಲ್ ಬ್ಯುಸಿನೆಸ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್	ದೇವನಹಳ್ಳಿ	ಕಸಬಾ	ಕೋಡಗುರ್ಕಿ	208	2-00	ವ್ಯವಸಾಯ	ವಸತಿ

ಮೇಲ್ಕಂಡ ಕ್ರ.ಸಂ (1) ರ ಭೂ ಮಾಲೀಕರ ಪರವಾಗಿ ನೋಂದಾಯಿತ ಜಿಪಿಎದಾರರಾದ ಮೆ|| ಸಾಯಿಸೃಷ್ಟಿ (ಅಬಚೆಟ್ಟನಹಳ್ಳಿ) ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್

ಷರಾ :- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೇಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂತ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು "ವ್ಯವಸಾಯ ಭೂಉಪಯೋಗ ವಲಯ" ದಿಂದ "ವಸತಿ ವಲಯ" ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಪಿ.ಎ, ದೇವನಹಳ್ಳಿ

ವಾ.ಸಾ.ಸಂ.ಇ/ವಾಸ್ತ/69/ಪಿಆರ್ ಸಾಯಿ/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಧಾರವಾಡ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಧಾರವಾಡ
Phone : 0836-2447483 E Mail : dhodharwad@gmail.com
ಕ್ರಸಂ:ಪೂರೈಕೆ/ಮಾ.ಸಂ.ಗು/ಪಹಿ/01/2026-2027 ದಿನಾಂಕ: 02.04.2026

ಟೆಂಡರ್ ಪ್ರಕಟಣೆ

ವಿಷಯ: 2026-2027 ನೇ ಸಾಲಿಗಾಗಿ ಮಾನವ ಸಂಪನ್ಮೂಲ ಸಂಸ್ಥೆಯಿಂದ ಹೊರಗುತ್ತಿಗೆ ಮೂಲಕ ಸಿಬ್ಬಂದಿಗಳನ್ನು ನೇಮಿಸಲು ಇ-ಪೋರ್ಟಲ್ ಮೂಲಕ ಟೆಂಡರ ಆಹ್ವಾನಿಸುವ ಕುರಿತು.

ಉಲ್ಲೇಖ : 1. ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಧಾರವಾಡ ಇವರ ಅನುಮೋದಿತ ಕಡತ ಕಂಡಿಕೆ ಸಂಖ್ಯೆ: 65/ದಿನಾಂಕ 31.03.2026
2. Tender No: DHFWS/2026-27 /SE2130

ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ ಶಹರದ ಪ್ರತಿಷ್ಠಿತ ಕೆ.ಎಮ್.ಸಿ.ಐ.ಆರ್. ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಲು ಅತೀ ಅವಶ್ಯವಿರುವ ವಿವಿಧ ವೃಂದಗಳ ಖಾಲಿ ಹುದ್ದೆಗಳಿಗೆ ಮಾನವ ಸಂಪನ್ಮೂಲ ಹೊರಗುತ್ತಿಗೆ ಸಂಸ್ಥೆಗಳಿಂದ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವಂತೆ ಮಾನ್ಯ ಸರಕಾರದ ಆದೇಶವಿರುವ ಪ್ರಯುಕ್ತ ಉಲ್ಲೇಖ 1 ರನ್ವಯ ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಧಾರವಾಡ ಇವರು ದಿನಾಂಕ : 31.03.2026 ರಂದು ಅನುಮೋದನೆ ನೀಡಿರುತ್ತಾರೆ.

ಟೆಂಡರಗಿಟ್ಟ ಮೊತ್ತ ರೂ. **70.00** ಲಕ್ಷಗಳು ಎಂದು ಅಂದಾಜಿಸಲಾಗಿದೆ. ಒಟ್ಟು ಟೆಂಡರ ಮೊತ್ತದ ಇ.ಎಮ್.ಡಿ ಮೊತ್ತ ರೂ. **1.40.000-00** (2.%) ಗಳನ್ನು ಆನ್ ಮೂಲಕ ಭರಿಸಬಹುದಾಗಿದೆ. ಇ-ಪೋರ್ಟಲ್‌ನಲ್ಲಿ ಬಿಡ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **16.04.2026** at 16.30 pm ಆಗಿದ್ದು ಇಚ್ಛೆಯುಳ್ಳ ಸಂಸ್ಥೆಯವರು ಟೆಂಡರ ಬಿಡ್‌ನ್ನು ಇ-ಪೋರ್ಟಲ್ ವೆಬ್ ಸೈಟ್ http://kppp.karnataka.gov.in ಮೂಲಕ ಟೆಂಡರ್ ಸಲ್ಲಿಸಬಹುದಾಗಿದೆ.

ಸಹಿ/-ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಧಾರವಾಡ

ವಾಸಾಸಂಇ/ಧಾ/ಕೆಎಸ್‌ಎಂಸಿಎ/12/2026-27

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗ, ಜಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಮಾಲಹಳ್ಳಿ ಪಶ್ಚಿಮ, ಬೆಂಗಳೂರು-560 015.
E-mail: dcf.buzp@yahoo.in Phone No: 080-29900992.

ಸಂಖ್ಯೆ: ಎ1/ಬಿಯುಜಿ/ಟೆಂಡರ್/ಸಿಆರ್-26/2025-26 ದಿನಾಂಕ: 04-04-2026

ಮರು-ಟೆಂಡರ್ ಪ್ರಕಟಣೆ

2026-27ನೇ ಸಾಲಿನಲ್ಲಿ ನಗರ ಸಾಮಾಜಿಕ ಅರಣ್ಯ ವಿಭಾಗದ ಆನೇಕಲ್, ಕನ್ನಲ್ಲಿಪುರ ಮತ್ತು ಯಲಹಂಕ ಸಾಮಾಜಿಕ ಅರಣ್ಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಮಾಗಣ್ಣಿ ನೆಡುತೋಪು ನಿರ್ಮಾಣ ಮತ್ತು 3ನೇ ವರ್ಷದ ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಅರಣ್ಯ ಇಲಾಖೆಯಲ್ಲಿ 2025-26ನೇ ಸಾಲಿನಲ್ಲಿ ನೋಂದಾಯಿತರಾಗಿರುವ ಅರ್ಹ ಗುತ್ತಿಗೆದಾರರು ಹಾಗೂ 2026-27ನೇ ಸಾಲಿನಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಾಯಿಸಲು ಇಚ್ಛಿಸುವ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೋಕ್ ಪೋರ್ಟಲ್ (https://kppp.karnataka.gov.in) ಮೂಲಕ ಮರು-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 13-04-2026 ರಂದು ಸಂಜೆ 4:00 ಗಂಟೆ**. ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 16-04-2026 ರಂದು ಪೂರ್ವಾಹ್ನ 11.00 ಗಂಟೆ** ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಯಶಸ್ವಿಯಾಗಿದ್ದರೆ **ದಿನಾಂಕ 18-04-2026 ಸಂಜೆ 3.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಹಾಗೂ ಸರ್ಕಾರಿ ರಜಾ ದಿನಗಳನ್ನು ಹೊರತು ಪಡಿಸಿ ಕಛೇರಿ ವೇಳೆಯಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು

ವಾಸಾಸಂಇ/ವಾಸ್ತ/61/ಅಆರ್/2026-27

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ

REQUEST FOR PROPOSAL (CALL-2)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ "OPERATING BERTH AT MALPE PORT, KARNATAKA UNDER PUBLIC PRIVATE PARTNERSHIP (PPP) MODEL ON RENOVATE, OPERATE, MAINTAIN AND TRANSFER (ROMT) BASIS" (IDD/2025-26/SE0060/CALL-2)" ಕಾಮಗಾರಿಯನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು https://kppp.karnataka.gov.in/kppp ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು.

RFP ಮತ್ತು ಇತರ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 02.04.2026 ರಂದು ಡೌನ್‌ಲೋಡ್ ಮಾಡಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01.05.2026 @ 17.30 ಆಗಿರುತ್ತದೆ. RFP ಗೆ ಸಂಬಂಧಿಸಿದ ಯಾವುದೇ ಹೆಚ್ಚಿನ ಬದಲಾವಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಸಂಪರ್ಕ ವಿವರ: ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವರ ಕಛೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಅಲಿಗದ್ದಾ, ಬೈತ್ ಖೋಲ್, ಕಾರವಾರ-581302

Phone: 08382-221494; & Email: piwtdev.wks@gmail.com/ ceokmb2019@gmail.com

ಸಹಿ/- ಬಂದರು ಇಂಜಿನೀಯರ್
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ

DIPR/KWR/KSMCA/10/26-27 Dt: 02.04.2026

ಕರ್ನಾಟಕ ಸರ್ಕಾರ - ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ
Ph- 08182-222983 e-mail -acfwlshimoga@gmail.com
ಸಂಖ್ಯೆ/ಸಅಸಂ/ವಜಉವಿಶಿ/ಸಿಆರ್-/2026-27 Date: 01.04.2026

ಟೆಂಡರ್ ಅಧಿಸೂಚನೆ

2026-27ನೇ ಸಾಲಿನಲ್ಲಿ ಶಿವಮೊಗ್ಗ ವನ್ಯಜೀವಿ ವಿಭಾಗದ, ಸಕ್ರೆಬೈಲು ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ ಇಲಾಖಾ ಆನೆಗಳಿಗೆ ಆಹಾರ 01/04/2026 ರಿಂದ 31/03/2027ರ ವರೆಗೆ ವಿವಿಧ ಪಡಿತರ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸರಬರಾಜುದಾರರು ಕೆಳಕಂಡ ದಿನಾಂಕದಂದು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ.ಸಂ. 1. ಕೆಲಸದ ವಿವರ: ಸಕ್ರೆಬೈಲು ವನ್ಯಜೀವಿ ವಲಯ, ಗಾಜನೂರು ಆನೆ ಶಿಬಿರದ ಇಲಾಖಾ ಆನೆಗಳಿಗೆ ಪಡಿತರ ಸರಬರಾಜು **ಅಂದಾಜು ಮೊತ್ತ ಎಲ್ಲಾ ತೆರಿಗೆ ಸೇರಿ (ರೂ.ಲಕ್ಷಗಳಲ್ಲಿ)**: 97.93315

•) ಮೇಲಿನ ಅನುಸೂಚಿಯಲ್ಲಿ ಆಹ್ವಾನಿಸಿರುವ ಕಾಮಗಾರಿಯನ್ನು, ಸರ್ಕಾರದಿಂದ ನಿಗದಿಪಡಿಸುವ ಅನುದಾನ ಮತ್ತು ಬಿಡುಗಡೆಯಾಗುವ ಅನುದಾನದ ನಿರೀಕ್ಷೆಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. •) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.05.2026 ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/28/04/31

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಳಗಾವಿ

ಇ-ಟೆಂಡರ್ ಪ್ರಕಟಣೆ
(E-Procurement mode only)

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಚಿಕ್ಕೋಡಿ ಉಪ-ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು, ವಿದ್ಯಾರ್ಥಿನಿಲಯ ಹಾಗೂ ತಾಲ್ಲೂಕಾ ಮಾಹಿತಿ ಕೇಂದ್ರಗಳಿಗೆ, ಡಾಟಾ ಎಂಟ್ರಿ ಆಪರೇಟರ್, ಸ್ಟಾಫ್ ನರ್ಸ್, ವಾಹನ ಚಾಲಕರು, ಅಡುಗೆಯವರು, ಅಡುಗೆ ಸಹಾಯಕರು, ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಮತ್ತು ಗ್ರೂಪ್-ಡಿ ಒಟ್ಟು 54 ಜನ ಸಿಬ್ಬಂದಿಗಳ ಸೇವೆಯನ್ನು ಹೊರ ಮಾನವ ಸಂಪನ್ಮೂಲ ಸಂಸ್ಥೆಯಿಂದ ಆರ್ಥಿಕ ವರ್ಷ 2026-27ನೇ ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಸಿಬ್ಬಂದಿ ಸೇವೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999, ನಿಯಮಗಳು 2000 ರ ಪ್ರಕಾರ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ:ಸಂ/ಅಸಂಕಇಬೆ/ಚಿ.ವಿ/ಹೊ.ಸಿ/ ಟೆಂಡರ್/ಸಿಆರ್-78/2025-26, ಟೆಂಡರ್ ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ) 120.10, ಇ.ಎಂ.ಡಿ. ಮೊತ್ತ (ರೂ.ಲಕ್ಷಗಳಲ್ಲಿ) 1.80, ಸೆಕ್ಯೂರಿಟಿ ಡಿಪಾಜಿಟ್ (ಅನುಮೋದನೆಗೊಂಡ ಟೆಂಡರದಾರರು ಮಾತ್ರ) ಬಿಡ್ ಮೊತ್ತದ ಶೇ.5 ರಷ್ಟು, ಟೆಂಡರ್ ಸಲ್ಲಿಸುವ ಆರಂಭ ದಿನಾಂಕ:02.04.2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ 04.05.2026 ಸಾಯಂಕಾಲ 5.00 ಗಂಟೆ

ಹೆಚ್ಚಿನ ಮಾಹಿತಿಯನ್ನು http://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ ಅಥವಾ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ:0831-2950349 ಮೂಲಕ ಪಡೆಯಬಹುದಾಗಿದೆ.

ಸಹಿ/- ಜಿಲ್ಲಾ ಅಧಿಕಾರಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,ಬೆಳಗಾವಿ.

DIPR/BGM/RO-NO-27/KSMCA/2026-27

ನಗರಸಭಾ ಕಾರ್ಯಾಲಯ, ನಂಜನಗೂಡು

ಮೈಸೂರು ಜಿಲ್ಲೆ, ಮೈಸೂರು, ದೂರವಾಣಿ: 08221-226236/08221-226888
ಇ-ಮೇಲ್: itstaff_ulb_nanjangud@yahoo.co.in ವೆಬ್‌ಸೈಟ್ : www.nanjanagudcity.mrc.gov.in

ಸಂಖ್ಯೆ: ನನಕಾ/ತಾಂತ್ರಿಕಶಾಖೆ/ಸ.ಇಂ/ಟೆಂ-13/2025-26 ದಿನಾಂಕ: 02.04.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ನಗರಸಭಾ ಅನುದಾನದಲ್ಲಿ ಕಛೇರಿಗೆ ಮಾಸಿಕ ಆಧಾರದ ಮೇಲೆ ವಾಹನ ಸರಬರಾಜು ಪಡೆಯಲು ಹಾಗೂ ಅನುಮೋದನೆಗೊಂಡಿರುವ ಈ ಕೆಳಕಂಡ ಕಾಮಗಾರಿಯನ್ನು ಚಾಲ್ತಿ ಸಾಲಿಗೆ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಹಾಗೂ ಸರಬರಾಜುದಾರರಿಂದ KW-1 ಮತ್ತು KC-1 ನಿಯಮಗಳ ಅನ್ವಯ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **1) ಇಂಡೆಂಟ್‌ನಂ: DMA/2025-26/SE7471/Call-2. 2) ಇಂಡೆಂಟ್‌ನಂ: DMA/2026-27/WS/WORK_INDENT56986. 3) ಇಂಡೆಂಟ್‌ನಂ: DMA/2026-27/OW/WORK_INDENT56987.** ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು **https://kppp.karnataka.gov.in** ನಿಂದ ಟೆಂಡರ್ ಷರತ್ತು, ಇಎಂಡಿ ವಿವರ ಹಾಗೂ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ **ದಿನಾಂಕ: 18.04.2026** ಹಾಗೂ ಟೆಂಡರ್ ತೆರೆಯುವ ದಿನಾಂಕ: **21.04.2026**. ಕಾಮಗಾರಿ ನಿಬಂಧನೆ, ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸೂಚನೆ:- ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/-	ಸಹಿ/-
(ಲಕ್ಷ್ಮೀಕಾಂತ ರೆಡ್ಡಿ, ಜಿ. ಐ.ಎ.ಎಸ್)	(ಬಸವರಾಜು.ಎಂ)
ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ನಗರಸಭೆ, ನಂಜನಗೂಡು.	ಪೌರಾಯುಕ್ತರು, ನಗರಸಭೆ ನಂಜನಗೂಡು.

DIPR/MYS/14/SA/2026-27

(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2025-26
ದಿನಾಂಕ:01.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ ರವರು, ಅರಕಲಗೂಡು ಉಪ ವಿಭಾಗ ವ್ಯಾಪ್ತಿಯ 2025-26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ INDENT NO:(1) RDPR/2025-26/BD/WORK_INDENT25517 (2)RDPR/2025-26/RD/WORK_INDENT25520 (3) RDPR/2025-26/BD/WORK_INDENT25516 ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ-ಪ್ರೊಕ್ಯೂರ್‌ಮೆಂಟ್ ಅಡಿ KW-4 ರ ರೀತ್ಯಾ ಅಂತರ್ಜಾಲದಲ್ಲಿ ದಿ: 02.04.2026 ರಿಂದ ದಿ:13.04.2026ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:13.04.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:10.04.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಪ್ರಿ-ಬಿಡ್ ಮೀಟಿಂಗನ್ನು ದಿನಾಂಕ:08.04.2026 ಬೆಳಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು,ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,ಹಾಸನ ಕಛೇರಿಯಲ್ಲಿ ನಿಗಧಿ ಪಡಿಸಲಾಗಿದೆ. ದಿ:15.04.2026 ರಂದು ಬೆಳಗೆ 11.00 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/12/ಕೆಎಸ್‌ಎಂಸಿಎ/2026-27

ಕಿರು ಸುದ್ದಿ

ಎನ್.ಮೇಘನಾಗೆ ಪದವಿ ಪ್ರದಾನ



• **ಬೆಂಗಳೂರು:** ಡಾ.ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 5ನೇ ವರ್ಷದ ಘಟಿಕೋತ್ಸವ ಸಮಾರಂಭ ಜ್ಞಾನಜ್ಯೋತಿ ಸಭಾಂಗಣದಲ್ಲಿ ನೆರವೇರಿತು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲ ಶ್ರೀ ಥಾವರ ಚಂದ್ ಗೆಹಲೋತ್ ಅವರು ಕು. ಎನ್.ಮೇಘನಾ ಎಂಎಸ್ಸಿ ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗದಲ್ಲಿ, ವಿಭಾಗದಲ್ಲಿ 1ನೇ ರ್‍ಯಾಂಕ್ ಪಡೆದು ಅತಿಹೆಚ್ಚಿನ ಶ್ರೇಣಿಯಲ್ಲಿ ಅಂಕಗಳಿಸಿ ವಿಶ್ವವಿದ್ಯಾನಿಲಯಕ್ಕೆ ಕೀರ್ತಿ ತಂದಿದ್ದಾರೆಂದು ಶ್ಲಾಘಿಸಿ ಪಾರಿತೋಷಕ ನೀಡಿ ಸನ್ಮಾನಿಸಿದರು. ಉಪಕುಲಪತಿಗಳಾದ ಪ್ರೊ. ರಮೇಶ್ .ಬಿ ಇತರರಿದ್ದರು.

ಸಾಮಾನ್ಯರು, ಆಡಳಿತಗಾರರಿಗೆ ದಾರಿದೀಪ

• **ಬೆಂಗಳೂರು:** ಆಡಳಿತ ಯಂತ್ರದ ಜಂಜಾಟಗಳ ನಡುವೆಯೂ ಒಬ್ಬ ಅಧಿಕಾರಿ ತನ್ನೊಳಗಿನ ಸಂವೇದನೆಯನ್ನು ಉಳಿಸಿಕೊಂಡು ಸೃಜನಶೀಲ ಬರವಣಿಗೆಯಲ್ಲಿ ತೊಡಗುವುದು ಶ್ಲಾಘನೀಯ. ಐ.ಎಂ. ವಿಠ್ಠಲಮೂರ್ತಿ ಅವರ ಅನುಭವ ಕಥನ ಇಂದಿನ ಆಡಳಿತಗಾರರಿಗೆ ಮತ್ತು ಸಾಮಾನ್ಯ ಓದುಗರಿಗೆ ದಾರಿದೀಪವಾಗಿದೆ ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಹೇಳಿದರು.

ಐ.ಎಂ.ವಿಠ್ಠಲಮೂರ್ತಿ ಬದುಕು ಜಟಕಾ ಬಂಡಿ, ನಾನದರ ಸಾಹೇಬ ಕೃತಿ ಬಿಡುಗಡೆ

ನಗರದ ಇನ್‌ಫ್ಯಾಂಟ್ರಿ ರಸ್ತೆ ಬಳಿ ಇರುವ ಐಎಎಸ್ ಅಧಿಕಾರಿಗಳ ಸಂಘದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ನಿವೃತ್ತ ಅಧಿಕಾರಿ ಐ.ಎಂ. ವಿಠ್ಠಲಮೂರ್ತಿ ಅವರ ಬದುಕು ಜಟಕಾ ಬಂಡಿ, ನಾನದರ ಸಾಹೇಬ ಕೃತಿಯ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, ವಿಠ್ಠಲಮೂರ್ತಿಯವರ ಬದುಕು ಮತ್ತು ವೃತ್ತಿಜೀವನವು ವೈವಿಧ್ಯಮಯ ಅನುಭವಗಳಿಂದ ಕೂಡಿದೆಂದು ಹೇಳಿದರು. ನಿರ್ದೇಶಕ ಟಿ.ಎನ್. ಸೀತಾರಾಂ ಮಾತನಾಡಿ, ವಿಠ್ಠಲಮೂರ್ತಿ ಅವರ ಬರವಣಿಗೆಯಲ್ಲಿ ಒಂದು ವಿಶೇಷವಾದ ಲಯವಿದೆ. ಅವರು ಕೇವಲ ಘಟನೆ ವಿವರಿಸುವುದಿಲ್ಲ ಎಂದರು. ಲೇಖಕ ವಿಠ್ಠಲಮೂರ್ತಿ ಮಾತನಾಡಿ, ಈ ಕೃತಿಯು ಕೇವಲ ನನ್ನ ನೆನಪುಗಳಲ್ಲ, ನಾನು ಕಂಡ ಸಮಾಜ ಮತ್ತು ವ್ಯವಸ್ಥೆಯ ಪ್ರತಿಬಿಂಬ. ನನ್ನ ಬದುಕಿನ ಜಟಕಾ ಬಂಡಿಯಲ್ಲಿ ಪಯಣಿಸಿದ ಎಲ್ಲರಿಗೂ ಈ ಕೃತಿ ಅರ್ಪಿತ, ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ದಿ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಕೆ.ಎನ್. ಶಾಂತಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಲಾಲ್‌ಬಾಗ್ ಉದ್ಯಾನವನದಲ್ಲಿ ಸುರಂಗ ರಸ್ತೆ | ಜಿಎಸ್‌ಐಯಿಂದ ಪರಿಣಾಮ ಕುರಿತು ಅಧ್ಯಯನ

ಐದು ಮಂದಿ ತಜ್ಞರ ಸಮಿತಿ ರಚನೆ

• **ಬೆಂಗಳೂರು:** ಐತಿಹಾಸಿಕ ಲಾಲ್‌ಬಾಗ್ ಉದ್ಯಾನವನದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸುರಂಗ ರಸ್ತೆ ಯೋಜನೆ ಭೂವೈಜ್ಞಾನಿಕವಾಗಿ ಯಾವ ರೀತಿ ಪರಿಣಾಮ ಬೀರಬಹುದು ಎಂಬುದನ್ನು ಅಧ್ಯಯನ ಮಾಡಲು ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆ (ಜಿಎಸ್‌ಐ) ಐದು ಸದಸ್ಯರ ತಜ್ಞರ ಸಮಿತಿ ರಚಿಸಿದೆ.

ರಾಜಧಾನಿಯ ಸಂಚಾರ ದಟ್ಟಣೆ ನಿವಾರಣೆಗೆ ಸರ್ಕಾರ ರೂಪಿಸಿರುವ ಬಹುಕೋಟಿ ವೆಚ್ಚದ ಸುರಂಗ ಮಾರ್ಗ ಯೋಜನೆಗೆ ಈಗ ಭೂವೈಜ್ಞಾನಿಕ ಸವಾಲು ಎದುರಾಗಿದೆ. ನಗರದ ಲಾಲ್‌ಬಾಗ್ ಸಸ್ಯತೋಟದ ಅಡಿಯಲ್ಲಿ ಹಾದುಹೋಗಲಿರುವ ಈ ಸುರಂಗದಿಂದ ಅಲ್ಲಿನ ಅಪರೂಪದ ಶಿಲಾಪದರಗಳಿಗೆ ಧಕ್ಕೆಯಾಗುವ ಆತಂಕ ವ್ಯಕ್ತವಾಗಿದ್ದು, ಈ ಬಗ್ಗೆ ಸಮಗ್ರ ಅಧ್ಯಯನ ನಡೆಸಲು ಜಿಎಸ್‌ಐ ತಜ್ಞರ ಸಮಿತಿಯನ್ನು ರಚಿಸಿ, ವರದಿ ಕೊಡುವಂತೆ ತಿಳಿಸಿದೆ.

ಪ್ರಾಚೀನ ಶಿಲಾ ರಚನೆಗೆ ಹಾನಿ ಆತಂಕ : ಹಿರಿಯ ಜಿಎಸ್‌ಐ ಅಧಿಕಾರಿ ಕೆ.ವಿ. ಮಾರುತಿ ಅವರ ನೇತೃತ್ವದಲ್ಲಿ, ಬೆಂಗಳೂರು, ಚೆನ್ನೈ ಮತ್ತು ಹೈದರಾಬಾದ್‌ನ ಐವರು ತಜ್ಞರು ಈ ತಂಡದಲ್ಲಿದ್ದಾರೆ.ಈ ಸಮಿತಿಯು ಸ್ಥಳ ಪರಿಶೀಲನೆ ನಡೆಸಿ, ಮೂರು ವಾರಗಳ ಒಳಗಾಗಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಸುಮಾರು 18,000 ಕೋಟಿ ಅಂದಾಜು ವೆಚ್ಚದ ಈ ಸುರಂಗ ಯೋಜನೆಯು ಲಾಲ್‌ಬಾಗ್‌ನ



ಭೂಗರ್ಭದಲ್ಲಿ ಹಾದುಹೋಗಲಿದೆ.

ಇದರಿಂದ ಇಲ್ಲಿರುವ ವಿಶ್ವವಿಖ್ಯಾತ ಪೆನಿನ್ಸುಲರ್ ನೈಸ್ ಎಂಬ ಪ್ರಾಚೀನ ಶಿಲಾ ರಚನೆಗಳಿಗೆ ಹಾನಿಯಾಗಬಹುದು ಎಂಬ ಆತಂಕ ಇರುವ ಕಾರಣ ತಜ್ಞರ ಸಮಿತಿ ರಚಿಸಲಾಗಿದೆ. ಸುರಂಗ ಕೊರೆಯುವುದರಿಂದ ಉಂಟಾಗುವ ಭೂಕಂಪನ ಅಥವಾ ಕಂಪನಗಳು ಪ್ರಾಚೀನ ಶಿಲಾ ರಚನೆಗಳ ಮೇಲೆ ಬೀರುವ ಪ್ರಭಾವ, ನೀರಿನ ಸೆಲೆಗಳಲ್ಲಿ ಆಗಬಹುದಾದ ವ್ಯತ್ಯಾಸ ಮತ್ತು ರಚನಾತ್ಮಕ ಅಸ್ಥಿರತೆಯ ಬಗ್ಗೆ ಸಮಿತಿಯು ವೈಜ್ಞಾನಿಕವಾಗಿ ವಿಶ್ಲೇಷಿಸಲಿದೆ.

ತೇಜಸ್ವಿ ಪತ್ರಕ್ಕೆ ಸ್ಪಂದನೆ

ಸಂಸದ ತೇಜಸ್ವಿ ಸೂರ್ಯ ಅವರು ಕಳೆದ ಅಕ್ಟೋಬರ್‌ನಲ್ಲಿ ಜಿಎಸ್‌ಐಗೆ ಪತ್ರ ಬರೆದು ಈ ಕುರಿತು ಆತಂಕ ವ್ಯಕ್ತಪಡಿಸಿದ್ದರು. ಸುರಂಗ ಮಾರ್ಗದ ನಕ್ಷೆಯು ಲಾಲ್‌ಬಾಗ್ ಪಾರಂಪರಿಕ ಶಿಲೆಗಳ ಮೂಲಕವೇ ಹಾದುಹೋಗಲಿದೆ. ಇದರಿಂದ ಭೂಕುಸಿತ, ಶಿಲಾ ಸ್ಫೋಟ ಅಥವಾ ಅಂತರ್ಜಲ ವ್ಯವಸ್ಥೆಯಲ್ಲಿ ಏರುಪೇರಾಗುವ ಸಾಧ್ಯತೆಯಿದೆ ಎಂದು ಅವರು ಎಚ್ಚರಿಸಿದ್ದರು. ಸಂಸದರ ಈ ಮನವಿಗೆ ಸ್ಪಂದಿಸಿರುವ ಇಲಾಖೆ ಈಗ ವೈಜ್ಞಾನಿಕ ತನಿಖೆಗೆ ಮುಂದಾಗಿದೆ.

ಈ ಯೋಜನೆಯು ಲಾಲ್‌ಬಾಗ್‌ನ ಸುಮಾರು ಆರು ಎಕರೆ ಭೂಮಿಯನ್ನು ತಾತ್ಕಾಲಿಕವಾಗಿ ಮತ್ತು ಒಂದು ಎಕರೆಯನ್ನು ಶಾಶ್ವತವಾಗಿ ಬಳಸಿಕೊಳ್ಳುವ ನಿರೀಕ್ಷೆಯಿದೆ.ಪ್ರಸ್ತುತ ಈ ಯೋಜನೆಗೆ ಎರಡು ಬಿಡ್‌ಗಳು ಬಂದಿದ್ದು, ತಾಂತ್ರಿಕ ಮೌಲ್ಯಮಾಪನ ನಡೆಯುತ್ತಿದೆ. ಜಿಎಸ್‌ಐ ನೀಡುವ ವರದಿಯು ಈ ಮಹತ್ವಾಕಾಂಕ್ಷಿ ಯೋಜನೆಯ ಭವಿಷ್ಯವನ್ನು ನಿರ್ಧರಿಸುವಲ್ಲಿ ನಿರ್ಣಾಯಕ ವಾಗುವ ಸಾಧ್ಯತೆ ಇದೆ.

ಕಿಬೋ ಒಸಿಆರ್ ರೀಡರ್ ಕುರಿತು ಬೆಂ.ವಿವಿಯಲ್ಲಿ ಶಿಬಿರ

ಸಮಾನ ಶಿಕ್ಷಣಕ್ಕೆ ಮಹತ್ವದ ಹೆಜ್ಜೆ



• **ಬೆಂಗಳೂರು:** ದೃಷ್ಟಿದೋಷ ಹೊಂದಿದ ವಿದ್ಯಾರ್ಥಿಗಳಿಗೆ ಸಮಾನ ಶಿಕ್ಷಣ ಒದಗಿಸುವ ದಿಸೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಮಹತ್ವದ ಹೆಜ್ಜೆ ಇಟ್ಟಿದ್ದು ನಗರದ ಜ್ಞಾನಭಾರತಿ ಆವರಣದಲ್ಲಿರುವ ಬ್ರೈಲ್ ಸಂಪನ್ಮೂಲ ಕೇಂದ್ರ, ಭೋದಿ ಟ್ರೀ ಫೌಂಡೇಷನ್ ಮತ್ತು ಸಿಟಿವಾ ಸಂಸ್ಥೆಯ ಸಹಯೋಗದೊಂದಿಗೆ ಕಿಬೋ ಒಸಿಆರ್ ರೀಡರ್ ಕುರಿತ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಯಿತು.

ಕಾರ್ಯಾಗಾರದಲ್ಲಿ ಭೋದಿ ಟ್ರೀ ಫೌಂಡೇಷನ್ ವತಿಯಿಂದ ಬೆಂಗಳೂರು ವಿಶ್ವವಿದ್ಯಾಲಯದ ಬ್ರೈಲ್ ಸಂಪನ್ಮೂಲ ಕೇಂದ್ರಕ್ಕೆ ಕಿಬೋ ಒಸಿಆರ್ ರೀಡರ್ ಸಾಧನವನ್ನು ದೇಣಿಗೆಯಾಗಿ ನೀಡಲಾಯಿತು. ಕಿಬೋ ಒಸಿಆರ್ ರೀಡರ್ ಸಾಧನವು ಮುದ್ರಿತ ಪಠ್ಯಗಳನ್ನು ಧ್ವನಿಯಾಗಿ ಪರಿವರ್ತಿಸುವ ಅತ್ಯಾಧುನಿಕ ತಂತ್ರಜ್ಞಾನವಾಗಿದ್ದು ಈ ಸಾಧನದ ಮೂಲಕ ದೃಷ್ಟಿ ದೋಷ ಹೊಂದಿದ ವಿದ್ಯಾರ್ಥಿಗಳಿಗೆ ಸ್ವತಂತ್ರವಾಗಿ ಅಧ್ಯಯನ ನಡೆಸಲು ಸಹಾಯಕವಾಗುತ್ತದೆ. ಹಾಗೂ ವಿದ್ಯಾರ್ಥಿಗಳ ಕಲಿಕಾ ಅನುಭವ ಹೆಚ್ಚಾಗುತ್ತದೆ.

ಕಾರ್ಯಕ್ರಮದಲ್ಲಿ ಬ್ರೈಲ್ ಸಂಪನ್ಮೂಲ ಕೇಂದ್ರದ ಸಂಯೋಜಕ ಡಾ.ಎಸ್. ಕುಂಬಿನರಸಯ್ಯ ಮಾತನಾಡಿ, ಈ ಪ್ರಯತ್ನದ ಮೂಲಕ ದೃಷ್ಟಿದೋಷ ಹೊಂದಿದ ವಿದ್ಯಾರ್ಥಿಗಳನ್ನು ಸಬಲಗೊಳಿಸಲು ಹಾಗೂ ಸಮಾನ ಶಿಕ್ಷಣ ಅವಕಾಶವನ್ನು ಸೃಷ್ಟಿಸಲು ಸಹಾಯಕವಾಗಿದೆಂದರು.

ವಿದ್ಯಾರ್ಥಿಗಳಿಗೆ ಈ ಸಾಧನವನ್ನು ಬಳಸಲು ತರಬೇತಿ ನೀಡಲಾಗಿದ್ದು ವಿದ್ಯಾರ್ಥಿಗಳು ನೇರವಾಗಿ ಉಪಯೋಗಿಸಿ ಅನುಭವ ಪಡೆದುಕೊಂಡಿದ್ದಾರೆ. ಶಿಕ್ಷಣ ಸಂಸ್ಥೆಗಳು, ಕಾರ್ಪೋರೇಟ್ ಸಂಸ್ಥೆ, ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಈ ರೀತಿ ಒಂದಾಗಿ ಶ್ರಮಿಸಿದರೆ ಸಮಾನ ಶಿಕ್ಷಣ ವಾತಾವರಣವನ್ನು ಮತ್ತಷ್ಟು ಬಲಪಡಿಸಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮಕ್ಕೆ ಸಚಿವರ ಸೂಚನೆ

ಕಸ ವಿಲೇವಾರಿಯಲ್ಲಿ ನಿರ್ಲಕ್ಷ್ಯ: ಎಚ್ಚರಿಕೆ

• **ಬೆಂಗಳೂರು:** ಕಸ ವಿಲೇವಾರಿಯಲ್ಲಿ ನಿರ್ಲಕ್ಷ್ಯ ತೋರುವ ಗುತ್ತಿಗೆದಾರರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸಚಿವ ದಿನೇಶ್ ಗುಂಡೂರಾವ್ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.

ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕಸ ವಿಲೇವಾರಿ ವ್ಯವಸ್ಥೆಯ ಪರಿಶೀಲನೆ ಸಭೆ ನಡೆಸಿದ ಅವರು, ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ರಾಜಿ ಇಲ್ಲದೆ, ಪ್ರತಿಯೊಂದು ರಸ್ತೆ ಮತ್ತು ಓಣಿಗಳನ್ನು ಅಚ್ಚುಕಟ್ಟಾಗಿ ಇರಿಸಿಕೊಳ್ಳಲು ಸೂಚನೆ ನೀಡಿದ್ದಾರೆ.

ನಗರದ ಸೌಂದರ್ಯ ಮತ್ತು ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಕಸ ಮುಕ್ತ



ಪರಿಸರ ನಿರ್ಮಾಣವಾಗಬೇಕು. ಈ ನಿಟ್ಟಿನಲ್ಲಿ ಗಸ್ತು ತಿರುಗುವ ಮಾರ್ಷಲ್‌ಗಳು ಹೆಚ್ಚಿನ ಜಾಗರೂಕತೆ ವಹಿಸಬೇಕು. ಕಸ ವಿಲೇವಾರಿ ಪ್ರಕ್ರಿಯೆಯ ಮೇಲೆ ನಿರಂತರ ನಿಗಾ ಇರಿಸಲು ಹಿರಿಯ ಮತ್ತು ಕಿರಿಯ ಆರೋಗ್ಯಾಧಿಕಾರಿಗಳು ದಿನದ ಎರಡು ಪಾಳಿಗಳಲ್ಲಿ ಕಡ್ಡಾಯವಾಗಿ ಗಸ್ತು ತಿರುಗಬೇಕು ಎಂದು ತಿಳಿಸಿದ್ದಾರೆ.

ಕಸ ಸಂಗ್ರಹಣೆ ಮತ್ತು ವಿಲೇವಾರಿಯಲ್ಲಿ ಅಸಡ್ಡೆ ತೋರುವ ಗುತ್ತಿಗೆದಾರರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ನಗರದ ಸ್ವಚ್ಛತೆ ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಇದರಲ್ಲಿ ಸಾರ್ವಜನಿಕರ ಸಹಭಾಗಿತ್ವವೂ ಅತಿ ಮುಖ್ಯವಾಗಿದೆ.ಸಾರ್ವಜನಿಕರು ಎಲ್ಲೆಂದರಲ್ಲಿ ಕಸ ಹಾಕಿ ಪರಿಸರ ಹಾಳು ಮಾಡಬಾರದು. ಮನೆಯ ಕಸವನ್ನು ಹಸಿ ಮತ್ತು ಒಣ ಕಸವಾಗಿ ವಿಂಗಡಿಸಿ, ಪೌರಕಾರ್ಮಿಕರಿಗೆ ನೀಡುವ ಮೂಲಕ ಸಹಕರಿಸಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಆತ್ಮವಿಶ್ವಾಸಕ್ಕೆ ಕೃತಿ ಪ್ರೇರಣೆ

• **ಬೆಂಗಳೂರು:** ಕ್ಯಾನ್ಸರ್ ಪೀಡಿತರನ್ನು ಶುಶ್ರೂಷೆ ಮಾಡುವ ವೈದ್ಯರು ಹಾಗೂ ನರ್ಸ್‌ಗಳಿಗೆ ಪ್ಯಾಲಿಟಿವ್ ಕೇರ್ ಇನ್ ಇಂಡಿಯಾ ಈ ಪುಸ್ತಕವು ಒಂದು ಮಹಾನ್ ಗ್ರಂಥ ಎಂದು ಸಂಸದ ಡಾ. ಸಿ.ಎನ್.ಮಂಜುನಾಥ್ ಅಭಿಪ್ರಾಯಪಟ್ಟರು.

ಶಂಕರ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಶನಿವಾರ ನಡೆದ ಡಾ. ಆತ್ಮಪ್ರಸನ್ನ ಸಂಪಾದಿತ ಕೃತಿ ಪ್ಯಾಲಿಟಿವ್ ಕೇರ್ ಇನ್ ಇಂಡಿಯಾ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತದಲ್ಲಿ ಇಂದಿಗೂ ಪ್ಯಾಲಿಟಿವ್ ಕೇರ್ (ಆರೈಕೆಯ ಮಾದರಿ) ಒಂದು ಸರಿಯಾದ ರೀತಿಯಲ್ಲಿ ವಿನ್ಯಾಸ ಆಗಿಲ್ಲ, ಇಂತಹ ಸಂದರ್ಭದಲ್ಲಿ ಈ ಅಪರೂಪದ ಕೃತಿ ಬಿಡುಗಡೆ ಆಗುತ್ತಿರುವುದು ನನಗೆ ಬಹಳ ಸಂತೋಷ ತಂದಿದೆ ಎಂದರು.

ಕೆಲವು ಬಗೆಯ ಕ್ಯಾನ್ಸರ್‌ಗಳು ಸಂಪೂರ್ಣ ವಾಸಿ ಆಗುವುದಿಲ್ಲ, ಆಗ ಅಂತಹವರ ಬದುಕುವ



ಗುಣಮಟ್ಟವನ್ನು ನಾವು ಹೆಚ್ಚಿಸಬೇಕು. ಈ ಪುಸ್ತಕದಲ್ಲಿ ನೂರೊಂದು ಅಧ್ಯಾಯ ಇದೆ. ಇದರಿಂದ ಕ್ಯಾನ್ಸರ್ ಚಿಕಿತ್ಸೆ ನೀಡುವ ವೈದ್ಯರು ಹಾಗೂ ವೈದ್ಯಕೀಯ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿದೆಂದರು.

ಎಸ್‌ಸಿಡಿಸಿಸಿ ಬ್ಯಾಂಕ್‌ಗೆ ದಾಖಲೆಯ 131.14 ಕೋ.ರೂ. ಲಾಭ

• **ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ 2025-26ನೇ ಆರ್ಥಿಕ ವರ್ಷದಲ್ಲಿ ದಾಖಲೆಯ 20226.19 ಕೋಟಿ ರೂ. ವ್ಯವಹಾರ ನಡೆಸಿ, ದಾಖಲೆಯ 131.14 ಕೋಟಿ ರೂ. ಲಾಭ ಗಳಿಸಿದೆ. ಆ ಮೂಲಕ ಬ್ಯಾಂಕ್ ಹೊಸ ಇತಿಹಾಸ ನಿರ್ಮಾಣ ಮಾಡಿದೆ ಎಂದು ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್.ರಾಜೇಂದ್ರಕುಮಾರ್ ತಿಳಿಸಿದರು.

ಆಧುನಿಕ ಬ್ಯಾಂಕಿಂಗ್ ಸೌಲಭ್ಯಗಳೊಂದಿಗೆ ಕಾರ್ಯನಿರ್ವಹಿಸುತ್ತಿರುವ ಎಸ್‌ಸಿಡಿಸಿಸಿ ಬ್ಯಾಂಕ್ ಗ್ರಾಹಕರನ್ನು ಹೆಚ್ಚು ಆಕರ್ಷಿಸುತ್ತಿದ್ದು, 2025-26ನೇ ವರದಿ ವರ್ಷದಲ್ಲಿ 20226.19 ಕೋಟಿ ರೂ. ಒಟ್ಟು ವ್ಯವಹಾರ ದಾಖಲಿಸಿ ಹೊಸ ಇತಿಹಾಸ ನಿರ್ಮಿಸಿದೆ. ಕಳೆದ ಸಾಲಿನ ಒಟ್ಟು ವ್ಯವಹಾರಕ್ಕೆ (17366.68 ಕೋಟಿ ರೂ.) ಹೋಲಿಸಿದರೆ ಈ ಬಾರಿ ಶೇ.16.47 ಏರಿಕೆಯನು ಕಂಡು ರಾಜ್ಯದಲ್ಲೇ ಹೊಸ ದಾಖಲೆಯನ್ನು ನಿರ್ಮಿಸಿದೆ. 2026-27ನೇ ಸಾಲಿಗೆ 22500.00 ಕೋಟಿ ರೂ. ವ್ಯವಹಾರದ ಗುರಿಯನ್ನು ಬ್ಯಾಂಕ್ ಹೊಂದಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ಬ್ಯಾಂಕು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ತನ್ನ 113 ಶಾಖೆಗಳ ಮೂಲಕ ವರದಿ ವರ್ಷದಲ್ಲಿ ಅಮೋಘ ಸಾಧನೆಗೈದು, 2026ರ ಮಾರ್ಚ್ 31ಕ್ಕೆ ಅಂತ್ಯವಾದ ಆರ್ಥಿಕ ವರ್ಷದಲ್ಲಿ 131.14 ಕೋಟಿ ಲಾಭ ರೂ. ಗಳಿಸಿದೆ. ಇದು ಕಳೆದ ವರ್ಷದ ಲಾಭ (110.41 ಕೋಟಿ ರೂ.)ಕ್ಕಿಂತ ಶೇ. 18.78ರಷ್ಟು ಏರಿಕೆಯಾಗಿದೆ. ಇದು ರಾಜ್ಯದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಪೈಕಿ ಸಾರ್ವಕಾಲಿಕ ದಾಖಲೆ ಲಾಭ. ಬ್ಯಾಂಕಿನ ಅನುತ್ಪಾದಕ ಆಸ್ತಿಯ ಪ್ರಮಾಣವು ಶೇ.2.42ರಿಂದ ಶೇ.2.21ರಷ್ಟು ಪ್ರಮಾಣಕ್ಕೆ ಇಳಿಕೆಯಾಗಿದೆ. ಇದು ಬ್ಯಾಂಕಿನ ಪ್ರಗತಿಯನ್ನು ಸೂಚಿಸುತ್ತದೆ ಎಂದರು.

9264.64 ಕೋಟಿ ರೂ. ಠೇವಣಿ

ಕೇಂದ್ರ ಹಾಗೂ ರಾಜ್ಯ ಸರಕಾರದ ಯಾವುದೇ ಠೇವಣಾತಿ ಇಲ್ಲದೆಯೂ ತನ್ನ 113 ಶಾಖೆಗಳ ಮುಖಾಂತರ ಒಟ್ಟು 9264.64 ಕೋಟಿ ರೂ. ಠೇವಣಿ ಸಂಗ್ರಹಿಸಿ ಬ್ಯಾಂಕ್ ಸಾಧನೆಗೈದಿದೆ. ಈ ಮೂಲಕ ಠೇವಣಿ ಸಂಗ್ರಹಣೆಯಲ್ಲಿ ರಾಜ್ಯದ ಇತರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಲ್ಲಿ ಮುಂಚೂಣಿಯಲ್ಲಿದೆ. ಕಳೆದ ಸಾಲಿನ ಠೇವಣಿ ಸಂಗ್ರಹಣೆಗಿಂತ ಈ ಬಾರಿ ಶೇ.17.53ರಷ್ಟು ಹೆಚ್ಚಾಗಿದೆ.

9766.75 ಕೋಟಿ ರೂ. ಮುಂಗಡ

ಸ್ಪರ್ಧಾತ್ಮಕ ವ್ಯವಹಾರದಲ್ಲಿ ಬ್ಯಾಂಕ್ 9766.75 ಕೋಟಿ ರೂ. ಮುಂಗಡ ನೀಡಿದೆ. ಕೃಷಿ ಹಾಗೂ ಕೃಷಿ ಅಭಿವೃದ್ಧಿಗೆ ಅಲ್ಪಾವಧಿ ಸಾಲವಾಗಿ 2156.59 ಕೋಟಿ ರೂ., ಮಧ್ಯಮಾವಧಿ ಸಾಲ 183.46 ಕೋಟಿ ರೂ. ಹೀಗೆ ಕೃಷಿ ಕ್ಷೇತ್ರಕ್ಕೆ ಒಟ್ಟು 2340.05 ಕೋಟಿ ರೂ. ಸಾಲ ನೀಡಲಾಗಿದ್ದು, ಕೃಷಿಯೇತರ ಕ್ಷೇತ್ರಕ್ಕೆ 7426.70 ಕೋಟಿ ರೂ. ಸಾಲ ನೀಡಲಾಗಿದೆ. ಕೃಷಿ ಹಾಗೂ ಕೃಷಿಯೇತರ ಸಾಲಗಳ ಹೊರಬಾಕಿ 10961.55 ಕೋಟಿ ರೂ. ಆಗಿದೆ.

ಬ್ಯಾಂಕಿನ ಆರ್ಥಿಕ ತಖ್ತೆ

ಬ್ಯಾಂಕ್‌ಗೆ ಒಟ್ಟು 1104 ಸಂಘಗಳು ಸದಸ್ಯರಾಗಿವೆ. ಬ್ಯಾಂಕಿನ ಒಟ್ಟು ಪಾಲು ಬಂಡವಾಳ 554.08 ಕೋಟಿ ರೂ. ಆಗಿರುತ್ತದೆ. ದುಡಿಯುವ ಬಂಡವಾಳ 15027.66 ಕೋಟಿ ರೂ. ಆಗಿದ್ದು, ಇದು ಕಳೆದ ವರ್ಷಕ್ಕಿಂತ (12764.99 ಕೋಟಿ ರೂ.) ಶೇ.17.73 ರಷ್ಟು ಏರಿಕೆ ಕಂಡಿದೆ. ಬ್ಯಾಂಕ್ 312.84 ಕೋಟಿ ರೂ. ವಿವಿಧ ನಿಧಿಗಳನ್ನು ಹೊಂದಿರುತ್ತದೆ. ಶೇ. 16.10ರಷ್ಟು ಏರಿಕೆ ಕಂಡಿದೆ.

ಟ್ಯಾಬ್ ಬ್ಯಾಂಕಿಂಗ್

ಬ್ಯಾಂಕ್ ವ್ಯವಹಾರವನ್ನು ಸರಳೀಕರಿಸುವ ನಿಟ್ಟಿನಲ್ಲಿ ಟ್ಯಾಬ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಗ್ರಾಹಕರಿಗೆ ಬ್ಯಾಂಕ್ ಪರಿಚಯಿಸಿದೆ.

ಎ.ಟಿ.ಎಂ. ಅಳವಡಿಕೆ

ಬ್ಯಾಂಕಿನ ಮುಖ್ಯ ಶಾಖೆಗಳಲ್ಲಿ ಎಟಿಎಂ ಅಳವಡಿಸಲಾಗಿದ್ದು, ಈಗಾಗಲೇ ಉಭಯ ಜಿಲ್ಲೆಗಳ 16 ಶಾಖೆಗಳಲ್ಲಿ ಎ.ಟಿ.ಎಂ. ಅಳವಡಿಸಲಾಗಿದೆ ಎಂದು ಡಾ. ಎಂ.ಎನ್. ರಾಜೇಂದ್ರಕುಮಾರ್ ತಿಳಿಸಿದರು.

ಎಸ್‌ಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ವಿನಯ್ ಕುಮಾರ್ ಸೂರಿಂಜೆ, ನಿರ್ದೇಶಕರಾದ ಎಂ. ವಾದಿರಾಜ ಶೆಟ್ಟಿ, ಭಾಸ್ಕರ್ ಎಸ್.ಕೋಟ್ಯಾನ್, ಶಶಿಕುಮಾರ್ ರೈ ಬಾಲ್ಯೊಟ್ಟು, ದೇವಿಪ್ರಸಾದ್ ಶೆಟ್ಟಿ ಬೆಳಪು, ಅಶೋಕ್ ಕುಮಾರ್ ಶೆಟ್ಟಿ, ಎಂ.ಮಹೇಶ್ ಹೆಗ್ಡೆ, ಮೋನಪ್ಪ ಶೆಟ್ಟಿ ಎಕ್ಕಾರು, ಜೈರಾಜ್ ಬಿ.ರೈ, ಸದಾಶಿವ ಉಳ್ಳಾಲ್, ರಾಜೇಶ್ ರಾವ್, ಎಸ್.ಎನ್. ಮನ್ಮಥ, ಕುಶಾಲಪ್ಪ ಗೌಡ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್ ಕೆ. ಉಪಸ್ಥಿತರಿದ್ದರು.



ರೈತರಿಗೆ ಅನ್ಯಾಯ ಆಗದಂತೆ ಕ್ರಮ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಮಾಪನ ಸಮರ್ಪಕವಾಗಿ ನಡೆಯದ ಕಾರಣ ಪುತ್ತೂರು, ಸುಳ್ಯ ಭಾಗದ ರೈತರಿಗೆ ಬೆಳೆವಿಮೆ ಪಾವತಿಯಲ್ಲಿ ವ್ಯತ್ಯಾಸ ಆಗಿದೆ. ಪ್ರತಿ ಗ್ರಾಮದಲ್ಲಿ ಮಳೆ ಮಾಪಕ ಹೊಸದಾಗಿ ಅಳವಡಿಸ ಲಾಗುವುದು ಎಂದು ಸಂಬಂಧಪಟ್ಟವರು ತಿಳಿಸಿದ್ದಾರೆ. ಇನ್ನು ಮುಂದೆ ರೈತರಿಗೆ ಅನ್ಯಾಯ ಆಗದಂತೆ ಕ್ರಮ ಕೈಗೊಳ್ಳಲಾಗುವುದು. ತಿಳಿಸಿದ್ದಾರೆ ಎಂದು ಡಾ.ಎಂಎನ್. ರಾಜೇಂದ್ರಕುಮಾರ್ ಪ್ರತಿಕ್ರಿಯಿಸಿದರು.

‘ರುಪೇ’ ಕಿಸಾನ್ ಕ್ರೆಡಿಟ್ ಕಾರ್ಡ್

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಮಂಗಳ ಕಿಸಾನ್ ಕ್ರೆಡಿಟ್ ಕಾರ್ಡ್ ಖಾತೆಯನ್ನು ಹೊಂದಿರುವ ರೈತರಿಗೆ ಬ್ಯಾಂಕ್ ರುಪೇ ಕಿಸಾನ್ ಕಾರ್ಡ್‌ನ್ನು ನೀಡಿದೆ. ಈಗಾಗಲೇ 1,44,701 ರುಪೇ ಕಿಸಾನ್ ಕಾರ್ಡ್‌ಗಳನ್ನು ರೈತರಿಗೆ ವಿತರಿಸಲಾಗಿದೆ. 92,531 ರುಪೇ ಡೆಬಿಟ್ ಕಾರ್ಡ್‌ಗಳನ್ನು ಬ್ಯಾಂಕ್‌ನ ಇತರ ಗ್ರಾಹಕರಿಗೆ ನೀಡಲಾಗಿದೆ ಎಂದು ಡಾ.ಎಂ.ಎನ್.ಆರ್ ವಿವರಿಸಿದರು.



ಬ್ಯಾಂಕಿಗೆ 23 ಬಾರಿ ಅಪೆಕ್ಸ್ ಬ್ಯಾಂಕ್ ಪ್ರಶಸ್ತಿ, 19 ಬಾರಿ ನಬಾರ್ಡ್ ಪ್ರಶಸ್ತಿ ದೊರೆತಿದೆ. ಎರಡು ಬಾರಿ ‘ಎಫ್‌ಸಿಬಿಎ’ ರಾಷ್ಟ್ರೀಯ ಪ್ರಶಸ್ತಿಯಿಂದ ಬ್ಯಾಂಕ್ ಪುರಸ್ಕೃತಗೊಂಡಿದೆ. ಬ್ಯಾಂಕಿನ ಸರ್ವಾಂಗೀಣ ಸಾಧನೆಗಾಗಿ ಎರಡು ಬಾರಿ ಪ್ರತಿಷ್ಠಿತ ‘ಬ್ಯಾಂಕೊ ಬ್ಲೂ ರಿಬ್ಬನ್ ಪ್ರಶಸ್ತಿ’ ಲಭಿಸಿದೆ. ಕೇಂದ್ರ ಸರಕಾರದ ಮಹತ್ತರ ಯೋಜನೆಯಾದ ‘ಅಟಲ್ ಪಿಂಚಣಿ ಯೋಜನೆ’ಯನ್ನು ಬ್ಯಾಂಕ್ ಸಮರ್ಪಕವಾಗಿ ಜಾರಿಗೆ ತಂದಿದ್ದು, ಈ ಯೋಜನೆಯಲ್ಲಿ ದಾಖಲೆಯ ಪ್ರಮಾಣದಲ್ಲಿ ಚಂದಾದಾರರನ್ನು ನೋಂದಾಯಿಸಿ, ಭಾರತ ಸರ್ಕಾರದ ಹಣಕಾಸು ಸಚಿವಾಲಯದಿಂದ 4 ಬಾರಿ ಪ್ರಶಸ್ತಿಗೆ ಪಾತ್ರವಾಗಿದೆ.

ಮುಂದಿನ ಯೋಜನೆ:10 ಹೊಸ ಶಾಖೆಗಳು

ಬ್ಯಾಂಕ್ ಮುಂದಿನ ಅವಧಿಯಲ್ಲಿ 10 ಹೊಸ ಶಾಖೆಗಳನ್ನು ತೆರೆಯುವ ಯೋಜನೆಯನ್ನು ಹಮ್ಮಿಕೊಂಡಿದೆ.



ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ 112 ವರ್ಷಗಳ ಸಮೃದ್ಧ ಪರಂಪರೆಯನ್ನು ಹೊಂದಿರುವ ಎಸ್‌ಸಿಡಿಸಿಸಿ ಬ್ಯಾಂಕ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ವಿಶಿಷ್ಟ ಹಾಗೂ ವಿನೂತನ ಸೇವೆಗಳನ್ನು ಅಳವಡಿಸಿಕೊಂಡು ದೇಶಕ್ಕೆ ಮಾದರಿಯಾಗಿದೆ. ಅಭಿವೃದ್ಧಿಯ ಮುಂಚೂಣಿಯಲ್ಲಿರುವ ಬ್ಯಾಂಕ್ ಕೋರ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕಿಂಗ್‌ನಂತಹ ಉತ್ಕೃಷ್ಟ ಬ್ಯಾಂಕಿಂಗ್ ವ್ಯವಸ್ಥೆಯ ಜತೆಗೆ ಗ್ರಾಹಕರಿಗೆ ಡಿಜಿಟಲ್ ಬ್ಯಾಂಕಿಂಗ್ ಮೂಲಕ ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯ ಅಳವಡಿಸಿಕೊಂಡು ಗಣನೀಯ ಪ್ರಗತಿ ಸಾಧಿಸಿದೆ.

■ ಡಾ.ಎಂ.ಎನ್. ರಾಜೇಂದ್ರಕುಮಾರ್
ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರು

ಸತತ 31 ವರ್ಷಗಳಿಂದ ಕೃಷಿ ಸಾಲ ಮರುಪಾವತಿಯಲ್ಲಿ ಶೇ.100ರ ಸಾಧನೆ

ಬ್ಯಾಂಕ್ ವರದಿ ವರ್ಷದಲ್ಲಿ ನೀಡಿದ ಎಲ್ಲಾ ಕೃಷಿ ಸಾಲಗಳು ಶೇ. 100ರ ಮರುಪಾವತಿಯನ್ನು ಕಂಡು ದಾಖಲೆ ನಿರ್ಮಿಸಿ ಸಾಧನೆಗೈದಿದೆ. ಇಂತಹ ಸಾಧನೆಯನ್ನು ಕಳೆದ 31 ವರ್ಷಗಳಿಂದ ಬ್ಯಾಂಕ್ ಸತತವಾಗಿ ಮಾಡಿರುವುದು ರಾಷ್ಟ್ರೀಯ ದಾಖಲೆ ಯಾಗಿದೆ ಎಂದು ಡಾ. ಎಂಎನ್‌ಆರ್ ತಿಳಿಸಿದರು.

ಮೊಬೈಲ್ ಆ್ಯಪ್

ಈ ಯೋಜನೆಯ ಮುಖಾಂತರ ಗ್ರಾಹಕರ ಮೊಬೈಲ್ ಮೂಲಕ ಬ್ಯಾಂಕಿನ ಶಾಖೆಗಳ ನಡುವೆ ಒಂದು ಖಾತೆಯಿಂದ ಮತ್ತೊಂದು ಖಾತೆಗೆ ಹಣ ವರ್ಗಾಯಿಸಬಹುದು. ಮೊಬೈಲ್ ಮುಖಾಂತರವೇ ಗ್ರಾಹಕರ ಖಾತೆಯ ವ್ಯವಹಾರದ ವಿಚಾರಣೆ, ಮಿನಿಸ್ಟೇಟ್‌ಮೆಂಟ್ ಹಾಗೂ ಪಾಸ್ ಬುಕ್ ನಿರ್ವಹಣೆಯ ಸೌಲಭ್ಯ ಪಡೆಯಬಹುದಾಗಿದೆ.

SCDCC BANK

- ಕೇಂದ್ರ ಹಾಗೂ ರಾಜ್ಯ ಸರಕಾರದ ಯಾವುದೇ ಠೇವಣಾತಿ ಇಲ್ಲದೆಯೂ ತನ್ನ 113 ಶಾಖೆಗಳ ಮುಖಾಂತರ ಒಟ್ಟು 9264.64 ಕೋಟಿ ರೂ. ಠೇವಣಿ ಸಂಗ್ರಹಿಸಿ ಬ್ಯಾಂಕ್ ಸಾಧನೆಗೈದಿದೆ.
- ಸ್ಪರ್ಧಾತ್ಮಕ ವ್ಯವಹಾರದಲ್ಲಿ ಬ್ಯಾಂಕ್ 9766.75 ಕೋಟಿ ರೂ. ಮುಂಗಡ ನೀಡಿದೆ.
- ಬ್ಯಾಂಕ್‌ಗೆ ಒಟ್ಟು 1104 ಸಂಘಗಳು ಸದಸ್ಯರಾಗಿವೆ. ಬ್ಯಾಂಕಿನ ಒಟ್ಟು ಪಾಲು ಬಂಡವಾಳ 554.08 ಕೋಟಿ ರೂ. ಆಗಿರುತ್ತದೆ.

ಬ್ಯಾಂಕಿನ ಸಾಧನೆ

ಇಂಟರ್ ಬ್ಯಾಂಕ್ ಮೊಬೈಲ್ ಪೇಮೆಂಟ್ ಸಿಸ್ಟಮ್ (ಐಎಂಪಿಎಸ್) ಯೋಜನೆಯನ್ನು ಬ್ಯಾಂಕ್ ವರದಿ ವರ್ಷದಲ್ಲಿ ಕಾರ್ಯಗತಗೊಳಿಸಿದೆ. ಈ ಯೋಜನೆಯಿಂದ ಗ್ರಾಹಕರು ಹೆಚ್ಚು ಆಕರ್ಷಿತರಾಗಿರುವುದು ಕಂಡುಬಂದಿದೆ. ಮೊಬೈಲ್ ಮುಖಾಂತರ ತಮ್ಮ ಖಾತೆಯಿಂದ ಇತರ ಬ್ಯಾಂಕಿನ ಖಾತೆಗೆ ಹಣವನ್ನು ಸುಲಭವಾಗಿ ವರ್ಗಾಯಿಸುತ್ತಿದ್ದಾರೆ.

ಬ್ಯಾಂಕಿನ ಮತ್ತೊಂದು ಮಹಾತ್ವಾಕಾಂಕ್ಷೆಯ ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (ಯುಪಿಐ) ಯೋಜನೆ ಜನಸಾಮಾನ್ಯರು ಉಪಯೋಗಿಸುವ ಯುಪಿಐ ಪಾವತಿ ವಿಧಾನವಾಗಿದ್ದು, ಈ ವಿಧಾನದಲ್ಲೂ ಗ್ರಾಹಕರು ತಮ್ಮ ಸ್ಮಾರ್ಟ್‌ಫೋನ್‌ನ್ನು ವರ್ಚುವಲ್ ಡೆಬಿಟ್ ಕಾರ್ಡ್‌ನಂತೆ ಬಳಸಿ, ತ್ವರಿತವಾಗಿ ಪಾವತಿ ಮತ್ತು ಸ್ವೀಕೃತಿ ಸಾಧ್ಯವಾಗಿರುತ್ತದೆ. ಮಾತ್ರವಲ್ಲ ಯುಪಿಐ ಸೇವೆಗಳಾದ ಗೂಗಲ್ ಪೇ, ಫೋನ್ ಪೇ ಹಾಗೂ ಇತರ ಪಾವತಿ ವಿಧಾನವನ್ನು ಸುಲಭವಾಗಿ ಬಳಸುತ್ತಿದ್ದಾರೆ. ಇದರಿಂದ ವಿದ್ಯುತ್ ಬಿಲ್, ನೀರಿನ ಬಿಲ್ ಹಾಗೂ ಟೆಲಿಫೋನ್ ಬಿಲ್‌ಗಳನ್ನು ಗ್ರಾಹಕರು ಸುಲಭವಾಗಿ ಪಾವತಿಸುತ್ತಿದ್ದಾರೆ. ಯುಪಿಐ ಚಾಲಿತ ಆ್ಯಪ್‌ಗಳೊಂದಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ವ್ಯಾಪಾರ ಕೇಂದ್ರಗಳಲ್ಲೂ ಈ ಮಾದರಿಯನ್ನು ಉಪಯೋಗಿಸುತ್ತಿದ್ದಾರೆ. ಸ್ವಸಹಾಯ ಗುಂಪುಗಳ ಸಮರ್ಪಕ ಅನುಷ್ಠಾನದಲ್ಲಿ ಬ್ಯಾಂಕ್‌ಗೆ ರಾಜ್ಯದಲ್ಲೇ ಪ್ರಥಮ ಸ್ಥಾನ. ಬ್ಯಾಂಕ್ ಒಟ್ಟು 34765 ಗುಂಪುಗಳನ್ನು ಹೊಂದಿದೆ. ಉಭಯ ಜಿಲ್ಲೆಗಳ ಎಲ್ಲಾ ನವೋದಯ ಸ್ವಸಹಾಯ ಸಂಘಗಳ ಮಹಿಳಾ ಸದಸ್ಯೆಯರಿಗೆ ಸಮವಸ್ತ್ರ ವಿತರಣೆಯನ್ನು ಮಾಡಲಾಗಿದೆ. ಜಿಲ್ಲೆಯಲ್ಲಿ ಒಟ್ಟು 1,68,583 ರೈತರಿಗೆ ಮಂಗಳಾ ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ ವಿತರಿಸಲಾಗಿದೆ. 84,797 ಕಿಸಾನ್ ಕ್ರೆಡಿಟ್ ಕಾರ್ಡುದಾರರಿಗೆ ವೈಯುಕ್ತಿಕ ಅಪಘಾತ ವಿಮಾ ಸೌಲಭ್ಯವನ್ನು ಒದಗಿಸಲಾಗಿದೆ.

ಗ್ರಾಹಕರ ಮನೆ ಬಾಗಿಲಿಗೆ ಬ್ಯಾಂಕ್ ಎನ್ನುವ ಆಶಯದೊಂದಿಗೆ ಸುಸಜ್ಜಿತ ವಾಹನದಲ್ಲಿ ಎಲ್ಲಾ ರೀತಿಯ ಬ್ಯಾಂಕಿಂಗ್ ಸೇವೆಯನ್ನು ಹಾಗೂ ಎ.ಟಿ.ಎಂ. ಸೌಲಭ್ಯವನ್ನು ಕಾರ್ಯರೂಪಕ್ಕೆ ತಂದ ದೇಶದ ಮೊದಲ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಎನ್ನುವ ಹೆಗ್ಗಳಿಕೆ. ಈಗಾಗಲೇ ಮಂಗಳೂರು ಹಾಗೂ ಉಡುಪಿಯಲ್ಲಿ ‘ಮೊಬೈಲ್ ಬ್ಯಾಂಕಿಂಗ್’ ವ್ಯವಸ್ಥೆ ಕಾರ್ಯರೂಪದಲ್ಲಿದೆ.

ರಿಜ್ವಿ ಆಟಕ್ಕೆ ಮಂಕಾದ ಮುಂಬೈ | ಅಕ್ಷರ್ ಪಡೆಗೆ ಎರಡನೇ ಗೆಲುವು | ಸೂರ್ಯ ಹೋರಾಟ ವ್ಯರ್ಥ

ದಿಲ್ಲಿಯಲ್ಲಿ ರಿಜ್ವಿ ದರ್ಬಾರ್!



• **ಹೊಸದಿಲ್ಲಿ:** ಒತ್ತಡದ ಸಮಯದಲ್ಲಿ ಮತ್ತೊಮ್ಮೆ ತಂಡದ ಕೈ ಹಿಡಿದ ಸಮೀರ್ ರಿಜ್ವಿ ತಮ್ಮ ಸಮಯೋಚಿತ ಬ್ಯಾಟಿಂಗ್‌ನೊಂದಿಗೆ ದಿಲ್ಲಿ ತಂಡಕ್ಕೆ ಸತತ ಎರಡನೇ ಗೆಲುವು ತಂದಿಟ್ಟರು. ತಂಡದ ಸಾಂಘಿಕ ಬೌಲಿಂಗ್ ಮಾಡಿದ ನಂತರ ಗುರಿ ಬೆನ್ನಟ್ಟುವಾಗ ಮಿಂಚಿದ ದಿಲ್ಲಿ ಎರಡನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿತು.

ದಿಲ್ಲಿಯ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರಿಜ್ವಿಯದ್ದೇ ಆಟ ನಡೆಯಿತು. ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಅಕ್ಷರ್ ಪಡೆ ಮಾರಕ ದಾಳಿ ಸಂಘಟಿಸಿತು. ರೋಹಿತ್ ಶರ್ಮ, ರಿಕೆಲ್ಟನ್, ಸೂರ್ಯ ಹೀಗೆ ಬ್ಯಾಟಿಗರ ದಂಡೇ ಇದ್ದ ತಂಡವನ್ನು ಕರಾರುವಾಕ್ಕಾಗಿ 162 ರನ್‌ಗಳಿಗೆ ತಡೆದು ನಿಲ್ಲಿಸಿತು. ಮುಂಬೈ ಪರ ಸೂರ್ಯಕುಮಾರ್ ಯಾದವ್ 51 ರನ್ ಗಳಿಸಿ ಹೋರಾಡಿದರು. ಇತ್ತ ದಿಲ್ಲಿ ಪರ ಮುಕೇಶ್ 2 ವಿಕೆಟ್ ಪಡೆದುಕೊಂಡರು.

ಗುರಿ ಬೆನ್ನತ್ತಿದ ದಿಲ್ಲಿಗೆ ನಾಗಾಲೋಟ. ಮೊದಲಿಗೆ ದೀಪಕ್ ಚಾಹರ್ ಅವರ ಮಾರಕ ದಾಳಿಗೆ ವಿಕೆಟ್ ಕಳೆದುಕೊಂಡರೂ ನಂತರ ರಿಜ್ವಿ ಗೆಲ್ಲಿಸುವ ಜವಾಬ್ದಾರಿ ಮೈಗೆತ್ತಿಕೊಂಡರು. ಅವರಿಗೆ ನಿಸ್ಸಂಕಾ ಸಾಥ್ ಸಿಕ್ಕ ನಂತರ ತಂಡ 18.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 164 ರನ್ ಗಳಿಸಿ ಗೆದ್ದುಕೊಂಡಿತು.

ಪಂದ್ಯಶ್ರೇಷ್ಠ ಮತ್ತೊಮ್ಮೆ ರಿಜ್ವಿ ಪಡೆದುಕೊಂಡರೆ, 2 ವಿಕೆಟ್ ಪಡೆದ ಮುಕೇಶ್ ಪಂದ್ಯದ ಬೆಸ್ಟ್ ಬೌಲರ್ ಅನ್ನಿಸಿಕೊಂಡರು. ಸೂರ್ಯ 52 ರನ್ ಬಾರಿಸಿ ಹೋರಾಟ ನಡೆಸಿದ ಏಕೈಕ ಆಟಗಾರ ಎನ್ನಿಸಿಕೊಂಡರು. ಉಳಿದಂತೆ ನಿಸ್ಸಂಕಾ ಮತ್ತು ರೋಹಿತ್ ಶರ್ಮ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ.

ಸಮೀರ್ ಅಬ್ಬರ: ಗುರಿ ಬೆನ್ನತ್ತುವಾಗ ದಿಲ್ಲಿಗೆ ರಾಹುಲ್ ವಿಕೆಟ್ ಕಳೆದುಕೊಂಡ ಆಘಾತ. ನಿತೀಶ್ ರಾಣಾ ವಿಕೆಟ್ ಮುಂಬೈಗೆ ರನೌಟ್ ಮೂಲಕ ಉಡುಗೊರೆ ಸಿಕ್ಕಂತೆ ಸಿಕ್ಕಿತು. ಅಲ್ಲಿ ಪಂದ್ಯದಲ್ಲಿ ಮುನ್ನಡೆ ಸಾಧಿಸಿದ್ದ ಮುಂಬೈ ಇಂಡಿಯನ್ಸ್ ಅದೇ ಮುಂದುವರಿಸಲು ಶಕ್ತವಾಗಲಿಲ್ಲ, ನಾಲ್ಕನೇ ವಿಕೆಟ್‌ಗೆ ಜೊತೆಯಾದ ನಿಸ್ಸಂಕಾ ಮತ್ತು ರಿಜ್ವಿ ಅಬ್ಬರದ ಬ್ಯಾಟಿಂಗ್ ಶುರು ಮಾಡಿದರು. ಸಮೀರ್ ಸೆಟ್ ಆದರು. ನಿಸ್ಸಂಕಾ ವಿಕೆಟ್ ಒಪ್ಪಿಸಿದರು, ಇವರಿಬ್ಬರ ಜೊತೆಯಾಟ 66 ರನ್ ಗಳಿಸಿತು. ಅದರಲ್ಲಿ ಸಮೀರ್ 25 ರನ್ ಮಾತ್ರ ಗಳಿಸಿದರು.

ಜವಾಬ್ದಾರಿಕೆ ಮುಗಿಸಿಕೊಂಡಿದ್ದ ಸಮೀರ್ ನಂತರ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ ಬಂದರು. ಮುಂಬೈ ಕಡೆಯಿಂದ ಪಂದ್ಯ ಕಸಿದರು. ಅವರಿಗೆ ಮಿಲ್ಲರ್ ಅಚ್ಚುಕಟ್ಟಾದ ಸಾಥ್ ಕೊಟ್ಟರು. ಮುಂದಿನ 28 ಬಾಲ್‌ಗಳಲ್ಲಿ ರಿಜ್ವಿ 65 ರನ್ ಚಚ್ಚಿದರು. 90 ರನ್‌ಗಳಿಸಿದ್ದಾಗ ಬಾಷ್‌ಗೆ ಕ್ಯಾಚ್ ಆದರು. ಅಲ್ಲಿಗೆ ಪಂದ್ಯ ಮುಂಬೈ ಕಡೆಯಿಂದ ಹೋಗಿತ್ತು. ಉಳಿದ ಜವಾಬ್ದಾರಿಕೆಯನ್ನು ಮಿಲ್ಲರ್ ಸಂಪನ್ನಗೊಳಿಸಿದರು. ದಿಲ್ಲಿ 6 ವಿಕೆಟ್ ಜಯ ಸಾಧಿಸಿತು.

ಮುಂಬೈಗೆ ಸೂರ್ಯ ಆಸರೆ: ಬ್ಯಾಟಿಂಗ್‌ಗಿಳಿದ ಮುಂಬೈ ಇಂಡಿಯನ್ಸ್‌ಗೆ ಆರಂಭಿಕ ಆಘಾತ. 9 ರನ್ ಗಳಿಸಿದ್ದ ರಯಾನ್ ರಿಕೆಲ್ಟನ್ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ತಿಲಕ್ ವರ್ಮಾ ಶೂನ್ಯ ಸುತ್ತಿದರು. ಸಂಕಷ್ಟಕ್ಕೆ ಸಿಲುಕಿದ ಮುಂಬೈಗೆ ಸೂರ್ಯ ಹಾಗೂ ರೋಹಿತ್ ಕೊಂಚ ಹೊತ್ತು ಆಸರೆಯಾದರು. 35 ರನ್ ಗಳಿಸಿದ್ದ ರೋಹಿತ್ ಶರ್ಮ ವಿಕೆಟ್ ಒಪ್ಪಿಸಿದರು. ಸೂರ್ಯ ನಿಧಾನವಾಗಿ ಅರ್ಧಶತಕ ಬಾರಿಸಿದರು. ರುದರ್‌ಫೋರ್ಡ್ 5 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ನಮನ್ ಧಿರ್ 28 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಸೂರ್ಯ 51 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ದಿಲ್ಲಿ ಪರ ಮುಕೇಶ್ 2 ವಿಕೆಟ್ ಪಡೆದರು.



ಸ್ಕೋರ್ ಬೋರ್ಡ್

ಮುಂಬೈ 20 ಓವರ್‌ಗಳಲ್ಲಿ 162/6

ರಿಕೆಲ್ಟನ್	ಸಿ ಅಕ್ಷರ್ ಬಿ ಮುಕೇಶ್	9
ರೋಹಿತ್	ಸಿ ನಿತಿಶ್ ಬಿ ಅಕ್ಷರ್	35
ತಿಲಕ್	ಸಿ ಮತ್ತು ಬಿ ಮುಕೇಶ್	0
ಸೂರ್ಯ	ಎಲ್‌ಬಿ ಬಿ ಲುಂಗಿ	51
ರುದರ್‌ಫೋರ್ಡ್	ಸಿ ಮುಕೇಶ್ ಬಿ ವಿಪ್ರಾಜ್	5
ನಮನ್	ಸಿ ಸ್ಟಬ್ಸ್ ಬಿ ನಟರಾಜನ್	28
ಸ್ಯಾಂಟ್ನರ್	ನಾಟೌಟ್	18
ಬಾಷ್	ನಾಟೌಟ್	11
ಇತರೆ		5

ಬೌಲಿಂಗ್ ವಿವರ

ಮುಕೇಶ್	3-0-26-2
ಲುಂಗಿ	4-0-34-1
ಅಕ್ಷರ್	4-0-22-1
ವಿಪ್ರಾಜ್	3-0-24-1
ಕುಲ್ದೀಪ್	3-0-31-0
ನಟರಾಜನ್	3-0-24-1

ದಿಲ್ಲಿ 18.1 ಓವರ್‌ಗಳಲ್ಲಿ 164/4

ರಾಹುಲ್	ಸಿ ರಿಕೆಲ್ಟನ್ ಬಿ ಚಾಹರ್	1
ನಿಸ್ಸಂಕಾ	ಸಿ ಮಯಾಂಕ್ ಬಿ ಸ್ಯಾಂಟ್ನರ್	44
ನಿತಿಶ್	ರನೌಟ್	0
ರಿಜ್ವಿ	ಸಿ ವರ್ಮಾ ಬಿ ಬಾಷ್	90
ಮಿಲ್ಲರ್	ನಾಟೌಟ್	21
ಸ್ಟಬ್ಸ್	ನಾಟೌಟ್	3
ಇತರೆ		5

ಬೌಲಿಂಗ್ ವಿವರ

ಚಾಹರ್	3-0-20-1
ಬೂಮ್ರಾ	4-0-21-0
ಸ್ಯಾಂಟ್ನರ್	3-0-22-1
ಶಾರ್ದೂಲ್	3-0-41-0
ಮಯಾಂಕ್	2-0-20-0
ಬಾಷ್	3.1-0-39-1

ಜುರೇಲ್ ಮಿಂಚಿನಾಟ | ಜೈಸ್ವಾಲ್ ಅಬ್ಬರ

ಆರ್‌ಆರ್ 210/6

• **ಅಹಮದಾಬಾದ್:** ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯವಂಶಿ ಮತ್ತು ಧ್ರುವ್ ಜುರೇಲ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಗುಜರಾತ್ ತಂಡವನ್ನು ದಂಡಿಸಿರುವ ರಾಜಸ್ಥಾನ ರಾಯಲ್ಸ್ ತಂಡವು 200ಕ್ಕೂ ಅಧಿಕ ಸ್ಕೋರ್ ನಿರ್ಮಿಸಿದೆ. ಪಂದ್ಯಾವಳಿಯ 9ನೇ ಪಂದ್ಯದಲ್ಲಿ ರಾಜಸ್ಥಾನ ಮತ್ತು ಗುಜರಾತ್ ತಂಡಗಳು ಮುಖಾಮುಖಿಯಾಗಿದ್ದವು. ಅಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ಇಬ್ಬರು ಯುವಕರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರದ ಆರಂಭ ಪಡೆಯಿತು. ಮಧ್ಯಮ ಕ್ರಮಾಂಕದಲ್ಲಿ ಜುರೇಲ್ ಅವರ ಆಸರೆ ಪಡೆಯಿತು. ಹೆಟ್ಮೇರ್ ಅವರ ಚಿಕ್ಕ-ಚೊಕ್ಕ ಪ್ರದರ್ಶನದೊಂದಿಗೆ ತಂಡ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 210 ರನ್ ಗಳಿಸಿದೆ.



ಆರಂಭಿಕರ ಅರ್ಭಟ: ಟಾಸ್ ಗೆದ್ದು ಬ್ಯಾಟಿಂಗ್‌ಗಿಳಿದ ರಾಜಸ್ಥಾನ ಎಂದಿನಂತೆ ಸ್ಫೋಟಕ ಆರಂಭ ಪಡೆಯಿತು. ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಮೊದಲನಿಂದಲೂ ಬಿರುಸಿನ ಬ್ಯಾಟಿಂಗ್ ಮಾಡುವತ್ತ ಸಾಗಿತ್ತು. ಒಂದು ಹಂತದಲ್ಲಿ ವೈಭವ್ ಸೆಟ್ ಆಗಲುಸ್ವಲ್ಪಸಮಯತೆಗೆದುಕೊಂಡರೆ, ಜೈಸ್ವಾಲ್ ಹೊಡೆಯದೊಂದಿಗೆ ಇನ್ನಿಂಗ್ಸ್ ಆರಂಭಿಸಿದರು. ಇಬ್ಬರ ಆಟಕ್ಕೆ ಗುಜರಾತ್ ತಂಡದ ಬೌಲಿಂಗ್ ಪಡೆ ತತ್ತರಿಸಿತು. ಸ್ವಲ್ಪ ಸಮಯದ ನಂತರ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ ವೈಭವ್ 5 ಬೌಂಡರಿ ಹಾಗೂ 1 ಸಿಕ್ಸರ್‌ಗಳೊಂದಿಗೆ 31 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಜೈಸ್ವಾಲ್ 36 ಬಾಲ್‌ಗಳಲ್ಲಿ 6 ಬೌಂಡರಿ 3 ಸಿಕ್ಸರ್‌ಗಳೊಂದಿಗೆ 55 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಜುರೇಲ್ ಮಿಂಚಿನಾಟ: ಧ್ರುವ್ ಜುರೇಲ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ಮೂರನೇ ಕ್ರಮಾಂಕಕ್ಕೆ ಬಡ್ತಿ ಪಡೆದ ಅವರು, ಸೆಟ್ ಆಗುವ ಜವಾಬ್ದಾರಿಕೆ ಮುಗಿಸಿಕೊಂಡ ನಂತರ ಬಿರುಸಿನ ಆಟ ಶುರು ಮಾಡಿದರು. ಮಧ್ಯಮ ಕ್ರಮಾಂಕದಲ್ಲಿ ರಿಯಾನ್ 8, ಹೆಟ್ಮೇರ್ 18 ರನ್ ಮತ್ತು ಫೆರಾರಿಯಾ 1 ರನ್‌ಗೆ ವಿಕೆಟ್ ಕಳೆದುಕೊಂಡರು. ಇಷ್ಟಾದರೂ ಒಂದು ಬದಿಯಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದ ಜುರೇಲ್ 42 ಬಾಲ್ ಮಾತ್ರ ಎದುರಿಸಿ 5 ಬೌಂಡರಿ ಮತ್ತು 5 ಸಿಕ್ಸರ್‌ಗಳೊಂದಿಗೆ 75 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇದರೊಂದಿಗೆ ಸ್ಕೋರ್ ಹಿಗ್ಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಗಿಲ್ ಅಲಭ್ಯ: ಗುಜರಾತ್ ಜೇಂಟ್ಸ್ ತಂಡದ ನಾಯಕ ಶುಭಮನ್ ಗಿಲ್ ಗಾಯದ ಕಾರಣದಿಂದಾಗಿ ರಾಜಸ್ಥಾನ ವಿರುದ್ಧದ ಪಂದ್ಯದಿಂದ ಹೊರಗುಳಿದರು. ಅವರ ಬದಲಿಗೆ ತಂಡದ ಪ್ರಮುಖ ಆಟಗಾರ ರಶೀದ್ ಖಾನ್ ಅವರನ್ನು ಹಂಗಾಮಿ ನಾಯಕರನ್ನಾಗಿ ನೇಮಿಸಲಾಗಿತ್ತು.



ಕಿರುಸುದ್ದಿ

ಪಂಜಾಬ್‌ಗೆ ಸತತ ಎರಡನೇ ಗೆಲುವು

• **ಚೆನ್ನೈ:** ಯುವ ಬ್ಯಾಟರ್ ಪ್ರಿಯಾಂಶ್ ಆರ್ಯ ಅವರ ಸ್ಫೋಟಕ ಬ್ಯಾಟಿಂಗ್ ನಂತರ ನಾಯಕನಾಟವಾಡಿದ ಶ್ರೇಯಸ್ ಅಯ್ಯರ್ ಪ್ರತಿಷ್ಠಿತ ಲೀಗ್‌ನಲ್ಲಿ ಸತತ ಪಂಜಾಬ್ ತಂಡಕ್ಕೆ ಸತತ ಎರಡನೇ ಗೆಲುವು ತಂದುಕೊಟ್ಟರು. ಚೆನ್ನೈ ಎರಡನೇ ಸೋಲು ಅನುಭವಿಸಿತು. ಆಯುಷ್ ಮಾತ್ರೆ ಅವರ ಸ್ಫೋಟಕ ಬ್ಯಾಟಿಂಗ್ ನಂತರ ದುಬೆ ಮತ್ತು ಸರ್ಫರಾಜ್ ಖಾನ್ ಅವರ ಕರಾರುವಾಕ್ ಬ್ಯಾಟಿಂಗ್‌ನಿಂದಾಗಿ ಚೆನ್ನೈ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿತು. ಪಂಜಾಬ್ ಪರ ವಿಜಯ್‌ಕುಮಾರ್ 2 ವಿಕೆಟ್ ಪಡೆದುಕೊಂಡಿದ್ದರು. ಗುರಿ ಬೆನ್ನತ್ತಿದ ಶ್ರೇಯಸ್ ಪಡೆ ಪ್ರಿಯಾಂಶ್ ಆರ್ಯ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಬಿರುಸಿನ ಆರಂಭ ಪಡೆದು ಪಂದ್ಯ ಕಸಿದುಕೊಂಡಿತು. ಅವರ ವಿಕೆಟ್ ಬಿದ್ದ ನಂತರ ಶ್ರೇಯಸ್ ಅಯ್ಯರ್ ನಾಯಕನಾಟದೊಂದಿಗೆ ಅಬ್ಬರಿಸಿ 18.4 ಅನ್ನುವಷ್ಟರಲ್ಲಿ 210 ರನ್ ಗಳಿಸುವಂತೆ ಮಾಡಿದರು. ಚೆನ್ನೈ 5 ವಿಕೆಟ್ ಪಡೆದುಕೊಂಡಿತ್ತು. ಪ್ರಿಯಾಂಶ್ ಆರ್ಯ 11 ಬಾಲ್‌ಗಳಲ್ಲಿ 39 ರನ್ ಗಳಿಸಿ ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಪ್ರಭಸಿಮ್ರನ್ ಕೂಡ 43ರನ್‌ಗಳ ಕೊಡುಗೆ ನೀಡಿದರು. ಮೂರನೇ ಕ್ರಮಾಂಕದಲ್ಲಿ ಕೂಪರ್ 36, ಶ್ರೇಯಸ್ ಅಯ್ಯರ್ 50 ರನ್ ಗಳಿಸಿ ಗೆಲುವಿನ ರೂವಾರಿ ಅನ್ನಿಸಿಕೊಂಡರು. ಚೆನ್ನೈ ಪರ ಮಾತ್ ಹೆನ್ರಿ ಹಾಗೂ ಕಂಬೋಜ್ ತಲಾ 2 ವಿಕೆಟ್ ಪಡೆದುಕೊಂಡರು.

ಲಖನೌಗೆ ಹೈದರಾಬಾದ್ ಸವಾಲು

• **ಹೈದರಾಬಾದ್:** ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಭಾನುವಾರದ ಮೊದಲನೇ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಲಖನೌ ಸೂಪರ್ ಜೇಂಟ್ಸ್ ತಂಡಗಳು ಮುಖಾಮುಖಿಯಾಗಲಿವೆ.

ಮೊದಲ ಪಂದ್ಯದಲ್ಲಿ ಸೋತರೂ ಎರಡನೇ ಪಂದ್ಯದಲ್ಲಿ ಗೆಲುವು ಸಾಧಿಸಿದ ಹೈದರಾಬಾದ್ ತನ್ನ ಮೊದಲನೇ ತವರು ಪಂದ್ಯವನ್ನಾಡಲಿದೆ. ಇತ್ತ ಮೊದಲ ಪಂದ್ಯದಲ್ಲಿ ಗೆಲುವಿನ ಆಟವಾಡಿದರೂ ಕೊನೆಯಲ್ಲಿ ಭಾರೀ ನಿರಾಸೆ ಅನುಭವಿಸಿದ ಲಖನೌ ತನ್ನ ಮೊದಲ ಜಯದ ಹುಡುಕಾಟದಲ್ಲಿದೆ. ಪಂತ್, ಮಾರ್ಕ್ರಂ, ಮಾರ್ಷ್, ಪೂರನ್ ಸೇರಿದಂತೆ ಪ್ರಮುಖ ಆಟಗಾರರನ್ನು ಲಖನೌ ತಂಡ ಹೊಂದಿದೆ. ಇತ್ತ ಹೈದರಾಬಾದ್‌ನಲ್ಲೂ ಅಭಿಷೇಕ್ ಶರ್ಮ, ಟ್ರಾವಿಸ್ ಹೆಡ್, ಕ್ಲಾಸೆನ್ ಅಂತಹ ಪ್ರಮುಖ ಆಟಗಾರರಿದ್ದಾರೆ. ಉಭಯ ತಂಡಗಳಲ್ಲೂ ಬ್ಯಾಟಿಗರ ಪಡೆಗಳಿವೆ. ಹೈದರಾಬಾದ್‌ನ ಬ್ಯಾಟಿಂಗ್ ಪ್ರಾಬಲ್ಯ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಪಂದ್ಯದ ಸಮಯ: ಮಧ್ಯಾಹ್ನ 3:30

ಪಾಯಲ್‌ಗೆ ಚಿನ್ನದ ಪದಕ

- ವಿಶ್ವ ಆರ್ಚರಿ ಪ್ಯಾರಾ ಸಿರೀಸ್‌ನಲ್ಲಿ ಭಾರತೀಯರ ಮಿಂಚಿನಾಟ
- ದೇಶಕ್ಕೆ ಒಟ್ಟು 13 ಪದಕ
- ಅಂಕಪಟ್ಟಿಯಲ್ಲಿ ಮೊದಲನೇ ಸ್ಥಾನ

• **ಹೊಸದಿಲ್ಲಿ:** ವಿಶ್ವ ಆರ್ಚರಿ ಪ್ಯಾರಾ ಸಿರೀಸ್‌ನಲ್ಲಿ ಭಾರತದ ಯುವ ಪ್ಯಾರಾ ಆರ್ಚರಿ ತಾರೆ ಪಾಯಲ್ ನಾಗ್ ಭಾರೀ ಸಂಚಲನ ಮೂಡಿಸಿ ಚಿನ್ನದ ಪದಕ ಗೆದ್ದಿದ್ದಾರೆ. ಬ್ಯಾಂಕಾಕ್‌ನಲ್ಲಿ ನಡೆದ ಈ ಸ್ಪರ್ಧೆಯಲ್ಲಿ, ನಾಲ್ಕು ಅಂಗವಿಕಲತೆಯನ್ನು ಎದುರಿಸುತ್ತಿರುವ 18 ವರ್ಷದ ಪಾಯಲ್, ವಿಶ್ವ ನಂ.1 ಹಾಗೂ ತನ್ನದೇ ಸಹ ಆಟಗಾರ್ತಿ ಶೀತಲ್ ದೇವಿ ಅವರನ್ನು ಸೋಲಿಸಿ ಗಮನ ಸೆಳೆದಿದ್ದಾರೆ. ಶನಿವಾರದಂದು ಮಹಿಳೆಯರ ಕಂಪೌಂಡ್ ಫೈನಲ್‌ನಲ್ಲಿ ಪಾಯಲ್ 139-136 ಅಂತರದಲ್ಲಿ ಜಯ ಸಾಧಿಸಿ, ತನ್ನ ಅದ್ಭುತ ಅಭಿಯಾನವನ್ನು ಚಿನ್ನದೊಂದಿಗೆ ಮುಕ್ತಾಯಗೊಳಿಸಿದರು. ಸ್ಪರ್ಧೆಯ ಮೊದಲ ಎಂಡ್‌ನಲ್ಲೇ ಪರಿಪೂರ್ಣ 10ರ ಗುರಿಯನ್ನು ಹೊಡೆದು ಮುನ್ನಡೆ ಪಡೆದ ಅವರು, ಎರಡನೇ ಎಂಡ್ ನಂತರ 54-54 ಸಮಬಲದ ಬಳಿಕ ಮೂರನೇ ಎಂಡ್‌ನಲ್ಲಿ ಮುನ್ನಡೆ ಸಾಧಿಸಿದರು. ಅಂತಿಮ ಎಂಡ್‌ನಲ್ಲಿ ಎರಡು 10ಗಳೊಂದಿಗೆ ದೃಢ ಆಟದ ಮೂಲಕ ಗೆಲುವು ತಮ್ಮದಾಗಿಸಿಕೊಂಡರು.

ಇದು ಕಳೆದ ಒಂದೇ ವರ್ಷದೊಳಗೆ ಶೀತಲ್ ದೇವಿ ವಿರುದ್ಧ ಪಾಯಲ್ ಅವರ ಎರಡನೇ ಜಯವಾಗಿದೆ. 2025 ಜನವರಿಯಲ್ಲಿ ಜೈಪುರದಲ್ಲಿ ನಡೆದ ಪ್ಯಾರಾ ನ್ಯಾಷನಲ್ಸ್‌ನಲ್ಲಿ ಕೂಡ ಅವರು ಶೀತಲ್ ಅವರನ್ನು ಸೋಲಿಸಿದ್ದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೇವಲ ಎರಡನೇ ಟೂರ್ನಿಯಲ್ಲಿ ಭಾಗವಹಿಸುತ್ತಿರುವ ಪಾಯಲ್, ಒತ್ತಡದ ಸಂದರ್ಭದಲ್ಲೂ ತಾಳ್ಮೆಯಿಂದ ಆಡಿದುದು ವಿಶೇಷವಾಗಿದೆ.



ಸೋಲಿನಿಂದ ಹೊರಬರುವುದೇ ಚೆನ್ನೈ? | ಆತ್ಮವಿಶ್ವಾಸದಲ್ಲಿ ಆರ್‌ಸಿಬಿ

ಸೂಪರ್ ತಂಡ ರಾಯಲ್ ಸಮರ

• **ಬೆಂಗಳೂರು:** ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 19ನೇ ಆವೃತ್ತಿಗೆ ರಾಯಲ್ ಎಂಟ್ರಿ ಕೊಟ್ಟಿರುವ ಚಾಂಪಿಯನ್ ಬೆಂಗಳೂರು ಗೆಲುವಿನ ವಿಶ್ವಾಸದೊಂದಿಗೆ ಕಣಕ್ಕಿಳಿಯಲು ಅಣಿಯಾಗಿದೆ. ಗೆಲುವಿನ ಶುಭಾರಂಭ ಪಡೆದಿರುವ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸೋಲುಗಳಿಂದ ಹೈರಾಣಾಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಭಾನುವಾರದ ಎಲ್-ಕ್ಲಾಸಿಕೋ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಗೆಲುವಿನ ಇಂಗಿತದೊಂದಿಗೆ ಗೆಲುವಿನ ಸರಪಳಿ ಹೊತ್ತು ತರುತ್ತಿರುವ ಬೆಂಗಳೂರು ಶನಿವಾರ ಅಭ್ಯಾಸದಲ್ಲಿ ಮತ್ತೊಮ್ಮೆ ಆತ್ಮವಿಶ್ವಾಸ ವ್ಯಕ್ತಪಡಿಸಿತು. ಮಾಧ್ಯಮದೊಂದಿಗೆ ಮಾತನಾಡಿದ ತಂಡದ ಉಪನಾಯಕ ಜಿತೇಶ್ ಶರ್ಮ ನಾವು ಎಂದಿನಂತೆ ನಮ್ಮ ಸ್ವಾಭಾವಿಕ ಆಟ ಆಡಲು ಸಿದ್ಧ ಎಂದರು.

ಇಂದಿನ ಪಂದ್ಯ



ಶನಿವಾರದಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಆರ್‌ಸಿಬಿ ಬಂದಿಳಿಯಿತು. ಸಂಜೆ ಹೊತ್ತಿನಲ್ಲಿ ವಿರಾಟ್ ಕೊಹ್ಲಿ, ರಜತ್ ಪಾಟಿದಾರ್ ಸೇರಿದಂತೆ ವಿವಿಧ ಆಟಗಾರರು ನೆಟ್‌ನಲ್ಲಿ ಶ್ರಮಿಸಿದರು. ಕೋಚಿಂಗ್ ಸ್ಟಾಫ್ ಪಿಚ್ ಬಗ್ಗೆ ಲೆಕ್ಕಾಚಾರ ಹಾಕುತ್ತಿದ್ದರು. ರೋಚಕ ಹಣಾಹಣಿಗೆ ಪಿಚ್ ಕೂಡ ಸಜ್ಜಾಗಿ ನಿಂತಿತ್ತು. ಮೈದಾನದೆಲ್ಲೆಡೆ ಕ್ರಿಕೆಟ್ ಹಬ್ಬದ ವಾತಾವರಣ ಮತ್ತೊಮ್ಮೆ ಸೃಷ್ಟಿಯಾಗಿತ್ತು.

ಮೈದಾನದಲ್ಲಿ ಕಾಣಿಸಿಕೊಂಡ ಹ್ಯಾಜೆಲ್ವುಡ್: ಬೆಂಗಳೂರು ತಂಡದ ಪ್ರಮುಖ ಬೌಲರ್ ವೇಗಿ ಜೋಶ್ ಹ್ಯಾಜೆಲ್ವುಡ್ ಮೈದಾನದಲ್ಲಿ ಕಾಣಿಸಿಕೊಂಡರು. ಕಳೆದ ಪಂದ್ಯದಲ್ಲಿ ಜೋಶ್ ಇಲ್ಲದೆ ಆಡಿದ್ದರೂ ಭರ್ಜರಿ ಪ್ರದರ್ಶನ ನೀಡಿತ್ತು ಆರ್‌ಸಿಬಿ. ಶನಿವಾರದಂದು ಅವರು ಮೈದಾನಕ್ಕೆ ಬಂದರು. ಗಾಯದ ಕಾರಣದಿಂದಾಗಿ ಮೊದಲಿನ ಪಂದ್ಯಗಳಲ್ಲಿ ಅಲಭ್ಯರಾಗಿದ್ದಾರೆ ಎಂಬ ಸುದ್ದಿಯಿದ್ದರೂ, ಎಷ್ಟು ಪಂದ್ಯಕ್ಕೆ ಅಲಭ್ಯರಾಗಿದ್ದಾರೆ ಎಂಬ ಪ್ರಶ್ನೆಗೆ ಉತ್ತರ ಇರಲಿಲ್ಲ, ಪತ್ರಿಕಾಗೋಷ್ಠಿಯಲ್ಲಿ ಮಾತನಾಡುವಾಗ ಜಿತೇಶ್ ಶರ್ಮ, ಈ ಬಗ್ಗೆ ಇನ್ನೂ ಸ್ಪಷ್ಟ ನಿರ್ಧಾರವಾಗಿಲ್ಲ, ಮ್ಯಾನೇಜ್‌ಮೆಂಟ್ ಏನು ಹೇಳುತ್ತೆ ನೋಡಬೇಕು ಎಂದರು.

ಅಭ್ಯಾಸಕ್ಕಿಳಿಯದ ಚೆನ್ನೈ: ಮೂರು ದಿನಗಳಲ್ಲಿ ಎರಡು ಪಂದ್ಯಗಳನ್ನಾಡುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡ ಶನಿವಾರದಂದು ಅಭ್ಯಾಸ ಮಾಡಲಿಲ್ಲ, ಶುಕ್ರವಾರದಂದು ಪಂಜಾಬ್ ವಿರುದ್ಧ ಸೋತಿರುವ ಸಿಎಸ್‌ಕೆ ಪಂದ್ಯವನ್ನು ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಆಡಿತ್ತು. ಭಾನುವಾರದಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿದೆ. ಶನಿವಾರದಂದು ಪ್ರಯಾಣದಲ್ಲಿದ್ದ ಚೆನ್ನೈ ಅಭ್ಯಾಸ ಮಾಡಲಿಲ್ಲ, ಸತತ ಎರಡು ಸೋಲುಗಳ ನಿರಾಶೆ ಹೊತ್ತಿಕೊಂಡು ಬರುತ್ತಿರುವ ತಂಡಕ್ಕೆ ಗೆಲುವೊಂದೇ ಹಾದಿಯಾಗಿದೆ.

ಎಂದಿನಂತೆ ನಾವು ಸಿದ್ಧ

ಚೆನ್ನೈನ ಚಾಲೆಂಜ್‌ಗಳ ಬಗ್ಗೆ ಮಾತನಾಡುತ್ತಾ, ಜಿತೇಶ್ ಶರ್ಮ ಅವರು ನಮ್ಮ ಆಟವಾಡುವುದಕ್ಕೆ ನಾವು ಸಿದ್ಧ. ಟಿ20 ಕ್ರಿಕೆಟ್‌ನಲ್ಲಿ ಏಳು ಮತ್ತು ಬೀಳು ಇದ್ದದ್ದೆ. ಹೀಗಿರುವಾಗ ಯಾವುದೇ ತಂಡವೂ ಸ್ವಂತ ಪ್ರದರ್ಶನ ಮೇಲೆ ಗಮನ ಹರಿಸುತ್ತದೆ. ನಾವು ಕೂಡ ಅಷ್ಟೇ. ತಂಡದ ಪ್ರದರ್ಶನ ಮತ್ತು ಸಾಮರ್ಥ್ಯ ತಕ್ಕಂತೆ ಕೆಲವು ಯೋಜನೆ ಹಾಕಿಕೊಳ್ಳುತ್ತೇವೆ. ಆಟಗಾರರು ಹೆಚ್ಚಿನ ಶ್ರಮಕ್ಕೆ ಯತ್ನಿಸುತ್ತಾರೆ ಎಂದು ಹೇಳಿದರು.

ನಮ್ಮಲ್ಲಿ ಹಾಲಿ ಚಾಂಪಿಯನ್ಸ್ ಎಂಬ ವಿಶ್ವಾಸವಿದ್ದರೂ, ಇದು ಹೊಸ ಆವೃತ್ತಿ ಗೆಲ್ಲಲೇಬೇಕು ಎಂಬ ಮನಸ್ಥಿತಿ ಇದೆ. ನಮ್ಮ ಮ್ಯಾನೇಜ್‌ಮೆಂಟ್ ಕೂಡ ಹಾಗೆ, ನಾವು ಡಿಫೆಂಡ್ ಮಾಡಿಕೊಳ್ಳುತ್ತಿಲ್ಲ, ಟ್ರೋಫಿಯನ್ನು ಚೇಸ್ ಮಾಡುತ್ತೇವೆ ಎಂದು ಹೇಳುತ್ತಾರೆ. ಅದರಂತೆ ನಾವು ಗೆಲುವಿನ ಹಂಬಲದೊಂದಿಗೆ ಮೈದಾನಕ್ಕಿಳಿಯುತ್ತೇವೆ.

■ **ಜಿತೇಶ್ ಶರ್ಮ, ಆರ್‌ಸಿಬಿ ಉಪನಾಯಕ**

ಪಿಚ್ ಹೇಗಿದೆ?


ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಿಚ್ ಸಿದ್ಧವಾಗಿತ್ತು. ಬೌಂಡರಿಗಳ ರೇಖೆ ಅಲ್ಪ ಹತ್ತಿರ ಇರುವುದರಿಂದ ಚಿನ್ನಸ್ವಾಮಿ ಕ್ರೀಡಾಂಗಣ ಯಾವಾಗಲೂ ಬ್ಯಾಟಿಂಗ್ ಸ್ನೇಹಿ ಪಿಚ್. ಹೆಚ್ಚಿನ ಬೌನ್ಸ್ ಇರುತ್ತೆ, ಬ್ಯಾಟ್‌ಗೆ ನೇರವಾಗಿ ಬರುತ್ತದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಅಲ್ಪ ಲಾಭ ಪಡೆಯಬಹುದು. ಇಬ್ಬನಿ ಕಾಟವೂ ಹೆಚ್ಚು ಇರಲ್ಲ, ಹೀಗಾಗಿ ಮೊದಲು ಬೌಲಿಂಗ್ ಮಾಡುವ ತಂಡ ಗೆಲ್ಲುವ ಸಾಧ್ಯತೆ ಹೆಚ್ಚು ಅನ್ನುತ್ತಾರೆ ಎಕ್ಸ್‌ಪರ್ಟ್‌ಗಳು.

ಪಂದ್ಯದ ಸಮಯ: ಸಂಜೆ 7:30



ಚೆಸ್: ಜಾವೊಖಿರ್ ಅಗ್ರಸ್ಥಾನ

• **ಹೊಸದಿಲ್ಲಿ:** ಸೈಪ್ರಸ್‌ನಲ್ಲಿ ನಡೆಯುತ್ತಿರುವ ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಜಾವೊಖಿರ್ ಸಿಂದಾರೊವ್ ತಮ್ಮ ಅದ್ಭುತ ಪ್ರದರ್ಶನ ಮುಂದುವರಿಸಿ ಐದನೇ ಸುತ್ತಿನ ಬಳಿಕ 4.5 ಅಂಕಗಳೊಂದಿಗೆ ಮುನ್ನಡೆಯಲ್ಲಿದ್ದಾರೆ. ಅವರು ಬಲಿಷ್ಠ ವಿರುದ್ಧ ಜಯ ಸಾಧಿಸಿ ನಿರಂತರ ಮೂರನೇ ಗೆಲುವು ದಾಖಲಿಸಿದರು.



ಸಿಂದಾರೊವ್ ಮಧ್ಯಭಾಗದಲ್ಲಿ ಸೂಕ್ತ ಸಮಯದಲ್ಲಿ, ತಮ್ಮ ಚಾಣಾಕ್ಷತೆಯಿಂದ ಆಟದ ನಿಯಂತ್ರಣ ಪಡೆದರು. 14ನೇ ನಡೆಯಲ್ಲಿ ಎನ್‌ಎಕ್ಸ್‌ಬಿ4 ಮೂಲಕ ಎದುರಾಳಿಯ ರಾಣಿ ಮೇಲೆ ನಿಗಾ ಇಟ್ಟರು. ನಂತರ 16ನೇ ನಡೆಯಲ್ಲಿ ಸಿ-5 ಮೂಲಕ ಮಧ್ಯಭಾಗವನ್ನು ಮುಕ್ತಗೊಳಿಸಿದರು. ಮುಂದೆ ಎಫ್-6, ಎಚ್-6 ಮತ್ತು ಜಿ-5 ನಡೆಗಳ ಮೂಲಕ ಎದುರಾಳಿ ಮೇಲೆ ಒತ್ತಡ ಹೆಚ್ಚಿಸಿದರು. ಕೊನೆಗೆ 41ನೇ ನಡೆಯಲ್ಲಿ ಜಿಎಕ್ಸ್‌ಎಚ್-4 ಮೂಲಕ ನಿರ್ಣಾಯಕ ಮುನ್ನಡೆ ಪಡೆದು ಗೆಲುವು ಸಾಧಿಸಿದರು.

ಅತ್ತ ಭಾರತದ ಆರ್. ಪ್ರಜ್ಞಾನಂದ ಅಂದ್ರೇ ಎಸಿಪೆಂಕೋ ವಿರುದ್ಧ ಸಮಬಲ ಸಾಧಿಸಿ ನಿರಂತರ ಎರಡನೇ ಡ್ರಾ ಮಾಡಿಕೊಂಡರು. ಇಬ್ಬರೂ ಆಟಗಾರರು ಸ್ಪಷ್ಟ ಮುನ್ನಡೆ ಪಡೆಯಲು ಸಾಧ್ಯವಾಗದೆ ಸಮಬಲದಲ್ಲಿ ಆಟ ಮುಗಿಸಿದರು. ಮಹಿಳಾ ವಿಭಾಗದಲ್ಲಿ ದಿವ್ಯಾ ದೇಶಮುಖ್ ನಾಲ್ಕನೇ ಸುತ್ತಿನ ಸೋಲಿನ ನಂತರ ಟಾನ್ ಝೊಂಗ್ಯಿ ವಿರುದ್ಧ ಸಮಬಲ ಸಾಧಿಸಿ ಮರುಸ್ಫೂರ್ತಿ ಕಂಡುಕೊಂಡರು. ಎದುರಾಳಿಯ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿ ಕೊನೆಯಲ್ಲಿ ಡ್ರಾ ಮಾಡಿಕೊಂಡರು.

ಬಾಕ್ಸಿಂಗ್: ವಿಶ್ವನಾಥ್‌ಗೆ ಅಚ್ಚರಿಯ ಗೆಲುವು


• **ಹೊಸದಿಲ್ಲಿ:** ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಭರ್ಜರಿ ಪ್ರದರ್ಶನ ಮುಂದುವರಿದಿದ್ದು, ಹವಾಲ್ದಾರ್ ವಿಶ್ವನಾಥ್ ಸುರೇಶ್ ವಿಶ್ವ ಚಾಂಪಿಯನ್ ಹಾಗೂ ವಿಶ್ವ ನಂ.1 ಸಾಂಝರ್ ತಶ್ಕೆನ್‌ಬಾಯ್ ವಿರುದ್ಧ 5-0 ಅಂತರದಲ್ಲಿ ಗೆದ್ದು ಸೆಮಿಫೈನಲ್ ಪ್ರವೇಶಿಸಿದರು.



ಮಹಿಳೆಯರ 65 ಕೆಜಿ ವಿಭಾಗದಲ್ಲಿ ಅಂಕುಶಿತಾ ಬೋರೊ ಕಜಾಕಿಸ್ತಾನದ ಲೀರಾ ಯೆಸೆಂಕೆಲ್ಡಿ ವಿರುದ್ಧ 4-1 ಅಂತರದಲ್ಲಿ ಜಯ ಸಾಧಿಸಿ ಅಂತಿಮ ನಾಲ್ಕರಿಗೆ ಪ್ರವೇಶಿಸಿದರು. ಮುಂದಿನ ಸೆಮಿಫೈನಲ್‌ನಲ್ಲಿ ಅವರು ಚೈನೀಸ್ ತೈಪೆಯ ನ್ಗುಯೆನ್-ಚಿನ್ ಚೆನ್ ವಿರುದ್ಧ ಸೆಣಸಲಿದ್ದಾರೆ. ಪುರುಷರ ವಿಭಾಗದಲ್ಲಿ ನರೇಂದರ್ ಕೂಡ ಉತ್ತಮ ಆಟ ಮುಂದುವರಿಸಿ ಯುಎಇಯ ಒರ್ಖಾನ್ ಅಗಾಯೇವ್ ವಿರುದ್ಧ 5-0 ಅಂತರದಲ್ಲಿ ಗೆದ್ದು ಸೆಮಿಫೈನಲ್‌ಗೆ ಅರ್ಹತೆ ಪಡೆದರು. ಮುಂದಿನ ಪಂದ್ಯದಲ್ಲಿ ಅವರು ಚೀನಾದ ಬಾಯಿಕೆವ್ಜಿ ದನಾಬಯಿಕೆ ವಿರುದ್ಧ ಕಣಕ್ಕಿಳಿಯಲಿದ್ದಾರೆ.

ಪದಬಂಧ 5944

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1. ಮರದ ನಡುವೆ ಹೂವಿನ ಶರವಿದೆ (4)
3. ಸಿಟ್ಟಿನಿಂದ ಕೂಡಿದ ವದನ (4)
5. ಪಾರದರ್ಶಕ ಖನಿಜ ಶಿಲೆಯಿದು (3)
6. ಮಂದವಾಗಿ ಪ್ರಕಾಶಿಸು (3)
8. ಕಳಾಹೀನವಾಗುವುದು-ಬಣ್ಣಗೆಡು (3)
10. ಆಶ್ರಯ ಕೋರು (3)
11. ಕಲ ಕಡೆಯಲ್ಲಿರುವ ತುಂಡು ತಿರುಗಿದೆ (3)
15. ಲಕ್ಷ್ಮಿಯ ಒಡೆಯ ಈ ವಿಷ್ಣು (3)
16. ಒಂಬತ್ತು ಬಗೆಯ ಕಾಳುಕಡ್ಡಿಗಳು (4)
17. ಈತ ಸುಖವನ್ನು ಬಯಸುವವನು (4)

ಮೇಲಿನಿಂದ ಕೆಳಕ್ಕೆ
1. ಮುಂದೆ ಚಲಿಸುವವನು-ನಾಯಕ (4)
2. ರಣದ ನಡುವೆ ಅಡಗಿದ ಅಸ್ತ್ರ (3)
3. ಕರಿ ಕಡೆಯಲ್ಲಿಟ್ಟುಕೊಂಡು ಮಾರುವುದು (3)
4. ಆನೆ-ಕಪಿ ಸೇರಿ ಚರ್ಮರೋಗವಾಯ್ತು (4)
7. ಆಶ್ರಯ ಕೋರು (3)
9. ಕಣ ಕಡೆಯಲ್ಲಿ ತಿರುಗಿ ವ್ಯಾಪಾರಿಯಾದ (3)
10. ಇದು ಜೀವಿತ ಕಾಲಾವಧಿ (4)
12. ಆಯುಧಗಳನ್ನಿಡುವಂಥಹ ಕಟ್ಟಡ (4)
13. ಸಾಧಾರಣ-ವಿಶೇಷವಲ್ಲದ್ದು (3)
14. ಕುಚೋದ್ಯ ಎಲ್ಲಿ ತಲೆಕೆಳಗಾಗಿದೆ (3)

5943 ಉತ್ತರ

ಎಡದಿಂದ ಬಲಕ್ಕೆ:
2.ಮೋಹನಮಾಲೆ 5.ವಿರಹ 6.ಬಾಡಿಗೆ 7.ಮನೋಗತ 8.ರಾಗಿಬೀಸು 10.ಅವೇದನೆ 12.ಜಮಖಾನೆ 14.ಜಾಳಿಗೆ 15.ತಬಾಕ 17.ರಿಮಕದನ

ಮೇಲಿನಿಂದ ಕೆಳಕ್ಕೆ :
1.ಬಾವಿ 2.ಮೋಹನಾಂಗ 3.ಗಿರಿಬಾಲೆ 4.ಬೇಗೆ 7.ಆರಾಮ 9.ಸುಮ್ಮನೆ 11.ದನುಜಾರಿ 13.ಮನೆತನ 14.ಗೆಜ್ಜೆ 16.ಕತ್ತೆ

ಮೊದಲ ಹಾಡಿನಲ್ಲಿ ಮೋಡಿ ಮಾಡಿದ ಪಿಚ್ಚರ್







ಗೋಲ್ಡನ್‌ಸ್ಟಾರ್ ಗಣೇಶ್ ಅವರ ಪತ್ನಿ ಶಿಲ್ಪಾ ಗಣೇಶ್ ಈಗಾಗಲೇ ನಿರ್ಮಾಪಕಿಯಾಗಿ ಚಿತ್ರರಂಗದಲ್ಲಿ ಒಂದು ಹೆಜ್ಜೆ ಇಟ್ಟಿದ್ದಾರೆ, ಇದೀಗ ಅವರ ಗೋಲ್ಡನ್ ಮೂವೀಸ್ ಬ್ಯಾನರ್‌ನಲ್ಲಿ ಹೊಸ ಚಿತ್ರವೊಂದು ಹೊರಬರುತ್ತಿದೆ ಆ ಚಿತ್ರದ ಹೆಸರು ಪಿಚ್ಚರ್. ಸದಭಿರುಚಿ ಚಿತ್ರಗಳ ನಿರ್ಮಾಪಕಿಯಾದ ಶಿಲ್ಪಾ ಗಣೇಶ್ ಅವರು ನಿರ್ಮಿಸಿರುವ ಈ ಚಿತ್ರಕ್ಕೆ ಸಂದೀಪ ಬೆದ್ರ ಅವರು ಮೊದಲಬಾರಿಗೆ ಆಕ್ಷನ್ ಕಟ್ ಹೇಳಿದ್ದಾರೆ. ಅಲ್ಲದೆ ಯುವಪ್ರತಿಭೆ ನಿತ್ಯಪ್ರಕಾಶ್ ಬಂಟ್ವಾಳ ಅವರು ಈ ಚಿತ್ರದ ನಾಯಕನಾಗಿ ನಟಿಸಿದ್ದಾರೆ, ಪಿಚ್ಚರ್ ಕನ್ನಡ ಹಾಗೂ ತುಳು ಸೇರಿ ಎರಡು ಭಾಷೆಗಳಲ್ಲೂ ನಿರ್ಮಾಣವಾಗಿರುವ ಚಿತ್ರವಾಗಿದ್ದು, ಈ ಚಿತ್ರದ ಮೊದಲ ಹಾಡು ಇತ್ತೀಚೆಗೆ ಆನಂದ್ ಆಡಿಯೋ ಮೂಲಕ ಬಿಡುಗಡೆಯಾಗಿದೆ. ಕನ್ನಡದಲ್ಲಿ ಈ ಹಾಡನ್ನು ಚೇತನ್ ಕುಮಾರ್ ಅವರು ಬರೆದರೆ, ತುಳು ಭಾಷೆಯ ಹಾಡಗೆ ಸಾಹಿತ್ಯವನ್ನು ಅನೂಪ್ ಭಂಡಾರಿ ಬರೆದಿದ್ದಾರೆ. ಬಿಡುಗಡೆಯಾದ ಕ್ಷಣದಿಂದಲೇ ಈ ಹಾಡು ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದೆ. ಸ್ಯಾಮುಯೆಲ್ ಅಭಿ ಅವರು ಈ ಹಾಡಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಈ ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗಳಿದ್ದು, ಈಗಷ್ಟೇ ಮೊದಲ ಹಾಡು ಬಿಡುಗಡೆಯಾಗಿದೆ. ಉಳಿದ ಹಾಡುಗಳನ್ನು ಸದ್ಯದಲ್ಲೇ ಬಿಡುಗಡೆ ಮಾಡಲು ಚಿತ್ರತಂಡ ಪ್ಲಾನ್ ಮಾಡಿಕೊಂಡಿದೆ,

ಕೌಟುಂಬಿಕ, ಕಾಮಿಡಿ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಮನರಂಜನೆಯೇ ಪ್ರಧಾನವಾಗಿದೆ, ಕಳೆದ ಹದಿನೈದು ವರ್ಷಗಳಿಂದ ಸಹಾಯಕ ಹಾಗೂ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಸಂದೀಪ್ ಬೆದ್ರ ಅವರು ಈ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗಿದ್ದಾರೆ. ಈಗಾಗಲೇ ಮಂಗಳೂರು, ಬಂಟ್ವಾಳ ಅಲ್ಲದೆ ಉತ್ತರ ಭಾರತದ ಕಾಶ್ಮೀರ ಸೇರಿದಂತೆ ಮುಂತಾದ ಕಡೆಗಳಲ್ಲಿ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ, ಸದ್ಯ ಪಿಚ್ಚರ್ ಚಿತ್ರ ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಬ್ಯುಸಿಯಾಗಿದೆ. ನಿರ್ದೇಶಕರೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿರುವ ಈ ಚಿತ್ರಕ್ಕೆ ಸಂತೋಷ್ ರೈ ಪಾತಾಜೆ ಹಾಗೂ ಚಂದ್ರಶೇಖರ್ ಕೆ.ಎಸ್. ಅವರ ಛಾಯಾಗ್ರಹಣವಿದೆ. ರಾಜು ಆರ್ಯನ್ ಅವರ ಸಂಕಲನ, ಧನಂಜಯ್.ಬಿ, ಶ್ರೀರಾಜು ಅವರ ನೃತ್ಯ ನಿರ್ದೇಶನ, ರಾಧೇಶ್ - ಸಂತೋಷ್ ಪೂಜಾರಿ ಅವರ ಕಲಾನಿರ್ದೇಶನ ಹಾಗೂ ಥ್ರಿಲ್ಲರ್ ಮಂಜು ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದ್ದು, ಮೋಹನ್ ಭಟ್ಕಳ್ ಅವರು ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ.

ನಿತ್ಯಪ್ರಕಾಶ್ ಬಂಟ್ವಾಳ ಪಿಚ್ಚರ್ ಚಿತ್ರದ ನಾಯಕನಾಗಿದ್ದು, ನಾಯಕಿಯಾಗಿ ಅಮೃತ ಸುದು ಅವರು ಅಭಿನಯಿಸಿದ್ದಾರೆ. ದೇವದಾಸ್ ಕಾಪಿಕಾಡ್, ನವೀನ್ ಡಿ.ಪಡೀಲ್, ಅರವಿಂದ್ ಬೋಳಾರ್, ಭೋಜರಾಜ್ ವಾಮಂಜೂರ್, ಸಾಯಿಕೃಷ್ಣ, ವಜ್ರಧೀರ್ ಜೈನ್, ಸದಾಶಿವ ಅಮೀನ್, ಪ್ರಸನ್ನ ಶೆಟ್ಟಿ ಬೈಲೂರ್, ಸಂದೀಪ್ ಶೆಟ್ಟಿ ಮಾಣಿ, ಉಮೇಶ್ ಪೂಜಾರ್, ಜಯಶೀಲ ಮರೋಳಿ, ರೂಪ ವರ್ಕಾಡಿ ಮುಂತಾದವರು ಈ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

೧೪

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಮಾರ್ನಿಂಗ್ ಶೋ

ಭಾನುವಾರ 5 ಏಪ್ರಿಲ್ 2026,
ಬೆಂಗಳೂರು

- ಚಿತ್ರಕ್ಕೆ ಶುಭ ಹಾರೈಸಿದ ರಶ್ಮಿಕಾ ಮಂದಣ್ಣ
- ಸಿಂಪಲ್ ಸುನಿ ನಿರ್ದೇಶನದ ಈ ಚಿತ್ರ ಜೂನ್ 26ಕ್ಕೆ ಬಿಡುಗಡೆ

ಯಯಾತಿ ಯಯಾತಿ ಹಾಡಲ್ಲಿ ಮೋಡ ಕವಿದ ವಾತಾವರಣ



ಗತವೈಭವ ಚಿತ್ರದ ನಂತರ ನಿರ್ದೇಶಕ ಸಿಂಪಲ್ ಸುನಿ ಅವರು ಇದೀಗ ಸೈಂಟಿಫಿಕ್ ಫಿಕ್ಷನ್ ಲವ್ ಸ್ಟೋರಿಯೊಂದನ್ನು ತೆರೆಗೆ ತರಲು ಅಣಿಯಾಗಿದ್ದಾರೆ. ಈ ಮೂಲಕ ತಮ್ಮ ಶಿಷ್ಯನಿಗಾಗಿ ಮೋಡ ಕವಿದ ವಾತಾವರಣವನ್ನೇ ಸೃಷ್ಟಿಸಿದ್ದಾರೆ. ಅರ್ಥಾತ್ ಸುನಿ ಅವರು ತಮ್ಮ ಗರಡಿಯಲ್ಲಿ ಪಳಗಿರುವ ಯುವ ಪ್ರತಿಭೆ ಶೀಲಮ್ ಎಂ. ಸ್ವಾಮಿ ಅವರಿಗಾಗಿ ಹೊಸ ಚಿತ್ರವೊಂದನ್ನು ನಿರ್ದೇಶನ ಮಾಡಿದ್ದಾರೆ. ಅದುವೇ ಮೋಡ ಕವಿದ ವಾತಾವರಣ. ತನ್ನ ಶೀರ್ಷಿಕೆಯಲ್ಲೇ ಹೊಸ ಕುತೂಹಲ ಹುಟ್ಟು ಹಾಕಿರುವ ಈ ಚಿತ್ರದ ಬಿಡುಗಡೆ ದಿನಾಂಕ ಘೋಷಣೆಯಾಗಿದ್ದು ಜೂನ್ 26ರಂದು ಮೋಡ ಕವಿದ ವಾತಾವರಣ ರಾಜ್ಯಾದ್ಯಂತ ತೆರೆಗೆ ಬರ್ತಿದೆ. ಈಗಾಗಲೇ ಈ ಚಿತ್ರದ ಒಂದು ಹಾಡು ಬಿಡುಗಡೆಯಾಗಿ ಸಖತ್ ವೈರಲ್ ಆಗಿದೆ, ಇದೀಗ ಸುನಿ ಅವರು ಮತ್ತೊಂದು ಹಾಡಿನ ಲಿರಿಕಲ್ ವೀಡಿಯೋವನ್ನು ಬಿಡುಗಡೆ ಮಾಡಿದ್ದಾರೆ, ಯಯಾತಿ ಯಯಾತಿ ನುಡಿಯಲೇ ನಿನ್ನ ಪರವಾಗಿ ಎಂದು ಪ್ರಾರಂಭವಾಗುವ ಈ ಹಾಡಿಗೆ ಸಿಂಪಲ್ ಸುನಿ ಅವರೇ ಸಾಹಿತ್ಯ ಬರೆದಿದ್ದಾರೆ, ಸಂಗೀತಾ ರವೀಂದ್ರನಾಥ್ ಹಾಗೂ ಚೇತನ್ ನಾಯಕ್ ಈ ಹಾಡಿಗೆ ದನಿಯಾಗಿದ್ದಾರೆ, ಸಂತೋಷ್ ರೈ ಪಾತಾಜೆ ಅವರ ಛಾಯಾಗ್ರಹಣ, ಮಧು ಅವರ ಕೊರಿಯೋಗ್ರಫಿ ಹಾಗೂ ಜೂಡಾ ಸ್ಯಾಂಡಿ ಅವರ ಸಂಗೀತ ಸಂಯೋಜನೆ ಈ ಹಾಡಿಗಿದೆ,





ಈ ಹಿಂದೆ ಹಲವು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದ ಶೀಲಮ್, ಮೋಡ ಕವಿದ ವಾತಾವರಣ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕನಾಗಿ ತನ್ನ ಅದೃಷ್ಟ ಪರೀಕ್ಷೆಗೆ ಇಳಿಯುತ್ತಿದ್ದಾರೆ. ಸೈಂಟಿಫಿಕ್ ಫಿಕ್ಷನ್ ಲವ್ ಸ್ಟೋರಿ ಹೊಂದಿರುವ ಮೋಡ ಕವಿದ ವಾತಾವರಣ ಚಿತ್ರದಲ್ಲಿ ನಾಯಕ ಶೀಲಮ್ ಅವರ ಜೋಡಿಯಾಗಿ ಇಬ್ಬರು ಬೆಡಗಿಯರು ಅಭಿನಯಿಸಿದ್ದಾರೆ, ಸಾತ್ವಿಕಾ ಹಾಗೂ ಮೋಕ್ಷಾ ಕುಶಾಲ್ ಈ ಚಿತ್ರದ ಇಬ್ಬರು ನಾಯಕಿಯರ ಪಾತ್ರ ನಿರ್ವಹಿಸಿದ್ದಾರೆ.

ಈ ಹಿಂದೆ 'ಒಂದು ಸರಳ ಪ್ರೇಮಕಥೆ' ಚಿತ್ರವನ್ನು ನಿರ್ಮಿಸಿದ್ದ ರಾಮ್ ಮೂವೀಸ್‌ನ ಮೈಸೂರು ರಮೇಶ್, ಶ್ರೀರಂಗರಾಜು, ಲೋಕೇಶ್ ಬೆಳವಾಡಿ ಹಾಗೂ ಗೋವಾ ರಮೇಶ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಮೋಡ ಕವಿದ ವಾತಾವರಣ ಸಿನಿಮಾಗೆ ಸಂತೋಷ್ ರೈ ಪಾತಾಜೆ ಅವರು ಕ್ಯಾಮೆರಾ ಹಿಡಿದಿದ್ದು, ಜೂಡಾ ಸ್ಯಾಂಡಿ ಅವರ ಸಂಗೀತ ನಿರ್ದೇಶನ ಹಾಗೂ ಆದಿತ್ಯ ಕಶ್ಯಪ್ ಅವರ ಸಂಕಲನವಿದೆ.

ಸಾಂಗ್ ಮೆಚ್ಚಿದ ರಶ್ಮಿಕಾ ಮಂದಣ್ಣ

ನಟಿ ರಶ್ಮಿಕಾ ಮಂದಣ್ಣ ಸದ್ಯ ಕನ್ನಡ ಚಿತ್ರರಂಗದಿಂದ ದೂರ ಉಳಿದುಕೊಂಡಿದ್ದಾರೆ. ಆದರೆ ಈಗ ಅವರು ಸಿಂಪಲ್ ಸುನಿ ಅವರ ನಿರ್ದೇಶನದ ಮೋಡ ಕವಿದ ವಾತಾವರಣ ಚಿತ್ರಕ್ಕೆ ಸೋಶಿಯಲ್ ಮೀಡಿಯಾದಲ್ಲಿ ವಿಶ್ ಮಾಡಿದ್ದಾರೆ. ಈ ಹಿಂದೆ ಸಿಂಪಲ್ ಸುನಿ ನಿರ್ದೇಶನದ ಚಮಕ್ ಸಿನಿಮಾದಲ್ಲಿ ರಶ್ಮಿಕಾ ಮಂದಣ್ಣ ಅವರು ನಟಿಸಿದ್ದರು. ಹಾಗಾಗಿ ಅವರಿಬ್ಬರ ನಡುವೆ ಉತ್ತಮ ಬಾಂಧವ್ಯವಿದೆ. ಈಗ ಸುನಿ ನಿರ್ದೇಶನದ ಮೋಡ ಕವಿದ ವಾತಾವರಣ ಚಿತ್ರದ ಹೊಸ ಹಾಡಿನ ಲಿರಿಕಲ್ ವಿಡಿಯೋ ಬಿಡುಗಡೆ ಆಗಿದ್ದು ಅದನ್ನು ರಶ್ಮಿಕಾ ಮಂದಣ್ಣ ಅವರು ಶೇರ್ ಮಾಡಿದ್ದಾರೆ. ಸುನಿ ಅವರ ಎಕ್ಸ್ ಖಾತೆಯ ಪೋಸ್ಟ್ ಹಂಚಿಕೊಂಡಿರುವ ರಶ್ಮಿಕಾ ಮಂದಣ್ಣ, ಸುನಿ ಸರ್, ನಿಮಗೆ ಮತ್ತು ನಿಮ್ಮ ಚಿತ್ರತಂಡಕ್ಕೆ ಶುಭ ಹಾರೈಸುತ್ತೇನೆ ಎಂದು ಬರೆದುಕೊಂಡಿದ್ದಾರೆ. ತುಂಬು ಹೃದಯದ ಧನ್ಯವಾದಗಳು. ಸದಾ ಖುಷಿಯಾಗಿರಿ ಎಂದು ಸಿಂಪಲ್ ಸುನಿ ಪ್ರತಿಕ್ರಿಯೆ ನೀಡಿದ್ದಾರೆ. ಕನ್ನಡ ಚಿತ್ರವೊಂದಕ್ಕೆ ರಶ್ಮಿಕಾ ಮಂದಣ್ಣ ವಿಶ್ ಮಾಡಿದ್ದು ನೋಡಿ ಹಲವರು ಅಚ್ಚರಿಪಟ್ಟಿದ್ದಾರೆ.



ಬಡವ ರ‍್ಯಾಸ್ಕಲ್ ನಂತರ ಡಾಲಿ ಮತ್ತವರ ಗೆಳೆಯರ ಹೊಸ ಚಿತ್ರ

ಮದರ್ ಪ್ರಾಮಿಸ್ ಮಾಡಿದ ಡಾಲಿ ಧನಂಜಯ



ಇತ್ತೀಚೆಗಷ್ಟೇ ಹೆಗ್ಗಣ ಮುದ್ದು ಎಂಬ ನೂತನ ಚಿತ್ರವನ್ನು ಪ್ರಕಟಿಸಿದ್ದ ನಟ, ನಿರ್ಮಾಪಕ ಡಾಲಿ ಧನಂಜಯ್ ಅವರು ಇದೀಗ ಮತ್ತೊಂದು ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ, ಈ ಮೂಲಕ ತಾವೇ ನಾಯಕನಾಗಿ ನಟಿಸುತ್ತಿರುವ ಹೊಸ ಸಿನಿಮಾ ಘೋಷಣೆ ಮಾಡಿದ್ದಾರೆ. ಟೈಟಲ್ ಗೆಸ್ ಮಾಡಿ ಅಂತ ಕಳೆದ ಸಿನಿಮಾ ಪ್ರೇಮಿಗಳ ತಲೆಗೆ ಹುಳ ಬಿಟ್ಟಿದ್ದ ಡಾಲಿ ತಂಡ ಇದೀಗ ಚಿತ್ರದ ನೂತನ ಟೈಟಲ್‌ನ್ನು ಸಹ ರಿವೀಲ್ ಮಾಡಿದ್ದಾರೆ.

ಡಾಲಿ ಧನಂಜಯ ಹಾಗೂ ಗೆಳೆಯರು ಸೇರಿ ನಿರ್ಮಾಣ ಮಾಡಿರುವ ಹೊಸ ಚಿತ್ರದ ಹೆಸರು ಮದರ್ ಪ್ರಾಮಿಸ್. ಡಾಲಿ ತಮ್ಮದೇ ಸ್ನೇಹಿತರ ಬಳಗವನ್ನು ಸೇರಿಸಿಕೊಂಡು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ, ಡಾಲಿ ಅವರ ಗೆಳೆಯ ಪೂರ್ಣ ಮೈಸೂರು ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಡಾಲಿ ಪಿಕ್ಚರ್ಸ್ ಸಹಯೋಗದೊಂದಿಗೆ ಅವರ ಮತ್ತೊಬ್ಬ ಗೆಳೆಯ ಹರ್ಷ ಈ ಸಿನಿಮಾಗೆ ಬಂಡವಾಳ ಹೂಡಿದ್ದಾರೆ.

ಕೆಲ ದಿನಗಳ ಹಿಂದಷ್ಟೆ ಈ ಸಿನಿಮಾದ ಇಂಟ್ರೆಸ್ಟಿಂಗ್ ಪೋಸ್ಟರ್ ಒಂದನ್ನು ಬಿಡುಗಡೆ ಮಾಡಿದ್ದರು. ಆ ಪೋಸ್ಟರ‍್ನಲ್ಲಿ ಯಾವ ಕಲಾವಿದರ ಮುಖವನ್ನೂ ಸಹ ತೋರಿಸಿರಲಿಲ್ಲ, ಬದಲಿಗೆ ಆ ಕಲಾವಿದರೆಲ್ಲ ಕ್ಯಾಮೆರಾಗೆ ಹಿಮ್ಮುಖವಾಗಿ ನಿಂತಿದ್ದರು. ಅಲ್ಲದೆ ಚಿತ್ರದ ಹೆಸರನ್ನು ಸಹ ಬೇರೆ ಬೇರೆ ಭಾಷೆಗಳಲ್ಲಿ ನೀಡಲಾಗಿತ್ತು. ಜೊತೆಗೆ ಸಿನಿಮಾದ ಹೆಸರನ್ನು ಗೆಸ್ ಮಾಡಿ ಎಂಬ ಸವಾಲನ್ನು ಸಹ ಚಿತ್ರತಂಡ ಪ್ರೇಕ್ಷಕರಿಗೆ ನೀಡಿತ್ತು. ಈಗ ಸಿನಿಮಾದಲ್ಲಿ ಅಭಿನಯ ಮಾಡಿರೋ ಪ್ರಮುಖ ಪಾತ್ರಧಾರಿಗಳ ಮುಖಗಳನ್ನು ರಿವೀಲ್ ಮಾಡುವುದರ ಜೊತೆಗೆ ಚಿತ್ರದ ಟೈಟಲ್‌ನ್ನು ಕೂಡ ರಿವೀಲ್ ಮಾಡಿದ್ದಾರೆ.

ಮದರ್ ಪ್ರಾಮಿಸ್ ಎನ್ನುವ ಎಮೋಷನಲ್ ಟೈಟಲ್ ಇಟ್ಟೊಂಡು ಎಮೋಷನಲ್, ಕಾಮಿಡಿ ಹಾಗೂ ಥ್ರಿಲ್ ಇರೋ ಕಥೆಯನ್ನು ತೆರೆಮೇಲೆ ತರ್ತಿದ್ದಾರೆ ನಿರ್ದೇಶಕ ಪೂರ್ಣ. ಈ ಚಿತ್ರದಲ್ಲಿ ಡಾಲಿ ಧನಂಜಯ ಸೇರಿದಂತೆ ನಟ ನಾಗಭೂಷಣ್, ಹಿರಿಯ ನಟಿ ವಿನಯಪ್ರಸಾದ್, ಗೀತಾ, ಗುರುದತ್ ಸೇರಿದಂತೆ ಅನೇಕ ಕಲಾವಿದರು ಅಭಿನಯಿಸಿದ್ದಾರೆ. ಫಸ್ಟ್‌ಲುಕ್ ಪೋಸ್ಟರ್ ನಲ್ಲಿಯೇ ಬರೋಬ್ಬರಿ 36 ಮುಖ್ಯ ಕಲಾವಿದರನ್ನ ಪರಿಚಯಿಸಿರೋ ಚಿತ್ರತಂಡ ಒಂದು ಉತ್ತಮ ಕಂಟೆಂಟ್ ಜೊತೆ ಪ್ರೇಕ್ಷಕರ ಮುಂದೆ ಬರ್ತಿದ್ದಾರೆ.





ಇನ್ನು ಈ ಚಿತ್ರದ ಮೂಲಕ ಡಾಲಿ ಧನಂಜಯ ಅವರ ಸ್ನೇಹಿತ ಹರ್ಷ ಮುರುಂಡಿ ಶಿವಲಿಂಗಪ್ಪ ಅವರು ನಿರ್ಮಾಪಕರಾಗಿ ಚಿತ್ರರಂಗಕ್ಕೆ ಕಾಲಿಡುತ್ತಿದ್ದಾರೆ. ಅಲ್ಲದೆ ಈ ಚಿತ್ರದ ಕಥೆ ಚಿತ್ರಕಥೆ ಬರೆದು ನಿರ್ದೇಶನದ ಜವಾಬ್ದಾರಿಯನ್ನು ಪೂರ್ಣ ಮೈಸೂರು ಅವರು ವಹಿಸಿಕೊಂಡಿದ್ದರೆ, ಡೇರ್‌ಡೆವಿಲ್ ಮುಸ್ತಫಾ ಚಿತ್ರದ ನಿರ್ದೇಶಕ ಶಶಾಂಕ್ ಅವರು ಕ್ರಿಯೇಟಿವ್ ಡೈರೆಕ್ಟರ್ ಆಗಿ ಕೆಲಸ ಮಾಡಿದ್ದಾರೆ. ರಾಹುಲ್‌ರಾಯ್ ಅವರ ಕ್ಯಾಮೆರಾ ವರ್ಕ್, ನವನೀತ್ ಶ್ಯಾಮ್ ಅವರ ಸಂಗೀತ ನಿರ್ದೇಶನ ಮದರ್ ಪ್ರಾಮಿಸ್ ಚಿತ್ರಕ್ಕಿದೆ.

ಬೆಟ್ಟಿಂಗ್ ಡ್ರಗ್ಸ್ ಸುತ್ತ ಲೂಪ್ ಟ್ರೈಲರ್



ಇತ್ತೀಚಿನ ದಿನಗಳಲ್ಲಿ ಬೆಟ್ಟಿಂಗ್, ಆನ್‌ಲೈನ್ ಗೇಮ್, ಡ್ರಗ್ಸ್‌ನಂತ ಗೀಳಿಗೆ ಬಲಿಯಾಗಿ ಅನೇಕ ಕುಟುಂಬಗಳೇ ಸರ್ವನಾಶವಾಗಿವೆ, ಆದರೂ ಅದರ ಆಕರ್ಷಣೆಯಿಂದ ನಮ್ಮ ಯುವಜನಾಂಗ ಹೊರಬರಲು ಸಾಧ್ಯವಾಗಿಲ್ಲ, ಇಂಥದ್ದೇ ಆಟದ ಚಟಕ್ಕೆ ಬಲಿಯಾದವರ ಕಥೆಯನ್ನು ಲೂಪ್ ಎಂಬ ಚಲನಚಿತ್ರದ ಮೂಲಕ ಹೇಳಲು ಹೊರಟಿದ್ದಾರೆ ನಿರ್ದೇಶಕ ಯಶವಂತ್, ನಿರ್ಮಾಪಕರ ಪುತ್ರ ಶಶಿಕಿರಣ್ ಚಿತ್ರದ ನಾಯಕನಾಗಿ ಕಾಣಿಸಿಕೊಂಡಿದ್ದಾರೆ, ಶೋಭಿತಾ, ಮಂಜುಳಾ ಅರಸ್ ಉಳಿದ ಪಾತ್ರಗಳಲ್ಲಿ ನಟಿಸಿರುವ ಲೂಪ್ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು, ಎಸ್. ಕೆ.ಯಲ್ಲಪ್ಪ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ, ಉಮೇಶ್ ಕೆ.ಎನ್.,ಸಹ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ, ಯಶವಂತ್ ಈ ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಜೀವನ್ ಗೌಡ ಅವರ ಛಾಯಾಗ್ರಹಣ, ಸಂತೋಷ್ ಜಾಶ್ವಾ ಅವರ ಸಂಗೀತ ಈ ಚಿತ್ರಕ್ಕಿದೆ,

ನಟ ಬಿಗ್‌ಬಾಸ್ ಪ್ರಥಮ್ ಲೂಪ್ ಚಿತ್ರದ ಟ್ರೈಲರ್ ಬಿಡುಗಡೆಗೊಳಿಸಿ ಮಾತನಾಡುತ್ತ ನಾನಿಲ್ಲಿ ಬರಲು ಕಾರಣ ಉಮೇಶ್, ಈಗಿನ ಜನರೇಶನ್ ಹಾಳಾಗ್ತಿರೋದೇ ಬೆಟ್ಟಿಂಗ್, ಡ್ರಗ್ಸ್‌ನಂಥ ಕೆಟ್ಟ ಹವ್ಯಾಸಗಳಿಂದ, ಒಳ್ಳೆಯ ಕಂಟೆಂಟ್ ಇಟ್ಟುಕೊಂಡು ಈ ಸಿನಿಮಾ ಮಾಡಿದ್ದಾರೆ, ಅಲ್ಲದೆ ಅದರಿಂದಾಗುವ ಕಷ್ಟ, ನೋವು, ದುಷ್ಪರಿಣಾಮಗಳನ್ನೂ ಸಹ ಚಿತ್ರದಲ್ಲಿ ತೋರಿಸಿದ್ದಾರೆ, ಒಳ್ಳೇದಾಗಲಿ ಎಂದು ಶುಭ ಹಾರೈಸಿದರು.

ನಾಯಕ ಶಶಿಕಿರಣ್ ಮಾತನಾಡಿ ಒಂದು ಸೆಟ್‌ನಲ್ಲಿ ನನಗೆ ಯಶವಂತ್ ಪರಿಚಯವಾಗಿ ಸ್ನೇಹಿತರಾದರು, ಒಳ್ಳೇ ಸ್ಕ್ರಿಪ್ಟ್ ಇದ ಮಾಡೋಣ ಎಂದರು, ಈ ಚಿತ್ರ ಮಾಡುವಾಗ ಕಷ್ಟ ಸುಖ ಎಲ್ಲವನ್ನೂ ನೋಡಿದೆವು, ಹೊಸಬರು ತಮ್ಮ ಸಿನಿಮಾನ ತೆರೆಮೇಲೆ ತರೋದೇ ಸಕ್ಸಸ್ ಅಂತ ಹೇಳುತ್ತೇನೆ, ಒಳ್ಳೆಯ ಕಂಟೆಂಟ್ ಇದ್ರೆ ಸಿನಿಮಾ ನೋಡಿ ಪ್ರೋತ್ಸಾಹಿಸಿ ಎಂದು ಹೇಳಿದರು,

ನಾಯಕಿ ಶೋಭಿತಾ ಮಾತನಾಡಿ ಗೇಮ್ ಅಂತ ಹೋದಾಗ ಮುಂದೆ ಅದೇ ಅಭ್ಯಾಸವಾಗಿಬಿಡುತ್ತದೆ, ಹೋಗ್ತಾ ಹೋಗ್ತಾ ಅದರಲ್ಲಿ ನಾವು ಸಿಕ್ಕಿ ಹಾಕಿಕೊಳ್ತೇವೆ. ಅದೇ ಅಂಶ ನಮ್ಮ ಚಿತ್ರದಲ್ಲಿದೆ. ನಾಯಕನ ಕಷ್ಟದ ಸಮಯದಲ್ಲೂ ಆತನಿಗೆ ಬೆಂಬಲವಾಗಿ ನಿಲ್ಲುವ ಹುಡುಗಿಯ ಪಾತ್ರ ನನ್ನದು ಎಂದು ಹೇಳಿದರು, ನಿರ್ಮಾಪಕ ಯಲ್ಲಪ್ಪ ಮಾತನಾಡಿ ನನ್ನ ಮಗ ಚಿಕ್ಕವಯಸಿನಿಂದಲೂ ಡಾನ್ಸರ್ ಆಗಿದ್ದಾನೆ, ತಾನೊಬ್ಬ ನಟನಾಗಬೇಕೆಂಬ ಆಸೆ ಇಟ್ಟುಕೊಂಡಿದ್ದ, ಆತನಿಗೋಸ್ಕರ ನಾನೀ ಚಿತ್ರ ಮಾಡಿದ್ದೇನೆ ಎಂದು ಹೇಳಿದರು,

ನಟ ಅಪ್ಪುರಾಜ್ ಮಾತನಾಡಿ ಉತ್ತರ ಕರ್ನಾಟಕದ ಜನ ಗೋವಾಗೆ ಹೋಗಿ ತಮ್ಮ ಲೈಫ್ ಹಾಳುಮಾಡಿಕೊಳ್ತಾರೆ, ಅದನ್ನೇ ಚಿತ್ರದಲ್ಲಿ ಹೇಳಿದ್ದಾರೆ, ನನಗೂ ಒಳ್ಳೆಯ ಪಾತ್ರ ಕೊಟ್ಟಿದ್ದಾರೆ ಎಂದು ಹೇಳಿದರು. ನಟಿ ಮಂಜುಳಾ ಅರಸ್ ಮಾತನಾಡಿ ಚಿತ್ರದಲ್ಲಿ ನಾಯಕನ ತಾಯಿಯ ಪಾತ್ರ ಮಾಡಿದ್ದೇನೆ, ನಾನು ಕೂಡ ಒಂದು ಚಿತ್ರ ನಿರ್ಮಿಸಿದ್ದೆ, ಬೆಂಗಳೂರು, ಬಿಡದಿಯಲ್ಲಿ ಚಿತ್ರದ ಶೂಟಿಂಗ್ ಮಾಡಲಾಗಿದೆ ಎಂದು ಹೇಳಿದರು,

ಲವ್ ಮತ್ತು ಸಸ್ಪೆನ್ಸ್‌ನಂಥ ಅಂಶಗಳನ್ನ ಹೊಂದಿರೋ ಲೂಪ್ ಆಟದ ಸುತ್ತ ನಡೆಯೋ ಕಥೆ ಇದಾಗಿದ್ದು, ಕುತೂಹಲಕಾರಿ ಕ್ಲೈಮ್ಯಾಕ್ಸ್ ಒಳಗೊಂಡಿದೆ. ಸ್ಟಾಪ್ ಬೆಟ್ಟಿಂಗ್, ನೋ ಡ್ರಗ್ಸ್ ಎನ್ನುವ ಸಂದೇಶ ಲೂಪ್ ಸಿನಿಮಾದಲ್ಲಿದೆ. ಚಿತ್ರದ ನಾಯಕನಾಗಿ ಶಶಿಕಿರಣ್, ನಾಯಕಿಯಾಗಿ ಶೋಭಿತ ನಟಿಸಿದ್ದು, ಮಿಮಿಕ್ರಿ ಗೋಪಿ, ಅಭಿ ಸಾಮ್ರಾಟ್, ಗಣೇಶ್, ಜೀವನ್‌ಗೌಡ ಉಳಿದ ಪಾತ್ರಗಳಲ್ಲಿ ನಟಿಸಿದ್ದಾರೆ. ಜೀವನ್‌ಗೌಡ ಅವರ ಸಿನಿಮಾಟೋಗ್ರಫಿ, ಸಂತೋಷ್ ಜೋಶ್ವ ಅವರ ಸಂಗೀತ ಮತ್ತು ಅನಿಲ್ ಅಚಾರ್ ಅವರ ಸಂಕಲನ ಲೂಪ್ ಚಿತ್ರಕ್ಕಿದೆ, ಸದ್ಯದಲ್ಲೇ ಈ ಚಿತ್ರದ ರಿಲೀಸ್ ದಿನಾಂಕ ಘೋಷಣೆಯಾಗಲಿದೆ,

ಪ್ರೇಮಿಯ ಹುಡುಕಾಟದಲ್ಲಿ ಸಿಕ್ಕವರು..



ಚಿತ್ರ ವಿಮರ್ಶೆ

▸ ಸತ್ಯಮೂರ್ತಿ

ನಾಯಕನಿಗೆ ಬಾಲ್ಯದಲ್ಲಿ ಯಾವುದೋ ಒಂದು ಕಾರಣಕ್ಕೆ ಮದುವೆ ನಡೆದು ಹೋಗಿರುತ್ತದೆ. ಮುಂದೆ ನಾಯಕ ಆಕೆಯನ್ನು ಹುಡುಕಿಕೊಂಡು ಹೋಗುತ್ತಾನೆ. ಇಂಥ ಸಾಕಷ್ಟು ಕಥೆಗಳು ತೆರೆಮೇಲೆ ಬಂದುಹೋಗಿವೆ. ಈ ವಾರ ತೆರೆಕಂಡಿರುವ ಪ್ರೇಮಿ ಕೂಡ ಅಂಥದ್ದೇ ಕಾನ್ಸೆಪ್ಟ್ ಹೊಂದಿದ್ದರೂ ನಿರ್ದೇಶಕರು ಅದನ್ನು ಕುತೂಹಲಕಾರಿ ತಿರುವುಗಳ ಮೂಲಕ ನಿರೂಪಿಸಿಕೊಂಡು ಹೋಗಿರುವ ಶೈಲಿ ಕನ್ನಡಕ್ಕೆ ಹೊಸದಾಗಿದೆ, ನಿರ್ದೇಶಕ ಪ್ರದೀಪ್ ವರ್ಮ ಇಡೀ ಚಿತ್ರವನ್ನು ಎಲ್ಲೂ ಬೋರಾಗದಂತೆ ನವಿರಾದ ಶೈಲಿಯಲ್ಲಿ ತೆಗೆದುಕೊಂಡು ಹೋಗಿದ್ದಾರೆ.

ಪೋಷಕರನ್ನು ಕಳೆದುಕೊಂಡು ಅನಾಥನಾದ ಪ್ರೇಮ್‌ಕುಮಾರ್(ಅದ್ವಿಕ್) ಸದಾ ಜೀವನದಲ್ಲಿ ಏನೋ ಮಿಸ್ಸಾದವನಂತೆ ಪರಿತಪಿಸುತ್ತಿರುತ್ತಾನೆ, ಬೆಂಗಳೂರಿನಲ್ಲಿ ಬದುಕು ಕಟ್ಟಿಕೊಂಡಿರುವ ಆತನ ಗೆಳತಿ ಟೀನಾ(ಶೋಭಿತಾ)ಗೆ ಪ್ರೇಮ್ ಮೇಲೆ ಪ್ರೀತಿ. ಒಮ್ಮೆ ಆಕೆ ತನ್ನ ಪ್ರೀತಿಯನ್ನು ನಿವೇದನೆ ಮಾಡುತ್ತಿದ್ದಂತೆ ನನಗೆ ಬಾಲ್ಯದಲ್ಲೇ ವಿವಾಹವಾಗಿದೆ ಎಂಬ ವಿಚಾರ ತಿಳಿಸುತ್ತಾನೆ. ಇದರಿಂದ ಟೀನಾ ಮುನಿಸಿಕೊಳ್ಳುತ್ತಾಳೆ. ಈ ನಡುವೆ ತನ್ನ ಊರಿಗೆ ಹೋಗುವ ಪ್ರೇಮ್‌ಗೆ ಬಾಲ್ಯದ ಗೆಳತಿ ಮಧುಮತಿ (ಸಾತ್ವಿಕ) ಆಕೆಯ ಪುತ್ರಿ ಪುಟ್ಟ (ದ್ವಿತ.ಕೆ.ಗೌಡ) ಸಿಗುತ್ತಾರೆ. ಹೀಗೇ ಒಂದಷ್ಟು ಘಟನೆಗಳು ನಡೆಯುತ್ತಾ ಅಲ್ಲಿ ನಿಗೂಢ ಸತ್ಯಗಳು ಹೊರಬರುತ್ತಾ ಹೋದಂತೆ ಪ್ರೇಮ್‌ಗೆ ತಾನು ಮದುವೆಯಾದ ಹುಡುಗಿ ಯಾರೆಂಬುದು ತಿಳಿಯುತ್ತದೆ. ಮುಂದೆ ಎಲ್ಲವೂ ಸರಿಹೋಯ್ತು ಎನ್ನುವಷ್ಟರಲ್ಲಿಯೇ ಚಿತ್ರಕಥೆ ಬೇರೆಯದೇ ತಿರುವು ಪಡೆಯುತ್ತದೆ. ಪ್ರೇಮ್‌ಗೆ ಆತನ ಪ್ರೀತಿ ಸಿಗುತ್ತಾ ಇಲ್ವಾ ಎನ್ನುವುದೇ ಪ್ರೇಮಿ ಚಿತ್ರದ ಕ್ಲೈಮ್ಯಾಕ್ಸ್. ಇಡೀ ಚಿತ್ರವನ್ನು ನಿರ್ದೇಶಕ ಪ್ರದೀಪ್ ವರ್ಮ ಕುತೂಹಲಕಾರಿ ಕಥೆಯೊಂದಿಗೆ ಎಳೆ ಎಳೆಯಾಗಿ ತೆರೆದಿಟ್ಟಿದ್ದಾರೆ.

ನಾಯಕನ ತಾಯಿ ಅಕ್ಕ ಮಹಾದೇವಿ ಅವರು ಬರೆದ ನೈಜ ಕಥೆಗೆ ನಿರ್ದೇಶಕ ಪ್ರದೀಪ್ ವರ್ಮಾ ಜೀವಕಳೆ ತುಂಬಿದ್ದಾರೆ. ನಾಯಕ ಪ್ರೇಮ್ ಪಾತ್ರಕ್ಕೆ ಯುವ ನಟ ಅದ್ವಿಕ್ ಸಿದ್ದಲಿಂಗಯ್ಯ ಪ್ರಥಮ ಪ್ರಯತ್ನದಲ್ಲೇ ಶ್ರಮಪಟ್ಟು ಜೀವ ತುಂಬಿ, ಉತ್ತಮ ಅಭಿನಯ ನೀಡಿದ್ದಾರೆ. ಇನ್ನು ಟೀನಾ ಪಾತ್ರದಲ್ಲಿ ಶೋಭಿತಾ ಮತ್ತು ಮಧುಮತಿ ಪಾತ್ರದಲ್ಲಿ ಸಾತ್ವಿಕಾ ಉತ್ತಮವಾಗಿ ಅಭಿನಯಿಸಿದ್ದಾರೆ. ಸಾತ್ವಿಕಾ ನಟನೆಯಲ್ಲದೆ ತನ್ನ ವಿಭಿನ್ನ ಕಾಸ್ಟ್ಯೂಮ್ ಮೂಲಕವೂ ಗಮನ ಸೆಳೆಯುತ್ತಾರೆ. ಇನ್ನು ಚಿತ್ರದ ಪ್ರಮುಖ ವಿಲನ್ ಪಾತ್ರದಲ್ಲಿ ನಿರ್ದೇಶಕ ಎಸ್ . ಪ್ರದೀಪ್ ವರ್ಮಾ ನಡೆ ನುಡಿ ಮೂಲಕ ಬೇರೆಯದೇ ಗತ್ತಿನಲ್ಲಿ ಮಿಂಚಿದ್ದಾರೆ. ಬಾಲ್ಯ ವಿವಾಹದ ಸೆಳೆತ, ಸಂಬಂಧಿಕರ ವಂಚನೆ, ಪ್ರೇಮಿಗಳ ಪರದಾಟ, ಸ್ನೇಹಿತರ ಸಹಕಾರದ ಸುತ್ತ ಪ್ರೀತಿಯ ಕಥೆಯನ್ನು ನಿರ್ದೇಶಕರು ತುಂಬಾ ಚೆನ್ನಾಗಿ ತೆರೆಮೇಲೆ ಮೂಡಿಸಿದ್ದಾರೆ, ಪ್ರೇಮಕಥೆಗಳನ್ನು ಇಷ್ಟಪಡುವವರಿಗೆ ಈ ಚಿತ್ರ ತುಂಬಾ ಇಷ್ಟವಾಗುತ್ತದೆ. ಯಾವುದೇ ಮಸಾಲೆ ಅಂಶಗಳಿಲ್ಲದೆ ಒಂದು ತ್ರಿಕೋನ ಪ್ರೇಮಕಥೆಯನ್ನು ಅಷ್ಟೇ ಸೊಗಸಾಗಿ ತೆರೆಗೆ ತಂದಿದ್ದಾರೆ ನಿರ್ದೇಶಕ ಪ್ರದೀಪ್ ವರ್ಮ. ಸಂಗೀತದ ಜತೆ ಹಿನ್ನೆಲೆ ಸಂಗೀತವನ್ನೂ ಸಮರ್ಥವಾಗಿ ನಿಭಾಯಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26